ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚೀನಾ ಪ್ರವಾಸ



ಶಾಂಘೈ ಸಹಕಾರ ಸಂಘಟನೆಯ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಜುಲೈ 13ರಂದು ಚೀನಾಕ್ಕೆ ತೆರಳಲಿದ್ದಾರೆ

ಗುಕೇಶ್‌ಗೆ ಗೆಲುವು




ವಿಶ್ವ ಚಾಂಪಿಯನ್, ಭಾರತದ ಡಿ. ಗುಕೇಶ್ ಅವರು ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದರು

ಸುರಂಗ ರಸ್ತೆಗಳ ಹಲವು ಆಯಾಮ

ಜಯಸಿಂಹ ಆರ್.

ಬೆಂಗಳೂರು: ನಗರದೊಳಗಿನ ಸಂಚಾರ ದಟ್ಟಣೆಯನ್ನು ತಗ್ಗಿಸುವ ಉದ್ದೇಶದಿಂದ ಸುರಂಗ ರಸ್ತೆ ನಿರ್ಮಿಸುವ ಪರಿಪಾಟ ಜಗತ್ತಿನ ಹಲವೆಡೆ ನಾಲ್ಕಾರು ದಶಕಗಳಿಂದಲೇ ಇದೆ. ಯೂರೋಪ್, ಉತ್ತರ ಅಮೆರಿಕ, ಆಗ್ನೇಯ ಏಷ್ಯಾದ ದೇಶಗಳು ಮತ್ತು ಆಸ್ಟ್ರೇಲಿಯಾದಲ್ಲಿ ಇಂತಹ ದೊಡ್ಡ ಜಾಲವೇ ಇದೆ. ಜಗತ್ತಿನ ಕೆಲ ಪ್ರಮುಖ ಸುರಂಗ ರಸ್ತೆ ಜಾಲ ಮತ್ತು ಅವುಗಳ ಸಾಧಕ–ಬಾಧಕಗಳ ವಿವರ ಈ ಮುಂದಿನಂತಿದೆ.



ಸುರಂಗ : ಅಂತರಂಗ

ತೊಡಕುಗಳು

- ಅಮೆರಿಕದ ಬಹುತೇಕ ರಾಜ್ಯಗಳ ರಾಜಧಾನಿಗಳ ಅಡಿಯಲ್ಲಿ ಸುರಂಗ ರಸ್ತೆ ಮಾರ್ಗಗಳಿವೆ. 60ರ ದಶಕದಿಂದ ಈಚಿನವರೆಗೂ ಅಮೆರಿಕವು ಇಂತಹ ಸುರಂಗ ರಸ್ತೆಗಳನ್ನು ನಿರ್ಮಿಸಿದೆ. ಸುರಂಗ ರಸ್ತೆಗಳಲ್ಲಿ ವಾಹನಗಳ ಸಂಚಾರ ಹೆಚ್ಚಿದಂತೆ, ಮೇಲ್ಮೈ ರಸ್ತೆಗಳಲ್ಲಿ ಸಂಚಾರ ಕಡಿಮೆಯಾಗಿದೆ. ಇದರಿಂದ ವ್ಯಾಪಾರ ವಹಿವಾಟು ಕುಗ್ಗಿದೆ. ಇದನ್ನು ತಪ್ಪಿಸಲು ಹಲವು ಸುರಂಗ ರಸ್ತೆಗಳನ್ನು ಮುಚ್ಚಲಾಗಿದೆ
- ಐರೋಪ್ಯ ದೇಶಗಳಲ್ಲಿನ ನಗರದಡಿಯ ಸುರಂಗ ರಸ್ತೆಗಳ ಬಳಕೆ ಹೆಚ್ಚಾದಂತೆ ವ್ಯಾಪಾರವೂ ಕುಸಿದು, ಆಸ್ತಿಗಳ ಮೌಲ್ಯ ಸ್ಥಗಿತವಾದ ಸ್ಥಿತಿ (ಬರ್ಲಿನ್, ಪ್ಯಾರಿಸ್) ಎದುರಾಗಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ ಬಳಕೆದಾರರ ಶುಲ್ಕವನ್ನು ಹಲವು ಪಟ್ಟು ಏರಿಕೆ ಮಾಡಲಾಗಿತ್ತು
- ನಗರದ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ನೇರ ಸಂಪರ್ಕ ಕಲ್ಪಿಸುವ ಸುರಂಗ ರಸ್ತೆಗಳು ಇರುವ ಕಡೆ ಮಾತ್ರ ಸಂಚಾರ ದಟ್ಟಣೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ನಗರದೊಳಗೇ ವಿವಿಧೆಡೆಗೆ ಸಂಪರ್ಕ ಕಲ್ಪಿಸುವ ಸುರಂಗ ರಸ್ತೆಗಳ ಹೊರ ಭಾಗದಲ್ಲಿ ದಟ್ಟಣೆ ಹೆಚ್ಚಾಗಿದೆ
- ಸುರಂಗ ಮಾರ್ಗಗಳನ್ನು ತ್ವರಿತವಾಗಿ ನಿರ್ಮಿಸಿದ್ದ ಕಡೆ ಮಾತ್ರ ಅವುಗಳಿಂದ ಅನುಕೂಲವಾಗಿದೆ. ಕಾಮಗಾರಿ ವಿಳಂಬವಾದರೆ ನಿರ್ಮಾಣ ವೆಚ್ಚ ಹೆಚ್ಚುತ್ತದೆ. ಜತೆಗೆ ಅವು ಸಿದ್ಧವಾಗುವ ಹೊತ್ತಿಗೆ ವಾಹನಗಳ ಸಂಖ್ಯೆ ಹಲವು ಪಟ್ಟು ಏರಿಕೆಯಾಗಿ, ದಟ್ಟಣೆ ಇನ್ನಷ್ಟು ಬಿಗಡಾಯಿಸಿದ ಉದಾಹರಣೆಗಳೂ ಇವೆ

ಯಾಮಾಟೆ ಸುರಂಗ

18.2 ಕಿ.ಮೀ., ಸುರಂಗ ಮಾರ್ಗದ ಉದ್ದ

ಜಪಾನ್‌ನ ರಾಜಧಾನಿ ಟೋಕಿಯೋದ ಮೇಲ್ಮೈನಿಂದ ಸುಮಾರು 50 ಮೀಟರ್ ಆಳದಲ್ಲಿ ನಿರ್ಮಿಸಲಾಗಿರುವ ಸುರಂಗ ಮಾರ್ಗವಿದು. ನಗರದ ವ್ಯಾಪ್ತಿಯಲ್ಲಿ ಇರುವ ಜಗತ್ತಿನ ಅತ್ಯಂತ ಉದ್ದದ ಸುರಂಗ ರಸ್ತೆ ಇದು ಎಂಬುದು ಯಾಮಾಟೆಯ ಹೆಗ್ಗಳಿಕೆ.

ಕೇಂದ್ರ ಟೋಕಿಯೊದಿಂದ ದಕ್ಷಿಣ ಟೋಕಿಯೊಗೆ ನೇರ ಸಂಪರ್ಕ ಕಲ್ಪಿಸುವ ಈ ಸುರಂಗ ಮಾರ್ಗದ ನಿರ್ಮಾಣ ಕಾರ್ಯ ಆರಂಭವಾಗಿದ್ದು 1971ರಲ್ಲಿ. ಆದರೆ ಕಾಮಗಾರಿ ಪೂರ್ಣಗೊಂಡಿದ್ದು 2015ರಲ್ಲಿ. ಜನದಟ್ಟಣೆ ಮತ್ತು ವಸತಿ ಪ್ರದೇಶ ಅತೀವವಾಗಿರುವ ನಗರದಾಳದಲ್ಲಿ ನಿರ್ಮಿಸಬೇಕಿದ್ದ ಕಾರಣ, ಕಾಮಗಾರಿ ವಿಪರೀತ ವಿಳಂಬವಾಯಿತು. ಯೋಜನಾ ವೆಚ್ಚ ನೂರಕ್ಕಿಂತಲೂ ಅಧಿಕಪಟ್ಟು ಹೆಚ್ಚಾಯಿತು.

ಆರಂಭದಲ್ಲಿ ಉಚಿತ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತಾದರೂ, ಅತೀವ ಕಾಮಗಾರಿ ವೆಚ್ಚ ಮತ್ತು ನಿರ್ವಹಣಾ ವೆಚ್ಚ ಭರಿಸಲಾಗದೆ ಅಲ್ಲಿನ ಸ್ಥಳೀಯಾಡಳಿತವು 2018ರಲ್ಲಿ ಬಳಕೆದಾರರ ಶುಲ್ಕ ವಿಧಿಸಿತು. ಪರಿಣಾಮವಾಗಿ ಬಳಕೆದಾರರ ಸಂಖ್ಯೆ ಕಡಿಮೆಯಾಯಿತು. ಭೂಕಂಪದ ಸಾಧ್ಯತೆ ಅತ್ಯಧಿಕವಾಗಿರುವ ಟೋಕಿಯೊದಲ್ಲಿನ ಸುರಂಗದಲ್ಲಿ ಪ್ರಯಾಣಿಸುವುದು ಅಪಾಯ ಎಂಬ ಮಾತೂ ಇದೆ.

ಎಂ–30 ಸುರಂಗ ಜಾಲ

56 ಕಿ.ಮೀ., ಮ್ಯಾಡ್ರಿಡ್‌ನ ಅಡಿಯಲ್ಲಿರುವ ಸುರಂಗ ರಸ್ತೆ ಜಾಲದ ಒಟ್ಟು ಉದ್ದ

ಸ್ಪೇನ್‌ನ ಮ್ಯಾಡ್ರಿಡ್ ನಗರದಡಿ ಹಬ್ಬಿರುವ ಎಂ–5 ಸುರಂಗ ಮಾರ್ಗ ಜಾಲವು ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಒಟ್ಟು 56 ಕಿ.ಮೀ.ನಷ್ಟು ಉದ್ದದ ಜಾಲವಿದ್ದರೂ, ಸುರಂಗ ಮಾರ್ಗವೊಂದರ ಗರಿಷ್ಠ ಉದ್ದ 3.6 ಕಿ.ಮೀ. ಮಾತ್ರ. ಇಂತಹ ಹತ್ತಾರು ಸುರಂಗ ಮಾರ್ಗಗಳು ಮ್ಯಾಡ್ರಿಡ್‌ನ ಅಡಿಯಲ್ಲಿವೆ.

ನಗರದ ಕೇಂದ್ರ ಭಾಗ ಮತ್ತು ದಕ್ಷಿಣ ಭಾಗದಲ್ಲಿ ಜನದಟ್ಟಣೆ, ಸಂಚಾರ ದಟ್ಟಣೆ ಹೆಚ್ಚು. ಅವುಗಳ ನಿಯಂತ್ರಣಕ್ಕೆ ಎಂದು ಸಣ್ಣ ಸಣ್ಣ ಸುರಂಗಗಳನ್ನು ನಿರ್ಮಿಸುವ ಯೋಜನೆಯನ್ನು ಸ್ಪೇನ್ 90ರ ದಶಕದಲ್ಲಿ ಆರಂಭಿಸಿತು. ಈ ಯೋಜನೆಗಳು ಅಲ್ಲಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿದರೂ, ಪ್ರವೇಶದ್ವಾರಗಳ ನಂತರದ ರಸ್ತೆಗಳಲ್ಲಿ ದಟ್ಟಣೆಯನ್ನು ಹೆಚ್ಚಿಸಿದವು.

ಈ ಸಮಸ್ಯೆಯನ್ನು ಬಗೆಹರಿಸಲು ಇನ್ನಷ್ಟು ಸುರಂಗ ಮಾರ್ಗಗಳನ್ನು ನಿರ್ಮಿಸಲಾಯಿತು. ಆದರೆ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಹೋದುದರಿಂದ ಮ್ಯಾಡ್ರಿಡ್ ಜಗತ್ತಿನಲ್ಲೇ ಅತ್ಯಂತ ಉದ್ದದ ಸುರಂಗ ರಸ್ತೆ ಮಾರ್ಗ ಜಾಲ ಹೊಂದುವಂತಾಗಿದೆ.

ಸಿಡ್ನಿ ಸುರಂಗ ಜಾಲ

30+ ಕಿ.ಮೀ, ಸಿಡ್ನಿಯ ಅಡಿಯಲ್ಲಿರುವ ಸುರಂಗ ಮಾರ್ಗಗಳ ಒಟ್ಟು ಉದ್ದ

ಆಸ್ಟ್ರೇಲಿಯಾದ ಸಿಡ್ನಿಯ ಕೇಂದ್ರ ಭಾಗ ಮತ್ತು ದಕ್ಷಿಣ ಭಾಗದ ನೆಲದಾಳದಲ್ಲಿ ಸುಮಾರು 20 ಸುರಂಗ ಮಾರ್ಗಗಳಿವೆ. ನಗರದ ಅಡಿಯಲ್ಲಿ 2 ಕಿ.ಮೀ, 3 ಕಿ.ಮೀ, 5 ಕಿ.ಮೀನಷ್ಟು ಉದ್ದದ ಬಿಡಿ–ಬಿಡಿ ಸುರಂಗಗಳು ಹಲವು ಇವೆ. ಕೆಲವು ಸುರಂಗಗಳ ಮಧ್ಯೆ ಪರಸ್ಪರ ಲಿಂಕ್ ಸುರಂಗಗಳಿವೆ. ಲಿಂಕ್ ಸುರಂಗಗಳು ಇಲ್ಲದಿದ್ದ ಕಡೆ, ಮೇಲ್ಮೈ ರಸ್ತೆಯಲ್ಲಿ ಸಂಚಾರ ದಟ್ಟಣೆ ಅತಿಯಾಗಿಯೇ ಇದೆ.

ಎಲ್ಲ ಸುರಂಗಗಳಿಗೆ ಸಿಡ್ನಿ ಸ್ಥಳೀಯಾಡಳಿತವು ಬಳಕೆದಾರರ ಶುಲ್ಕ ವಿಧಿಸಿತ್ತು. ಆದರೆ, ಲಿಂಕ್ ಸುರಂಗಗಳು ಇಲ್ಲದಿದ್ದ ಕಾರಣಕ್ಕೆ, ಶುಲ್ಕ ತೆತ್ತರೂ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಹೀಗಾಗಿ ಜನರು ಅಂತಹ ಸುರಂಗಗಳ ಬಳಕೆಯನ್ನು ಕಡಿಮೆ ಮಾಡಿದ್ದರು. ಅಂತಹ ಸುರಂಗಗಳಿಗೆ ಈಗ ಬಳಕೆದಾರರ ಶುಲ್ಕವನ್ನು ತೆಗೆಯಲಾಗಿದೆ.

ದೆಹಲಿ ಸುರಂಗ ಮಾರ್ಗಗಳು


ನಗರದ ವ್ಯಾಪ್ತಿಯಲ್ಲಿಯೇ ನೆಲದಾಳದ ಸುರಂಗ ರಸ್ತೆ ಮಾರ್ಗಗಳನ್ನು ಹೊಂದಿರುವ ದೇಶದ ಏಕೈಕ ನಗರ ದೆಹಲಿ (ಮುಂಬೈನಲ್ಲಿ ಸಾಗರದಾಳದಲ್ಲಿ, ಜೈಪುರದಲ್ಲಿ ಬೆಟ್ಟವನ್ನು ಕೊರೆದು ನಿರ್ಮಿಸಿದ ಸುರಂಗ ರಸ್ತೆಗಳಿವೆ).

ದೆಹಲಿಯ ಪ್ರಗತಿ ಮೈದಾನ ಮತ್ತು ಇಂಡಿಯಾ ಗೇಟ್ ಮಧ್ಯೆ ನಿರ್ಮಿಸಲಾಗಿರುವ 1.3 ಕಿ.ಮೀ. ಉದ್ದದ ಸುರಂಗ ರಸ್ತೆ ಮಾರ್ಗಕ್ಕೆ ಬಳಕೆದಾರರ ಶುಲ್ಕ ಇಲ್ಲ. ಆದರೆ ವಿನ್ಯಾಸದ ಸಮಸ್ಯೆಯ ಕಾರಣಕ್ಕೆ ಭಾರಿ ಮಳೆ ಬಂದಾಗಲೆಲ್ಲಾ ಸುರಂಗದಲ್ಲಿ ನೀರು ತುಂಬಿಕೊಳ್ಳುತ್ತದೆ. ದ್ವಾರಕಾ ಎಕ್ಸ್‌ಪ್ರೆಸ್‌ವೇ ಮತ್ತು ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ ನಿರ್ಮಿಸಿರುವ ದ್ವಾರಕಾ ಸುರಂಗ ರಸ್ತೆ ಮಾರ್ಗವು 3.6 ಕಿ.ಮೀ.ನಷ್ಟಿದೆ. ಇದೇ ಜೂನ್ 5ರಂದು ಇದು ಬಳಕೆಗೆ ಮುಕ್ತವಾಗಿದ್ದು, ಯಾವುದೇ ಶುಲ್ಕ ವಿಧಿಸುತ್ತಿಲ್ಲ.

ಸುದ್ದಿ 2 ನಿಮಿಷ

45 ವರ್ಷದ ದಾಖಲೆ ನಿರ್ಮಿಸಿದ ಬಸವರಾಜ ಹೊರಟ್ಟಿ

ಬೆಂಗಳೂರು: ಎಂಟು ಬಾರಿ ನಿರಂತರವಾಗಿ ಶಿಕ್ಷಕರ ಮತಕ್ಷೇತ್ರದಿಂದ ಆಯ್ಕೆಯಾಗಿ 45 ವರ್ಷದ ದಾಖಲೆ ಪೂರೈಸಿರುವ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಿಕ್ಷಕರು, ಶಿಕ್ಷಕರ ಸಂಘದ ಪ್ರತಿನಿಧಿಗಳು ಗೌರವಿಸಿದರು.



1980 ಜೂನ್ 30ರಂದು ಬಸವರಾಜ ಹೊರಟ್ಟಿ ಅವರು ಪ್ರಥಮ ಬಾರಿಗೆ ವಿಧಾನ ಪರಿಷತ್ ಸದಸ್ಯರಾದರು. ಅಂದಿನಿಂದ ಸತತವಾಗಿ ಮೇಲ್ಮನೆ ಸದಸ್ಯರಾಗಿರುವ ಅವರು, ಶಿಕ್ಷಕರು ಹಾಗೂ ಸಾರ್ವಜನಿಕರ ಗಟ್ಟಿ ಧ್ವನಿಯಾಗಿ ಇತಿಹಾಸ ಸೃಷ್ಟಿಸಿದ್ದಾರೆ ಎಂದು ಶ್ಲಾಘಿಸಿದರು.

ಬೆಳಗಾವಿ, ಬಾಗಲಕೋಟೆಯಿಂದ ಬಂದಿದ್ದ ರೈತರು, ರಾಜ್ಯದ ವಿವಿಧ ಜಿಲ್ಲೆಗಳ ಶಿಕ್ಷಕರು, ಶಿಕ್ಷಕರ ಸಂಘದ ಪ್ರತಿನಿಧಿಗಳು ಬಸವರಾಜ ಹೊರಟ್ಟಿ ಅವರನ್ನು ಅಭಿನಂದಿಸಿದರು.

ಇಂದಿರಾನಗರ– ಬೈಯಪ್ಪನಹಳ್ಳಿ ನಾಳೆ ಮೆಟ್ರೊ ವ್ಯತ್ಯಯ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಇಂದಿರಾನಗರ–ಬೈಯಪ್ಪನಹಳ್ಳಿ ನಿಲ್ದಾಣಗಳ ನಡುವೆ ಜುಲೈ 6ರಂದು ಬೆಳಿಗ್ಗೆ 7ರಿಂದ 8ರವರೆಗೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣ ಮತ್ತು ಬೈಯಪ್ಪನಹಳ್ಳಿ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಚಲ್ಲಘಟ್ಟದಿಂದ ಇಂದಿರಾನಗರವರೆಗೆ ಮತ್ತು ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ವರೆಗೆ (ಕಾಡುಗೋಡಿ) ಮೆಟ್ರೊ ಸಂಚಾರ ಎಂದಿನಂತೆ ಇರಲಿದೆ.

ಇಂದಿರಾನಗರ–ಬೈಯಪ್ಪನಹಳ್ಳಿ ನಡುವೆ ಬೆಳಿಗ್ಗೆ 8ರಿಂದ ಮೆಟ್ರೊ ಸಂಚಾರ ಪ್ರಾರಂಭವಾಗಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಅಧಿಕಾರಿಗಳು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ಮಡಿವಾಳ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಕರ್ನಾಟಕ ರಾಜ್ಯ ಮಡಿವಾಳರ ಸಂಘವು ಅರ್ಜಿ ಆಹ್ವಾನಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಆರ್.ಪ್ರಕಾಶ್, 'ಜನಾಂಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. 2025–26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇ 70 ಮತ್ತು ಪಿಯುಸಿಯಲ್ಲಿ ಶೇ 90 ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹರು ಅಂಕಪಟ್ಟಿ, ಇತ್ತೀಚಿನ ಎರಡು ಭಾವಚಿತ್ರ, ಆಧಾರ್ ಕಾರ್ಡ್, ಸ್ವ ವಿಳಾಸ, ಮೊಬೈಲ್ ಸಂಖ್ಯೆ ಸಹಿತ ಅಗತ್ಯ ಮಾಹಿತಿಯನ್ನು ಇದೇ 30ರೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕರ್ನಾಟಕ ರಾಜ್ಯ ಮಡಿವಾಳರ ಸಂಘ, ನಂ. 7, ಶಿರೂರ್ ಪಾರ್ಕ್ ರಸ್ತೆ, ಶೇಷಾದ್ರಿಪುರ, ಬೆಂಗಳೂರು– 560 020 ಈ ವಿಳಾಸಕ್ಕೆ ಕಳುಹಿಸಬೇಕು' ಎಂದು ತಿಳಿಸಿದರು.

ಸಂಪರ್ಕಕ್ಕೆ: 080–23460946 ಅಥವಾ 9611664485

ಅಲೆಮಾರಿ ಮುಖಂಡರ ಸಭೆ ಇಂದು



ಆಂಜನೇಯ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ ಅಲೆಮಾರಿ ಅಭಿವೃದ್ಧಿ ವೇದಿಕೆಯು ಶನಿವಾರ (ಜು.5) ಬೆಳಿಗ್ಗೆ 10.30ಕ್ಕೆ ಶಿವಾನಂದ ವೃತ್ತದ ಬಳಿಯಿರುವ ಗಾಂಧಿ ಭವನದಲ್ಲಿ ಅಲೆಮಾರಿ ಮುಖಂಡರ ಸಭೆ ಹಮ್ಮಿಕೊಂಡಿದೆ.

ಸಮುದಾಯ ಎದುರಿಸುತ್ತಿರುವ ಸವಾಲು, ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚಿಂತನ ಮಂಥನ ನಡೆಯಲಿದೆ. ಮಾಜಿ ಸಚಿವ ಎಚ್. ಆಂಜನೇಯ ಅವರು ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕವಿ ವಡ್ಡಗೆರೆ ನಾಗರಾಜಯ್ಯ, ಪ್ರಾಧ್ಯಾಪಕ ಎ.ಎಸ್. ಪ್ರಭಾಕರ್ ಭಾಗವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2025-26ನೇ ಸಾಲಿಗೆ ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆಯಡಿ ಧನಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯ ನಿಯಮಾನುಸಾರ ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅರ್ಜಿ ಸಲ್ಲಿಸಬಹುದು ಎಂದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿದೆ. ನಿಗದಿತ ಅರ್ಜಿ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜುಲೈ 15 ರೊಳಗೆ ಅರ್ಜಿ ಸಲ್ಲಿಸಬೇಕು. ವಿಳಾಸ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ kannadasiri.karnataka.gov.in ವೀಕ್ಷಿಸಿ

ರಾಕ್ಷಸರಂತೆ ಬಿಂಬಿಸಿ ಭಯ ಸೃಷ್ಟಿಸಲಾಗಿದೆ: ಮುಜೀಬುರ್ ರೆಹಮಾನ್

‘ಹಿಂದುತ್ವದಲ್ಲಿ ಮುಸ್ಲಿಮರಿಗೆ ಯಾವ ಜಾಗ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುತ್ವದಲ್ಲಿ ಮುಸ್ಲಿಮರಿಗೂ ಜಾಗ ಇದೆ ಎಂದು ಆರ್‌ಎಸ್‌ಎಸ್ ನಾಯಕರು ಹೇಳಿದ್ದರು. ಆದರೆ, ಅವರು ನೀಡುವ ಜಾಗ ಯಾವುದು? ಸಹಸ್ರಾರು ವರ್ಷಗಳಿಂದ ಇಲ್ಲಿನ ದಲಿತರಿಗೆ ಯಾವ ಸ್ಥಾನ ನೀಡಿದ್ದಾರೋ ಅದೇ ಸ್ಥಾನವಲ್ಲವೇ ಎಂದು ದೆಹಲಿಯ ಜಾಮಿಯಾ ಮಿಲಿಯಾ ಕೇಂದ್ರೀಯ ವಿಶ್ವವಿದ್ಯಾಲಯದ ಉಪನ್ಯಾಸಕ ಮುಜೀಬುರ್ ರೆಹಮಾನ್ ಪ್ರಶ್ನಿಸಿದರು.

ಅವರು ರಚಿಸಿರುವ ‘ಶಿಕ್ವಾ–ಎ–ಹಿಂದ್: ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯನ್ ಮುಸ್ಲಿಮ್ಸ್’ ಕೃತಿಯ ಆಧಾರದಲ್ಲಿ ಶುಕ್ರವಾರ ಜಾಗೃತ ಕರ್ನಾಟಕ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರ್‌ಎಸ್‌ಎಸ್ ಮತ್ತು ಇಸ್ಲಾಮಿಕ್ ಸ್ಟೇಟ್ (ಐಎಸ್) ಅನ್ನು ಸಮೀಕರಿಸಿ ರಾಹುಲ್ ಗಾಂಧಿ ಮಾತನಾಡಿದ್ದರು. ಆಗ ಆರ್‌ಎಸ್‌ಎಸ್ ಮೂರು ದಿನಗಳ ಸಮಾವೇಶ ಹಮ್ಮಿಕೊಂಡು 60ಕ್ಕೂ ಅಧಿಕ ದೇಶಗಳ ಪ್ರತಿನಿಧಿಗಳನ್ನು ಕರೆಸಿ ಸ್ಪಷ್ಟನೆ ನೀಡಿದ್ದರು. ಇದು ಹೇಗೆ ಒಂದು ಸಾಂಸ್ಕೃತಿಕ ಸಂಘಟನೆ ಎಂಬುದನ್ನು, ಬೆಳೆದು ಬಂದ ಹಾದಿಯನ್ನು ತಿಳಿಸಿದ್ದರು. ಮುಸ್ಲಿಮರಿಗೂ ಹಿಂದುತ್ವದಲ್ಲಿ ಜಾಗ ಇದೆ ಎಂಬುದಾಗಿಯೂ ಹೇಳಿದ್ದರು. ಯಾವ ಜಾಗ ಎಂಬುದು ಈ ಕೃತಿಯಲ್ಲಿ ಚರ್ಚಿಸಲಾಗಿದೆ ಎಂದು ವಿವರಿಸಿದರು.

ಮುಸ್ಲಿಂ ಅಥವಾ ಇಸ್ಲಾಂ ಇಲ್ಲವಾಗಿಸಿ ರಾಕ್ಷಸರಷ್ಟೇ ಇರುವುದು ಎಂಬಂತೆ ಈಗ ಬಿಂಬಿಸಲಾಗುತ್ತಿದೆ. ಒಬ್ಬ ವ್ಯಕ್ತಿ ತನ್ನ ಹೆಸರು ಹೇಳಿದಾಗ ಆತ ಮುಸ್ಲಿಂ ಎಂದು ಗೊತ್ತಾದರೆ ಅಲ್ಲಿಗೆ ಇತಿಹಾಸವೇ ತೆರೆದುಕೊಳ್ಳುತ್ತದೆ. ಬಾಬರ್, ಔರಂಗಜೇಬ್ ಮತ್ತಿತರರ ಪ್ರತಿನಿಧಿಯಂತೆ ಕಾಣತೊಡಗುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬರುವ ಸಮಯದಲ್ಲಿ ಮೂರು ಪ್ರಮುಖ ರಾಜಕೀಯ ಸಿದ್ಧಾಂತಗಳಿದ್ದವು. ಜಾತ್ಯತೀತ ತತ್ವವನ್ನು ಪ್ರತಿಪಾದಿಸುವ ಕಾಂಗ್ರೆಸ್, ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರ ಇರಬೇಕು ಎನ್ನುವ ಮುಸ್ಲಿಂ ಲೀಗ್, ಭಾರತವು ಜಾತ್ಯತೀತ ರಾಷ್ಟ್ರವಲ್ಲ, ಹಿಂದೂ ರಾಷ್ಟ್ರವಾಗಬೇಕು ಎಂದು ಪ್ರತಿಪಾದಿಸುವವರು ಇದ್ದರು. ಸ್ವಾತಂತ್ರ್ಯ ಬಂದಾಗ ಕಾಂಗ್ರೆಸ್ ಭಾರತದಲ್ಲಿ ಅಧಿಕಾರ ಹಿಡಿಯಿತು. ಮುಸ್ಲಿಂ ಲೀಗ್ ಆಶಯದಂತೆ ಪಾಕಿಸ್ತಾನ ಸೃಷ್ಟಿಯಾಯಿತು. ಹಿಂದೂ ರಾಷ್ಟ್ರ ಪ್ರತಿಪಾದಕರು ಬಹಳ ಸಣ್ಣ ಪ್ರಮಾಣದಲ್ಲಿದ್ದರು ಎಂದು ಹೇಳಿದರು.

ಹಿಂದೂ ಮುಸ್ಲಿಂ ಗಲಭೆಗಳನ್ನು ಸೃಷ್ಟಿಸಿ, ಮುಸ್ಲಿಮರ ಬಗ್ಗೆ ಭಯವನ್ನು ಹರಡಿ, ದೇಶಕ್ಕೆ ಮುಸ್ಲಿಮರೇ ಆತಂಕ ಎಂಬಂತೆ ಬಿಂಬಿಸುತ್ತಾ ಬಂದ ಹಿಂದೂ ರಾಷ್ಟ್ರವಾದಿಗಳು ಅಧಿಕಾರ ಹಿಡಿದಿದ್ದಾರೆ ಎಂದು ತಿಳಿಸಿದರು.

ಪ್ರಾಧ್ಯಾಪಕ ಎ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಜಾಗೃತ ಕರ್ನಾಟಕದ ಡಾ. ಎಚ್.ವಿ. ವಾಸು, ಸುಹೇಲ್ ಅಹಮದ್ ಉಪಸ್ಥಿತರಿದ್ದರು.

ಕುಸಿಯುತ್ತಿರುವ ರಾಜಕೀಯ ಪ್ರಾತಿನಿಧ್ಯ

ಭಾರತದಲ್ಲಿರುವ ಮುಸ್ಲಿಮರ ಜನಸಂಖ್ಯೆಯು ಜರ್ಮನಿ ಅಥವಾ ಇಂಗ್ಲೆಂಡ್‌ನಂಥ ದೇಶಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚಿದೆ. ಇಲ್ಲಿ ಪ್ರತಿವರ್ಷ ಮತದಾರರು ಹೆಚ್ಚುತ್ತಿದ್ದಾರೆ. ಆದರೆ, ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗುತ್ತಿದೆ ಎಂದು ಮುಜೀಬುರ್ ರೆಹಮಾನ್ ತಿಳಿಸಿದರು.

ಕರ್ನಾಟಕದಲ್ಲಿಯೇ ಹಿಂದೆ ಸುಮಾರು 30ರಷ್ಟು ಶಾಸಕರು, ಮೂವರು ಸಂಸದರು ಮುಸ್ಲಿಮರು ಇರುತ್ತಿದ್ದರು. ಈಗ ಶಾಸಕರ ಸಂಖ್ಯೆ 10ಕ್ಕೆ ಇಳಿದಿದೆ. ಸಂಸದರು ಒಬ್ಬರೂ ಇಲ್ಲ. ಕೇಂದ್ರ ಸರ್ಕಾರದಲ್ಲಿ ಒಬ್ಬನೇ ಒಬ್ಬ ಸಚಿವ ಮುಸ್ಲಿಂ ಇಲ್ಲ ಎಂದರು.

ರಾಜ್ಯದಲ್ಲಿಯೂ ಕಳೆದ ಬಾರಿ ಬಿಜೆಪಿ ಆಡಳಿತದಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಇದು ಬಹುತೇಕ ರಾಜ್ಯಗಳ ಪರಿಸ್ಥಿತಿ ಎಂದರು.

ಮಾಧ್ಯಮ ಸತ್ಯ ಎತ್ತಿ ಹಿಡಿಯಬೇಕು

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಧ್ಯಮ ಸತ್ಯವನ್ನು ಎತ್ತಿ ಹಿಡಿಯಬೇಕು. ಮಾಧ್ಯಮದ ನಾಲಿಗೆಗೆ ಸ್ವಾತಂತ್ರ್ಯವಿರಬಹುದು. ಆದರೆ ವಿವೇಚನೆ ಹೊಂದಿರಬೇಕು. ಸಂಪಾದಕರು, ನಿರೂಪಕರು, ಡಿಜಿಟಲ್ ಪ್ರಭಾವಿಗಳು ಮಾಧ್ಯಮವನ್ನು ಪ್ರಚೋದನೆಗಾಗಿ ಬಳಸಿಕೊಳ್ಳಬಾರದು’ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಅಭಿಪ್ರಾಯಪಟ್ಟರು.

ನಗರದಲ್ಲಿ ವಕೀಲರ ವಾಹಿನಿ ‘ಜಸ್ಟೀಸ್ ಕೆ.ಆರ್. ಗೋಪಿವಲ್ಲಭ ಅಯ್ಯಂಗಾರ್ ಸ್ಮಾರಕ’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಮಾಧ್ಯಮಗಳ ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನಡುವಿನ ಸಮತೋಲನ’ ಕುರಿತು ಅವರು ಉಪನ್ಯಾಸ ನೀಡಿದರು.

‘ಮಾಧ್ಯಮ ಸಂವಿಧಾನದ ನಾಲ್ಕನೇ ಅಂಗವಾಗಿದ್ದು, ಇದು ಅಧಿಕಾರವನ್ನು ರಕ್ಷಿಸುವುದಲ್ಲ, ಬದಲಿಗೆ ಆಲೋಚನೆಗಳನ್ನು ಪ್ರಚೋದಿಸಬೇಕು. ಆದರೆ ಪ್ರಚೋದನಕಾರಿ ಯಾಗಬಾರದು. ಸ್ವಾತಂತ್ರ್ಯವನ್ನು ಉತ್ತೇಜಿಸುವ ಜೊತೆಗೆ ನಿಷ್ಠುರವಾಗಿರಬೇಕು, ಸಮತೋಲನ ಕಾಯ್ದುಕೊಳ್ಳಬೇಕು’ ಎಂದರು.

‘ಮಾಧ್ಯಮಗಳು ತನಿಖಾ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡಬೇಕು. ಹಾಗೆಂದು ತೀರ್ಪು ನೀಡಬಾರದು. ಪತ್ರಿಕೋದ್ಯಮ ಎಂದರೆ ಸತ್ಯ ಪರಿಶೋಧನೆಯಾಗಿದ್ದು, ಸಾರ್ವಜನಿಕ ಹಿತಾಸಕ್ತಿ ಜೊತೆಗೆ ಜವಾಬ್ದಾರಿತನದಿಂದ ಮುನ್ನಡೆಯಬೇಕು. ವ್ಯಕ್ತಿಗಳ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು’ ಎಂದರು.

‘ಮಾಧ್ಯಮ ಸ್ವಾತಂತ್ರ್ಯ ಎಂದರೆ ಅದು ಸಂವಿಧಾನದ ನೈತಿಕತೆಯಾಗಿದ್ದು, ಅದು ಕಾನೂನಿನ ಹಕ್ಕು ಅಲ್ಲ. ಅದು ನೈತಿಕತೆಯನ್ನು ಕಾಪಾಡಿಕೊಂಡು ಹೋಗುವಂತಿರಬೇಕು. ಸ್ವಯಂ ನಿಯಂತ್ರಣಕ್ಕೆ ಒಳಪಡಬೇಕು’ ಎಂದು ವಿಶ್ಲೇಷಿಸಿದರು.

ಜಸ್ಟೀಸ್ ಕೆ.ಆರ್. ಗೋಪಿ ವಲ್ಲಭ ಅಯ್ಯಂಗಾರ್ ಅವರ ಮೊಮ್ಮಗಳು ಮತ್ತು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ ಮಾತನಾಡಿ, ‘ಗೋಪಿ ವಲ್ಲಭ ಅಯ್ಯಂಗಾರ್ ಅವರು ನ್ಯಾಯಾಂಗ ಕ್ಷೇತ್ರದಲ್ಲಿ ಭವ್ಯ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ. ತಪ್ಪು ಮಾಡಿದ್ದರೆ ಅದನ್ನು ಅರ್ಥಮಾಡಿಕೊಂಡು ನಾವೇ ತಿದ್ದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದರು’ ಎಂದು ವಿವರಿಸಿದರು.

ಮಾಜಿ ಅಡ್ವೋಕೆಟ್ ಜನರಲ್ ಹಾಗೂ ಹಿರಿಯ ವಕೀಲ ಉದಯ್ ಹೊಳ್ಳ ಮಾತನಾಡಿದರು. ವಕೀಲರ ವಾಹಿನಿಯ ಡಿ.ಎಂ. ಹೆಗಡೆ, ಎಸ್.ಎನ್. ಪ್ರಶಾಂತ್ ಚಂದ್ರ, ಮತ್ತಿತರರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಅರವಿಂದ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಡಾ. ಪ್ರತಿಮಾ ಮೂರ್ತಿ, ಡಿ.ಎಂ.ಹೆಗಡೆ ಮತ್ತಿತರರು ಉಪಸ್ಥಿತರಿದ್ದರು

ರಾಮಯ್ಯ ಆಸ್ಪತ್ರೆಗೆ ‘ಜೆಸಿಐ’ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಗಿಗಳ ಆರೈಕೆ, ಸುರಕ್ಷತೆ, ಪರಿಣಾಮಕಾರಿ ಚಿಕಿತ್ಸೆ ಸೇರಿ ವಿವಿಧ ಮಾನದಂಡಗಳನ್ನು ಆಧರಿಸಿ ನೀಡಲಾಗುವ ಜಾಗತಿಕ ಮಟ್ಟದ ‘ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್’ (ಜೆಸಿಐ) ಮಾನ್ಯತೆ ರಾಮಯ್ಯ ಮೆಮೋರಿಯಲ್ ಆಸ್ಪತ್ರೆಗೆ ದೊರೆತಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಅಧ್ಯಕ್ಷ ಎಂ.ಆರ್.ಜಯರಾಮ್, ‘ಆಸ್ಪತ್ರೆಯು ಒಂದೇ ಪ್ರಯತ್ನದಲ್ಲಿ ಜೆಸಿಐ ಮಾನ್ಯತೆಯನ್ನು ಪಡೆದುಕೊಂಡಿದೆ. ಇದು ಆಸ್ಪತ್ರೆ ಹೊಂದಿರುವ ಬದ್ಧತೆ ಹಾಗೂ ಗುಣಮಟ್ಟದ ಪ್ರತೀಕ. ಹೈಕೋರ್ಟ್ ನ್ಯಾಯಮೂರ್ತಿಗಳ ನಿಗಾದಲ್ಲಿ ಆಸ್ಪತ್ರೆಯ ನೈತಿಕ ಸಮಿತಿ ಮೇಲ್ವಿಚಾರಣೆಯಲ್ಲಿದೆ. ಚಿಕಿತ್ಸಾ ವಿಧಾನದ ಕುರಿತು ಜಾಗೃತಿ ವಹಿಸಿದ್ದೇವೆ. ಯಾವುದೇ ಅನೈತಿಕ ಪ್ರಯೋಗಗಳು ನಡೆಯದಂತೆ ಕಟ್ಟುನಿಟ್ಟಾಗಿ ನಿಯಮಾವಳಿ ಪಾಲಿಸಲಾಗುತ್ತಿದೆ’ ಎಂದು ಹೇಳಿದರು.

‘ಆಸ್ಪತ್ರೆಯು ನಾಲ್ಕು ಬಾರಿ ರಾಷ್ಟ್ರೀಯ ಮಟ್ಟದ ಎನ್‌ಎಬಿಎಚ್ (ಆಸ್ಪತ್ರೆಗಳು ಮತ್ತು ಆರೋಗ್ಯ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ) ಪ್ರಮಾಣಪತ್ರ ಪಡೆದಿದೆ. ಪಾರ್ಶ್ವವಾಯು ಮತ್ತು ಎದೆನೋವು ಕೇಂದ್ರದ ಚಿಕಿತ್ಸೆಗಾಗಿ ಅಮೆರಿಕನ್ ಸ್ಟ್ರೋಕ್ ಅಸೋಸಿಯೇಷನ್ (ಎಎಸ್‌ಎ) ಹಾಗೂ ಅಮೆರಿಕನ್ ಹಾರ್ಟ್ ಅಸೋಸಿಯೇಷನ್ (ಎಎಚ್‌ಎ) ಪ್ರಮಾಣಪತ್ರ ದೊರೆತಿದೆ’ ಎಂದು ತಿಳಿಸಿದರು.

ಫೌಂಡೇಷನ್‌ನ ಆರೋಗ್ಯ ಸೇವೆಗಳ ಮುಖ್ಯ ಕಾರ್ಯನಿರ್ವಾಹಕ ಡಾ. ನಾಗೇಂದ್ರ ಸ್ವಾಮಿ ಎಸ್.ಸಿ., ‘237 ಮಾನದಂಡಗಳ ಆಧಾರದಲ್ಲಿ ರಾಮಯ್ಯ ಆಸ್ಪತ್ರೆಯನ್ನು ಜೆಐಸಿ ಸಮೀಕ್ಷೆಗೆ ಒಳಪಡಿಸಿತ್ತು. ಎಲ್ಲ ಮಾನದಂಡಗಳನ್ನು ಆಸ್ಪತ್ರೆ ಹೊಂದಿದ್ದರಿಂದ ಮಾನ್ಯತೆ ದೊರೆತಿದೆ’ ಎಂದರು. ಈ ಮಾನ್ಯತೆ ಪ್ರಯುಕ್ತ ಬಳಿಕ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ‘ಬೆಂಗಳೂರು ನಗರ ವೈದ್ಯಕೀಯ ಹಬ್ ಆಗಿ ಮಾರ್ಪಟಿದೆ. ಚಿಕಿತ್ಸೆಗೆಂದು ದೇಶ-ವಿದೇಶದಿಂದ ಸಾವಿರಾರು ಜನರು ನಗರಕ್ಕೆ ಬರುತ್ತಾರೆ. ಅವರು ನಗರದಲ್ಲಿ ಉತ್ತಮ ಆಸ್ಪತ್ರೆ ಯಾವುದೆಂದು ಹುಡುಕುವಾಗ, ಜೆಸಿಐ ಮಾನ್ಯತೆ ಹೆಚ್ಚು ಅನುಕೂಲವಾಗುತ್ತದೆ’ ಎಂದು ಹೇಳಿದರು.

ಸಂಸ್ಥೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶ್ಲಾಘಿಸಿದರು. ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಮ್ ಉಪಸ್ಥಿತರಿದ್ದರು.




ಕಾರ್ಯಕ್ರಮದಲ್ಲಿ (ಎಡದಿಂದ) ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಮದನ್ ಗಾಯಕ್ವಾಡ್, ಡಾ. ನಾಗೇಂದ್ರ ಸ್ವಾಮಿ ಎಸ್.ಸಿ.,ಎಂ.ಆರ್.ಜಯರಾಮ್, ಪ್ರಲ್ಹಾದ ಜೋಶಿ, ದಿನೇಶ್ ಗುಂಡೂರಾವ್ ಹಾಗೂ ಎಂ.ಆರ್.ಸೀತಾರಾಮ್ ಉಪಸ್ಥಿತರಿದ್ದರು

‘ಪ್ರಾರ್ಥನೆ ವಿಫಲವಾಗದು’

ಮೈಸೂರು: ‘ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನನ್ನ ನಂಬಿಕೆ. ನನಗೆ ಏನು ಬೇಕೋ ಅದನ್ನು ತಾಯಿ ಚಾಮುಂಡೇಶ್ವರಿಯ ಬಳಿ ಪ್ರಾರ್ಥಿಸಿದ್ದೇನೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಆಷಾಢ ಶುಕ್ರವಾರ ಅಂಗವಾಗಿ ಕುಟುಂಬ ಸಮೇತವಾಗಿ ಇಲ್ಲಿನ ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ನಾನೇನು ಪ್ರಾರ್ಥನೆ ಮಾಡಿದ್ದೇನೆ ಎಂಬ ಬಗ್ಗೆ ಈಗ ಚರ್ಚೆ ಬೇಡ’ ಎಂದರು. ‘ಎಲ್ಲರೂ ಸೇರಿ ಒಟ್ಟಾಗಿ ಕೆಲಸ ಮಾಡೋಣ’ ಎಂದರು.



ನೆಲಮಂಗಲದಲ್ಲಿ ಈಚೆಗೆ ನಡೆದ ಕೆಂಪೇಗೌಡ ಜಯಂತಿಯಲ್ಲಿ ನಗರಸಭೆ ವ್ಯಾಪ್ತಿಯ 35 ಸಾವಿರ ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್‌ಗೆ ಮಂಜೂರು ಮಾಡಿಸಿ ಅದರ ಇಖಾತಾವನ್ನು ಟ್ರಸ್ಟ್ ಅಧ್ಯಕ್ಷ ಎಂ.ಕೆ.ನಾಗರಾಜು ಅವರಿಗೆ ಶಾಸಕ ಎನ್.ಶ್ರೀನಿವಾಸ್ ಹಸ್ತಾಂತರಿಸಿದರು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ವಕೀಲ ನಾರಾಯಣಗೌಡ, ಟ್ರಸ್ಟ್‌ನ ಮಧುಸೂದನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಆರ್.ಗೌಡ, ಯೋಜನಾ ಪ್ರಾಧಿಕಾರದ ಸದಸ್ಯ ಬಿ.ಜೆ.ವಾಸು, ಬಿಜೆಪಿ ಅಧ್ಯಕ್ಷ ಜಗದೀಶ್ ಚೌದರಿ ಹಾಜರಿದ್ದರು.

ನಗರದಲ್ಲಿ ಇಂದು

ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ (ಬಿಐಟಿ) ಸಂಸ್ಥಾಪನಾ ದಿನಾಚರಣೆ, ಸ್ಥಳ: ಬಿಐಟಿ ಆವರಣ, ಕೆ.ಆರ್.ರಸ್ತೆ, ವಿ.ವಿ.ಪುರ, ಬೆಳಿಗ್ಗೆ 9

‘ಬಿ.ಆರ್. ರೋಹಿತ್ ಪತ್ರಿಕೋದ್ಯಮ ಪ್ರಶಸ್ತಿ’ ಪ್ರದಾನ: ಬಸವರಾಜ ಹೊರಟ್ಟಿ, ಪ್ರಶಸ್ತಿ ಪುರಸ್ಕೃತರು: ವಿಜಯಕುಮಾರ್ ಚಂದರಗಿ, ಅತಿಥಿಗಳು: ವೂಡೇ ಪಿ. ಕೃಷ್ಣ, ಕೆ.ವಿ. ನಾಗರಾಜ್, ಬಿ.ಎಸ್. ಸತೀಶ್ ಕುಮಾರ್, ಉಪಸ್ಥಿತಿ: ಕೆ. ಲಲಿತಾ, ಸಿ. ರಾಜಣ್ಣ, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಮೀಡಿಯಾ ಸ್ಟಡೀಸ್ & ರಿಸರ್ಚ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

ವ್ಯಂಗ್ಯಚಿತ್ರಕಾರ ಅಶ್ವಥ್ ನಾರಾಯಣ ಅವರ 100 ಕಲಾ ಕೃತಿಗಳ ಪ್ರದರ್ಶನ: ಉದ್ಘಾಟನೆ: ಬೇಲೂರು ರಾಮಮೂರ್ತಿ, ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ನಂ. 1 ಮಿಡ್ ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ ರಸ್ತೆ, ಬೆಳಿಗ್ಗೆ 11

ಪ್ರೊ.ಎಂ.ಎಸ್. ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಎಂ.ಬಿ. ಪಾಟೀಲ, ಅತಿಥಿಗಳು: ಪ.ಸ.ಕುಮಾರ್, ಎಸ್.ಎನ್. ಅಗರವಾಲ್, ಪ್ರಶಸ್ತಿ ಪುರಸ್ಕೃತರು: ಮಾಧವಿ ಪಾರೆಖ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11.30



ಅಕ್ಷತಾ ಪಾಂಡವಪುರ

ರಂಗಸಂವಾದ– 06: ಅತಿಥಿ: ಅಕ್ಷತಾ ಪಾಂಡವಪುರ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ ಮತ್ತು ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಬರಗೂರು ರಾಮಚಂದ್ರಪ್ಪ ಅವರು ಸಂಪಾದಿಸಿರುವ ‘ಕುವೆಂಪು ವಿಚಾರ ಕ್ರಾಂತಿ’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಹಂಪ ನಾಗರಾಜಯ್ಯ, ಎಚ್.ಎನ್. ನಾಗಮೋಹನದಾಸ್, ಉಪಸ್ಥಿತಿ: ಚಿದಾನಂದಗೌಡ, ತಾರಿಣಿ ಚಿದಾನಂದಗೌಡ, ಕುವೆಂಪು ಗೀತೆಗಳ ಗಾಯನ: ಶಮಿತಾ ಮಲ್ನಾಡ್, ಆಯೋಜನೆ: ಜನ ಪ್ರಕಾಶನ, ಸ್ಥಳ: ಎನ್‌ಜಿಓ ಸಭಾಂಗಣ, ಸರ್ಕಾರಿ ನೌಕರರ ಸಂಘ, ಕಬ್ಬನ್ ಪಾರ್ಕ್, ಸಂಜೆ 4

ಪವನ್ ವೈ. ಅವರ ‘ಕೆಂಬಸ್ಸು’ ಪುಸ್ತಕ ಬಿಡುಗಡೆ: ಸಿ. ಸೋಮಶೇಖರ್, ಉದ್ಘಾಟನೆ: ನಟರಾಜ್ ಶರ್ಮ, ‘ಕರುನಾಡ ಸಾಮ್ರಾಟ್’ ಪ್ರಶಸ್ತಿ ಪ್ರದಾನ: ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಸದಾಶಿವಯ್ಯ ಜರಗನಹಳ್ಳಿ, ಆಯೋಜನೆ: ಕುವೆಂಪು ಕರ್ನಾಟಕ ಜನಪರ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ವಿ. ಗೋಪಾಲ್ ಅವರ ಐದನೇ ವರ್ಷದ ಸ್ಮರಣಾರ್ಥ ವ್ಯಂಗ್ಯಚಿತ್ರಗಳು, ವರ್ಣಚಿತ್ರಗಳು, ಛಾಯಾಚಿತ್ರಗಳ ಪ್ರದರ್ಶನ: ಉದ್ಘಾಟನೆ: ಎಂ.ಎಸ್. ನರಸಿಂಹಮೂರ್ತಿ, ವಿ.ಜಿ. ನರೇಂದ್ರ, ಆಯೋಜನೆ ಮತ್ತು ಸ್ಥಳ: ಆರ್ಟ್ ಗ್ಯಾಲರಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಅಲಂಕೃತ ನೃತ್ಯೋತ್ಸವ: ಪೂರ್ಣ ಆಚಾರ್ಯ ಅವರ ವಿದ್ಯಾರ್ಥಿಗಳಿಂದ, ಅತಿಥಿಗಳು: ಶುಭಾ ಧನಂಜಯ್, ಪಂಡಿತ್ ಸತೀಶ್ ಹಂಪಿಹೊಳಿ, ಆಯೋಜನೆ: ಅಲಂಕೃತ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.30

ದೃಶ್ಯ ಕಾವ್ಯದ ದಶಕದ ದಾರಿ: ಅಧ್ಯಕ್ಷತೆ: ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು:ಎಚ್.ಎಲ್. ಪುಷ್ಪ, ಎಂ. ಭೈರೆಗೌಡ, ಜಗದೀಶ್ ಜಾಲ, ರಂಗಗೌರವ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ದೃಶ್ಯ ಕಾವ್ಯ, ಸ್ಥಳ: ಮಹಿಳಾ ವಿಶ್ರಾಂತಿ ಗೃಹ, ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮೀಜಿ 19ನೇ ಪುಣ್ಯಸ್ಮರಣೆ ಪ್ರಯುಕ್ತ ಭಕ್ತರ ಭಂಡಾರದ ಕುಟೀರ ಉದ್ಘಾಟನೆ ಸಮಾರಂಭ, ಧಾರ್ಮಿಕ ಸಭೆ: ಸಾನ್ನಿಧ್ಯ: ಜಯೇಂದ್ರಪುರಿ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಕಾಗಿನೆಲೆ ಸಂಸ್ಥಾನ ಕನಕ ಗುರು ಪೀಠ, ಕೇತೋಹಳ್ಳಿ, ಸಂಜೆ 6

ಹಿಂದೂ ಸ್ವಾಭಿಮಾನ ರಥಯಾತ್ರೆ: ಸಭಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಬ್ರಹ್ಮಾಂಡ ಗುರೂಜಿ, ನಿಶ್ಚಲಾನಂದ ಸ್ವಾಮೀಜಿ, ಮುಖ್ಯ ಅತಿಥಿ: ಸ್ವಾಮಿ ಚಕ್ರಪಾಣಿ ಮಹಾರಾಜ್, ಅಧ್ಯಕ್ಷತೆ: ಮನೋಜ್ ಆಲೂಂಗಲ್, ಆಯೋಜನೆ: ಅಖಿಲ ಭಾರತ ಹಿಂದೂ ಮಹಾಸಭಾ–ಕರ್ನಾಟಕ, ಸ್ಥಳ: ಕಿಂಗ್ಸ್ ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಮೈದಾನ, ಸಂಜೆ 6

ರಾಮ್ ಮಾಧವ್ ಅವರ ‘ದಿ ನ್ಯೂ ವರ್ಲ್ಡ್’ ಪುಸ್ತಕ ಬಿಡುಗಡೆ ಮತ್ತು ಸಂವಾದ: ಉಪಸ್ಥಿತಿ: ರಾಮ್ ಮಾಧವ್, ಎಂ.ಕೆ. ರಮೇಶ್, ಆಯೋಜನೆ: ಥಿಂಕರ್ಸ್ ಫೋರಂ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕೆ–ಸೆಟ್, ‘ನೆಟ್’ ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ರಾಜ್ಯಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ಕೆ–ಸೆಟ್, ವಿಶ್ವವಿದ್ಯಾಲಯ ಅನುದಾನ ಆಯೋಗ ನಡೆಸಲಿರುವ ಯುಜಿಸಿ-ನೆಟ್ ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಪರೀಕ್ಷೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮೈಸೂರಿನ ಕೇಂದ್ರ ಕಚೇರಿಯಲ್ಲಿ ತರಬೇತಿ ಆಯೋಜಿಸಲಾಗಿದೆ.

ಆಸಕ್ತರು ಜುಲೈ 11ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಬೆಳಿಗ್ಗೆ 10ರಿಂದ ಸಂಜೆ 4.30ರೊಳಗೆ ದೂರವಾಣಿ ಸಂಖ್ಯೆ 0821-2515944/ 9964760090 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶನಿವಾರ, ಜುಲೈ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 185 | ಪುಟ 22
prajavani.net prajavani www.prajavani.net

ಮಣಿಪುರ: ಶಸ್ತ್ರಾಸ್ತ್ರ ವಶ

ಮಣಿಪುರ ಪೊಲೀಸರು ಹಾಗೂ ಅಸ್ಸಾಂ ರೈಫಲ್ಸ್‌ನವರು ಮಣಿಪುರದ ನಾಲ್ಕು ಗುಡ್ಡಗಾಡು ಜಿಲ್ಲೆಗಳಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಂಡಿದ್ದಾರೆ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೀರಜ್ ಕ್ಲಾಸಿಕ್..

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ 'ನೀರಜ್ ಚೋಪ್ರಾ ಕ್ಲಾಸಿಕ್' ಜಾವೆಲಿನ್ ಥ್ರೋ ಸ್ಪರ್ಧೆಯ ಮುನ್ನಾದಿನ ಒಲಿಂಪಿಯನ್ ನೀರಜ್ ಚೋಪ್ರಾ ಅಭ್ಯಾಸ ನಡೆಸಿದರು



ಸೆನ್ಸೆಕ್ಸ್ 83,432 | ನಿಫ್ಟಿ 25,461 | $/₹ 85.40 | ಚಿನ್ನ (Std. 10g) ₹1.02ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.14ಲಕ್ಷ (ಬೆಂಗಳೂರು)

ಭೂಸ್ವಾಧೀನ ಕೈಬಿಡಲು ಪಟ್ಟು

ಜುಲೈ 15ರ ಸಭೆಯತ್ತ ನಿರೀಕ್ಷೆ • ಹೋರಾಟಗಾರರ ನಡೆ ಹಳ್ಳಿ ಕಡೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಸ್ವಾಧೀನ ಕೈಬಿಡುವವರೆಗೆ ಹೋರಾಟ ಮುಂದುವರಿಸುವ ತೀರ್ಮಾನಕ್ಕೆ ಬಂದಿರುವ ರೈತ ಸಂಘಟನೆಗಳು, ಜುಲೈ 15ರ ಸಭೆಯವರೆಗೂ ಜಾಗೃತಿ ಅಭಿಯಾನ ನಡೆಸುವತ್ತ ಹೆಜ್ಜೆ ಇಟ್ಟಿವೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡಿರುವ 1,777 ಎಕರೆ ಜಮೀನನ್ನು ಕೈಬಿಡಬೇಕು ಎಂದು ಆಗ್ರಹಿಸಿ ಸಾವಿರಕ್ಕೂ ಹೆಚ್ಚು ದಿನಗಳಿಂದ ದೇವನಹಳ್ಳಿ ತಾಲ್ಲೂಕಿನ ಚನ್ನರಾಯ ಪಟ್ಟಣದ ರೈತರು ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಸಂಯುಕ್ತ ಹೋರಾಟ ಕರ್ನಾಟಕ, ಭೂ ಸ್ವಾಧೀನ ಹೋರಾಟ ಸಮಿತಿ ಮತ್ತು ಸಮಾನ ಮನಸ್ಕ ಸಂಘಟನೆಗಳು ಈ ಅವಿಶ್ರಾಂತ ಹೋರಾಟಕ್ಕೆ ಬೆಂಬಲ ಸೂಚಿಸಿದ ಬಳಿಕ, ಸರ್ಕಾರ ಎಚ್ಚೆತ್ತಿತ್ತು.

ಈ ಬೆನ್ನಲ್ಲೇ, ರೈತ ಪ್ರತಿನಿಧಿಗಳ ಸಭೆ ಕರೆದ ಮುಖ್ಯಮಂತ್ರಿ ಸಿದ್ದರಾಮಯ್ಯ, 10 ದಿನ ಸಮಯ ಕೇಳಿದರು. ಬಳಿಕ, ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ತೆರಳಿದ ರೈತ ಪ್ರತಿನಿಧಿಗಳು ಮತ್ತೊಂದು ಸುತ್ತಿನ ಸಮಾಲೋಚನೆ ನಡೆಸಿದರು.

'ನಾಡ ಉಳಿಸಿ ಸಮಾವೇಶ'ದಲ್ಲಿ ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಹೋರಾಟಗಾರರು, 'ಜುಲೈ 15ರಂದು ನಡೆಯುವ ಸಭೆಯವರೆಗೆ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳಲ್ಲಿ ನಿರಂತರವಾಗಿ ಹೋರಾಟ ಮುಂದುವರಿಸುತ್ತೇವೆ' ಎಂದಿದ್ದಾರೆ.

3C

ಮುಖ್ಯಾಂಶಗಳು

- 15ರವರೆಗೆ ಚನ್ನರಾಯಪಟ್ಟಣದ ಹಳ್ಳಿ ಹಳ್ಳಿಗಳಲ್ಲಿ ಜಾಗೃತಿ
- ಮುಂದಿನ ಸಭೆಯಲ್ಲಿ ರೈತ ಪರ ನಿರ್ಧಾರ ಬರದಿದ್ದರೆ ಹೋರಾಟ ತೀವ್ರ
- 9ರಂದು ರಾಷ್ಟ್ರವ್ಯಾಪಿ ಕಾರ್ಮಿಕ ಮುಷ್ಕರದಲ್ಲಿ ದೇವನಹಳ್ಳಿ ವಿಷಯ ಸೇರ್ಪಡೆ



ಸ್ವಾಧೀನವಾಗಲಿರುವ ಭೂಮಿಯಲ್ಲಿ ಬೆಳೆದ ಹಣ್ಣು, ತರಕಾರಿ, ಹೂವುಗಳೊಂದಿಗೆ ಸಭೆಗೆ ಬಂದ ರೈತರು ಅವುಗಳನ್ನು ಸಿದ್ದರಾಮಯ್ಯನವರ ಮುಂದಿಟ್ಟು, ನ್ಯಾಯಕ್ಕೆ ಆಗ್ರಹಿಸಿದ ಕ್ಷಣ. ಕೆ.ಎಚ್. ಮುನಿಯಪ್ಪ, ಬಿ.ಆರ್. ಪಾಟೀಲ, ನಸೀರ್ ಅಹಮದ್ ಇದ್ದರು

10 ದಿನ ಸಮಯ ಕೊಡಿ: ಸಿ.ಎಂ

'ಭೂಸ್ವಾಧೀನದ ಅಂತಿಮ ಅಧಿಸೂಚನೆ ಹೊರಡಿಸಿದ್ದರಿಂದಾಗಿ ಕಾನೂನು ತೊಡಕುಗಳಿದ್ದು, ತಜ್ಞರ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಲು 10 ದಿನ ಸಮಯ ಕೇಳಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾವು ಬೆಳೆದಿದ್ದ ತರಕಾರಿ, ಹಣ್ಣು, ಹೂವಿನೊಂದಿಗೆ ಬಂದಿದ್ದ ರೈತರು ಹಾಗೂ ಸಂಘಟನೆಗಳ ಪ್ರಮುಖರ ಜತೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ನಡೆಸಿದ ಸಿದ್ದರಾಮಯ್ಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

3C

ರೈತ ಸಾವು



ಈಶ್ವರ್

ಭೂಸ್ವಾಧೀನ ವಿರೋಧಿಸಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಚಾಮರಾಜನಗರ ಜಿಲ್ಲೆಯಿಂದ ಬಂದಿದ್ದ ರೈತರೊಬ್ಬರು ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಶುಕ್ರವಾರ ಬೆಳಿಗ್ಗೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಗುಂಡ್ಲುಪೇಟೆ ತಾಲ್ಲೂಕು ಕುರುಬರಹುಂಡಿಯ ಈಶ್ವರ್ (50) ಮೃತಪಟ್ಟವರು.

'3 ಶತ್ರುಗಳ ವಿರುದ್ಧ ಹೋರಾಟ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಸಮಯದಲ್ಲಿ ಭಾರತವು ಪಶ್ಚಿಮ ಭಾಗದಲ್ಲಿ ಒಬ್ಬರಲ್ಲ, ಮೂವರು ಶತ್ರುಗಳ ವಿರುದ್ಧ ಹೋರಾಡಿತು. ಪಾಕಿಸ್ತಾನವು ತನ್ನ ಮಿತ್ರ ಚೀನಾದಿಂದ ಸಾಧ್ಯವಿರುವ ಎಲ್ಲ ಬೆಂಬಲವನ್ನೂ ಪಡೆದಿತ್ತು ಮತ್ತು ಟರ್ಕಿ ಆ ದೇಶಕ್ಕೆ ಮಿಲಿಟರಿ ಸಾಧನಗಳನ್ನು ಒದಗಿಸಿತ್ತು' ಎಂದು ಭಾರತದ ಸೇನಾ ಸಿಬ್ಬಂದಿ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್ ತಿಳಿಸಿದರು.

ಎಫ್‌ಐಸಿಸಿಐ (ಫಿಕ್ಕಿ) ನವದೆಹಲಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ನವಯುಗದ ಮಿಲಿಟರಿ ತಂತ್ರಜ್ಞಾನಗಳು' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಪಾಕಿಸ್ತಾನ, ಚೀನಾ ಹಾಗೂ ಟರ್ಕಿ ನಡುವೆ ಬೆಳೆಯುತ್ತಿರುವ ಮಿಲಿಟರಿ ಸಹಯೋಗದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.



'ಭಾರತ–ಪಾಕಿಸ್ತಾನ ನಡುವೆ ಮೇ ತಿಂಗಳಲ್ಲಿ ನಾಲ್ಕು ದಿನಗಳ ಕಾಲ ನಡೆದ ಸಂಘರ್ಷವನ್ನು ಚೀನಾವು ವಿವಿಧ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಪರೀಕ್ಷಿಸಲು 'ಲೈವ್ ಲ್ಯಾಬ್'ನಂತೆ ಬಳಸಿಕೊಂಡಿದೆ. ಎದುರಾಳಿಯ ಮೇಲೆ 'ಸಾಲ ಪಡೆದ ಕತ್ತಿ'ಯಿಂದ ದಾಳಿ ನಡೆಸುವ ಪುರಾತನ ಸೇನಾ ತಂತ್ರಗಾರಿಕೆಯನ್ನು ಬಳಕೆ ಮಾಡಿದೆ' ಎಂದು ಅವರು ಹೇಳಿದರು.

'ನಮ್ಮ ವಿರುದ್ಧದ ಹೋರಾಟದಲ್ಲಿ ಪಾಕಿಸ್ತಾನ ಮುಂಚೂಣಿಯಲ್ಲಿತ್ತು. ಭಾರತಕ್ಕೆ ತೊಂದರೆ ನೀಡುವ ಸಲುವಾಗಿ ಪಾಕಿಸ್ತಾನವನ್ನು ಬಳಸಿಕೊಂಡ ಚೀನಾವು ಸಂಘರ್ಷದ ಸಮಯದಲ್ಲಿ ಸಾಧ್ಯವಿರುವ ಎಲ್ಲ ನೆರವನ್ನು ನೆರೆಯ ರಾಷ್ಟ್ರಕ್ಕೆ ನೀಡಿತ್ತು. ಇದರಲ್ಲಿ ಅಚ್ಚರಿ ಪಡುವಂತಹುದು ಏನಿಲ್ಲ. ಕಳೆದ ಐದು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದರೆ, ಪಾಕಿಸ್ತಾನ ಪಡೆಯುತ್ತಿರುವ ಮಿಲಿಟರಿ ಸಾಧನಗಳಲ್ಲಿ ಶೇ 81ರಷ್ಟು ಚೀನಿಯರದ್ದೇ ಆಗಿವೆ' ಎಂದು ಅವರು ಹೇಳಿದರು.

'ಭಾರತೀಯ ಸೇನಾ ನಿಯೋಜನೆ ಪತ್ತೆಹಚ್ಚಲು ಚೀನಾ ತನ್ನ ಉಪಗ್ರಹ ಬಳಸಿಕೊಂಡಿತು. ಇದರಿಂದ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕರ (ಡಿಜಿಎಂಒ) ಮಟ್ಟದ ದೂರವಾಣಿ ಕರೆಯ ವೇಳೆ ಕಾರ್ಯಾಚರಣೆಯ ಮಾಹಿತಿಯನ್ನು ಪಾಕಿಸ್ತಾನ ಪಡೆದುಕೊಳ್ಳುತ್ತಿತ್ತು' ಎಂದರು.

3D

ಚುನಾವಣೆ ಕರ್ತವ್ಯ: ಶಿಕ್ಷಕರಿಗಿಲ್ಲ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಬಾರದು ಎಂಬ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕೋರಿಕೆಯನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ನಿಯೋಜಿಸಿರುವ ಶಿಕ್ಷಕರನ್ನು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಹಿಂಪಡೆಯಬೇಕು ಎಂಬ ಕೋರಿಕೆ ಪರಿಗಣಿಸಲು ಸಾಧ್ಯವಿಲ್ಲ. ರಜಾ ದಿನಗಳು ಹಾಗೂ ಬೋಧಕೇತರ ಸಮಯದಲ್ಲಿ ಬೋಧಕ ಸಿಬ್ಬಂದಿಯನ್ನು ಚುನಾವಣಾ ಕಾರ್ಯ, ಮತದಾರರ ಪಟ್ಟಿಯ ಪರಿಷ್ಕರಣಾ ಕಾರ್ಯಕ್ಕೆ ನಿಯೋಜನೆ ಮಾಡಲು ಸುಪ್ರೀಂ ಕೋರ್ಟ್ ಸಹ ಸಮ್ಮತಿಸಿದೆ. ಭಾರತ ಚುನಾವಣಾ ಅಯೋಗವೂ ಈ ಕುರಿತು ಸುತ್ತೋಲೆ ಹೊರಡಿಸಿದೆ ಎಂದು ಕರ್ನಾಟಕದ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್. ಯೋಗೇಶ್ವರ ಹೇಳಿದ್ದಾರೆ.

ಚುನಾವಣಾ ಕಾರ್ಯಗಳಿಗಾಗಿ ಬೂತ್‌ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ನೇಮಕ ಮಾಡುವಾಗ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಂ ನೌಕರರಿಗೆ ಆದ್ಯತೆ ನೀಡಬೇಕು. ಒಂದು ವೇಳೆ ಅಂತಹ ನೌಕರರು ಲಭ್ಯವಿಲ್ಲದಿದ್ದರೆ ಅಂಗನವಾಡಿ, ಗುತ್ತಿಗೆ ಶಿಕ್ಷಕರು ಅಥವಾ ಕೇಂದ್ರ ಸರ್ಕಾರದ ಸಿಬ್ಬಂದಿಯನ್ನು ಬಳಸಿಕೊಳ್ಳಬಹುದು ಎಂದು ಮಾರ್ಗಸೂಚಿ ಇದೆ ಎಂದಿದ್ದಾರೆ.

ಪ್ರಸ್ತುತ ಬೂತ್‌ಮಟ್ಟದ ಅಧಿಕಾರಿಗಳಾಗಿ ನೇಮಕಗೊಂಡವರಿಗೆ ತರಬೇತಿ ಕಾರ್ಯಕ್ರಮ ಗಳು ನಡೆಯುತ್ತಿದ್ದು, ಶಿಕ್ಷಕರೂ ಒಳಗೊಂಡಂತೆ ಎಲ್ಲ ನೌಕರರೂ ಕಡ್ಡಾಯವಾಗಿ ಹಾಜರಾಗಲು ಜಿಲ್ಲಾ ಚುನಾವಣಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ಬಾಲೆಯ ಚಿಕಿತ್ಸೆಗೆ ₹75 ಲಕ್ಷ ಸಂಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ದೇವಸ್ಥಾನದ ಅರ್ಚಕರೊಬ್ಬರ ಐದು ವರ್ಷ ವಯಸ್ಸಿನ ಮಗುವಿಗೆ ಅಸ್ಥಿ ಮಜ್ಜೆ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆಗಾಗಿ ಕೇವಲ 15 ಗಂಟೆಗಳಲ್ಲಿ ₹75 ಲಕ್ಷ ನೆರವು ಸಂಗ್ರಹಿಸುವ ಮೂಲಕ ಸಮಾಜ ಸೇವಕ ಬಂಟ್ವಾಳದ ಫಯಾಜ್ ಮಸೂದ್ ಹಾಗೂ ಅವರ ತಂಡ ಕರಾವಳಿಯ ಸೌಹಾರ್ದ ಪರಂಪರೆಗೆ ಸಾಕ್ಷ್ಯ ಒದಗಿಸಿದೆ.

ಬಂಟ್ವಾಳ ತಾಲ್ಲೂಕಿನ ಐದು ವರ್ಷ ವಯಸ್ಸಿನ ಹೆಣ್ಣು ಮಗುವಿಗೆ ತುರ್ತಾಗಿ ಅಸ್ಥಿ ಮಜ್ಜೆ ಟ್ರಾನ್ಸ್‌ಪ್ಲಾಂಟ್ ಮಾಡಿಸಬೇಕು ಎಂದು ಬೆಂಗಳೂರಿನ ನಾರಾಯಣ ಆರೋಗ್ಯ ಸಂಸ್ಥೆಯ ವೈದ್ಯರು ಸೂಚಿಸಿದ್ದರು. ಇದಕ್ಕೆ ಸುಮಾರು ₹50 ಲಕ್ಷದಷ್ಟು ವೆಚ್ಚ ಬರಬಹುದು ಎಂದು ತಿಳಿಸಿದ್ದರು. ಮಗುವಿನ ಚಿಕಿತ್ಸೆಗಾಗಿ ಈಗಾಗಲೇ ಸುಮಾರು ₹7 ಲಕ್ಷದಷ್ಟು ವೆಚ್ಚ ಮಾಡಿರುವ ಕುಟುಂಬಕ್ಕೆ ಇಷ್ಟೊಂದು ಹಣ ಹೊಂದಿಸುವುದು ಅಸಾಧ್ಯವಾಗಿತ್ತು. 'ನಮ್ಮ ಕಷ್ಟವನ್ನು ಅರಿತ ಸ್ನೇಹಿತರೊಬ್ಬರು ಫಯಾಜ್ ಅವರ ನಂಬರ್ ಕೊಟ್ಟಿದ್ದರು. ಗ್ರಾಮದ 10 ಮಂದಿ ಹೋಗಿ ಅವರನ್ನು ಭೇಟಿಯಾದೆವು. ಅದಾದ ಬಳಿಕ ಅವರು ನಮ್ಮ ಮನೆಗೆ ಬಂದು, ಮಗಳನ್ನು ಭೇಟಿಮಾಡಿ, ವಿಡಿಯೊ ಮಾಡಿಕೊಂಡು. ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದರು. ಆದರೆ ಈ ಪ್ರಮಾಣದಲ್ಲಿ ನೆರವು ಲಭಿಸುತ್ತದೆ ಎಂದು ಭಾವಿಸಿರಲಿಲ್ಲ' ಎಂದು ಬಾಲಕಿಯ ತಂದೆ ಹಿರಣ್ಯಾಕ್ಷ ತಿಳಿಸಿದರು.

3D

ಚಿನಕುರುಳಿ ಪ್ರಕಾಶ್ ಶೆಟ್ಟಿ



ಎಸಿಎಫ್, ಆರ್‌ಎಫ್‌ಒ ಅಮಾನತು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯ ಎಸಗಿದ ಇಬ್ಬರು ಅಧಿಕಾರಿ ಗಳನ್ನು ಅಮಾನತುಗೊಳಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಡಿಸಿಎಫ್ ಅಮಾನತಿಗೆ ಶಿಫಾರಸು ಮಾಡಿದ್ದಾರೆ.

ಹುಲಿಗಳ ಸಾವಿನ ತನಿಖೆಗೆ ನೇಮಿಸಿದ್ದ ಉನ್ನತ ಮಟ್ಟದ ವಿಚಾರಣಾ ಸಮಿತಿ ನೀಡಿರುವ ಪ್ರಾಥಮಿಕ ವರದಿ ಆಧರಿಸಿ, ಹನೂರು ವನ್ಯಜೀವಿ ಉಪ ವಿಭಾಗದ ಎಸಿಎಫ್ ಗಜಾನನ ಹೆಗಡೆ ಹಾಗೂ ಉಪ ವಲಯ ಅರಣ್ಯಾಧಿಕಾರಿ ಮಾದೇಶ್ ಅವರನ್ನು ಅಮಾನತು ಮಾಡಿರುವ ಸಚಿವರು ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಡಿಸಿಎಫ್ ವೈ.ಚಕ್ರಪಾಣಿ ಅವರನ್ನು ಅಮಾನತುಗೊಳಿಸವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸೂಚಿಸಿದ್ದಾರೆ.

ಹೊರಗುತ್ತಿಗೆ ಸಿಬ್ಬಂದಿಗೆ ವೇತನ ಪಾವತಿಸಲು ಏಪ್ರಿಲ್ ಅಂತ್ಯಕ್ಕೆ ಹಣ ಬಿಡುಗಡೆ ಮಾಡಿದ್ದರೂ ಜೂನ್‌ವರೆಗಿನ ವೇತನ ಪಾವತಿಸಿರಲಿಲ್ಲ. ಪರಿಣಾಮ ಹೊರಗುತ್ತಿಗೆ ಸಿಬ್ಬಂದಿ 3 ತಿಂಗಳ ವೇತನ ಪಾವತಿಗೆ ಆಗ್ರಹಿಸಿ ಜೂನ್ 23ರಂದು ಪ್ರತಿಭಟನೆ ನಡೆಸಿದ್ದರು. ಹೀಗಾಗಿ, ಮುಂಚೂಣಿ ಸಿಬ್ಬಂದಿ ಕರ್ತವ್ಯದಿಂದ ವಿಮುಖವಾದ ಅಂಶ ಮೇಲ್ನೋಟಕ್ಕೆ ಕಂಡುಬಂದಿದೆ. ಗಸ್ತು ಸಿಬ್ಬಂದಿಯ ಕಾರ್ಯಕ್ಷಮತೆಯ ಮೇಲೆ ಎಸಿಎಫ್, ಆರ್‌ಎಫ್‌ಒ ಮತ್ತು ಡಿಆರ್‌ಎಫ್‌ಒ ನಿಗಾ ಇರಿಸುವಲ್ಲಿ ವಿಫಲರಾಗಿದ್ದು, ಅರಣ್ಯ ರಕ್ಷಣೆಯಲ್ಲಿ ಕರ್ತವ್ಯ ನಿರ್ಲಕ್ಷ್ಯ ತೋರಿದ್ದಾರೆ. ಈ ಕಾರಣದಿಂದ ಮೂವರನ್ನೂ ಅಮಾನತು ಮಾಡಿ ಇಲಾಖಾ ವಿಚಾರಣೆ ನಡೆಸಬೇಕು ಎಂದಿದ್ದಾರೆ.

ಜುಲೈ 10ರೊಳಗೆ ಅಂತಿಮ ತನಿಖಾ ವರದಿ ಸಲ್ಲಿಸುವಂತೆ ಹೆಚ್ಚುವರಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ಸಮಿತಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.

ಎಇಸಿಎಸ್ ಲೇಔಟ್‌ನಲ್ಲಿ ಅನಧಿಕೃತ ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದ ಎಇಸಿಎಸ್ ಲೇಔಟ್‌ನಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡದ ಭಾಗಗಳನ್ನು ತೆರವುಗೊಳಿಸಲಾಯಿತು ಎಂದು ವಲಯ ಆಯುಕ್ತ ರಮೇಶ್ ತಿಳಿಸಿದರು.

ಎಇಸಿಎಸ್ ಲೇಔಟ್‌ನ ಸಿ-ಬ್ಲಾಕ್ 1ನೇ ಮುಖ್ಯರಸ್ತೆಯಲ್ಲಿ ನಿವೇಶನ ಸಂ. 735ರ ಮಾಲೀಕರಾದ ಭಾಸ್ಕರ್ ಅವರು 38 x 59 ಅಡಿ ವಿಸ್ತೀರ್ಣದಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನೆಲಮಾಳಿಗೆ ಮತ್ತು ಆರು ಅಂತಸ್ತು ಕಟ್ಟಡ ನಿರ್ಮಾಣ ಮಾಡಿದ್ದರು. ಬಿಬಿಎಂಪಿ-2020 ಕಾಯ್ದೆಯಡಿ ತಾತ್ಕಾಲಿಕ ಆದೇಶ ಹಾಗೂ ಸ್ಥಿರೀಕರಣ ಆದೇಶದ ನೋಟಿಸ್‌ಗಳನ್ನು ಜಾರಿ ಮಾಡಿದ್ದರೂ, ಕಟ್ಟಡ ನಿರ್ಮಾಣ ಕಾರ್ಯ ನಿಲ್ಲಿಸಿರಲಿಲ್ಲ ಎಂದು ಮಾಹಿತಿ ನೀಡಿದರು.

ಹೆಚ್ಚುವರಿಯಾಗಿ ನಿರ್ಮಿಸಿರುವ ಎರಡು ಮಹಡಿಗಳ ತೆರವಿಗೆ ಮೂರು ಕೊರೆಯುವ ಯಂತ್ರಗಳು ಹಾಗೂ 10 ಸಿಬ್ಬಂದಿ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ತೆರವಿನ ವೆಚ್ಚವನ್ನು ಕಟ್ಟಡ ಮಾಲೀಕರಿಂದ ವಸೂಲಿ ಮಾಡಲಾಗುವುದು ಎಂದು ತಿಳಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ರಾಹ್ ಅಕಾಡೆಮಿ ಯುವತಿಯರಿಗೆ ಉಚಿತ ವಸತಿ ಸಹಿತ ಯುಪಿಎಸ್‌ಸಿ ಅಧ್ಯಯನ ಕೇಂದ್ರದ ಮೂಲಕ 2025-26 ಸಾಲಿಗೆ ಅರ್ಜಿ ಆಹ್ವಾನಿಸಿದೆ. ಕನಕಪುರ ರಸ್ತೆಯ ಮ್ಯಾಂಗೋಗಾರ್ಡನ್ ಲೇಔಟ್‌ನಲ್ಲಿರುವ 'ರಾಹ್ ಸೂಪರ್ 30'ನಲ್ಲಿ ತರಬೇತಿ ನೀಡಲಿದ್ದು, www.raahsuper30.com ನಲ್ಲಿ ನೋಂದಾಯಿಸಿಕೊಳ್ಳಬಹುದು ಅಥವಾ 81234 94947 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನ.

ಅಧಿಕಾರಿ ಅಮಾನತು

ಬೆಂಗಳೂರು: ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯಲ್ಲಿ ಮಾಹಿತಿ ಪಡೆಯದ ಮನೆಗೆ ಸ್ಟಿಕರ್ ಅಂಟಿಸಿ ಕರ್ತವ್ಯಲೋಪ ಎಸಗಿರುವ ವಸಂತನಗರ ಉಪ ವಿಭಾಗದ ಕಂದಾಯ ಪರಿವೀಕ್ಷಕರಾದ ಕವಿತಾ ಅವರನ್ನು ಅಮಾನತು ಮಾಡಲಾಗಿದೆ.

ನವೀಕರಣ ಶುಲ್ಕ ಪಾವತಿ: ಬಡ್ಡಿ ಮನ್ನಾ

ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ

● 120 ದಿನಗಳ ಅವಕಾಶ



ಹೆಬ್ಬಾಳ ಮೇಲ್ಸೇತುವೆ ಬಳಿ ನಡೆಯುತ್ತಿರುವ ಹೊಸ ಲೂಪ್ (ಪಥ) ನಿರ್ಮಾಣ ಕಾಮಗಾರಿ ಆಗಸ್ಟ್ ಎರಡನೇ ವಾರ ಪೂರ್ಣಗೊಳ್ಳಲಿದೆ

ಎನ್.ಎ.ಹ್ಯಾರಿಸ್, ಬಿಡಿಎ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಸಂಘ-ಸಂಸ್ಥೆಗಳು ಹಾಗೂ ಟ್ರಸ್ಟ್‌ಗಳು ನಾಗರಿಕ ಸೌಲಭ್ಯ (ಸಿ.ಎ) ನಿವೇಶನಗಳ ಗುತ್ತಿಗೆ ನವೀಕರಣ ಶುಲ್ಕ ಪಾವತಿಸಿದರೆ ಸಂಪೂರ್ಣ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ತಿಳಿಸಿದರು.

ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ದೇವಾಲಯಗಳು, ಚರ್ಚ್, ಮಸೀದಿ ಹೀಗೆ ನಾಗರಿಕ ಸೌಲಭ್ಯಕ್ಕಾಗಿ ನಿವೇಶನ ಪಡೆದುಕೊಂಡಿವೆ. 1,600 ಸಂಘ-ಸಂಸ್ಥೆಗಳಿಗೆ ಸಿ.ಎ ನಿವೇಶನ ಹಂಚಿಕೆಯಾಗಿದ್ದು, 30 ವರ್ಷಗಳಿಗೆ ಗುತ್ತಿಗೆ ಅವಧಿ ಇದೆ. ಕೆಲ ದೇವಸ್ಥಾನಗಳಿಗೆ ಆದಾಯ ಇರುವುದಿಲ್ಲ. ಹಾಗಾಗಿ ಗುತ್ತಿಗೆ ನವೀಕರಣ ಮಾಡಿಸಿಕೊಂಡಿರುವುದಿಲ್ಲ. 120 ದಿನದೊಳಗೆ ನಿವೇಶನ ನವೀಕರಣ ಶುಲ್ಕ ಪಾವತಿಸಿದರೆ, ಬಡ್ಡಿ ಮನ್ನಾ ಮಾಡಲಾಗುವುದು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸದ್ಯದ ಮಾಹಿತಿ ಪ್ರಕಾರ 250ಕ್ಕೂ ಹೆಚ್ಚು ಸಿ.ಎ ನಿವೇಶನಗಳ ಗುತ್ತಿಗೆ ನವೀಕರಣ ಆಗಬೇಕಿದೆ. ಆಯಾ ಪ್ರದೇಶದ ಮಾರ್ಗಸೂಚಿ ಪ್ರಕಾರ ಶುಲ್ಕ ನಿಗದಿ ಮಾಡಲಾಗಿದೆ. ಈ ಸೌಲಭ್ಯ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯ 9 ಬ್ಲಾಕ್‌ಗಳ ಪೈಕಿ 5 ಬ್ಲಾಕ್‌ಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಬ್ಲಾಕ್‌ಗಳಲ್ಲಿ ಶೇಕಡ 20 ರಿಂದ 30ರಷ್ಟು ಕಾಮಗಾರಿ ಬಾಕಿ ಇದೆ. ಎಲ್ಲ ರೀತಿಯ ಸೌಲಭ್ಯ ಒದಗಿಸಿರುವ ಕಡೆಯೂ ಮನೆಗಳನ್ನು ನಿರ್ಮಿಸಲು ಮುಂದಾಗುತ್ತಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಹಾಯವಾಣಿ ಆರಂಭ: ಸಾರ್ವಜನಿಕರ ಅನುಕೂಲಕ್ಕಾಗಿ ನಾಗರಿಕ ಸಹಾಯ ಕೇಂದ್ರ (ಸಿಎಚ್‌ಸಿ) ಕಾರ್ಯಾರಂಭ ಮಾಡಿದ್ದು, ಕುಂದುಕೊರತೆ ಅಥವಾ ಮನವಿ ಕುರಿತು 94831-66622 ಸಂಖ್ಯೆಗೆ ಕರೆ ಮಾಡಿ ತಿಳಿಸಬಹುದು.

ಕೇಂದ್ರವು ನಿತ್ಯ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಕಾರ್ಯ ನಿರ್ವಹಿಸಲಿದ್ದು, ಕರೆಗಳನ್ನು ಸ್ವೀಕರಿಸಿ ಕೇಂದ್ರದ ಇ ಗವರ್ನೆನ್ಸ್ ಇಲಾಖೆ ಅಭಿವೃದ್ಧಿಪಡಿಸಿರುವ ಐಜಿಆರ್‌ಎಸ್ ಲಾಗಿನ್ ಅನ್ನು ಬಳಸಿ ತಂತ್ರಾಂಶದಲ್ಲಿ ಅಳವಡಿಸಿ, ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ನಿತ್ಯ ಕಚೇರಿಗೆ ಭೇಟಿ ನೀಡುವ ಅವಶ್ಯಕತೆ ಇಲ್ಲ ಎಂದು ಪ್ರಾಧಿಕಾರದ ಆಯುಕ್ತ ಮಣಿವಣ್ಣನ್ ತಿಳಿಸಿದರು.

ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸರ್ಕಾರದ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್‌ಎಸ್ ವೆಬ್ ಆ್ಯಪ್) ಅಥವಾ ನಾಗರಿಕ ಸಹಾಯ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ನೇರವಾಗಿ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳನ್ನು ಪರಿಶೀಲಿಸಿ 30 ದಿನಗಳಲ್ಲಿ ಪರಿಹಾರ (ಎಲ್1, ಎಲ್2, ಎಲ್3 ಪ್ರತಿ ಹಂತಗಳಿಗೆ ಗರಿಷ್ಠ ಹತ್ತು ದಿನಗಳು) ಒದಗಿಸಲಾಗುವುದು. ಪ್ರಾಧಿಕಾರದ ನಿಯಮಗಳ ಅನುಸಾರ ಕ್ರಮವಹಿಸಲು ಸಾಧ್ಯವಿಲ್ಲದಿದ್ದಲ್ಲಿ ಸೂಕ್ತ ಹಿಂಬರಹ ನೀಡಿ ಮುಕ್ತಾಯ ಮಾಡಲಾಗುತ್ತದೆ ಎಂದು ವಿವರಿಸಿದರು.

ಪ್ರಾಧಿಕಾರ ಕೈಗೊಂಡ ಕ್ರಮ ತೃಪ್ತಿಕರವಾಗದೇ ಇದ್ದಲ್ಲಿ ಪ್ರತಿ ಗುರುವಾರ ಮಧ್ಯಾಹ್ನ ವಲಯವಾರು ಸಾರ್ವಜನಿಕರ ಸಮಕ್ಷಮದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

'ಕಾರ್ಮಿಕರಿಗೆ ಆರೋಗ್ಯ ಶಿಬಿರ'

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರಗಳನ್ನು ನಡೆಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧ್ಯಕ್ಷ ತುಷಾರ್ ಗಿರಿನಾಥ್ ಸೂಚಿಸಿದರು.

ಬಿಬಿಎಂಪಿ, ಬಿಎಸ್‌ಡಬ್ಲ್ಯುಎಂಎಲ್, ಸಿ40 ನಗರಗಳ ಸಹಯೋಗ, ಸೆನ್ಸಿಂಗ್ ಲೋಕಲ್ ಹಾಗೂ ಸಾಹಸ್ ಸಂಸ್ಥೆಯ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಅವರು ಮಾತನಾಡಿದರು.

ಘನತ್ಯಾಜ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸುವ ಮೂಲಕ, ಆರೋಗ್ಯ ಸಮಸ್ಯೆಗಳನ್ನು ಪತ್ತೆಹಚ್ಚಿ, ತುರ್ತು ವೈದ್ಯಕೀಯ ಸಹಾಯ ಮಾಡಬೇಕು. ತ್ಯಾಜ್ಯ ಕಾರ್ಮಿಕರು ಹಾಗೂ ಮೇಲ್ವಿಚಾರಣೆ ಅಧಿಕಾರಿಗಳೊಂದಿಗೆ ಪ್ರತಿ ತಿಂಗಳು ಸಭೆ ನಡೆಸಬೇಕು ಎಂದು ಸೂಚಿಸಿದರು.

Reliance
Growth is Life

SMART BAZAAR

ಇರುವಾಗ, ಬೇರೆಡೆಗೆ ಮತ್ತೇಕೆ ಹೋಗಬೇಕು?

ಲೂಸ್ ಸಕ್ಕರೆ (ಚಿಕ್ಕದು)
1 kg
₹42.50
ಮಾರುಕಟ್ಟೆ ಬೆಲೆ ₹~~47.50~~



ಆಶೀರ್ವಾದ್ ಸುಪೀರಿಯರ್ ಎಂಪಿ ಅಟ್ಟಾ 10 kg
₹525
ಎಮ್‌ಆರ್‌ಪಿ ₹~~638~~
ಉಳಿಸಿರಿ ₹113
ಪಡೆಯಿರಿ 1 kg ಸಕ್ಕರೆ @₹9



ಬೋಲಾಸ್ ಕ್ಯಾಶಿವ್ ಸೂಪರ್ ಸೇವರ್ ಪ್ಯಾಕ್ 400 g
₹345
ಎಮ್‌ಆರ್‌ಪಿ ₹~~599~~
ಉಳಿಸಿರಿ ₹254



ಗುಡ್ ಲೈಫ್ ರೀಫೈನ್ಡ್ ಸೂರ್ಯಕಾಂತಿ ಎಣ್ಣೆ 820 g
₹132
ಎಮ್‌ಆರ್‌ಪಿ ₹~~185~~
ಉಳಿಸಿರಿ ₹53



ಮಿಲ್ಕಿ ಮಿಸ್ಟ್ ಹಸುವಿನ ತುಪ್ಪ 1 L
₹579
ಎಮ್‌ಆರ್‌ಪಿ ₹~~799~~
ಉಳಿಸಿರಿ ₹220



ಸನ್‌ಫೀಸ್ಟ್ ಯಿಪ್ಪೀ! ನೂಡಲ್ಸ್ 75 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹49 ರಿಂದ/ಯೂನಿಟ್





₹38.42 /kg

ಗುಡ್ ಲೈಫ್ ಡೈಲಿ ಅಕ್ಕಿ 26 kg ಎಮ್‌ಆರ್‌ಪಿ ₹~~1800~~
₹999
ಉಳಿಸಿರಿ ₹801

ಸರ್ಫ್ ಎಕ್ಸೆಲ್ ಈಸಿ ವಾಶ್ ಡಿಟರ್ಜಂಟ್ ಪೌಡರ್ 1.5 kg
₹50 ಉಳಿಸಿರಿ
ಎಮ್‌ಆರ್‌ಪಿ ₹~~235~~ ರಿಂದ
ಸ್ಮಾರ್ಟ್ ಬೆಲೆ ₹185 ರಿಂದ



ರೆಡ್ ಲೇಬಲ್ ಚಹಾ 500 g
₹55 ಉಳಿಸಿರಿ
ಎಮ್‌ಆರ್‌ಪಿ ₹~~275~~ ರಿಂದ
ಸ್ಮಾರ್ಟ್ ಬೆಲೆ ₹220 ರಿಂದ



ಬೂಸ್ಟ್ / ಹಾರ್ಲಿಕ್ಸ್ 750 g
₹170 ಉಳಿಸಿರಿ
ಎಮ್‌ಆರ್‌ಪಿ ₹~~459~~ ರಿಂದ
ಸ್ಮಾರ್ಟ್ ಬೆಲೆ ₹289 ರಿಂದ



ಬಿಸ್ಕಿಟ್ ಸರಣಿ / ರಸ್ಕ್ 69 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹30 ರಿಂದ/ಯೂನಿಟ್



ಡಾಬರ್ ರೆಡ್ / ಮೆಸ್ವಾಕ್ ಟೂತ್ ಪೇಸ್ಟ್ 300 g (ಆಯ್ದ ಪ್ರಕಾರಗಳು)
ಫ್ಲಾಟ್ 33% ಕಡಿತ
ಎಮ್‌ಆರ್‌ಪಿ ₹~~222~~ ರಿಂದ
ಸ್ಮಾರ್ಟ್ ಬೆಲೆ ₹149 ರಿಂದ



ಸೋಪ್ 150 g ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
₹60 ರಿಂದ ಉಳಿಸಿರಿ
ಎಮ್‌ಆರ್‌ಪಿ ₹~~175~~ ರಿಂದ
ಸ್ಮಾರ್ಟ್ ಬೆಲೆ ₹115 ರಿಂದ



ಪ್ಯಾರಾಶೂಟ್ ತೆಂಗಿನಕಾಯಿ ಎಣ್ಣೆ 300 ml
₹45 ಉಳಿಸಿರಿ
ಎಮ್‌ಆರ್‌ಪಿ ₹~~188~~ ರಿಂದ
ಸ್ಮಾರ್ಟ್ ಬೆಲೆ ₹143 ರಿಂದ



Pigeon ಸ್ಟೇನ್‌ಲೆಸ್ ಸ್ಟೀಲ್ ಪ್ರೆಶರ್ ಕುಕ್ಕರ್ 3 L (ಹೊರ ಮುಚ್ಚಳ)
₹999
ಎಮ್‌ಆರ್‌ಪಿ ₹~~2295~~



CRYSTAL ಹ್ಯಾಂಡಿ ಪುಲ್ ಚಾಪರ್
₹149
ಎಮ್‌ಆರ್‌ಪಿ ₹~~499~~



ಈರುಳ್ಳಿ 2 kg ಪ್ಯಾಕ್
₹9*/kg
*₹499 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್ ಮೇಲೆ. ಪ್ರತಿ ಗ್ರಾಹಕರಿಗೆ 2 kg ಮಾತ್ರ.



ಕನಿಷ್ಠ 5% ಕಡಿಮೆ ಎಂಆರ್‌ಪಿ# ಪ್ರತಿದಿನ

ಸಕ್ಕರೆ 1 kg ₹9* ಪ್ರತಿದಿನ
*₹2499 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್‌ನಲ್ಲಿ

ಈಗ ತೆರೆದಿದೆ ಟಿಟಿಎಂಸಿ, ಶಾಂತಿನಗರ ಬಸ್ ಸ್ಟ್ಯಾಂಡ್.

ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ . • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3ನೇ ಹಂತ. • ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೆಗೂರ್ - ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಕ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್ ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ . • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.

ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ

SMART BAZAAR

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. # ಖಾದ್ಯ ತೈಲ, ಲೂಸ್ ಸ್ಟೇಪಲ್ಸ್, ತಾಜಾ ಹಾಲು, ಬೇಬಿ ಫುಡ್, ಪತಂಜಲಿ ಉತ್ಪನ್ನಗಳು, ಸಾಮಾನ್ಯ ಸರಕುಗಳು, ಎಲೆಕ್ಟ್ರಾನಿಕ್ಸ್, ಉಡುಪು ಮತ್ತು ಪಾದರಕ್ಷೆಗಳನ್ನು ಹೊರತುಪಡಿಸಿ, ಆಯ್ದ ಉತ್ಪನ್ನಗಳ ಎಂಆರ್ ಪಿ ಗಳಲ್ಲಿ ಮಾತ್ರ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 6 ಜುಲೈ 2025. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

SALE 87000SFT, west facing, Vacant Land Commercial and Residential converted, E-Khata, clear titles, at Hosakote Shidalgatta Road. call Verna Developers, Barton centre, MG Road, BLR. 9916310226 9620253180.

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

"AVAILABLE WANTED BDA_Sites Banashankari 6TH Stg,Anjanapura Vishweshwaraiah Lyt_50x80 40x60_30x40 20x30,Value Properties Call Raju:9901315949, 9731814437

BDA RESIDENTIAL Plot for Sale in BSK 2nd Stage, west facing 36x85 ft- 3060sqft, Price 7.6Cr. Verna Developers MG Road 9353128035/ 9916310226 (Brokers Excuse)

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

Anjanapura

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

BTM Layout

BTM LAYOUT 4th Stage 2nd Block S/F 30x50 Suitable Residential Semi Commercial USR 7019770736/ 8951614989

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT, Commercial/ Residential BDA Site for Sale. 20x30, 30x40, 40x60, 50x80. Contact Kumar 9945119449

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Vishweshwariah Layout

"50X80 EAST FACING 60 FEET ROAD, NEAR PROPOSED BDA COMPLEX 6TH BLOCK VISHVESHWARAIH LAYOUT- 9845143579"

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666 ,9886634578

Hebbal

HEBBAL 30X35 House Sale Ground 1 BHK Two Carparking 1st 2 BHK, 2nd 2 BHK: 9845623970/ 9739400838

Vijayanagar

BDA SITE 1500 Sft East Facing, RPC layout Vijayanagar, Price 18,500/- Sft, Ph: 8296101765, 7259103521.

House

Jayanagar

JAYANAGAR_'T' block and_around Area`2000,_2200, 2,400`sqft, South, North,West old houses `Genuine Buyers`only Suraj Realtors- 9845232711

Nagarabhavi

THE PROPERTY Bearing no. 306, Shree Hari Nilaya, 10th Main Road, Nagarabhavi 2nd Stage, NGEF Layout, Bengaluru- 560072 is for sale. (M):- 9844601456.

Padmanabha Nagar

PROPERTY FOR Sale In Padmanabhanagar 1500 Sqft East Facing Good Location Contact: 8147734144

Flat

Chandra Layout

PENTHOUSE FLAT for Sale, 3 Bedroom, 1600sft Super built-up, 50Mtr from Attiguppe Metro Station, Chandra layout, Vijaynagar. 1.5Cr Negotiable- 9844060483

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

MORE Classifieds Ads on Subsequent Pages

Farm House/ Land/ Resorts

Out-Station

PLAIN FARM_LAND For`Sale 6.30.Acres, 2Borewells, Own`Tc, 2sheds,_From T.Narsipura 17.kms, From Bangalore 160.kms._price: Rs.20.Lakhs/Acre. Call:9886236799

Commerical

Kanakapura Road

6000 SQ.FEET Commercial conversation sites available for small scale industries in Harohalli, Kanakapura road (only five sites available) site facing North each site 6000 sq.feet. 8618082021

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

Yelahanka

RESIDENTIAL BUILDING with, Commercial Space FOR SALE (Ground & First Floor+ Shop) Sale Price:3.6 Crores, Premium Residential Building FOR SALE (G+4 and Terrace Area.) Sale Price: 14Crores, Other Residential and Commercial Sites Available in Judicial Layout, Call: 9448447360

Commercial Building

Airport Road

FOR SALE Fully Furnished Office Old Airport Road VDB TOUCHDOWN Next to HAL Museum 7447 Sqft 96 Work Stations 5 Cabins 3 Meeting Room 1 Board 1MD Cabin 6 Carparks. No PHONE CALLS WHATS APP MESSAGE ONLY TO: 9845031550

Koramangala

KORAMANGALA 50X80 COMMERCIAL SITE 80 FEET MAIN ROAD MULTIPLE PURPOSE HOTEL/ COMMERCIAL COMPLEX eventure 9113040843

RENTAL PROPERTIES

Accommodation Available

Flats

J.P.NAGAR 5TH_PHASE, 4_BHK_Flat for RENT, Semi_Furnished, Carparking, Gated_Community. 9078624570, 9902107406.

Industrial And Factory

COLD STORAGE facility for Rent KIADB Dabaspete industrial Area Bangalore, uttarahalli 6.5 acres sale 9845720810.

MALUR 3+2 Acres Land for Rent, Suitable for farming, warehouse, bricks factory PH: 9481801053

Accommodation Wanted

Commercial

WANTED FOR RENT 1 BHK, Jayanagar, Shanthinagar, For office, Victory Properties. 7411692219/ 8618576685

Flat

FULLY FURNISHED 4 BHK flat at SANSIDH GALAXY, Rachenahalli, behind Manyata tech park with Two car parking gym, Swimming pool, club house, 24 hours Security. Rent 1 lakh Negotiable Call 9686230308

House

WANTED FOR RENT 4 BHK, Independent House as per Vaastu, BTM, Jayanagar, JP.Nagar, Dollars Colony. Victory Properties: 7411692219/ 8618576685

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

34 ಅಧಿಕಾರಿ ವಿರುದ್ಧ ಎಫ್‌ಐಆರ್

ವೈದ್ಯಕೀಯ ಕಾಲೇಜುಗಳ ಭ್ರಷ್ಟಾಚಾರ ಕರ್ನಾಟಕದ ಇಬ್ಬರು ವೈದ್ಯರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಖ್ಯಾಂಶಗಳು

- ಮಂಡ್ಯ ವೈದ್ಯಕೀಯ ಕಾಲೇಜಿನ ಡಾ.ಮಂಜಪ್ಪ ಭಾಗಿ: ಆರೋಪ
- ಬೆಂಗಳೂರಿನ ವೈದ್ಯ ಡಾ.ಸತೀಶ್ ವಿರುದ್ಧವೂ ಪ್ರಕರಣ
- ಅನುಕೂಲಕರ ವರದಿ ನೀಡಲು ₹55 ಲಕ್ಷ ಲಂಚ ಪಡೆದ ಆರೋಪ

ನವದೆಹಲಿ: ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಗೋಪ್ಯ ಮತ್ತು ಅತ್ಯಂತ ಸೂಕ್ಷ್ಮ ಮಾಹಿತಿಗಳನ್ನು ಕಾನೂನು ಬಾಹಿರವಾಗಿ ಹಂಚಿಕೊಳ್ಳುವ ಮೂಲಕ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇರೆಗೆ ವಿಶ್ವ ವಿದ್ಯಾಲಯದ ಅನುದಾನ ಆಯೋಗದ (ಯುಜಿಸಿ) ಮಾಜಿ ಅಧ್ಯಕ್ಷ, ಮಂಡ್ಯ ವೈದ್ಯಕೀಯ ಕಾಲೇಜಿನ ಒಬ್ಬ ವೈದ್ಯ ಸೇರಿ ಕರ್ನಾಟಕದ ಇಬ್ಬರು ವೈದ್ಯರನ್ನು ಒಳಗೊಂಡಂತೆ ಒಟ್ಟು 34 ಸರ್ಕಾರಿ ಅಧಿಕಾರಿಗಳ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗದ ಹಿರಿಯ ಅಧಿಕಾರಿಗಳು, ಮಧ್ಯವರ್ತಿಗಳು, ದೇಶದ ವಿವಿಧೆಡೆಯ ಖಾಸಗಿ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳನ್ನು ಒಳಗೊಂಡ ಈ ಜಾಲವನ್ನು ಸಿಬಿಐ ಭೇದಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣ ಕುರಿತು ಜೂನ್ 30ರಂದು ಎಫ್‌ಐಆರ್ ದಾಖಲಿಸಲಾಗಿದ್ದು, ಆರೋಗ್ಯ ಸಚಿವಾಲಯದ ಎಂಟು ಅಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಆಯೋಗ, ರಾಷ್ಟ್ರೀಯ ವೈದ್ಯಕೀಯ ಆಯುಕ್ತರ (ಎನ್‌ಎಂಸಿ) ತಪಾಸಣಾ ತಂಡದ ಭಾಗವಾಗಿದ್ದ ಐವರು ವೈದ್ಯರನ್ನು ಹೆಸರಿಸಲಾಗಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಮುಂಚಿತವಾಗಿಯೇ ತಪಾಸಣೆಗೆ ಸಂಬಂಧಿಸಿದ ಗೋಪ್ಯ ಮತ್ತು ಸೂಕ್ಷ್ಮ ಮಾಹಿತಿಗಳನ್ನು ನೀಡಿ, ಸಮರ್ಪಕ ತಯಾರಿ ನಡೆಸಲು ಈ ಜಾಲ ಕಾಲೇಜುಗಳಿಗೆ ನೆರವಾಗುತ್ತಿತ್ತು. ಇದಕ್ಕಾಗಿ ಜಾಲದವರು ಭಾರಿ ಪ್ರಮಾಣದ ಲಂಚ ಪಡೆಯುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ಸ್‌ನ ಅಧ್ಯಕ್ಷ ಡಿ.ಪಿ. ಸಿಂಗ್ (2018ರಿಂದ 2021ರವರೆಗೆ ಯುಜಿಸಿ ಅಧ್ಯಕ್ಷರಾಗಿದ್ದರು), ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಧ್ಯಾಪಕ ಮತ್ತು ಮೂಳೆ ವಿಭಾಗದ ಮುಖ್ಯಸ್ಥರಾದ ಡಾ. ಸಿ.ಎನ್. ಮಂಜಪ್ಪ, ಬೆಂಗಳೂರಿನ ಅವರ ಆಪ್ತ ಡಾ. ಸುರೇಶ್, ಗೀತಾಂಜಲಿ ವಿಶ್ವ ವಿದ್ಯಾಲಯದ ಕುಲಸಚಿವ ಮಯೂರ್ ರಾವಲ್, ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಅಧ್ಯಕ್ಷ ರವಿ ಶಂಕರ್ ಜಿ ಮಹಾರಾಜ್ ಮತ್ತು ಇಂಡೆಕ್ಸ್ ವೈದ್ಯಕೀಯ ಕಾಲೇಜಿನ ಅಧ್ಯಕ್ಷ ಸುರೇಶ್ ಸಿಂಗ್ ಭಡೋರಿಯಾ ಅವರ ಹೆಸರುಗಳು ಎಫ್‌ಐಆರ್‌ನಲ್ಲಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಪೂನಂ ಮೀನಾ, ಧರ್ಮವೀರ್, ಪೀಯೂಷ್ ಮಲ್ಯನ್, ಅನುಪ್ ಜೈಸ್ವಾಲ್, ರಾಹುಲ್ ಶ್ರೀವಾಸ್ತವ, ದೀಪಕ್, ಮನೀಷಾ ಮತ್ತು ಚಂದನ್ ಕುಮಾರ್ ಅವರನ್ನು ಎಫ್‌ಐಆರ್‌ನಲ್ಲಿ ಆರೋಪಿಗಳೆಂದು ಹೆಸರಿಸಲಾಗಿದೆ.

ಈ ಜಾಲದವರು ಲಕ್ಷಾಂತರ ರೂಪಾಯಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹವಾಲಾ ರೂಪದಲ್ಲಿ ಹಣ ವರ್ಗಾವಣೆ ಆಗಿದೆ. ಈ ಹಣ ದೇವಾಲಯವೊಂದರ ನಿರ್ಮಾಣ ಸೇರಿದಂತೆ ವಿವಿಧ ಉದ್ದೇಶಗಳಿಗೆ ಬಳಕೆಯಾಗಿದೆ ಎಂದು ಸಿಬಿಐ ತಿಳಿಸಿದೆ.

ಹವಾಲಾ ಜಾಲದಿಂದ ₹ 55 ಲಕ್ಷ

ಛತ್ತೀಸಗಡದ ರಾಯಪುರದಲ್ಲಿನ ಶ್ರೀರಾವತ್‌ಪುರ ಸರ್ಕಾರ್ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ನಿಯೋಜಿಸಲಾದ ಎನ್‌ಎಂಸಿ ತಪಾಸಣಾ ತಂಡದಲ್ಲಿ ಡಾ.ಮಂಜಪ್ಪ ಇದ್ದರು. ಈ ಸಂಸ್ಥೆಗೆ ಅನುಕೂಲಕರ ವರದಿ ನೀಡಲು ₹55 ಲಕ್ಷವನ್ನು ಹವಾಲಾ ಜಾಲದ ವ್ಯಕ್ತಿಯಿಂದ ಈ ತಂಡ ಪಡೆದಿದೆ. ಮಂಜಪ್ಪ ಅವರು ಈ ಹಣ ಪಡೆಯಲು ಬೆಂಗಳೂರಿನ ಸಹವರ್ತಿ ಡಾ. ಸತೀಶ್ ಅವರಿಗೆ ತಿಳಿಸಿದ್ದರು. ಅಲ್ಲದೆ ತಂಡದಲ್ಲಿದ್ದ ಮತ್ತೊಬ್ಬ ಸದಸ್ಯರಾದ ಡಾ. ಚೈತ್ರಾ ಅವರಿಗೆ ಹಣವನ್ನು ಸತೀಶ್ ಮೂಲಕ ತಲುಪಿಸುವುದಾಗಿಯೂ ಮಂಜಪ್ಪ ಹೇಳಿದ್ದರು. ಲಂಚದ ಈ ಹಣವನ್ನು ಬೆಂಗಳೂರಿನಲ್ಲಿ ಸಂಬಂಧಿಸಿದವರು ಪಡೆಯುತ್ತಿದ್ದಂತೆಯೇ ಮೂವರು ವೈದ್ಯರು ಸೇರಿ ಎಂಟು ಜನರನ್ನು ಬಂಧಿಸಲಾಯಿತು ಎಂದು ಸಿಬಿಐ ವಿವರಿಸಿದೆ.

ಎನ್‌ಎಂಸಿ ನಿಯೋಜಿಸಲು ಅಂತಿಮಗೊಳಿಸುತ್ತಿದ್ದ ತಪಾಸಣಾ ತಂಡದಲ್ಲಿನ ಸದಸ್ಯರ ಹೆಸರುಗಳನ್ನು ಈ ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ಜಾಲವು ವೈದ್ಯಕೀಯ ಸಂಸ್ಥೆಗಳಿಗೆ ನೀಡುತ್ತಿತ್ತು. ಅಲ್ಲದೆ ತಪಾಸಣಾ ವೇಳಾಪಟ್ಟಿ ಮತ್ತು ಮೌಲ್ಯಮಾಪಕರ ಗುರುತುಗಳನ್ನೂ ಈ ಸಂಸ್ಥೆಗಳ ಜತೆ ಹಂಚಿಕೊಂಡು ಹಣಗಳಿಸುತ್ತಿತ್ತು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಆಸ್ಟ್ರೇಲಿಯಾದಲ್ಲಿ ಚಿಂಚೋಳಿ ವೈದ್ಯನ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಚಿಂಚೋಳಿ: ತಾಲ್ಲೂಕಿನ ಚಿಮ್ಮನಚೋಡದ ತಜ್ಞವೈದ್ಯ ರಾಹುಲ್ ಚಂದ್ರಪ್ರಕಾಶ ರಗಟೆ (30) ಆಸ್ಟ್ರೇಲಿಯಾದ ಸಿಡ್ನಿಯಿಂದ 845 ಕಿ.ಮೀ ದೂರದ ಗೋಲ್ಡ್ ಕೋಸ್ಟ್ ನಗರದ ಚೆವ್ರಾನ್ ಸೇತುವೆ ಬಳಿ ಗುರುವಾರ ಬೆಳಿಗ್ಗೆ 7.10ಕ್ಕೆ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

ಬೀದರ್ ಜಿಲ್ಲೆಯ ನಿವೃತ್ತ ಜಿಲ್ಲಾ ಸರ್ಜನ್ ಡಾ.ಚಂದ್ರಪ್ರಕಾಶ ರಗಟೆ ಅವರ ಪುತ್ರ ರಾಹುಲ್ ರಗಟೆ ನೀರಿನಲ್ಲಿ ಈಜುತ್ತಿರುವುದನ್ನು ಜನ ನೋಡಿದ್ದಾರೆ. ಆದರೆ, ಅವರು ನೀರಿನಲ್ಲಿ ಮುಳುಗಿದ ಬಳಿಕ ಮತ್ತೆ ಮೇಲೆ ಬಂದಿಲ್ಲ.

ಬಿಬಿಎಂಪಿ, ಬಿಡಿಎ, ಜಲಮಂಡಳಿ ಅಧಿಕಾರಿಗಳಿಗೆ ಎಚ್ಚರಿಕೆ

‘ಕೆರೆ ಸಂರಕ್ಷಿಸದಿದ್ದರೆ ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ



ಲೋಕಾಯುಕ್ತ ಕಚೇರಿಯಲ್ಲಿ ನಡೆದ ವಿಚಾರಣೆಯಲ್ಲಿ ಅಧಿಕಾರಿಗಳು ಭಾಗಿಯಾಗಿದ್ದರು

ಮುಖ್ಯಾಂಶಗಳು

- ಕೆರೆಗೆ ಧಕ್ಕೆಯಾಗದ ರೀತಿಯಲ್ಲಿ ಸಂರಕ್ಷಣೆ ಕಾರ್ಯ ನಡೆಸಿ
- ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವರದಿ ನೀಡಲು ತಾಕೀತು

ಬೆಂಗಳೂರು: ನಗರದ ಸೋಂಪುರ ಕೆರೆಗೆ ಕಲುಷಿತ ನೀರು ಹರಿಯುವುದನ್ನು ತಡೆಗಟ್ಟಲು ಶೀಘ್ರ ಕ್ರಮ ತೆಗೆದುಕೊಳ್ಳದೇ ಇದ್ದರೆ ಕಠಿಣ ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಜಲಮಂಡಳಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಲೋಕಾಯುಕ್ತ ಕಚೇರಿಯಲ್ಲಿ ಶುಕ್ರವಾರ ನಡೆದ ವಿಚಾರಣೆಯಲ್ಲಿ ಬಿಬಿಎಂಪಿ, ಬಿಡಿಎ ಮತ್ತು ಜಲಮಂಡಳಿ ಅಧಿಕಾರಿಗಳು ಭಾಗಿಯಾಗಿದ್ದರು. ಇದೇ ಮೇ 13ರಂದು ನಡೆದಿದ್ದ ವಿಚಾರಣೆ ವೇಳೆ ಲೋಕಾಯುಕ್ತರು, ‘ಕೆರೆಗೆ ಕಲುಷಿತ ನೀರು ಹರಿಯುವುದನ್ನು ತಡೆಗಟ್ಟಲು ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್ ನಿರ್ಮಿಸಲು ಸ್ಥಳ ಗುರುತಿಸಿ’ ಎಂದು ಸೂಚಿಸಿದ್ದರು.

'ಈವರೆಗೂ ಸ್ಥಳ ಗುರುತಿಸಲು ಸಾಧ್ಯವಾಗಿಲ್ಲ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದರಿಂದ ತೀವ್ರ ಅಸಮಾಧಾನಗೊಂಡ ಲೋಕಾಯುಕ್ತರು, ‘2018ರಿಂದ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಹೀಗಿದ್ದರೂ ಸಮಸ್ಯೆ ಪೂರ್ಣ ಪ್ರಮಾಣದಲ್ಲಿ ಬಗೆಹರಿದಿಲ್ಲ’ ಎಂದು ಆಕ್ಷೇಪಿಸಿದರು.

‘ಪಂಪಿಂಗ್ ಸ್ಟೇಷನ್ ನಿರ್ಮಿಸಲು ತಕ್ಷಣವೇ ಸ್ಥಳಪರಿಶೀಲನೆ ನಡೆಸಿ, ಅಂತಿಮಗೊಳಿಸಿ. ಮುಂದಿನ ವಿಚಾರಣೆ ವೇಳೆಗೆ ಈ ಕೆಲಸ ಆಗದೇ ಇದ್ದರೆ, ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಆದೇಶಿಸಿದರು. ಆಗಸ್ಟ್ 22ಕ್ಕೆ ಮುಂದಿನ ವಿಚಾರಣೆ ನಿಗದಿ ಮಾಡಲಾಗಿದೆ.

ಪಿಲಿಕುಳ: ಆರು ಪ್ರಾಣಿಗಳ ಸಾವು

ಮಂಗಳೂರು: ಪಿಲಿಕುಳ ಜೈವಿಕ ಉದ್ಯಾನದಲ್ಲಿ ಕಳೆದ ಕೆಲವು ದಿನಗಳಲ್ಲಿ ಆರು ಪ್ರಾಣಿಗಳು ಮೃತಪಟ್ಟಿವೆ. ಪ್ರಾಣಿಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿರುವ ಅಧಿಕಾರಿಗಳು, ಕಾರಣ ಪತ್ತೆಗೆ ಮುಂದಾಗಿದ್ದಾರೆ.

ಐದು ದಿನಗಳಲ್ಲಿ ನಾಲ್ಕು ಪ್ರಾಣಿಗಳು ಮೃತಪಟ್ಟಿವೆ. ಮಲಬಾರ್ ಜೈಂಟ್ ಅಳಿಲು, ನಾಲ್ಕು ಪುನಗು ಬೆಕ್ಕು, ಮೂಷಿಕ ಜಿಂಕೆಯ ಮರಿ ಸಾವನ್ನಪ್ಪಿವೆ. ಪ್ರಾಣಿ ಪ್ರಿಯರು ಸಾಮಾಜಿಕ ಜಾಲತಾಣಗಳಲ್ಲಿ ಉದ್ಯಾನದಲ್ಲಿ ಪ್ರಾಣಿಗಳು ಮೃತಪಟ್ಟಿರುವುದನ್ನು ಹಂಚಿಕೊಂಡಿದ್ದು, ಕಳವಳ ವ್ಯಕ್ತಪಡಿಸಿದ್ದಾರೆ.

‘ಉದ್ಯಾನಕ್ಕೆ ಭೇಟಿ ನೀಡಿದ್ದೆ. ಮಲಬಾರ್ ಜೈಂಟ್ ಅಳಿಲಿನ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. 16 ವರ್ಷದ ಅಳಿಲು, ವಯೋಮಾನಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಲೂ ಮೃತಪಟ್ಟಿರಬಹುದು. ಪುನಗು ಬೆಕ್ಕಿನ ಮಾದರಿಗಳನ್ನು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಆ್ಯಂಡ್ ವೆಟರ್ನರಿ ಬಯಾಲಾಜಿಕಲ್ ಮತ್ತು ಬನ್ನೇರುಘಟ್ಟದ ವನ್ಯಜೀವಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಭಾರಿ ಆಯುಕ್ತ ಡಾ. ಅರುಣ್ ಕುಮಾರ್ ತಿಳಿಸಿದರು.

ಚಟಿಕೆ ಸುದ್ದಿ

ಗ್ರಾ.ಪಂ.ಗೆ ಅವಿರೋಧ ಆಯ್ಕೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಸುಜಾತಮ್ಮ ಹಾಗೂ ಉಪಾಧ್ಯಕ್ಷರಾಗಿ ಸೌಮ್ಯಾ ಗೋವಿಂದರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

27 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಅಧ್ಯಕ್ಷರ ಸ್ಥಾನಕ್ಕಾಗಿ (ಸಾಮಾನ್ಯ ಮಹಿಳೆ) ಸುಜಾತಮ್ಮ ಮತ್ತು ಮಮತಾ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕಾಗಿ(ಎಸ್.ಸಿ ಸಾಮಾನ್ಯ) ಸೌಮ್ಯಾ, ರತ್ನಮ್ಮ ನಾಮಪತ್ರ ಸಲ್ಲಿಸಿದ್ದರು. ಕೊನೇ ಗಳಿಗೆಯಲ್ಲಿ ಮಮತಾ ಮತ್ತು ರತ್ನಮ್ಮ ಅವರು, ನಾಮಪತ್ರ ಹಿಂತೆಗೆದುಕೊಂಡರು.

‘ನಮ್ಮಿಂದಲೇ ಮೇಕೆದಾಟು ಯೋಜನೆ’

ಮಂಡ್ಯ: ‘ಮೇಕೆದಾಟು ಯೋಜನೆ ಅನುಷ್ಠಾನಗೊಳಿಸುವುದು ಇವರ್‍ಯಾರ (ರಾಜ್ಯ ಸರ್ಕಾರದವರ) ಕೈಯಲ್ಲೂ ಆಗುವುದಿಲ್ಲ. ಅದು ದೇವೇಗೌಡರ ಕುಟುಂಬದಿಂದಲೇ ಆಗಬೇಕು’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ಇಲ್ಲಿ ಶುಕ್ರವಾರ ಮಾಧ್ಯಮದ-ವರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನವರು ಮೊದಲು ತಮಿಳುನಾಡಿನವರನ್ನು ಒಪ್ಪಿಸಲಿ. ತಮಿಳುನಾಡಿನವರು ಕಾಂಗ್ರೆಸ್‌ನವರ ಪಾರ್ಟ್‌ನರ್‌ಗಳು. ಒಪ್ಪಿಗೆ ಪಡೆದುಕೊಂಡು ಬರಲಿ, ಮೇಕೆದಾಟು ಮಾಡಿಸೋಣ’ ಎಂದರು.

‘ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ 32ಕ್ಕೂ ಅಧಿಕ ಸಾವಾಗಿದೆ ಇದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇ-ಕಾಗಿದೆ’ ಎಂದು ಹೇಳಿದರು.

‘ಹಿಂದೂ ಸಮುದಾಯ ಒಡೆಯಲು ಸಮೀಕ್ಷೆ’

ಬೆಂಗಳೂರು: ‘ಸರ್ಕಾರವು ಸಮೀಕ್ಷೆ ಹೆಸರಿನಲ್ಲಿ ಹಿಂದೂಗಳ ಒಗ್ಗಟ್ಟನ್ನು ಒಡೆಯುವ ಕೆಲಸ ಮಾಡಬಾರದು’ ಎಂದು ತೈಲೇಶ್ವರ ಗಾಣಿಗರ ಸಂಸ್ಥಾನದ ಪೀಠಾಧ್ಯಕ್ಷ ಪೂರ್ಣಾನಂದ ಪುರಿ ಸ್ವಾಮೀಜಿ ಹೇಳಿದರು.



ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೆಲ ಸಮುದಾಯಗಳಿಗೆ ಅನುಕೂಲ ಮಾಡಿಕೊಡಲು, ಹಿಂದೂ ಸಮುದಾಯದ ಒಗ್ಗಟ್ಟು ಒಡೆಯಲು ಕಾಂಗ್ರೆಸ್ ಸರ್ಕಾರವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಎಚ್. ಕಾಂತರಾಜು ಮತ್ತು ಜಯಪ್ರಕಾಶ ಹೆಗ್ಡೆ ನೇತೃತ್ವದಲ್ಲಿ ನಡೆಸಲಾದ ಈ ಸಮೀಕ್ಷಾ ವರದಿ ಪಾರದರ್ಶಕವಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವಹಿತಕ್ಕಾಗಿ, ಕೆಲವು ಸಮುದಾಯಗಳಿಗೆ ಅನುಕೂಲ ಮಾಡಿಕೊಡಲು ಜಾತಿ ಗಣತಿ ಸೃಷ್ಟಿ ಮಾಡಿದ್ದಾರೆ. ಉದ್ದೇಶಪೂರ್ವಕ-ವಾಗಿಯೇ ಹಿಂದೂ ಸಮುದಾಯದ ಒಳಪಂಗಡಗಳಲ್ಲಿ ದ್ವೇಷ ಹುಟ್ಟಿಸಿ, ಮುಸ್ಲಿಂ ಪಂಗಡದಲ್ಲಿ ಒಗ್ಗಟ್ಟು ಮೂಡಿಸುವ ಷಡ್ಯಂತ್ರ ಮಾಡಲಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಯಾವ ಆರೋಪ ಸುಳ್ಳೆಂದು ತೋರಿಸಿ’

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಇತ್ತೀಚಿನ ಕಾರ್ಯಚಟುವಟಿಕೆಗಳು ಹಾಗೂ ಅಧ್ಯಕ್ಷರ ನಡೆ ಬಗ್ಗೆ ಮಾಡಿರುವ ಆರೋಪಗಳಲ್ಲಿ ಯಾವುದು ಸುಳ್ಳೆಂದು ತೋರಿಸಿ’ ಎಂದು ಕಸಾಪ ಮಾಜಿ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ಸವಾಲು ಹಾಕಿದ್ದಾರೆ.

‘ಗೌರವ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನೇ.ಭ. ರಾಮಲಿಂಗ ಶೆಟ್ಟಿ ಅವರ ಆರೋಪಗಳು ಸತ್ಯಕ್ಕೆ ದೂರವಾಗಿವೆ’ ಎಂಬ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು, ‘ನನ್ನನ್ನು ಗೌರವ ಕಾರ್ಯದರ್ಶಿ ಸ್ಥಾನದಿಂದ ದೂರವಿಡಲು ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ. ಈ ತೀರ್ಮಾನವನ್ನು ಯಾರು, ಯಾವ ದಿನಾಂಕದಲ್ಲಿ ತೆಗೆದುಕೊಂಡರು? ಈ ಬಗ್ಗೆ ಸುಳಿವು ಪಡೆದು ನಾನು ರಾಜೀನಾಮೆ ನೀಡಿದ್ದೇನೆ ಎಂದಿದ್ದೀರಿ. ಆ ಸುಳಿವು ನೀಡಿದವರು ಯಾರು’ ಎಂದು ಪ್ರಶ್ನಿಸಿದ್ದಾರೆ.

‘ಸಂವಿಧಾನದಡಿ ನನಗೆ ದಕ್ಕಿರುವ ಹಕ್ಕಿನ ಅಡಿ ಕಸಾಪದಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಬಯಲು ಮಾಡಲು ಅವಕಾಶವಿದೆ. ಅದು ನನ್ನಿಂದ ಸಾಧ್ಯವೂ ಇದೆ. ಅದಕ್ಕಾಗಿ ನಾನು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳಲು ಅವಕಾಶವಿದೆ. ನಾನು ಅದನ್ನು ಬಳಸಿಕೊಂಡಿದ್ದೇನೆ’ ಎಂದು ಹೇಳಿದ್ದಾರೆ.

‘ಪ್ರಶ್ನೆಗಳಿಗೆ ನೀವು ಶೀಘ್ರ ಉತ್ತರ ನೀಡುವಿರೆಂದು ನಾನು ನಿರೀಕ್ಷಿಸುತ್ತೇನೆ. ಇಲ್ಲದಿದ್ದಲ್ಲಿ ನಾನು ಕಾನೂನಿನ ಮೊರೆ ಹೋಗಬೇಕಾಗುವುದು ಅನಿವಾರ್ಯ’ ಎಂದು ತಿಳಿಸಿದ್ದಾರೆ.

ಅಪರಾಧ ಮುಕ್ತಕ್ಕೆ ‘ಜನ ವಿಶ್ವಾಸ’

ಸಣ್ಣ ತಪ್ಪುಗಳಿಗೆ ಜೈಲು ಶಿಕ್ಷೆ ಬದಲು ದಂಡ

• 13 ಕಾಯ್ದೆಗಳ ತಿದ್ದುಪಡಿಗೆ ಮುಂದಡಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಸಣ್ಣ ಅಪರಾಧಗಳಿಗೆ ಸಂಬಂಧಿಸಿದ ಕೆಲವು ಕಾನೂನುಗಳನ್ನು ‘ಅಪರಾಧ ಮುಕ್ತ’ಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಆ ಮೂಲಕ, ನ್ಯಾಯಾಂಗದ ಮೇಲಿನ ಹೊರೆ ಕಡಿಮೆ ಮಾಡಲು ಮುಂದಡಿ ಇಟ್ಟಿದೆ.

ಈ ಉದ್ದೇಶದಿಂದ ಒಟ್ಟು 13 ರಾಜ್ಯ ಕಾಯ್ದೆಗಳು ಮತ್ತು ಎರಡು ರಾಜ್ಯ ನಿಯಮಗಳನ್ನು ತಿದ್ದುಪಡಿ ಮಾಡಲು ‘ಕರ್ನಾಟಕ ಜನ ವಿಶ್ವಾಸ’ (ನಿಬಂಧನೆಗಳ ತಿದ್ದುಪಡಿ) ಮಸೂದೆ- 2025’ರ ಕರಡನ್ನು ಕಾನೂನು ಮತ್ತು ಸಂಸದೀಯ ಇಲಾಖೆ ಸಿದ್ಧಪಡಿಸಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಈ ಪ್ರಸ್ತಾವದಂತೆ ಕರಡು ಮಸೂದೆಯನ್ನು ತಯಾರಿಸಲಾಗಿದೆ. ಮಸೂದೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ, ಸಹಕಾರ, ಇಂಧನ, ಕಂದಾಯ, ಜಲಸಂಪನ್ಮೂಲ, ಅರಣ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳು ಆಡಳಿತ ಇಲಾಖೆಗಳಾಗಿವೆ. ಹೀಗಾಗಿ, ಕರಡು ಮಸೂದೆಯನ್ನು ಈ ಇಲಾಖೆಗಳ ಅಭಿಪ್ರಾಯ ಪಡೆಯಲು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕಳುಹಿಸಿದ್ದಾರೆ ಎಂದು ಸಂಸದೀಯ ಇಲಾಖೆಯ ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರವು 2023ರಲ್ಲಿಯೇ ‘ಜನ ವಿಶ್ವಾಸ’ (ನಿಬಂಧನೆಗಳ ತಿದ್ದುಪಡಿ) ಕಾಯ್ದೆಯನ್ನು ರೂಪಿಸಿದೆ. ಇದೇ ಮಾದರಿಯ ಕಾಯ್ದೆ ಜಾರಿಗೆ ಮಧ್ಯಪ್ರದೇಶ ಸರ್ಕಾರ ‘ಜನ ವಿಶ್ವಾಸ ಮಸೂದೆ-2025’ ಅನ್ನು ರೂಪಿಸಿದೆ. ಅದೇ ಮಾದರಿಯಲ್ಲಿ ರಾಜ್ಯ ಸರ್ಕಾರ ಕೂಡಾ ಕಾಯ್ದೆಗಳ ತಿದ್ದುಪಡಿಗೆ ಮಸೂದೆ ರೂಪಿಸಿದ್ದು, ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡನೆಯಾಗುವ ಸಾಧ್ಯತೆಯಿದೆ.

ಕಾಯ್ದೆಗಳಲ್ಲಿರುವ ತಿದ್ದುಪಡಿಗೆ ಪ್ರಸ್ತಾಪಿಸಿರುವ ಸೆಕ್ಷನ್‌ಗಳನ್ನು ಪಟ್ಟಿ ಮಾಡಲಾಗಿದೆ. ಪ್ರಸ್ತಾವಿತ ತಿದ್ದುಪಡಿ-ಗಳಿಂದ ಅನೇಕ ಸಣ್ಣ ಅಪರಾಧಗಳು ಅಪರಾಧ ಮುಕ್ತಗೊಳ್ಳಲಿವೆ. ಜೈಲು ಶಿಕ್ಷೆಯು ದಂಡವಾಗಿ ಬದಲಾಗಲಿದೆ. ಕೆಲವು ಪ್ರಕರಣಗಳಲ್ಲಿ ಜೈಲು ಶಿಕ್ಷೆಯನ್ನು ತೆಗೆದು ಹಾಕಿ ದಂಡದ ಮೊತ್ತವನ್ನು ಹೆಚ್ಚಿಸಲು ಕೂಡಾ ಅವಕಾಶ ಆಗಲಿದೆ ಎಂದು ಮೂಲಗಳು ಹೇಳಿವೆ.

ಉದಾಹರಣೆಗೆ, ಉದ್ದೇಶಿತ ಮಸೂದೆಯಲ್ಲಿ ‘ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959’ರ ಸೆಕ್ಷನ್ 109ರಲ್ಲಿ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಎನ್ನುವುದನ್ನು ಕೈಬಿಡಲು ಮತ್ತು ₹3 ಸಾವಿರ ದಂಡವನ್ನು ₹30 ಸಾವಿರಕ್ಕೆ ಹೆಚ್ಚಿಸುವ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ. ‘ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ- 1997’ರ ಸೆಕ್ಷನ್ 68ರಲ್ಲಿ ಆರು ತಿಂಗಳು ಹಾಗೂ ಎರಡು ವರ್ಷ ಜೈಲು ಶಿಕ್ಷೆ ಅಥವಾ ದಂಡ ವಿಧಿಸುವುದನ್ನು ಕೈಬಿಟ್ಟು ದಂಡ ವಿಧಿಸಲು ಮಾತ್ರ ಅವಕಾಶ ಕಲ್ಪಿಸಲು ತಿದ್ದುಪಡಿಗೆ ಪ್ರಸ್ತಾಪಿಸಲಾಗಿದೆ.

‘ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆ 1961’ರಲ್ಲಿ ಸೆಕ್ಷನ್ 4 ಸಂಸ್ಥೆಗಳ ನೋಂದಣಿಗೆ ಸಂಬಂಧಿಸಿದ್ದಾಗಿದೆ. ಉದ್ಯೋಗದಾತನು ಡೀಮ್ಡ್ ನೋಂದಣಿಯ ಪ್ರಯೋಜನವನ್ನು ತಪ್ಪಾಗಿ ಕ್ಲೈಮ್ ಮಾಡಿದ್ದರೆ ಮತ್ತು ಸ್ವಯಂ ಪ್ರಮಾಣಪತ್ರವನ್ನು ಪ್ರದರ್ಶಿಸಿದ ಅಪರಾಧವು ಸಾಬೀತಾದರೆ ಆರು ತಿಂಗಳು ಜೈಲು ಶಿಕ್ಷೆ ಮತ್ತು ₹5 ಸಾವಿರ ದಂಡ ವಿಧಿಸಲು ಅವಕಾಶವಿದೆ. ಇಲ್ಲಿಯೂ ಜೈಲು ಶಿಕ್ಷೆಯನ್ನು ಕೈಬಿಟ್ಟು ದಂಡ ಮೊತ್ತವನ್ನು ₹50 ಸಾವಿರಕ್ಕೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ. ಹೀಗೆ, ಜನ ವಿಶ್ವಾಸ’ ಮಸೂದೆಯ ಮೂಲಕ ಎಲ್ಲ 13 ಕಾಯ್ದೆಗಳ ತಿದ್ದುಪಡಿ ಮಾಡಿ ಸಣ್ಣ ಅಪರಾಧಗಳು, ನಿಯಮಗಳ ಉಲ್ಲಂಘನೆಗೆ ಜೈಲು ಶಿಕ್ಷೆ ವಿಧಿಸುವುದನ್ನು ಕೈಬಿಡಲು ಉದ್ದೇಶಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಏನಿದು ‘ಜನ ವಿಶ್ವಾಸ‘

ಕೇಂದ್ರ ಸರ್ಕಾರವು ಸಣ್ಣ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಅಪರಾಧ ಮುಕ್ತಗೊಳಿಸಲು (ಡಿ ಕ್ರಿಮಿನಲೈಸೇಷನ್) ಮತ್ತು ತರ್ಕಬದ್ಧಗೊಳಿಸಲು 2023ರಲ್ಲಿ ‘ಜನ್ ವಿಶ್ವಾಸ್’ ಮಸೂದೆ ರೂಪಿಸಿತ್ತು. ಆ ಮೂಲಕ 42 ವಿವಿಧ ಕಾಯ್ದೆಗಳ ಅಡಿಯಲ್ಲಿ 183 ಅಪರಾಧಗಳನ್ನು ‘ಅಪರಾಧ ಮುಕ್ತ’ಗೊಳಿಸಿದೆ. ಸಣ್ಣ ತಾಂತ್ರಿಕ ಮತ್ತು ಕಾರ್ಯವಿಧಾನದ ಲೋಪ ಎಸಗಿದ ಆರೋಪ ಸಾಬೀತಾದರೆ ತಪ್ಪಿತಸ್ಥರಿಗೆ ಜೈಲು ಶಿಕ್ಷೆ ವಿಧಿಸುವುದನ್ನು ತೆಗೆದುಹಾಕಿ, ದಂಡ ಮಾತ್ರ ವಿಧಿಸಲು ಈ ಮಸೂದೆ ಅವಕಾಶ ಕಲ್ಪಿಸಿದೆ. ಕಾಯ್ದೆ ತಿದ್ದುಪಡಿಯು ಅನಗತ್ಯ ಕಾನೂನು ಅಡಚಣೆಗಳನ್ನು ಕಡಿಮೆ ಮಾಡಲು ಸಹಕಾರಿ ಆಗಲಿದೆ. ಇದರಿಂದ ನ್ಯಾಯಾಂಗದ ಮೇಲಿನ ಹೊರೆಯನ್ನು ಕಡಿಮೆ ಮಾಡಬಹುದು ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ರಾಜ್ಯ ಸರ್ಕಾರಗಳೂ ಕಾಯ್ದೆ ತಿದ್ದುಪಡಿಗೆ ‘ಜನ ವಿಶ್ವಾಸ’ ಮಸೂದೆ ರೂಪಿಸುವಂತೆ ಸಲಹೆ ನೀಡಿತ್ತು ಎಂದು ಸಂಸದೀಯ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ತಿಳಿಸಿದರು.



ಪ್ರಸ್ತಾಪಿಸಿರುವ ಕಾಯ್ದೆಗಳು

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ-1959
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ-1997
3. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆ-1961
4. ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ-1976
5. ಕರ್ನಾಟಕ ಮುನ್ಸಿಪಾಲಿಟಿಗಳ ಕಾಯ್ದೆ-1964
6. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961
7. ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಕಾಯ್ದೆ-2020
8. ಕರ್ನಾಟಕ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವೇಯರ್ ಕಾಯ್ದೆ-2012
9. ಕರ್ನಾಟಕ ಸ್ಟ್ಯಾಂಪ್ ಕಾಯ್ದೆ-1957
10. ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮ ಹಾಗೂ ನಿಯಂತ್ರಣ) ಕಾಯ್ದೆ-2011
11. ಕರ್ನಾಟಕ ಭೂ ಸುಧಾರಣೆ ಕಾಯ್ದೆ-1961
12. ಕರ್ನಾಟಕ ಬಾಡಿಗೆ ಕಾಯ್ದೆ-1999
13. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ- 1993

ಸುದ್ದಿ 2 ನಿಮಿಷ

‘ದ್ವಿಭಾಷಾ ನೀತಿ ಜಾರಿಗೊಳಿಸಿ’

ಬೆಂಗಳೂರು: ‘ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡ ಉಳಿಸಲು ದ್ವಿಭಾಷಾ ನೀತಿಯೊಂದೇ ದಾರಿ. ರಾಜ್ಯ ಸರ್ಕಾರ ಕೂಡಲೇ ಈ ನೀತಿಯನ್ನು ಜಾರಿಗೊಳಿಸಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

‘1968ರಲ್ಲಿ ಜಾರಿಗೆ ಬಂದ ತ್ರಿಭಾಷಾ ನೀತಿ ಪ್ರಕಾರ ದಕ್ಷಿಣ ಭಾರತದ ಮಕ್ಕಳು ಹಿಂದಿ ಕಲಿತರೆ, ಉತ್ತರ ಭಾರತ ಮಕ್ಕಳು ದಕ್ಷಿಣ ಭಾರತದ ಯಾವುದಾದರೂ ಒಂದು ಭಾಷೆಯನ್ನು ಕಲಿಯಬೇಕಿತ್ತು. ತಮಿಳುನಾಡನ್ನು ಹೊರತುಪಡಿಸಿ ದಕ್ಷಿಣ ಭಾರತ ರಾಜ್ಯಗಳು ತ್ರಿಭಾಷಾ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿವೆ. ಆದರೆ, ಉತ್ತರ ಭಾರತದ ಯಾವ ರಾಜ್ಯದಲ್ಲಿಯೂ ದಕ್ಷಿಣ ಭಾರತದ ಭಾಷಾ ಕಲಿಕೆ ನಡೆಯಲೇ ಇಲ್ಲ’ಎಂದು ತಿಳಿಸಿದರು.



‘ಇಂದು ಇಂಗ್ಲಿಷ್ ಕಲಿಕೆ ಅಗತ್ಯ. ದೀಪಾ ಭಾಸ್ತಿ ಅವರ ಇಂಗ್ಲಿಷ್ ಅನುವಾದದ ಮೂಲಕವೇ ಬಾನು ಮುಷ್ತಾಕ್ ಅವರಿಗೆ ‘ಅಂತರ ರಾಷ್ಟ್ರೀಯ ಬುಕರ್ ಪುರಸ್ಕಾರ’ ಲಭಿಸುವಂತಾಯಿತು. ಕಲಿಕೆಯ ಇನ್ನೊಂದು ಭಾಷೆ ತಾಯ್ನುಡಿಯೇ ಆಗಬೇಕು. ಕನ್ನಡ ಮತ್ತು ಇಂಗ್ಲಿಷ್ ಒಳಗೊಂಡ ದ್ವಿಭಾಷಾ ನೀತಿ ಜಾರಿ ಮಾಡಿ, ಕನ್ನಡ ಭಾಷೆಯ ಉಳಿವಿಗೆ ಶ್ರಮಿಸಬೇಕು’ ಎಂದು ಆಗ್ರಹಿಸಿದ್ದಾರೆ.

ವಕ್ಫ್ ಆಸ್ತಿ: ಅಧಿಸೂಚನೆ ಪ್ರಕಟ

ನವದೆಹಲಿ(ಪಿಟಿಐ): ‘ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಅಭಿವೃದ್ಧಿ(ಉಮೀದ್) ನಿಯಮಗಳು- 2025’ಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ನಿಯಮಗಳು, ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ಪೋರ್ಟಲ್, ದತ್ತಾಂಶ ಸಂರಕ್ಷಣೆ, ಅವುಗಳ ನೋಂದಣಿ, ಲೆಕ್ಕಪರಿಶೋಧನೆ ಮತ್ತು ಲೆಕ್ಕ ನಿರ್ವಹಣೆಗೆ ಸಂಬಂಧಿಸಿದವುಗಳಾಗಿವೆ. ಈ ನಿಯಮಗಳು ವಕ್ಫ್ ತಿದ್ದುಪಡಿ ಕಾಯ್ದೆ ಮೂಲಕ ಏಪ್ರಿಲ್ 8ರಂದು ಜಾರಿಗೆ ಬಂದಿವೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ

‘ಕಾನೂನು ತೊಡಕು ನಿವಾರಿಸಲು ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂ ಸ್ವಾಧೀನ ಕೈಬಿಡಲು ಕಾನೂನು ತೊಡಕುಗಳಿದ್ದರೆ, ನನ್ನ ಬಳಿ ಬನ್ನಿ. ಎಲ್ಲ ಕಾನೂನು ತೊಡಕುಗಳನ್ನು ನಿವಾರಿಸಿ ಡಿನೋಟಿಫಿಕೇಷನ್ ಮಾಡುವ ರೀತಿಯಲ್ಲಿ ಕಾನೂನು ಸಲಹೆಗಳನ್ನು ನೀಡುತ್ತೇನೆ’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ತಿಳಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ನಡೆದ ಭೂಮಿ ಸತ್ಯಾಗ್ರಹದ ವೇದಿಕೆಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಸಭೆಯಲ್ಲಿ ಮುಖ್ಯಮಂತ್ರಿ ಭೂ ಸ್ವಾಧೀನ ಕೈಬಿಡಲು ಕಾನೂನಿನಲ್ಲಿ ತೊಡಕುಗಳಿವೆ ಎಂದು ಹೇಳಿ 10 ದಿನಗಳ ಕಾಲಾವಕಾಶ ಕೇಳಿದ್ದಾರೆ. ಆದರೆ, ಡಿನೋಟಿಫೈ ಹೇಗೆ ಮಾಡಬೇಕೆಂದು ನಾನು ಕಾನೂನು ಸಲಹೆಗಳನ್ನು ನೀಡುತ್ತೇನೆ’ ಎಂದು ತಿಳಿಸಿದರು.

‘ಕೃಷಿ ಭೂಮಿಯನ್ನು ಕೈಗಾರಿಕಾ ಪ್ರದೇಶ ಎಂದು ಘೋಷಿಸುವಂತಿಲ್ಲ, ಅದು ಕಾನೂನು ಬಾಹಿರ. ಭೂಸ್ವಾಧೀನ ಮಾಡಬೇಕೆಂದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಸಭೆಗಳು ನಡೆಯಬೇಕು. ಆದರೆ ಇಲ್ಲಿ ನಡೆದಿಲ್ಲ. ಇದು ಸಂವಿಧಾನ ವಿರೋಧಿ ನಡೆ. ಸರ್ಕಾರ ಮಾಡಿದ್ದೆಲ್ಲವೂ ಕಾನೂನು ಬಾಹಿರವಾಗಿದೆ’ ಎಂದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಸಂಯುಕ್ತ ಹೋರಾಟ ಕರ್ನಾಟಕ, ಭೂ ಸ್ವಾಧೀನ ವಿರೋಧಿ ಸಮಿತಿ ಹಾಗೂ ಸಮಾನ ಮನಸ್ಕ ಸಂಘಟನೆಗಳು ಆಯೋಜಿಸಿದ್ದ ‘ನಾಡ ಉಳಿಸಿ ಸಮಾವೇಶ’ದಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಭೂ ಸ್ವಾಧೀನ ವಿರೋಧಿ ಹೋರಾಟಕ್ಕೆ ಸರ್ಕಾರ ಸ್ಪಂದಿಸದಿದ್ದರೆ, ದೇಶವ್ಯಾಪಿ ಹೋರಾಟವನ್ನು ವಿಸ್ತರಿಸಬೇಕಾಗುತ್ತದೆ. ದೇಶದ ಉದ್ದಗಲಕ್ಕೂ ಬೆಂಬಲ ಕೊಡಬೇಕಾಗುತ್ತದೆ.
ದರ್ಶನ್ ಪಾಲ್, ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ನಾಯಕ

ಸರ್ಕಾರ ಭೂಮಿ ಕಿತ್ತುಕೊಳ್ಳಲು ಹಳ್ಳಿಗೆ ಬಂದಾಗ ನಾವೆಲ್ಲ ತೀವ್ರವಾಗಿ ವಿರೋಧಿಸಬೇಕು. ಗ್ರಾಮ ಸಮಿತಿ ಒಪ್ಪಿಗೆ ಇಲ್ಲದೇ ಕೊಡುವುದಿಲ್ಲ ಎಂದು ಗಟ್ಟಿಯಾಗಿ ಹೇಳಬೇಕು.
ರಾಕೇಶ್ ಟಿಕಾಯತ್, ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ನಾಯಕ

ಭೂಸ್ವಾಧೀನ ಕೈಬಿಡಲು ಪಟ್ಟು

ಒಂದನೇ ಪುಟದಿಂದ...

‘ಹೋರಾಟಕ್ಕೆ ಕೈಜೋಡಿಸಿರುವ ಎಲ್ಲ ಸಂಘಟನೆಗಳ ನಾಯಕರು ಮತ್ತು ಕಾರ್ಯಕರ್ತರೊಂದಿಗೆ ಹಳ್ಳಿ ಹಳ್ಳಿಗೆ ತೆರಳಿ, ರೈತರೊಂದಿಗೆ ಸಭೆ ನಡೆಸಿ, ಪ್ರತಿ ಹಳ್ಳಿಯ ಪ್ರತಿ ರೈತರ ಜಮೀನಿನಲ್ಲಿ ‘ನಮ್ಮ ಭೂಮಿ ನಮ್ಮ ಹಕ್ಕು, ಯಾವ ಕಂಪನಿಗೂ ಬಿಟ್ಟುಕೊಡುವುದಿಲ್ಲ’ ಎಂಬ ಫಲಕವನ್ನು ಅಳವಡಿಸಲು ತೀರ್ಮಾನಿಸಿದ್ದಾರೆ.

ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ರೈತ ಪರ ನಿರ್ಧಾರ ಹೊರಬರದಿದ್ದರೆ ಸಂಯುಕ್ತ ಕಿಸಾನ್ ಮೋರ್ಚಾದ ಬೆಂಬಲದೊಂದಿಗೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದಾಗಿಯೂ ಎಚ್ಚರಿಸಿದ್ದಾರೆ.

‘ಭೂ ಸ್ವಾಧೀನದ ವಿರುದ್ಧದ ಹೋರಾಟ ಹಳ್ಳಿಗಳಿಂದ ಆರಂಭವಾಗಿ ಚನ್ನರಾಯಪಟ್ಟಣ ಹೋಬಳಿ ಕೇಂದ್ರಕ್ಕೆ ಬಂದಿದೆ. ಅಲ್ಲಿಂದ ದೇವನಹಳ್ಳಿ ತಾಲ್ಲೂಕು ಕೇಂದ್ರಕ್ಕೆ, ಈಗ ರಾಜಧಾನಿ ಬೆಂಗಳೂರಿನವರೆಗೂ ಹಬ್ಬಿದ್ದು, ದೇಶದ ಗಮನ ಸೆಳೆದಿದೆ. ಇದೇ 9ರಂದು ರಾಷ್ಟ್ರವ್ಯಾಪಿ ನಡೆಯುವ ಕಾರ್ಮಿಕರ ಮುಷ್ಕರದ ಭಾಗವಾಗಿ, ದೇವನಹಳ್ಳಿಯ ಭೂಮಿ ಹೋರಾಟದ ಹಕ್ಕೊತ್ತಾಯವನ್ನು ಸೇರಿಸುವ ಜೊತೆ, ಎಲ್ಲ ಸಂಘಟನೆಗಳೂ ಸೇರಿ ಈ ಹೋರಾಟವನ್ನು ಯಶಸ್ವಿಗೊಳಿಸುತ್ತೇವೆ’ ಎಂದು ಹೇಳಿದ್ದಾರೆ.

ಪ್ರತಿಭಟನೆ: ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಆರಂಭವಾದ ‘ನಾಡ ಉಳಿಸಿ ಸಮಾವೇಶ’ದಲ್ಲಿ ರಾಜ್ಯದಾದ್ಯಂತ 70ಕ್ಕೂ ಹೆಚ್ಚು ಸಂಘಟನೆಗಳ ಮುಖಂಡರು ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರಾದ ರಾಕೇಶ್ ಸಿಂಗ್ ಟಿಕಾಯತ್, ದರ್ಶನ್ ಪಾಲ್, ಯುಧ್‌ವೀರ್ ಸಿಂಗ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ‘ಭೂ ಸ್ವಾಧೀನ ವಿರುದ್ಧದ ಹೋರಾಟ’ ಕುರಿತು ಮಾತನಾಡಿದರು.

ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಪ್ರತಿನಿಧಿಗಳಾದ ಕಾರಳ್ಳಿ ಶ್ರೀನಿವಾಸ್, ನಂಜಪ್ಪ ನಲ್ಲಪ್ಪನಹಳ್ಳಿ, ಮಾರೇಗೌಡ, ಗೋಪಿನಾಥ್, ರಮೇಶ್ ಚೀಮಾಚನಹಳ್ಳಿ, ಅಶ್ವತ್ಥಪ್ಪ, ಪ್ರಭಾ ಬೆಳವಂಗಲ, ರಘು, ಸಂಯುಕ್ತ ಹೋರಾಟ ಕರ್ನಾಟಕದ ಪ್ರತಿನಿಧಿಗಳಾದ ಬಡಗಲಪುರ ನಾಗೇಂದ್ರ, ಎಸ್ ವರಲಕ್ಷ್ಮೀ, ನೂರ್ ಶ್ರೀಧರ್, ಎಚ್.ಆರ್.ಬಸವರಾಜಪ್ಪ, ಎಸ್ ಮೀನಾಕ್ಷಿ ಸುಂದರಂ, ಸಿದ್ದನಗೌಡ ಪಾಟೀಲ, ಗುರುಪ್ರಸಾದ್ ಕೆರಗೋಡು, ಯು.ಬಸವರಾಜ, ಚುಕ್ಕಿ ನಂಜುಂಡಸ್ವಾಮಿ, ವಿ ನಾಗರಾಜ್, ಪಿ ಪಿ ಅಪ್ಪಣ್ಣ, ಡಿ.ಎಚ್.ಪೂಜಾರ್, ಕೆ.ವಿ.ಭಟ್, ಮಾವಳ್ಳಿ ಶಂಕರ್, ಡಾ.ಸುನೀಲಮ್, ವಿಜು ಕೃಷ್ಣನ್, ಪಿ.ಟಿ. ಜಾನ್, ನಟ ಪ್ರಕಾಶ್ ರಾಜ್, ಪತ್ರಕರ್ತ ಇಂದೂಧರ ಹೊನ್ನಾಪುರ, ಚಿಂತಕ ಎಸ್.ಆರ್.ಹಿರೇಮಠ್ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಭೂಸ್ವಾಧೀನ ಅಧಿಸೂಚನೆ ಹಿಂಪಡೆಯಲು ಇರುವ ಕಾನೂನು ತೊಡಕುಗಳನ್ನು ನಿವಾರಿಸಿಕೊಳ್ಳಲು ಸರ್ಕಾರ 10 ದಿನಗಳ ಸಮಯ ಕೇಳಿದೆ. ರದ್ದುಪಡಿಸುವ ನಂಬಿಕೆ ಇದೆ
ಬಡಗಲಪುರ ನಾಗೇಂದ್ರ, ಸಂಯುಕ್ತ ಹೋರಾಟ-ಕರ್ನಾಟಕದ ಸಂಚಾಲಕ

ಕಾನೂನಿಗೆ ವಿರುದ್ಧವಾಗಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ನಾನೂ ರೈತ ಸಂಘದಲ್ಲಿದ್ದವನು. ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನವನ್ನು ಮಾಡುವುದಿಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳುವವರೆಗೂ ಸಂಯುಕ್ತ ಹೋರಾಟ-ಕರ್ನಾಟಕದ ನೇತೃತ್ವದಲ್ಲಿ ರೈತರ ಹೋರಾಟ ಮುಂದುವರಿಯಲಿದೆ
ಎಚ್.ಆರ್.ಬಸವರಾಜಪ್ಪ, ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ಜುಲೈ 15ರಂದು ಮತ್ತೆ ಸಭೆ ನಿಗದಿ ಮಾಡಿದೆ. ಅವರು ಏನೇ ನಿರ್ಧಾರ ತೆಗೆದುಕೊಳ್ಳಲಿ. ರೈತರ ಒಂದಿಂಚೂ ಜಾಗ ಬಿಟ್ಟುಕೊಡುವುದಿಲ್ಲ
ಪ್ರಕಾಶ್ ರಾಜ್, ನಟ

10 ದಿನ ಸಮಯ ಕೊಡಿ: ಮುಖ್ಯಮಂತ್ರಿ

ಒಂದನೇ ಪುಟದಿಂದ...

‘ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗಾರಿಕಾ ವಲಯ ಅಭಿವೃದ್ಧಿಗಾಗಿ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ ಸುಮಾರು 13 ಹಳ್ಳಿಗಳ ವ್ಯಾಪ್ತಿಯ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು 2022ರಲ್ಲಿಯೇ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಸ್ವಾಧೀನದಿಂದ ಕೈಬಿಡಬೇಕಾದರೆ ಒಂದಷ್ಟು ಕಾನೂನು ತೊಡಕುಗಳಿವೆ. ಕಾನೂನು ಅಭಿಪ್ರಾಯ, ಕೋರ್ಟ್ ತೀರ್ಪುಗಳನ್ನು ಪರಿಶೀಲಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ಜುಲೈ 15ರಂದು ರೈತರ ಜತೆಗೆ ಮತ್ತೊಂದು ಸಭೆ ನಡೆಸಿ ತೀರ್ಮಾನ ಕೈಗೊಳ್ಳುತ್ತೇವೆ’ ಎಂದರು.

ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ಗೆ 13 ಗ್ರಾಮಗಳ 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 2021ರಲ್ಲಿ ಪ್ರಾಥಮಿಕ ಅಧಿಸೂಚನೆ, 2022ರಲ್ಲಿ ಆದೇಶ ಹೊರಡಿಸಲಾಗಿತ್ತು. ಭೂಸ್ವಾಧೀನ ವಿರೋಧಿಸಿ ಅಂದಿನಿಂದಲೂ ರೈತರು ನಿರಂತರ ಹೋರಾಟ ನಡೆಸುತ್ತಿದ್ದಾರೆ.

ಚನ್ನರಾಯಪಟ್ಟಣ, ಮಟ್ಟಬಾರ್ಲು ಮತ್ತು ಶ್ರೋತ್ರೀಯ ತೆಲ್ಲೋಹಳ್ಳಿಗಳಲ್ಲಿನ ನೀರಾವರಿ, ಕೃಷಿ ಮತ್ತು ಜನವಸತಿಗಳನ್ನು ಪರಿಗಣಿಸಿ, 231.23 ಎಕರೆ, 185.18 ಎಕರೆ ಮತ್ತು 78.21 ಎಕರೆ ಸೇರಿ 495 ಎಕರೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದಾಗಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಜೂನ್ 24ರಂದು ಘೋಷಿಸಿದ್ದರು. ಆದರೆ, ರೈತರು ಸರ್ಕಾರದ ನಿರ್ಧಾರವನ್ನು ಒಪ್ಪದೇ 13 ಗ್ರಾಮಗಳ ವ್ಯಾಪ್ತಿಯ ಎಲ್ಲ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಆಗ್ರಹಿಸಿ ಸಂಯುಕ್ತ ಹೋರಾಟ-ಕರ್ನಾಟಕದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಹೋರಾಟ ಮುಂದುವರಿಸಿದ್ದರು.

ಏತನ್ಮಧ್ಯೆ, ರೈತ ಪ್ರತಿನಿಧಿಗಳನ್ನು ಕರೆಯಿಸಿಕೊಂಡು ಮಾತುಕತೆಯಾಡಿದ್ದ ಸಿದ್ದರಾಮಯ್ಯ ಅವರು, ಜು.5ರಂದು ಸಭೆ ನಿಗದಿ ಮಾಡಿದ್ದರು. ಗುರುವಾರ (ಜು.4) ಸಚಿವರು, ಅಧಿಕಾರಿಗಳ ಜತೆ ಸಮಾಲೋಚನೆಯನ್ನೂ ನಡೆಸಿದ್ದರು.

ಶುಕ್ರವಾರ ನಡೆದ ಸಭೆಯಲ್ಲಿ ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಸಿದ್ದನಗೌಡ ಪಾಟೀಲ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಬಿ.ಆರ್. ಪಾಟೀಲ ಉಪಸ್ಥಿತರಿದ್ದರು.

ಭಂಡಾರ ಜಾತ್ರೆಯ ವೈಭವ...

ಪ್ರಜಾವಾಣಿ ಚಿತ್ರ



ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಶುಕ್ರವಾರ ಮಹಾಲಕ್ಷ್ಮೀ ದೇವಿ ಜಾತ್ರೆ ಪ್ರಯುಕ್ತ ನಡೆದ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಭಂಡಾರದಲ್ಲಿ ಮಿಂದೆದ್ದರು

ನಗರ ವಿ.ವಿ ಮರುನಾಮಕರಣಕ್ಕೆ ವಿರೋಧ

ಬೆಂಗಳೂರು: ಬೆಂಗಳೂರು ನಗರ ವಿಶ್ವ-ವಿದ್ಯಾಲಯಕ್ಕೆ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವೆಂದು ಮರುನಾಮಕರಣ ಮಾಡುತ್ತಿರುವ ಸರ್ಕಾರದ ಕ್ರಮವನ್ನು ಕರ್ನಾಟಕ ವಿಕಾಸ ರಂಗ ಖಂಡಿಸಿದೆ.

‘1858ರಲ್ಲಿ ಬ್ರಿಟಿಷರು ‘ಬೆಂಗಳೂರು ಹೈಸ್ಕೂಲ್’ ಹೆಸರಿನಿಂದ ಪ್ರಾರಂಭಿಸಿದ ಶಾಲೆ, 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವಾಯಿತು. ಬೆಂಗಳೂರಿಗೆ ತನ್ನದೆಯಾದ ಇತಿಹಾಸ, ಪರಂಪರೆಯಿದೆ. ಜಾಗತಿಕ ಮಟ್ಟದಲ್ಲಿ ತನ್ನ ಹೆಸರಿನಿಂದಲೇ ಮನ್ನಣೆ ಮತ್ತು ಖ್ಯಾತಿ ಪಡೆದಿದೆ. ಹಿಗಾಗಿ, ಈ ನಾಮಕರಣ ಪ್ರಕ್ರಿಯೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕು’ ಎಂದು ಕರ್ನಾಟಕ ವಿಕಾಸ ರಂಗದ ರಾಜ್ಯಾಧ್ಯಕ್ಷ ವ.ಚ. ಚನ್ನೆಗೌಡ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.


ಕೀರ್ತಿ ಎ. ರೆಡ್ಡಿ


ಪ್ರಿಯಾಂಕಾ ಜಿ.ಎಸ್.


ಕೀರ್ತಿ ಸುರೇಖಾ


ಮದೀಹಾ ಹಮೀದ್


ನೇತ್ರಾ ನಾಯರ್


ಅಭಿನವ್ ರಮೇಶ್

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯಕ್ಕೆ 6 ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು 2024-25ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಎಂಜಿನಿಯರಿಂಗ್ ವಿಭಾಗಗಳಲ್ಲಿ 6 ರ‍್ಯಾಂಕ್‌ಗಳನ್ನು ಪಡೆದಿದ್ದಾರೆ.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಡೇಟಾಸೈನ್ಸ್ ವಿಭಾಗದಲ್ಲಿ ಕೀರ್ತಿ ಎ. ರೆಡ್ಡಿ ಮತ್ತು ಪ್ರಿಯಾಂಕಾ ಜಿ.ಎಸ್. ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ರ‍್ಯಾಂಕ್ ಪಡೆದರು. ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಕೀರ್ತಿ ಸುರೇಖಾ ನಾಲ್ಕನೇ ರ‍್ಯಾಂಕ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದಲ್ಲಿ ಮದೀಹಾ ಹಮೀದ್ ಆರನೇ ರ‍್ಯಾಂಕ್ ಮೆಕ್ಯಾನಿಕಲ್ ವಿಭಾಗದಲ್ಲಿ ಅಭಿನವ್ ರಮೇಶ್ ಎಂಟನೇ ರ‍್ಯಾಂಕ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮಿಷನ್ ಲರ್ನಿಂಗ್ ಎಂಜಿನಿಯರಿಂಗ್‌ನಲ್ಲಿ ನೇತ್ರಾ ನಾಯರ್ ಒಂಬತ್ತನೇ ರ‍್ಯಾಂಕ್ ಗಳಿಸಿದ್ದಾರೆ.

10ರ ಒಳಗೆ ರ‍್ಯಾಂಕ್ ಪಡೆದಿರುವ ಆರು ವಿದ್ಯಾರ್ಥಿಗಳು ಶುಕ್ರವಾರ ಬೆಳಗಾವಿಯಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 25ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಪಡೆದರು ಎಂದು ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಸಂಜಯ್ ಜೈನ್, ಉಪ ಪ್ರಾಂಶುಪಾಲ ಬಿ.ನರಸಿಂಹ ಮೂರ್ತಿ ತಿಳಿಸಿದ್ದಾರೆ.

ಮಣಿಪುರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೋಮಶೇಖರ್ ಅಭಿಮತ

‘ಕರಿ ಕೋಟು ವಜ್ರ ಇದ್ದಂತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಕೀಲರ ಪಾಲಿಗೆ ಕರಿ ಕೋಟು ವಜ್ರ ಇದ್ದಂತೆ. ಕೋರ್ಟ್‌ಗಳು ನ್ಯಾಯ ದೇಗುಲಗಳಿದ್ದಂತೆ. ಪ್ರತಿಯೊಬ್ಬ ವಕೀಲರೂ ವೃತ್ತಿಯನ್ನು ಹೃದಯ ಮತ್ತು ಆತ್ಮದ ಬೆಸುಗೆಯಾಗಿಸಿ ಸತತ ಪರಿಶ್ರಮದ ಮೂಲಕ ಯಶಸ್ಸು ಸಾಧಿಸಲು ಸಾಧ್ಯ’ ಎಂದು ಮಣಿಪುರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಕೆ.ಸೋಮಶೇಖರ್ ಹೇಳಿದರು.

ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ‘ಬೆಂಗಳೂರು ವಕೀಲರ ಸಂಘ’ದ ವತಿಯಿಂದ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ‘ಕರ್ನಾಟಕ ಹೈಕೋರ್ಟ್, ರಾಷ್ಟ್ರದಲ್ಲೇ ಪ್ರತಿಷ್ಠಿತ ಹೈಕೋರ್ಟ್ ಎಂಬ ಹೆಗ್ಗಳಿಕೆ ಹೊಂದಿದೆ. ಇಲ್ಲಿನ ವಕೀಲರ ಬದ್ಧತೆಗೆ ಇತಿಹಾಸವೇ ಇದೆ. ಇಲ್ಲಿ ಸಾಕಷ್ಟು ತತ್ವಬದ್ಧ ವಕೀಲರಿದ್ದಾರೆ. ವಕೀಲ ವೃಂದ ಈ ನೆಲದ ಕಾನೂನು ಎತ್ತಿ ಹಿಡಿಯಲು ಸದಾ ಶ್ರಮಿಸಬೇಕು’ ಎಂದರು.

‘ನೀವೆಲ್ಲಾ ನನ್ನನ್ನು ಸಪ್ತ ಮಾತೃಕೆಯ ದೇವತೆಗಳ ನಾಡಿನಿಂದ ಸಪ್ತ ಸಹೋದರಿಯರ ರಾಜ್ಯಕ್ಕೆ ಕಳುಹಿಸಿದ್ದೀರಿ. ಮಣಿಪುರ ಮಹಿಳಾ ಪ್ರಧಾನ ರಾಜ್ಯ. ಇದು ಮಹಾಭಾರತ ಆರಂಭವಾದ ನೆಲೆ. ಬಬ್ರುವಾಹನನ ಸ್ಥಳ. ಚಾಮರಾಜನಗರದ ಯಳಂದೂರಿನ ಗ್ರಾಮದಿಂದ ದೂರದ ರಾಜ್ಯವೊಂದರಲ್ಲಿ ನಾನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿರುವ ಪಯಣದ ಹಿಂದೆ ನಿಮ್ಮ ಪ್ರೀತಿಯೂ ಕಾರಣವಾಗಿದೆ’ ಎಂದು ಬಣ್ಣಿಸಿದರು.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್, ‘ಸೋಮಶೇಖರ್ ಜಿಲ್ಲಾ ನ್ಯಾಯಾಧೀಶರಾಗಿ, ಹೈಕೋರ್ಟ್ ನ್ಯಾ-ಯಮೂರ್ತಿಯಾಗಿ ಸಾಕಷ್ಟು ಅನುಭವ ಹೊಂದಿದ್ದಾರೆ. ನ್ಯಾಯಾಂಗ ಕ್ಷೇತ್ರದ ಅಭಿವೃದ್ಧಿಗೆ ಅವರು ಇನ್ನಷ್ಟು ಶ್ರಮಿಸಲಿ’ ಎಂದು ಆಶಿಸಿದರು.

ವಕೀಲರ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ ಮಾತನಾಡಿ, ‘ನ್ಯಾ. ಸೋಮಶೇಖರ್ ಅವರು ಸದಾ ಸಂವಿಧಾನವನ್ನು ಜಪಿಸುವ ನ್ಯಾ-ಯಮೂರ್ತಿಗಳು. ಶಾಂತಿಯಿಂದ, ತಾಳ್ಮೆಯಿಂದ ಮುನ್ನಡೆದರೆ ಗುರಿ ಮುಟ್ಟುತ್ತಾರೆ ಎಂಬುದಕ್ಕೆ ಅವರೊಂದು ಉತ್ತಮ ಉದಾಹರಣೆ. ಅವರು ಸುಪ್ರೀಂ ಕೋರ್ಟ್‌ಗೂ ಪದನ್ನೋತಿ ಹೊಂದಲಿ’ ಎಂದು ಹಾರೈಸಿದರು.

ನ್ಯಾಯಮೂರ್ತಿ ಅನು ಶಿವರಾಮನ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಖಜಾಂಚಿ ಶ್ವೇತಾ ರವಿಶಂಕರ್, ಹೈಕೋರ್ಟ್ ಘಟಕದ ಅಧ್ಯಕ್ಷ ಚಂದ್ರಕಾಂತ ಪಾಟೀಲ ಹಾಜರಿದ್ದರು.

ಚಿಟಿಕೆ ಸುದ್ದಿ

ವಿಮಾನ ಹಾರಾಟಕ್ಕೂ ಮುನ್ನ ಕುಸಿದು ಬಿದ್ದ ಪೈಲಟ್



ಮುಂಬೈ (ಪಿಟಿಐ): ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ ಬೆಳೆಸಬೇಕಿದ್ದ ಏರ್ ಇಂಡಿಯಾ ವಿಮಾನದ ಪೈಲಟ್, ವಿಮಾನ ಹಾರಾಟ ಆರಂಭಿಸುವ ಮುನ್ನ ಕುಸಿದು ಬಿದ್ದಿದ್ದಾರೆ. ವಿಮಾನಯಾನ ಸಂಸ್ಥೆಯು ಬೇರೊಬ್ಬ ಪೈಲಟ್‌ಅನ್ನು ಕರೆಸಿ ವಿಮಾನ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

'ಜುಲೈ 4ರ ಮುಂಜಾನೆ ನಮ್ಮ ಪೈಲಟ್‌ಗಳಲ್ಲಿ ಒಬ್ಬರಿಗೆ ವೈದ್ಯಕೀಯ ತುರ್ತು ಪರಿಸ್ಥಿತಿ ಎದುರಾಯಿತು. ಇದರಿಂದ ಬೆಂಗಳೂರಿನಿಂದ ದೆಹಲಿಗೆ (ಎಐ-2414) ವಿಮಾನದ ಹಾರಾಟ ನಡೆಸಲು ಆಗಲಿಲ್ಲ. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು' ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

ಪರಿಷತ್: ಜಲಜಾಕ್ಷಿ ಅಮಾನತು

ಬೆಂಗಳೂರು: ಸಂವಿಧಾನ ದಿನದ ಅಂಗವಾಗಿ ವಿಧಾನ ಪರಿಷತ್ತಿನಲ್ಲಿ ನಡೆದ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಇಡದ ಕಾರಣಕ್ಕೆ ವಿಧಾನ ಪರಿಷತ್ ಸಚಿವಾಲಯದ ಉಪಕಾರ್ಯದರ್ಶಿ (ಆಡಳಿತ ವಿಭಾಗ) ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

'ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಡದೇ ಅಗೌರವ ತೋರಲಾಗಿದೆ. ಇದು ಅತ್ಯಂತ ನೋವಿನ ಸಂಗತಿ. ಜಲಜಾಕ್ಷಿ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗುವುದು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಡಿ.ಕೆ.ಶಿ ವಿರುದ್ಧದ ಪ್ರಕರಣಕ್ಕೆ ತಡೆ



ಬೆಂಗಳೂರು: ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ದಾಖಲಾಗಿರುವ ಮಾನನಷ್ಟ ಮೊಕದ್ದಮೆ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಆದೇಶಿಸಿದೆ.

ಡಿ.ಕೆ.ಶಿವಕುಮಾರ್ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದರು. ಹೈಕೋರ್ಟ್ ವಕೀಲ ಎಲ್.ಸೂರ್ಯ ಮುಕುಂದರಾಜ್ ವಕಾಲತ್ತು ವಹಿಸಿದ್ದಾರೆ. ಕೆಪಿಸಿಸಿ ಪರವಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ.ಅಹಮದ್, ವಕಾಲತ್ತು ವಹಿಸಿರುವ ಸಂಜಯ್ ಯಾದವ್ ಹಾಜರಿದ್ದರು.

ಪ್ರಕರಣವೇನು?: 'ಕರ್ನಾಟಕ ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆ ವೇಳೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ, ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿತ್ತು. ಇದರಲ್ಲಿ ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಸರ್ಕಾರ. ಇದು ಕಳೆದ 4 ವರ್ಷಗಳಲ್ಲಿ ₹1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ' ಎಂದು ಆರೋಪಿಸಿ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್. ಕೇಶವಪ್ರಸಾದ್ ಖಾಸಗಿ ದೂರು ದಾಖಲಿಸಿದ್ದರು. ಇದರ ಆಧಾರದಡಿ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ' (42ನೇ ಎಸಿಎಂಎಂ ಕೋರ್ಟ್) ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿತ್ತು.

ಪತಿ ಹತ್ಯೆ: ಸುಳ್ಳು ಕಥೆ ಕಟ್ಟಿದ್ದ ಪತ್ನಿ

ಮುದ್ದೆ ಮಾಡುವ ಕೋಲಿನಿಂದ ಹಲ್ಲೆ ನಡೆಸಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಕೆಲಸದಾಕೆಯ ಜತೆಗೆ ಸಲುಗೆಯಿಂದ ಇದ್ದ ಪತಿ ಮೇಲೆ ಮುದ್ದೆ ಮಾಡುವ ಕೋಲಿನಿಂದ ಹಲ್ಲೆ ನಡೆಸಿ, ಕೊಲೆ ಮಾಡಿ ಸುಳ್ಳು ಕಥೆ ಕಟ್ಟಿದ್ದ ಪತ್ನಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಶ್ರುತಿ

ಅಪರಾಧ ಸುದ್ದಿ

ಎಸ್.ಜಿ. ಪಾಳ್ಯದ ನಿವಾಸಿ ಭಾಸ್ಕರ್ (41) ಕೊಲೆಯಾದ ವ್ಯಕ್ತಿ. ಆತನ ಪತ್ನಿ ಶ್ರುತಿ(32)ಯನ್ನು ಪೊಲೀಸರು ಬಂಧಿಸಿದ್ದಾರೆ. ಭಾಸ್ಕರ್ ಅವರ ಚಿಕ್ಕಪ್ಪನ ಪುತ್ರ ಪ್ರಶಾಂತ್ ನೀಡಿದ ದೂರಿನ ಮೇರೆಗೆ ಪ್ರಕರಣದ ತನಿಖೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

'ಸಿವಿಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಭಾಸ್ಕರ್, ಮೊದಲ ಪತ್ನಿಗೆ ವಿಚ್ಛೇದನ ನೀಡಿದ್ದ. 12 ವರ್ಷಗಳ ಹಿಂದೆ ಶ್ರುತಿಯನ್ನು ಎರಡನೇ ಮದುವೆ ಮಾಡಿಕೊಂಡಿದ್ದ. ಠಾಣಾ ವ್ಯಾಪ್ತಿಯ ಎಸ್.ಜಿ. ಪಾಳ್ಯದಲ್ಲಿ ದಂಪತಿ ನೆಲಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮನೆ ಕೆಲಸದಾಕೆಯ ಜೊತೆಗೆ ಭಾಸ್ಕರ್ ಹೆಚ್ಚು ಸಲುಗೆಯಿಂದ ಇರುತ್ತಿದ್ದ. ಈ ವಿಷಯ ಶ್ರುತಿಗೆ ಗೊತ್ತಾಗಿ ಮನೆಯಲ್ಲಿ ಜಗಳ ನಡೆಯುತ್ತಿತ್ತು. ಜೂನ್ 27ರ ರಾತ್ರಿ ಭಾಸ್ಕರ್ ಅವರು ಮದ್ಯಪಾನ ಮಾಡಿಕೊಂಡು ಮನೆಗೆ ಬಂದಿದ್ದರು. ಆಗ ಕೆಲಸದಾಕೆಯ ವಿಚಾರ ಪ್ರಸ್ತಾಪವಾಗಿ ಗಲಾಟೆ ನಡೆದಿತ್ತು. ಗಲಾಟೆ ವಿಕೋಪಕ್ಕೆ ಹೋಗಿ ಸಿಟ್ಟಿಗೆದ್ದ ಶ್ರುತಿ ಮುದ್ದೆ ಮಾಡುವ ಕೋಲಿನಿಂದ ಭಾಸ್ಕರ್ ಮೇಲೆ ಹಲ್ಲೆ ನಡೆಸಿದ್ದಳು. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿದ್ದ, ಭಾಸ್ಕರ್ ಮನೆಯಲ್ಲೇ ಮೃತಪಟ್ಟಿದ್ದ' ಎಂದು ಮೂಲಗಳು ತಿಳಿಸಿವೆ.

'ಕೃತ್ಯದ ಬಳಿಕ ಆತಂಕಗೊಂಡ ಶ್ರುತಿ ಕೊಲೆ ಪ್ರಕರಣದ ಕುರಿತು ಸುಳ್ಳಿನ ಕಥೆ ಕಟ್ಟಿದ್ದಳು. ಮನೆಗೆ ಬಂದು ಪರಿಶೀಲಿಸಿದ ಪೊಲೀಸರ ಎದುರು ಸುಳ್ಳು ಹೇಳಿದ್ದಳು. 'ಪತಿ ಭಾಸ್ಕರ್ ಮದ್ಯಪಾನ ಮಾಡಿ ಸ್ನಾನದ ಕೋಣೆಯಲ್ಲಿ ಬಿದ್ದು ಗಾಯಗೊಂಡಿದ್ದರು. ಹೀಗಾಗಿ, ಅವರಿಗೆ ಸ್ನಾನ ಮಾಡಿಸಿ ಮಲಗಿಸಿದ್ದೆ. ಮಲಗಿದ್ದ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಹೇಳಿದ್ದಳು. ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಆಗ ಕೊಲೆಯ ರಹಸ್ಯ ಬಯಲಾಗಿದೆ' ಎಂದು ಪೊಲೀಸರು ಹೇಳಿದರು.

ಕೆಲಸದಾಕೆಗೆ ಬಾಡಿಗೆ ಹಣ ನೀಡುತ್ತಿದ್ದ

'ಭಾಸ್ಕರ್ ಸಿವಿಲ್ ಎಂಜಿನಿಯರ್ ಕೆಲಸ ತೊರೆದು ಮನೆಯಲ್ಲೇ ಹೆಚ್ಚು ಇರುತ್ತಿದ್ದರು. ನಗರದಲ್ಲಿ ಸ್ವಂತ ಮನೆಯನ್ನೂ ಹೊಂದಿದ್ದರು. ಕೆಲವು ಮನೆಗಳನ್ನು ಬಾಡಿಗೆಗೂ ನೀಡಿದ್ದರು. ಅದರಿಂದ ಬರುತ್ತಿದ್ದ ಆದಾಯದಲ್ಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಬಾಡಿಗೆಯಿಂದ ಬಂದ ಹಣವನ್ನು ಭಾಸ್ಕರ್ ಕೆಲಸದಾಕೆಗೆ ನೀಡುತ್ತಿದ್ದ. ಹಣವನ್ನು ಪತ್ನಿಗೆ ನೀಡುತ್ತಿರಲಿಲ್ಲ. ಇದು ಪತ್ನಿಯ ಸಿಟ್ಟಿಗೆ ಕಾರಣವಾಗಿತ್ತು. ಒಂದು ತಿಂಗಳಿನಿಂದ ಮನೆಗೂ ಬಾರದೇ ಹೊರಗೆ ಸುತ್ತಾಟ ನಡೆಸುತ್ತಿದ್ದ. ಜೂನ್ 27ರಂದು ಮನೆಗೆ ಬಂದಾಗ ಗಲಾಟೆ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

ಮರಣೋತ್ತರ ಪರೀಕ್ಷೆಯಲ್ಲಿ ಕೊಲೆ ರಹಸ್ಯ

'ಭಾಸ್ಕರ್ ಅವರ ಮುಖ ಹಾಗೂ ಇತರೆ ಭಾಗದಲ್ಲಿ ಗಾಯದ ಗುರುತುಗಳು ಇದ್ದವು. ದೇಹಕ್ಕೆ ಯಾವುದೋ ವಸ್ತುವಿನಿಂದ ಹೊಡೆದಿರುವುದು ಪತ್ತೆ ಆಗಿತ್ತು. ಅದನ್ನು ಆಧರಿಸಿ ಶ್ರುತಿಯನ್ನು ವಿಚಾರಣೆಗೆ ಒಳಪಡಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದರು. ಹಲ್ಲೆಯಿಂದಲೇ ಭಾಸ್ಕರ್ ಮೃತಪಟ್ಟಿದ್ದಾರೆ ಎಂದು ವೈದ್ಯರು ಮರಣೋತ್ತರ ಪರೀಕ್ಷಾ ವರದಿ ಸಲ್ಲಿಸಿದ್ದರು. ಮತ್ತೆ ಶ್ರುತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು' ಎಂದು ಪೊಲೀಸರು ಹೇಳಿದರು.

ಸಾಲ ವಾಪಸ್ ಕೇಳಿದ್ದಕ್ಕೆ ಮನೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಗೆಂದು ನೀಡಿದ್ದ ಸಾಲವನ್ನು ವಾಪಸ್ ಕೇಳಿದ್ದಕ್ಕೆ ಸಿಟ್ಟಿಗೆದ್ದ ಸಾಲಗಾರನೊಬ್ಬ ಮಹಿಳೆಯ ಮನೆಗೆ ಬೆಂಕಿ ಹಾಕಿದ್ದು, ಈ ಸಂಬಂಧ ವಿವೇಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವೇಕನಗರದ ಎರಡನೇ ಮುಖ್ಯ ರಸ್ತೆಯಲ್ಲಿ ಜುಲೈ 1ರಂದು ಸಂಜೆ ಘಟನೆ ನಡೆದಿದೆ.

ಸುಬ್ರಮಣಿ ಎಂಬಾತ ವೆಂಕಟರಮಣಿ ಅವರ ಮನೆಗೆ ಬೆಂಕಿಯಿಟ್ಟಿದ್ದಾನೆ. ವೆಂಕಟರಮಣಿ ಅವರ ಪುತ್ರ ನೀಡಿರುವ ದೂರಿನ ಮೇರೆಗೆ ಸುಬ್ರಮಣಿ, ಆತನ ಸಹೋದರಿ ಪಾರ್ವತಿ, ಪುತ್ರಿ ಮಹಾಲಕ್ಷ್ಮಿ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.



ಬೆಂಕಿಯಿಂದ ಸುಟ್ಟಿರುವ ಮನೆಯ ಸಾಮಗ್ರಿ

'ಸುಬ್ರಮಣಿಯ ಸಹೋದರಿ ಪಾರ್ವತಿ, ತನ್ನ ಪುತ್ರಿಯ ಮದುವೆಗಾಗಿ ವೆಂಕಟರಮಣಿಯ ಬಳಿ ಎಂಟು ವರ್ಷಗಳ ಹಿಂದೆ ₹5 ಲಕ್ಷ ಹಣ ಪಡೆದಿದ್ದಳು. ಆದರೆ, ಸಾಲವನ್ನು ವಾಪಸ್ ನೀಡಿರಲಿಲ್ಲ. ವೆಂಕಟರಮಣಿ ಅವರು ಸಾಲ ವಾಪಸ್ ಕೊಡುವಂತೆ ಕೇಳಿದ್ದರು. ಆಗ ಮನೆಯ ಬಳಿ ಪಾರ್ವತಿ ಮತ್ತು ಆಕೆಯ ಪುತ್ರಿ ಬಂದು ಜೀವ ಬೆದರಿಕೆ ಹಾಕಿದ್ದರು. 'ಇದೇ ವಿಚಾರಕ್ಕೆ ಸಿಟ್ಟಾದ ಆರೋಪಿ, ಜುಲೈ 1ರಂದು ಸಂಜೆ 5ರ ಸುಮಾರಿಗೆ ವೆಂಕಟರಮಣಿ ಮತ್ತು ಅವರ ಪುತ್ರ ಮನೆಯಲ್ಲಿದ್ದಾಗ ಪೆಟ್ರೋಲ್ ಸುರಿದು ಬೆಂಕಿ ಹಾಕಿದ್ದಾನೆ' ಎಂದು ದೂರು ನೀಡಲಾಗಿದೆ.

'ಘಟನೆಯಿಂದ ಮನೆಯ ಎದುರು ಬಾಗಿಲು ಹಾಗೂ ಕಿಟಕಿ ಸುಟ್ಟು ಹೋಗಿದೆ. ಬಟ್ಟೆಗಳು ಸುಟ್ಟಿವೆ. ಆರೋಪಿಯ ಕೃತ್ಯ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಾಲಕಿಗೆ ಲೈಂಗಿಕ ಕಿರುಕುಳ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮನೆ ಸಾಮಗ್ರಿ ತರಲು ದಿನಸಿ ಅಂಗಡಿಗೆ ಹೋಗಿದ್ದ ಐದು ವರ್ಷದ ಬಾಲಕಿಗೆ ಚಾಕೊಲೇಟ್ ನೀಡುವ ಆಸೆ ತೋರಿಸಿ, ಗೋದಾಮಿಗೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಮೊಹಮ್ಮದ್

ಕೇರಳದ ಮೊಹಮ್ಮದ್ ಹಾಜಿ (20) ಬಂಧಿತ ಆರೋಪಿ. ದಾಸರಹಳ್ಳಿಯ ಮಹೇಶ್ವರಮ್ಮ ದೇವಸ್ಥಾನದ ಬಳಿಯ ಅಂಗಡಿಯೊಂದಕ್ಕೆ ಬಾಲಕಿ ಗುರುವಾರ ರಾತ್ರಿ ತೆರಳಿದ್ದಳು.

ಆಗ ಆರೋಪಿ ಚಾಕೊಲೇಟ್ ಆಸೆ ತೋರಿಸಿ ಗೋದಾಮಿಗೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳೀಯರು ಘಟನಾ ಸ್ಥಳಕ್ಕೆ ಧಾವಿಸಿ ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಆರೋಪಿಯ ವಿರುದ್ಧ ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು. ಒಂದು ವೇಳೆ ಯಾರದ್ದೋ ಪ್ರಭಾವಕ್ಕೆ ಒಳಗಾಗಿ ಈ ಘಟನೆಯನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದರೆ ತೀವ್ರ ಹೋರಾಟ ನಡೆಸುತ್ತೇವೆ' ಎಂದು ಸ್ಥಳೀಯ ನಿವಾಸಿ ಅಮರನಾಥ್ ಎಚ್ಚರಿಸಿದರು.

ಹತ್ತು ರಾಜಕೀಯ ಪಕ್ಷಗಳಿಗೆ ನೋಟಿಸ್: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ವರ್ಷಗಳಿಂದ ಒಂದೂ ಚುನಾಣೆಯಲ್ಲಿ ಸ್ಪರ್ಧಿಸದ ಹಾಗೂ ರಾಜಕೀಯ ಪಕ್ಷಗಳ ಕಚೇರಿಯನ್ನು ಗುರುತಿಸಲು ಸಾಧ್ಯವಾಗದ ಕಾರಣ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 10 ರಾಜಕೀಯ ಪಕ್ಷಗಳ ನೋಂದಣಿಯನ್ನು ರದ್ದುಪಡಿಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿ ಎಂ. ಮಹೇಶ್ವರ್ ರಾವ್ ಅವರು ನೋಟಿಸ್ ಜಾರಿ ಮಾಡಿದ್ದಾರೆ.

'ಸಂವಿಧಾನದ 324ನೇ ವಿಧಿಯಡಿ ಜನ ಪ್ರಾತಿನಿಧ್ಯ ಕಾಯ್ದೆ 1951 ಸೆಕ್ಷನ್ 29ಎ ಅಡಿ ಇಂತಹ ಪಕ್ಷಗಳ ನೋಂದಣಿಯನ್ನು ಏಕೆ ರದ್ದು ಮಾಡಬಾರದು ಎಂದು ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟ ಪಕ್ಷಗಳ ಪ್ರತಿನಿಧಿಗಳು 10 ದಿನದಲ್ಲಿ ವಿಚಾರಣೆಗೆ ಖುದ್ದಾಗಿ ಹಾಜರಾಗಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'2019ರಿಂದ ಒಂದೂ ಚುನಾವಣೆಯಲ್ಲಿ ಸ್ಪರ್ಧಿಸದ ಜಿಲ್ಲಾ ವ್ಯಾಪ್ತಿಯಲ್ಲಿರುವ 10 ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳ ನೋಂದಣಿಯನ್ನು ರದ್ದುಪಡಿಸುವ ಪ್ರಕ್ರಿಯೆಯನ್ನು ಕೇಂದ್ರ ಚುನಾವಣಾ ಆಯೋಗದ ಆರಂಭಿಸಿದೆ. ಹೀಗಾಗಿ, ರಾಜ್ಯದ ಮುಖ್ಯ ಚುನಾವಣಾಧಿಕಾರಿ ಸೂಚನೆ ಮೇರೆಗೆ, ನಗರ ಜಿಲ್ಲೆಯಲ್ಲಿ ಪ್ರಕ್ರಿಯೆ ಆರಂಭವಾಗಿದೆ' ಎಂದು ಮಹೇಶ್ವರ್ ರಾವ್ ತಿಳಿಸಿದರು.

ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು: ಅಂಬೇಡ್ಕರ್ ಜನತಾ ಪಕ್ಷ, ಭಾರತೀಯ ಡಾ. ಬಿ.ಆರ್ ಅಂಬೇಡ್ಕರ್ ಜನತಾ ಪಕ್ಷ, ಭಾರತೀಯ ಪ್ರಜಾ ಪಕ್ಷ, ಕಲ್ಯಾಣ ಕ್ರಾಂತಿ ಪಕ್ಷ, ಕರ್ನಾಟಕ ಪ್ರಜಾ ವಿಕಾಸ ಪಕ್ಷ, ಮಹಿಳಾ ಪ್ರಧಾನ ಪಕ್ಷ, ನಮ್ಮ ಕಾಂಗ್ರೆಸ್, ಪ್ರಜಾ ರೈತ ರಾಜ್ಯ ಪಕ್ಷ, ರಕ್ಷಕ ಸೇನಾ, ಸಮಾಜ ವಾದಿ ಜನತಾ ಪಕ್ಷ (ಕರ್ನಾಟಕ).

ಮದುವೆ ನೆಪ: ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ನಲ್ಲಿ ಸಂಪರ್ಕಕ್ಕೆ ಸಿಕ್ಕಿದ್ದ ಯುವತಿ

ಎಂಜಿನಿಯರ್‌ಗೆ ₹80 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ವೊಂದರಲ್ಲಿ ಸಂಪರ್ಕಕ್ಕೆ ಸಿಕ್ಕಿದ್ದ ಯುವತಿಯೊಬ್ಬಳು, ಸಾಫ್ಟ್‌ವೇರ್ ಎಂಜಿನಿಯರ್ ಅನ್ನು ಮದುವೆ ಆಗುವುದಾಗಿ ನಂಬಿಸಿ ₹80 ಲಕ್ಷ ವಂಚಿಸಿದ್ದಾಳೆ.

ರಾಮಮೂರ್ತಿ ನಗರದಲ್ಲಿ ನೆಲಸಿರುವ 32 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ರಿಶಿ (ಹೆಸರು ಬದಲಾವಣೆ ಮಾಡಲಾಗಿದೆ) ಅವರು ನೀಡಿದ ದೂರು ಆಧರಿಸಿ ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಯ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318ರ (ವಂಚನೆ) ಅಡಿ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.

'ವಿಶಾಖಪಟ್ಟಣದ ರೋಹಿಣಿ ವರ್ಮಾ ಎಂಬುದಾಗಿ ಪರಿಚಯಿಸಿ ಕೊಂಡಿದ್ದ ಯುವತಿ, ಇಂಗ್ಲೆಂಡ್‌ನ ಟ್ರೇಡಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಸಾಫ್ಟ್‌ವೇರ್ ಎಂಜಿನಿಯರ್ ಬಳಿ ಹೇಳಿಕೊಂಡಿದ್ದಳು. ಆರು ತಿಂಗಳ ಒಳಗಾಗಿ ಭಾರತಕ್ಕೆ ಬರುತ್ತೇನೆ. ಆಗ ಮದುವೆಯ ಬಗ್ಗೆ ಚರ್ಚಿಸೋಣ ಎಂದು ನಂಬಿಸಿದ್ದಳು. ಅದಾದ ಮೇಲೆ ಇಬ್ಬರೂ ವಾಟ್ಸ್ ಆ್ಯಪ್‌ನಲ್ಲಿ ಚರ್ಚೆ ನಡೆಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಭಾರತ ಹಾಗೂ ಇಂಗ್ಲೆಂಡ್‌ನ ಎರಡು ಪ್ರತ್ಯೇಕ ಸಂಖ್ಯೆಗಳಿಂದ ವಂಚಕಿ ಕರೆ ಮಾಡುತ್ತಿದ್ದಳು. ತಾನು ಕೆಲಸ ಮಾಡುತ್ತಿರುವ ಟ್ರೇಡಿಂಗ್ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಸಿಗಲಿದೆ ಎಂದು ಆಸೆ ತೋರಿಸಿ ನಂಬಿಕೆ ಬರುವಂತೆ ಮಾತುಕತೆ ಮಾಡುತ್ತಿದ್ದಳು. ಲಾಭದ ಹಣದಿಂದ ಮದುವೆಯಾದ ಮೇಲೆ ಇಬ್ಬರೂ ಉತ್ತಮ ಬದುಕು ಕಟ್ಟಿಕೊಳ್ಳೋಣ ಎಂದು ಹೇಳಿದ್ದಳು. ಆಕೆಯ ಮಾತು ನಂಬಿದ್ದ ಸಾಫ್ಟ್‌ವೇರ್ ಎಂಜಿನಿಯರ್, 2025ರ ಫೆಬ್ರುವರಿಯಿಂದ ಹಂತ ಹಂತವಾಗಿ ₹80 ಲಕ್ಷ ಹೂಡಿಕೆ ಮಾಡಿದ್ದರು. ಯುವತಿ ನೀಡಿದ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ರಿಶಿ ಹಣ ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಈ ವೇಳೆ ಮತ್ತೊಬ್ಬ ವಂಚಕನ ಪರಿಚಯವಾಗಿ ಹೂಡಿಕೆ ಮಾಡಿದ್ದ ಹಣಕ್ಕೆ ಹೆಚ್ಚಿನ ಲಾಭ ಬಂದಂತೆ ವೆಬ್‌ಸೈಟ್‌ನಲ್ಲಿ ತೋರಿಸುತ್ತಿದ್ದ. ಕೆಲವು ದಿನಗಳ ಬಳಿಕ ರಿಶಿ ಅವರು ಲಾಭದ ಹಣವನ್ನು ತೆಗೆದುಕೊಳ್ಳಲು ಮುಂದಾಗಿದ್ದರು. ತೆರಿಗೆ ಹಾಗೂ ಶುಲ್ಕ ಹಣವನ್ನು ಪಾವತಿಸುವಂತೆ ಸೂಚಿಸಿದ್ದ. ಆಗ ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು' ಎಂದು ಸೈಬರ್ ಪೊಲೀಸರು ತಿಳಿಸಿದರು.

'ಮಾರ್ಚ್ ಮೊದಲ ವಾರದಿಂದ ಜೂನ್ 18ರವರೆಗೆ ದೂರುದಾರರು 12 ಖಾತೆಗಳಿಗೆ ಹಣ ವರ್ಗಾವಣೆ ಮಾಡಿ ವಂಚನೆಗೆ ಒಳಗಾಗಿದ್ದಾರೆ. ಜೂನ್ 19ರ ಬಳಿಕ ಯುವತಿ ಹಾಗೂ ಮತ್ತೊಬ್ಬ ವಂಚಕ ಸಂಪರ್ಕಕ್ಕೆ ಸಿಗುತ್ತಿಲ್ಲವೆಂದು ಜೂನ್ 23ರಂದು ದೂರು ನೀಡಿದ್ದಾರೆ. ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

'ಸಾಫ್ಟ್‌ವೇರ್ ಎಂಜಿನಿಯರ್ ಹಣ ಹಾಕುತ್ತಿದ್ದಂತೆಯೇ ವಂಚಕರು ಬೇರೆ ಬೇರೆ ಖಾತೆಗಳಿಗೆ ಹಣ ವರ್ಗಾಯಿಸಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ
- ಟ್ರೇಡಿಂಗ್ ಕಂಪನಿಯಲ್ಲಿ ಹೂಡಿಕೆ
- 12 ಖಾತೆಗಳಿಗೆ ಹಣ ವರ್ಗಾವಣೆ

ಅಪಘಾತ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯ ಬೆನ್ನಿಗಾನಹಳ್ಳಿಯ ರೈಲ್ವೆ ಸೇತುವೆ ಬಳಿ ಖಾಸಗಿ ಬಸ್ ಹಾಗೂ ಸ್ಕೂಟರ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಎ.ನಾರಾಯಣ ಪುರದ ನಿವಾಸಿ ಮೇನಕಾ (61) ಮೃತಪಟ್ಟಿದ್ದಾರೆ.

'ಶುಕ್ರವಾರ ಬೆಳಿಗ್ಗೆ 6 ಗಂಟೆಯ ಸುಮಾರಿಗೆ ಎ.ನಾರಾಯಣಪುರದಿಂದ ಇಂದಿರಾನಗರಕ್ಕೆ ಪತಿ ಮಹದೇವಯ್ಯ ಅವರ ಜೊತೆಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಹಳೆ ಮದ್ರಾಸ್ ರಸ್ತೆಯ ಬೆನ್ನಿಗಾನಹಳ್ಳಿ ರೈಲ್ವೆ ಸೇತುವೆಯ ಬಳಿ ವೇಗವಾಗಿ ಬಂದ ಖಾಸಗಿ ಬಸ್‌ವೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಕೆಳಕ್ಕೆ ಬಿದ್ದಿದ್ದರು. ಮೇನಕಾ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು. ಮಹದೇವಯ್ಯ ಅವರಿಗೆ ಸಣ್ಣಪುಟ್ಟ ಗಾಯವಾಗಿದೆ' ಎಂದು ಪೊಲೀಸರು ಹೇಳಿದರು.

ಮಹದೇವಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲೆಯ ಚಿಕಿತ್ಸೆಗೆ ₹75 ಲಕ್ಷ ಸಂಗ್ರಹ

ಒಂದನೇ ಪುಟದಿಂದ...

'ಕಟುಂಬದವರ ಸಂಕಷ್ಟವನ್ನು ಮನಗಂಡು, ಜೂನ್ 30ರಂದು ಸಂಜೆ 6 ಗಂಟೆ ವೇಳೆಗೆ ನಾನು ನೆರವು ಯಾಚಿಸಿ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದೆ. ಮರುದಿನ ಬೆಳಿಗ್ಗೆ 10.30ರ ವೇಳೆಗೆ ₹75 ಲಕ್ಷ ಸಂಗ್ರಹವಾಗಿತ್ತು' ಎಂದು ಫಯಾಜ್ ಪ್ರತಿಕ್ರಿಯಿಸಿದ್ದಾರೆ.

'ಅವರು ನಮ್ಮ ಧರ್ಮವನ್ನು ನೋಡಲಿಲ್ಲ, ನಮ್ಮಿಂದ ಏನನ್ನೂ ಕೇಳಿಲ್ಲ, ಬದಲಿಗೆ ಎಷ್ಟು ದಿನದೊಳಗೆ ನಿಮಗೆ ಹಣ ಬೇಕಾಗಿದೆ ಎಂದಷ್ಟೇ ಅವರು ಕೇಳಿದ್ದರು' ಎಂದು ಹಿರಣ್ಯಾಕ್ಷ ತಿಳಿಸಿದರು.



ಬಾಲಕಿಯ ಚಿಕಿತ್ಸೆಗೆ ನೆರವು ಕೋರಿದ ಬಂಟ್ವಾಳದ ಫಯಾಜ್ ಮಸೂದ್ ಹಾಗೂ ಅವರ ತಂಡದವರು

ಮಗುವಿನ ಕುಟುಂಬದವರು ಈಗಾಗಲೇ ಬೆಂಗಳೂರಿಗೆ ತೆರಳಿದ್ದು, ಒಂದೆರಡು ದಿನಗಳಲ್ಲಿ ಚಿಕಿತ್ಸೆ ಆರಂಭವಾಗುವ ನಿರೀಕ್ಷೆ ಇದೆ ಎಂದು ತಿಳಿಸಲಾಗಿದೆ.

ಮೆಟ್ರೊ ರೈಲುನಿಲ್ದಾಣ ಸ್ಥಾಪನೆಗೆ ಪಿಐಎಲ್

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬೆಟ್ಟಹಲಸೂರು ಕ್ರಾಸ್ ಬಳಿ ಮೆಟ್ರೊ ರೈಲು ನಿಲ್ದಾಣ ಸ್ಥಾಪಿಸಬೇಕು ಎಂದು ಕೋರಿ, ರೈತ ಮುಖಂಡರು ಹಾಗೂ ಸುತ್ತಮುತ್ತಲ ಗ್ರಾಮಗಳ ಮುಖಂಡರು ಸಾರ್ವಜನಿಕ ಹಿತಾಸಕ್ತಿ (ಪಿಐಎಲ್) ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಬಿ.ಜಿ.ನಂಜುಂಡಪ್ಪ ಸೇರಿ ಮುಖಂಡರಾದ ಬಿ.ಸಿ. ಶಿವರಾಜ್, ಟಿ.ಪಿ.ಪ್ರಕಾಶ್, ಪಟೇಲ್.ಪಿ ಹಾಗೂ ಚಂದ್ರು. ಬಿ.ಕೆ ಅವರು ಅರ್ಜಿ(ಪಿಐಎಲ್) ಸಲ್ಲಿಸಿದ್ದಾರೆ.

'ಉದ್ದೇಶಿತ ನಿಲ್ದಾಣದ ವ್ಯಾಪ್ತಿಯಲ್ಲಿ ಸುಮಾರು 40 ಗ್ರಾಮಗಳಿದ್ದು, ಒಂದೂವರೆ ಲಕ್ಷಕ್ಕೂ ಹೆಚ್ಚಿನ ಜನರು ಈ ಭಾಗದಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿಗೆ ಮೆಟ್ರೊ ನಿಲ್ದಾಣ ಅವಶ್ಯವಿರುವ ಕಾರಣ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗಿದೆ' ಎಂದು ರೈತ ಮುಖಂಡ ಬಿ.ಜಿ.ನಂಜುಂಡಪ್ಪ ತಿಳಿಸಿದರು.

ಅರ್ಜಿ ಸಲ್ಲಿಸುವುದಕ್ಕೂ ಮುನ್ನ 3–4 ತಿಂಗಳುಗಳಿಂದ ಸಂಬಂಧಪಟ್ಟ ಕಚೇರಿಗಳ ಅಧಿಕಾರಿಗಳಿಗೆ ಸಾಕಷ್ಟುಬಾರಿ ಮನವಿಪತ್ರ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರನ್ನು ಭೇಟಿಮಾಡಿ ಮನವಿ ನೀಡಲಾಗಿದೆ.

2,500 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್

ಪ್ರಜಾವಾಣಿ ವಾರ್ತೆ

ಹಾಸನ: 'ರಾಜ್ಯದಲ್ಲಿ 2,500 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇದಕ್ಕಾಗಿ ಖಾಸಗಿಯವರು ₹10 ಸಾವಿರ ಕೋಟಿ ಹೂಡಲು ಸಿದ್ಧರಿದ್ದಾರೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಖಾಸಗಿಯವರು ವಿದ್ಯುತ್ ಉತ್ಪಾದನೆ ಮಾಡಲಿದ್ದಾರೆ. ನಾವು ಅವರಿಂದ ಯೂನಿಟ್‌ಗೆ ₹3.17 ದಿಂದ ₹2.75 ದರದಲ್ಲಿ ಖರೀದಿಸು ತ್ತೇವೆ' ಎಂದರು.



'ಇಂಧನ ಇಲಾಖೆಯಲ್ಲಿ ಆರ್ಥಿಕ ಸಮಸ್ಯೆ ಇಲ್ಲ. ಕಳೆದ ವರ್ಷ 1,500 ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಈ ವರ್ಷ 3ಸಾವಿರ ಲೈನ್‌ಮನ್‌ಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದರು.

'ನಮ್ಮ ಸರ್ಕಾರ ರೈತರಿಗೆ ₹19 ಸಾವಿರ ಕೋಟಿ ಸಹಾಯಧನ ನೀಡುತ್ತಿದೆ. ಕಾಫಿ ಬೆಳೆಗಾರರು ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದು, ಬಡ್ಡಿ ಸಹಿತ ಬಾಕಿ ಪಾವತಿಸಿದರೆ ಅವರಿಗೂ ಬೇಕಾದ ವಿದ್ಯುತ್ ಸೌಲಭ್ಯ ಸಿಗಲಿದೆ' ಎಂದು ಪ್ರತಿಕ್ರಿಯಿಸಿದರು.

ಆಂಗ್ಲ ಮಾಧ್ಯಮ ತರಗತಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ 4,137 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹೊಸದಾಗಿ ಆಂಗ್ಲ ಮಾಧ್ಯಮ ತರಗತಿಗಳನ್ನು ತೆರೆಯುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿರೋಧ ವ್ಯಕ್ತಪಡಿಸಿದ್ದಾರೆ.



ಪುರುಷೋತ್ತಮ ಬಿಳಿಮಲೆ

ಈ ಬಗ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

'ಸಂವಹನಕ್ಕಾಗಿ ತಾಯ್ನುಡಿ ಹೊರತಾದ ಯಾವುದೇ ಭಾಷೆಯನ್ನು ಕಲಿಯುವುದು ತಪ್ಪಲ್ಲ. ಆದರೆ, ಅಂತಹ ಪ್ರಯತ್ನಗಳು ನಮ್ಮ ಮಾತೃಭಾಷೆಯನ್ನೇ ಮೂಲೆಗುಂಪಾಗಿಸುವ ಕಾರ್ಯಕ್ಕೆ ಪ್ರಾಧಿಕಾರ ಸಾಕ್ಷಿಯಾಗುವುದಿಲ್ಲ. ನಾಡಿನ ಅಭಿವೃದ್ಧಿ ಎನ್ನುವುದು ಸಂಪೂರ್ಣವಾಗಿ ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಅವಲಂಬಿಸಿದೆ' ಎಂದು ತಿಳಿಸಿದ್ದಾರೆ.

'ಕನ್ನಡ ಅಭಿವೃದ್ಧಿ ಪ್ರಾಧಿಕಾರವು 2017ರಲ್ಲಿ ಸಲ್ಲಿಸಿರುವ ಸರ್ಕಾರಿ ಶಾಲೆಗಳ ಸಬಲೀಕರಣ ವರದಿಯನ್ನು ಕೂಡಲೇ ಜಾರಿಗೊಳಿಸಬೇಕು. ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸಲು ರೂಪಿಸಿರುವ 'ಕನ್ನಡ ಕಲಿಕಾ ಕಾಯ್ದೆ 2015' ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಬೇಕು. ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಕನ್ನಡ ಶಾಲೆಗಳ ಸಬಲೀಕರಣಕ್ಕಾಗಿ ಒಂದು ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಿ, ಸರ್ಕಾರ ಆ ಶಾಲೆಗಳ ಬೆಂಬಲಕ್ಕೆ ನಿಲ್ಲಬೇಕು' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ ದ್ವಿಭಾಷಾ ನೀತಿ ಅಗತ್ಯವಿದ್ದು, ಪ್ರಾಧಿಕಾರವು ಈ ನಿರ್ಧಾರವನ್ನು ಎಲ್ಲ ವೇದಿಕೆಗಳಲ್ಲಿ ಸ್ಪಷ್ಟಪಡಿಸಿದೆ' ಎಂದು ತಿಳಿಸಿದ್ದಾರೆ.

4,137 ಶಾಲೆಗಳಲ್ಲಿ ಈ ವರ್ಷ ಆಂಗ್ಲ ಮಾಧ್ಯಮ

ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ 4,137 ಶಾಲೆಗಳಲ್ಲಿ ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದ್ದು, ಆಂಗ್ಲ ಮಾಧ್ಯಮ ಸರ್ಕಾರಿ ಶಾಲೆಗಳ ಸಂಖ್ಯೆ 8,738ಕ್ಕೆ ಏರಿಕೆಯಾಗಿದೆ.

ಮೊದಲ ಬಾರಿ 2019–20ನೇ ಸಾಲಿನಲ್ಲಿ 1,000 ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜತೆಗೆ ಇಂಗ್ಲಿಷ್ ಮಾಧ್ಯಮಕ್ಕೂ (ದ್ವಿಭಾಷಾ ಮಾಧ್ಯಮ) ರಾಜ್ಯ ಸರ್ಕಾರ ಅವಕಾಶ ನೀಡಿತ್ತು. 2025–26ನೇ ಸಾಲಿನಲ್ಲಿ ಹೊಸದಾಗಿ 4,000 ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಆರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿಯ ಬಜೆಟ್‌ನಲ್ಲೇ ಘೋಷಿಸಿದ್ದರು.

ರಾಜ್ಯದ 33 ಶೈಕ್ಷಣಿಕ ಜಿಲ್ಲೆಗಳ 11,555 ಶಾಲೆಗಳಿಂದ ದ್ವಿಭಾಷಾ ಮಾಧ್ಯಮಕ್ಕೆ ಬೇಡಿಕೆ ಬಂದಿದ್ದು, ನಿಗದಿತ ಮಾನದಂಡಗಳಿಗೆ ಅನುಗುಣವಾಗಿ ಪರಿಶೀಲನೆ ನಡೆಸಿ, 4,137 ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಅವುಗಳಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಲ್ಲೇ 1,465 ಶಾಲೆಗಳಿವೆ. ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಆಂಗ್ಲ ಮಾಧ್ಯಮ ತರಗತಿಗಳನ್ನು ಆರಂಭಿಸಬೇಕು ಎಂದು ಇಲಾಖೆ ಸೂಚಿಸಿದೆ.



'ಮೂರು ಶತ್ರುಗಳ ವಿರುದ್ಧ ಹೋರಾಟ'

ಒಂದನೇ ಪುಟದಿಂದ...

'ನಿಮ್ಮ ಸೇನಾ ಪಡೆ ಮುಂದಿನ ಕಾರ್ಯಾಚರಣೆಗೆ ಯಾವ ರೀತಿಯಲ್ಲಿ ಸಿದ್ಧವಾಗಿದೆ ಎಂಬುದು ನಮಗೆ ತಿಳಿದಿದೆ ಎಂಬುದನ್ನು ಪಾಕ್‌ನ ಸೇನಾ ಪ್ರಮುಖರು ನಮಗೆ ಹೇಳಿದ್ದರು. ಇದು ಚೀನಾದಿಂದ ನೈಜ ಮಾಹಿತಿ ಪಡೆದಿರುವುದಕ್ಕೆ ಸಾಕ್ಷಿ' ಎಂದು ನೆನಪಿಸಿಕೊಂಡರು.

'ಉತ್ತರ ಗಡಿಯಲ್ಲಿ ಕೆಸರೆರಚಾಟದ ಬದಲಿಗೆ, ನೆರೆಯ ಪಾಕಿಸ್ತಾನಕ್ಕೆ ಬೆಂಬಲ ನೀಡುವ ಮೂಲಕ ಭಾರತಕ್ಕೆ ತೊಂದರೆ ನೀಡಲು ಚೀನಾ ಬಯಸುತ್ತಿದೆ. ಟರ್ಕಿ ಕೂಡ ಪಾಕಿಸ್ತಾನಕ್ಕೆ ಬೆಂಬಲ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಯುದ್ಧದ ಸಂದರ್ಭದಲ್ಲಿ ಸಾಕಷ್ಟು ಡ್ರೋನ್‌ಗಳು ಬರುವುದನ್ನು ನಾವು ಕಂಡಿದ್ದೇವೆ ಎಂದು ಸಿಂಗ್ ಹೇಳಿದರು.

ಸಂಘರ್ಷದಿಂದ ಭಾರತವು ಪಾಠಗಳನ್ನು ಕಲಿಯಬೇಕಾದ ಅಗತ್ಯವನ್ನು ಸೇನಾ ಅಧಿಕಾರಿ ಒತ್ತಿ ಹೇಳಿದರು. ಚೀನಾ ಹಾಗೂ ಪಾಕಿಸ್ತಾನಕ್ಕೆ ತಕ್ಕ ತಿರುಗೇಟು ನೀಡಲು ದೃಢವಾದ ವಾಯು ರಕ್ಷಣಾ ವ್ಯವಸ್ಥೆಯ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

'ತಂತ್ರಜ್ಞಾನ ಹಾಗೂ ಸೇನಾ ಸಿಬ್ಬಂದಿಯ ಚತುರತೆಯ ನೆರವಿನಿಂದ ಸಾಕಷ್ಟು ದತ್ತಾಂಶಗಳನ್ನು ಸಂಗ್ರಹಿಸಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಮೇಲೆ ದಾಳಿ ನಡೆಸಲಾಯಿತು. ಭಯೋತ್ಪಾದನಾ ಮೂಲಸೌಕರ್ಯಗಳ ಮೇಲೆ ಭಾರತೀಯ ಸಶಸ್ತ್ರ ಪಡೆ ನಿಖರವಾಗಿ ದಾಳಿ ನಡೆಸಿತ್ತು. ದಾಳಿಗೆ ಒಟ್ಟು 21 ಉಗ್ರರ ನೆಲೆಗಳನ್ನು ಗುರುತಿಸಲಾಗಿತ್ತು. ಈ ಪೈಕಿ, ಒಂಬತ್ತು ನೆಲೆಗಳ ಮೇಲೆ ದಾಳಿ ನಡೆಸಿ ಧ್ವಂಸಗೊಳಿಸಲಾಯಿತು' ಎಂದು ಅವರು ಹೇಳಿದರು.

'ಮುಂದಿನ ಬಾರಿ ಉಭಯ ರಾಷ್ಟ್ರಗಳ ನಡುವೆ ಸಂಘರ್ಷ ಏರ್ಪಟ್ಟರೆ ಪಾಕಿಸ್ತಾನವು ನಮ್ಮ ಜನದಟ್ಟಣೆಯ ಪ್ರದೇಶಗಳ ಮೇಲೆ ದಾಳಿ ನಡೆಸಬಹುದು. ಈ ಸಲ ಅವರು ಅಂತಹ ಕೆಲಸ ಮಾಡಲಿಲ್ಲ. ಮುಂದಿನ ಸಲ ನಾವು ಅದಕ್ಕೆ ಸಿದ್ಧರಿರಬೇಕು' ಎಂದು ಅವರು ಹೇಳಿದರು.

ಯುದ್ಧ ಆರಂಭಿಸುವುದು ಸುಲಭ. ಮತ್ತೆ ಅದನ್ನು ನಿಲ್ಲಿಸುವುದು ಬಹಳ ಕಷ್ಟಕರ. ಕಾರ್ಯಾಚರಣೆಯ ಮೂಲಕ ಪಾಕಿಸ್ತಾನಕ್ಕೆ ಭಾರಿ ಆಘಾತ ಉಂಟು ಮಾಡಲಾಯಿತು. ತನ್ನ ಸ್ಥಿತಿ ಸಂಕಷ್ಟಮಯವಾಗಿರುವುದನ್ನು ಅರಿತ ಪಾಕಿಸ್ತಾನದ ಸೇನೆಯು ಕದನ ವಿರಾಮಕ್ಕೆ ಒಪ್ಪಿಕೊಂಡಿತು ಎಂದರು.

₹2 ಸಾವಿರ ಕೋಟಿ ಪ್ರೋತ್ಸಾಹಕ ಯೋಜನೆ

ನವದೆಹಲಿ(ರಾಯಿಟರ್ಸ್): ನಾಗರಿಕ ಉದ್ದೇಶಕ್ಕೆ ಹಾಗೂ ಭದ್ರತಾ ಪಡೆಗಳಿಗಾಗಿ ಡ್ರೋನ್ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ಕೇಂದ್ರ ಸರ್ಕಾರವು ₹2 ಸಾವಿರ ಕೋಟಿ (234 ಮಿಲಿಯನ್ ಡಾಲರ್) ಮೊತ್ತದ ಪ್ರೋತ್ಸಾಹಕ ಯೋಜನೆ ಆರಂಭಿಸಲಿದೆ.

ಪಾಕಿಸ್ತಾನದ ಜೊತೆ ಇತ್ತೀಚಿನ ಸಂಘರ್ಷದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಂತಹ ಮಹತ್ವದ ಕಾರ್ಯಕ್ರಮಕ್ಕೆ ಮುಂದಾಗಿದೆ. ಸಂಘರ್ಷದ ವೇಳೆ, ಪಾಕಿಸ್ತಾನವು ಚೀನಾ ಮತ್ತು ಟರ್ಕಿ ನೆರವಿನಿಂದ ನಿರ್ಮಿತ ಡ್ರೋನ್‌ಗಳನ್ನು ಬಳಸಿತ್ತು. ಇದು ಕೂಡ ಇಂತಹ ಕಾರ್ಯಕ್ರಮ ಆರಂಭಿಸುವುದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ.

ಅಲ್ಲದೇ, ಡ್ರೋನ್ ತಯಾರಿಕೆಗೆ ಬಳಸುವ ಬಿಡಿಭಾಗಗಳ ಆಮದು ತಗ್ಗಿಸುವ ಉದ್ದೇಶವನ್ನು ಕೂಡ ಈ ಕಾರ್ಯಕ್ರಮ ಒಳಗೊಂಡಿದೆ.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿಕೆ

'ತುರ್ತು ಪರಿಸ್ಥಿತಿ: ನ್ಯಾಯಮೂರ್ತಿಗಳಿಗೆ ವರ್ಗ ಶಿಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ನಿರ್ಧಾರ ಬೆಂಬಲಿಸದ ನ್ಯಾಯಮೂರ್ತಿಗಳಿಗೆ ವರ್ಗಾವಣೆ ಶಿಕ್ಷೆ ನೀಡಲಾಯಿತು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರ 'ದಿ ಕಾನ್‌ಸ್ಪೈಸ್ ನೆಟ್‌ವರ್ಕ್' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

'ತುರ್ತು ಪರಿಸ್ಥಿತಿ ಘೋಷಣೆಯಾಗುತ್ತಿದ್ದಂತೆ ಸ್ಥಳೀಯ ನಾಯಕರು, ವಿದ್ಯಾರ್ಥಿಗಳು ಹಾಗೂ ರಾಜಕಾರಣಿಗಳನ್ನು ಬಂಧಿಸಲಾಯಿತು. ಆಗ ಕಾರ್ಯ ನಿಮಿತ್ತ ನಗರಕ್ಕೆ ಬಂದಿದ್ದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ ಹಾಗೂ ಮಧು ದಂಡವತೆ ಅವರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಯಿತು. ಆಗಷ್ಟೇ ವಕೀಲಿಕೆ ಆರಂಭಿಸಿದ್ದ ನಾನು, ಮುಂಬೈ, ಚೆನ್ನೈ, ದೆಹಲಿಗೆ ತೆರಳಿ ಹಿರಿಯ ವಕೀಲರನ್ನು ಭೇಟಿ ಮಾಡಿ, ರಾಜಕಾರಣಿಗಳ ಪರ ವಾದ ಮಾಡುವಂತೆ ಮನವಿ ಮಾಡಿದೆ' ಎಂದು ನೆನಪಿಸಿಕೊಂಡರು.

'ತುರ್ತು ಪರಿಸ್ಥಿತಿ ವಿರೋಧಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಿಲ್ಲ. ಆದರೆ, ನ್ಯಾಯಾಲಯದಲ್ಲಿ ಅವರ ಪರ ಹಾಜರಾಗಿ, ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿ ಮಾಡಿದೆ. ನನ್ನ ಅಭಿಪ್ರಾಯದ ಪ್ರಕಾರ 18 ತಿಂಗಳು ದೇಶದ ಸಂವಿಧಾನ ಕಾರ್ಯನಿರ್ವಹಿಸಲೇ ಇಲ್ಲ. ಜನರು ಸಾಕಷ್ಟು ತೊಂದರೆಗೆ ಒಳಗಾದರು. ಸರ್ಕಾರದ ನಿರ್ಧಾರ ಪ್ರಶ್ನಿಸುವ ಹಾಗೂ ಜೋರಾಗಿ ಮಾತನಾಡಲು ಆಗದ ಪರಿಸ್ಥಿತಿ ಇತ್ತು' ಎಂದರು.

ಒತ್ತಡದ ಪರಿಣಾಮ ಕೊನೆಗೂ ತುರ್ತು ಪರಿಸ್ಥಿತಿಯನ್ನು ಹಿಂಪಡೆಯಲಾಯಿತು. ಇದೆಲ್ಲವೂ ಒಬ್ಬ ವ್ಯಕ್ತಿ ತನ್ನ ಸ್ಥಾನ ಉಳಿಸಿಕೊಳ್ಳಲು ಮಾಡಿದ್ದು ಎಂಬುದು ಎಲ್ಲರಿಗೂ ಗೊತ್ತು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಿಜವಾಗಲೂ ಏನು ನಡೆಯಿತು ಎಂಬುದರ ಬಗ್ಗೆ ಪುಸ್ತಕದಲ್ಲಿ ಲೇಖಕರು ವಿವರಿಸಿದ್ದಾರೆ. ಮುಂದಿನ ದಿನಗಳಲ್ಲಿ ದೇಶದಲ್ಲಿ ಇಂತಹ ಪರಿಸ್ಥಿತಿ ಬಾರದಿರಲಿ ಎಂದು ಹೇಳಿದರು.

ಪತ್ರಕರ್ತ ಸುಗತ ಶ್ರೀನಿವಾಸ್ ಮಾತನಾಡಿ, 'ಸಂತೋಷ್ ಹೆಗ್ಡೆ ಅವರು ಲೋಕಾಯುಕ್ತ ನ್ಯಾಯಮೂರ್ತಿ ಆಗಿದ್ದ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದರು. ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಂಡರು. ಬಳ್ಳಾರಿಯ ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಮಾಡಿದರು. ಅವರು ಅಧಿಕಾರದಿಂದ ಇಳಿದ ಬಳಿಕ ಸಂಸ್ಥೆ ಬಲ ಕಳೆದುಕೊಂಡಂತಾಗಿದೆ' ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ಸಾಹಿತಿ ಕೆ. ಮರುಳಸಿದ್ದಪ್ಪ, ಪತ್ರಕರ್ತ ಎ.ವಿ.ಎಸ್. ನಂಬೂದಿರಿ ಮಾತನಾಡಿದರು. ಬಳಿಕ ಲೇಖಕರ ಜತೆ ಸಂವಾದ ನಡೆಯಿತು.

ಮುಖ್ಯಾಂಶಗಳು

- ಸ್ಥಳೀಯ ನಾಯಕರು, ರಾಜಕಾರಣಿಗಳ ಬಂಧನ
- ದೇಶದ ಸಂವಿಧಾನ 18 ತಿಂಗಳು ಕಾರ್ಯ ನಿರ್ವಹಿಸಲಿಲ್ಲ: ಹೆಗ್ಡೆ



ನಗರದಲ್ಲಿ ಶುಕ್ರವಾರ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಆಯೋಜಿಸಿದ್ದ 'ದಿ ಕಾನ್‌ಸ್ಪೈಸ್ ನೆಟ್‌ವರ್ಕ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕೆ. ಮರುಳಸಿದ್ದಪ್ಪ, ಎ.ವಿ.ಎಸ್. ನಂಬೂದಿರಿ, ಎನ್. ಸಂತೋಷ್ ಹೆಗ್ಡೆ, ಚಿರಂಜೀವಿ ಸಿಂಘ್, ಸುಗತ ಶ್ರೀನಿವಾಸರಾಜು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ನೆಟ್ಟಾರು ಹತ್ಯೆ ಪ್ರಕರಣ ಮತ್ತೊಬ್ಬ ಆರೋಪಿ ಬಂಧನ

ನವದೆಹಲಿ (ಪಿಟಿಐ): ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ನಡೆದ ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಮತ್ತೊಬ್ಬ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶುಕ್ರವಾರ ಬಂಧಿಸಿದೆ.


ಪ್ರವೀಣ್ ನೆಟ್ಟಾರು

'ಆರೋಪಿ ಅಬ್ದುಲ್ ರೆಹಮಾನ್ ಕತಾರ್‌ನಿಂದ ಕಣ್ಣೂರು ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಬಂಧಿಸಲಾಯಿತು' ಎಂದು ಎನ್‌ಐಎ ತಿಳಿಸಿದೆ.

ರೆಹಮಾನ್ ಮತ್ತು ಇತರ ಇಬ್ಬರು ತಲೆಮರೆಸಿಕೊಂಡಿರುವ ಆರೋಪಿಗಳು ಸೇರಿದಂತೆ ಒಟ್ಟು ನಾಲ್ವರು ಆರೋಪಿಗಳ ವಿರುದ್ಧ ಎನ್‌ಐಎ ಈ ವರ್ಷದ ಏಪ್ರಿಲ್‌ನಲ್ಲಿ ಆರೋಪಪಟ್ಟಿ ಸಲ್ಲಿಸಿತ್ತು. ಈ ಪ್ರಕರಣದಲ್ಲಿ ಇದುವರೆಗೆ ಒಟ್ಟು 28 ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ. ರೆಹಮಾನ್ ಸುಳಿವು ನೀಡಿದವರಿಗೆ ಎನ್‌ಐಎ ₹4 ಲಕ್ಷ ಬಹುಮಾನ ಘೋಷಿಸಿತ್ತು.

ಪಿಎಫ್‌ಐ ಮುಖಂಡರ ನಿರ್ದೇಶನದ ಮೇರೆಗೆ ರೆಹಮಾನ್, ಈ ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಆರೋಪಿಗಳಿಗೆ ಆಶ್ರಯ ನೀಡಿರುವುದು ತನಿಖೆಯ ವೇಳೆ ತಿಳಿದುಬಂದಿದೆ. ಪ್ರವೀಣ್ ಮೇಲೆ ದಾಳಿ ನಡೆಸಿದವರ ಬಂಧನದ ಬೆನ್ನಲ್ಲೇ ಆತ ಕತಾರ್‌ಗೆ ಪಲಾಯನ ಮಾಡಿದ್ದಾನೆ ಎಂದು ಪ್ರಕಟಣೆ ತಿಳಿಸಿದೆ.

2022ರ ಜುಲೈನಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ನಡೆದಿತ್ತು.

ಬಿಜೆಪಿ ಮುಖಂಡನ ಪುತ್ರನಿಂದ ಯುವತಿಗೆ ವಂಚನೆ

ಪುತ್ತೂರು (ದಕ್ಷಿಣ ಕನ್ನಡ): 'ಸಹಪಾಠಿ ಯುವತಿಗೆ ವಂಚಿಸಿ, ಆಕೆ ಮಗುವಿನ ತಾಯಿಯಾಗಲು ಕಾರಣನಾದ ಪುತ್ತೂರಿನ ಬಿಜೆಪಿ ಮುಖಂಡ, ನಗರಸಭಾ ಸದಸ್ಯ ಜಗನ್ನಿವಾಸ ರಾವ್ ಅವರ ಪುತ್ರ ಕೃಷ್ಣ ರಾವ್‌ನನ್ನು ಬಂಧಿಸಬೇಕು' ಎಂಬ ಕೂಗು ಬಲವಾಗುತ್ತಿದೆ.

'ಪ್ರೌಢಶಾಲೆಯಲ್ಲಿದ್ದಾಗ ಸಹಪಾಠಿ-ಯಾಗಿದ್ದ ನಾನು ಮತ್ತು ಕೃಷ್ಣ ಪರಸ್ಪರ ಪ್ರೀತಿಸುತ್ತಿದ್ದೆವು. ಆತ ವಿವಾಹವಾ-ಗುವುದಾಗಿ ನಂಬಿಸಿ ಬಲವಂತದಿಂದ ದೈಹಿಕ ಸಂಪರ್ಕ ಮಾಡಿದ್ದ. ನಾನು ಗರ್ಭಿಣಿಯಾಗಿದ್ದೇನೆ. ಈಗ ಆರೋಪಿ ವಿವಾಹವಾಗಲು ನಿರಾಕರಿಸಿದ್ದಾನೆ' ಎಂದು ಸಂತ್ರಸ್ತ ಯುವತಿ ಜೂನ್ 24ರಂದು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಜೂನ್ 27ರಂದು ಪುತ್ತೂರಿನ ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

'ಆರೋಪಿಯನ್ನು ಇಷ್ಟು ದಿನ ಬಂಧಿಸದೇ ಇರುವ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾ-ಗುತ್ತಿದೆ. ಆರೋಪಿ ಪತ್ತೆಗೆ ತಂಡ ರಚಿಸಿ, ಶೀಘ್ರ ಬಂಧಿಸಬೇಕು' ಎಂದು ಶಾಸಕ ಅಶೋಕ ಕುಮಾರ್ ರೈ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಕೋರಿದ್ದಾರೆ.

ನಿಧನ ವಾರ್ತೆ

ನಾದಸ್ವರ ವಿದ್ವಾನ್ ಶ್ರೀರಾಮುಲು

ಕೋಲಾರ: ಪ್ರಸಿದ್ಧ ನಾದಸ್ವರ ಕಲಾವಿದ ವಿದ್ವಾನ್ ಆರ್.ಶ್ರೀರಾಮುಲು (88) ಶನಿವಾರ ನಗರದ ಕಠಾರಿಪಾಳ್ಯದ ತಮ್ಮ ನಿವಾಸದಲ್ಲಿ ಅನಾರೋಗ್ಯದಿಂದ ನಿಧನರಾದರು.



ಆರ್. ಶ್ರೀರಾಮುಲು

ಅವರಿಗೆ ಆರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಟೇಕಲ್ ರಸ್ತೆಯ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀರಾಮುಲು ಕಳೆದ ವರ್ಷ 'ಟಿ.ಚೌಡಯ್ಯ ಪ್ರಶಸ್ತಿ'ಗೆ (2023-24) ಭಾಜನರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ಪ್ರಶಸ್ತಿ ಕೂಡ ಒಲಿದಿತ್ತು.

ನೃಸಿಂಹಾಶ್ರಮ ಸ್ವಾಮೀಜಿ

ಬ್ರಹ್ಮಾವರ(ಉಡುಪಿ ಜಿಲ್ಲೆ): ತಾಲ್ಲೂಕಿನ ಹಂಗಾರಕಟ್ಟೆ ಬಾಳೇಕುದ್ರು ಮಠದ ಹಿರಿಯ ಸ್ವಾಮೀಜಿ ನೃಸಿಂಹಾಶ್ರಮ ಸ್ವಾಮೀಜಿ (53) ಶುಕ್ರವಾರ ನಿಧನರಾದರು.


ನೃಸಿಂಹಾಶ್ರಮ ಸ್ವಾಮೀಜಿ

ಶುಕ್ರವಾರ ಬೆಳಿಗ್ಗೆ ಡಯಾಲಿಸಿಸ್‌ಗೆ ಕರೆದುಕೊಂಡು ಹೋಗುವಾಗ ಬ್ರಹ್ಮಾವರದ ಬಳಿ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. ತಕ್ಷಣ ಉಡುಪಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ದಾರಿಮಧ್ಯದಲ್ಲಿ ಅವರು ಕೊನೆ ಉಸಿರೆ-ಳೆದಿದ್ದಾರೆ. ಮಠದ ಕಿರಿಯ ಶ್ರೀಗಳಾದ ವಾಸುದೇವ ಸದಾಶಿವಾಶ್ರಮ ಸ್ವಾಮೀಜಿ ಅವರು ಅಂತ್ಯಕ್ರಿಯೆಯ ವಿಧಿವಿಧಾನ ನೆರವೇರಿಸಿದರು.

'ರವಿಕುಮಾರ್‌ಗೆ ಅಪರಾಧಿಕ ಚಾಳಿ'

ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ ಜನಪ್ರತಿನಿಧಿಗಳ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ ಆರೋಪದಡಿ ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಅವರನ್ನು ಪೊಲೀಸರು ಬಂಧಿಸಬಾರದು' ಎಂದು ಹೈಕೋರ್ಟ್ ಆದೇಶಿಸಿದೆ.


ರವಿಕುಮಾರ್

'ನನ್ನ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಎನ್.ರವಿಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿ, 'ಅರ್ಜಿದಾರರಿಗೆ ಮಹಿಳೆಯರ ಬಗ್ಗೆ ಗೌರವವಿದೆ. ಇದೊಂದು ರಾಜಕೀಯ ಪ್ರೇರಿತ ದೂರು. ಅರ್ಜಿದಾರರಿಗೆ ಮುಜುಗರ ಉಂಟುಮಾಡಲು ಮತ್ತು ಅವರಿಗೆ ಕಿರುಕುಳ ನೀಡುವ ಉದ್ದೇಶ ಹೊಂದಲಾಗಿದೆ. ಟಿ.ವಿಯಲ್ಲಿ ಬಂದ ಬ್ರೇಕಿಂಗ್ ನ್ಯೂಸ್ ಆಧರಿಸಿ ಈ ದೂರು ದಾಖಲಿಸ-ಲಾಗಿದ್ದು ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಬಲವಾದ ಆಕ್ಷೇಪ ವ್ಯಕ್ತ-ಪಡಿಸಿದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ. ಬೆಳ್ಳಿಯಪ್ಪ, 'ರವಿಕುಮಾರ್‌ಗೆ ಅಪರಾಧಿಕ ಚಾಳಿ ಇದೆ. ಈ ಹಿಂದೆ ಕಲಬುರಗಿ ಜಿಲ್ಲಾಧಿಕಾರಿ ವಿರುದ್ಧವೂ ಇಂತಹ ಅವಹೇಳನಕಾರಿ ಪದ ಬಳಕೆ ಮಾಡಿದ್ದಾರೆ. ಯಾವುದೇ ಕಾರಣಕ್ಕೂ ನ್ಯಾಯಪೀಠ ಎಫ್‌ಐಆರ್‌ಗೆ ತಡೆ ನೀಡಬಾರದು' ಎಂದು ಪ್ರತಿಪಾದಿಸಿದರು.

ಒಂದು ಹಂತದಲ್ಲಿ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಲು ಮುಂದಾಗಿದ್ದ ನ್ಯಾಯಪೀಠ ಅಂತಿಮವಾಗಿ ಪ್ರಾಸಿಕ್ಯೂಷನ್ ಪ್ರತಿಪಾದನೆಗೆ ಮನ್ನಣೆ ನೀಡಿ, 'ಆರೋಪಿ ರವಿಕುಮಾರ್ ಅವರನ್ನು ಬಂಧಿಸಬಾರದು ಮತ್ತು ತನಿಖೆಗೆ ಸಹಕರಿಸಬೇಕು' ಎಂಬ ಷರತ್ತಿನೊಂದಿಗೆ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು. ರವಿಕುಮಾರ್ ಪರ ಹೈಕೋರ್ಟ್ ವಕೀಲ ಸುಯೋಗ ಹೇರಳೆ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: 'ರವಿಕುಮಾರ್ ಅವರು ಶಾಲಿನಿ ರಜನೀಶ್ ಕುರಿತು ಅಸಂಸದೀಯ ಪದ ಬಳಸಿ ಮಾತನಾಡಿರುವುದು ಇಡೀ ಮಹಿಳಾ ಕುಲಕ್ಕೆ ಅಗೌರವ ತೋರಿದಂತಾಗಿದೆ. ರವಿಕುಮಾರ್ ಅವರ ಮಾತುಗಳಲ್ಲಿ ಕಾಮ ವಾಸನೆ ಇದೆ' ಎಂದು ಆರೋಪಿಸಿ ಜೆ.ಪಿ.ನಗರದ 'ನಂದಾದೀಪಾ ಮಹಿಳಾ ಸಂಘ'ದ ಅಧ್ಯಕ್ಷೆ ನಾಗರತ್ನ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಗುರುವಾರ (ಜುಲೈ 3) ದೂರು ನೀಡಿದ್ದರು. ಇದರನ್ವಯ ಎಫ್‌ಐಆರ್ ದಾಖಲಿಸಿಕೊಂಡು ರವಿಕುಮಾರ್‌ಗೆ ನೋಟಿಸ್ ನೀಡಿದ್ದರು.

ಜಾಮೀನು: ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಎನ್.ರವಿಕುಮಾರ್ ವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮನ್ನಿಸಿದೆ.

ಶುಕ್ರವಾರ ಸಂಜೆ ಈ ಕುರಿತಾದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶಿಸಿದರು.

ಮುಖ್ಯಾಂಶಗಳು

- ಎಫ್‌ಐಆರ್ ರದ್ದು ಕೋರಿ ರಿಟ್ ಸಲ್ಲಿಸಿದ್ದ ರವಿಕುಮಾರ್
- ಎಫ್‌ಐಆರ್‌ಗೆ ತಡೆ ನೀಡದಂತೆ ಪ್ರಾಸಿಕ್ಯೂಷನ್ ಪ್ರತಿಪಾದನೆ



'ರವಿಕುಮಾರ್ ನಾಲಿಗೆ ಜಾಸ್ತಿಯಾಗಿದೆ'

ಬೆಂಗಳೂರು: 'ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಅವರ ನಾಲಿಗೆ ಜಾಸ್ತಿಯಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ರವಿಕುಮಾರ್ ನೀಡಿರುವ ಹೇಳಿಕೆ ವಿರುದ್ಧ ಪೊಲೀಸರು ಕಾನೂನು ಕ್ರಮ ಕೈಗೊಳ್ಳುವರು ಎಂದರು.

ವಿಧಾನಸೌಧದ ಆವರಣದಲ್ಲಿ ಈಚೆಗೆ ನಡೆದ ಪ್ರತಿಭಟನೆಯ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ಅವಹೇ-ಳನಕಾರಿಯಾಗಿ ಮಾತನಾಡಿದ್ದಾರೆ ಎಂಬ ಆರೋಪದಡಿ ರವಿಕುಮಾರ್ ಅವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿ ಕರ್ನಾಟಕ ಐಎಎಸ್ ಅಧಿಕಾರಿಗಳ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ. ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ದೂರು ನೀಡಿದ್ದಾರೆ.

ನಕ್ಕ ಡಿಸಿಪಿ: ಸ್ಪಷ್ಟನೆ ಕೇಳಿದ ಸಿ.ಎಸ್

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಕುರಿತು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದರು ಎಂದು ಹೇಳಲಾದ ಸಂದರ್ಭದಲ್ಲಿ ನಕ್ಕಿದ್ದ ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಕರಿಬಸವೇಗೌಡ ಅವರಿಂದ ಘಟನೆಯ ಸಂಬಂಧ ಸ್ಪಷ್ಟನೆ ಪಡೆಯಲಾಗಿದೆ.

ವಿಧಾನಸೌಧ ಆವರಣದ ಮಹಾತ್ಮ ಗಾಂಧಿ ಪ್ರತಿಮೆ ಎದುರು ಜುಲೈ 1ರಂದು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿತ್ತು. ಆ ಸಂದರ್ಭದಲ್ಲಿ ಎನ್.ರವಿಕುಮಾರ್ ಅವರು ಶಾಲಿನಿ ರಜನೀಶ್ ಅವರ ಕುರಿತು ಅಸಂಸದೀಯ ಪದ ಬಳಸಿದಾಗ, ಅಲ್ಲಿಯೇ ಕರ್ತವ್ಯದಲ್ಲಿ ಕರಿಬಸವೇಗೌಡ ಅವರು ಜೋರಾಗಿ ನಕ್ಕಿದ್ದರು. ಆ ವಿಡಿಯೊ ಸಾಮಾಜಿಕ ಮಾಧ್ಯಮಗ-ಳಲ್ಲಿ ಹರಿದಾಡಿತ್ತು. ಘಟನೆಯ ಸಂಬಂಧ ಶಾಲಿನಿ ರಜನೀಶ್ ಅವರು ಕರಿಬಸವೇಗೌಡ ಅವರ ಬಳಿ ಸ್ಪಷ್ಟನೆ ಕೇಳಿದ್ದರು.

'ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸುತ್ತಿರುವ ಮಾಹಿತಿ ತಿಳಿದು ತಡೆಯಲು ಸ್ಥಳಕ್ಕೆ ಹೋಗಿದ್ದೆ. ರವಿಕುಮಾರ್ ಅವರ ಹೇಳಿಕೆ ನನಗೆ ಗೊತ್ತಿರಲಿಲ್ಲ. ಅವರು ಹೇಳಿದ್ದು ನನಗೆ ಸರಿಯಾಗಿ ಕೇಳಿಸಿರಲಿಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ ಎಂದು ಗೊತ್ತಾಗಿದೆ. ಇದೇ ಪ್ರಕರಣದ ಸಂಬಂಧ ಜೆ.ಪಿ. ನಗರದ ನಿವಾಸಿ, ನಂದಾದೀಪಾ ಮಹಿಳಾ ಸಂಘದ ಅಧ್ಯಕ್ಷೆ ನಾಗರತ್ನಾ ಅವರು ನೀಡಿದ ದೂರು ಆಧರಿಸಿ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ರವಿಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದೆ.

'ಪೊಲೀಸರು ತನಿಖೆ ಪ್ರಾರಂಭಿಸಿದ್ದು, ಲಭ್ಯವಿರುವ ದಾಖಲೆಗಳು, ವಿಡಿಯೊಗಳನ್ನು ಪರಿಶೀಲಿಸುತ್ತಿದ್ದಾರೆ' ಎಂದು ಗೊತ್ತಾಗಿದೆ.

'ಪ್ರಾಥಮಿಕ ಹಂತದ ಪ್ರಕ್ರಿಯೆ ನಡೆಸಲಾಗಿದೆ. ಹೇಳಿಕೆಯ ಸಂದರ್ಭದಲ್ಲಿ ಯಾರ್‍ಯಾರು ಸ್ಥಳದಲ್ಲಿದ್ದರು ಎಂಬುದನ್ನು ಪತ್ತೆಹಚ್ಚಿ ಅವರನ್ನು ಠಾಣೆಗೆ ಕರೆಸಿ ಹೇಳಿಕೆ ದಾಖಲಿಸಿಕೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಕನ್ನಡ ಅವಹೇಳನ: ಕಮಲ್‌ಗೆ ನಿರ್ಬಂಧ

ಬೆಂಗಳೂರು: ಕನ್ನಡ ಭಾಷೆಯ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಬಾರದು ಎಂದು ನಟ ಕಮಲಹಾಸನ್ ಅವರಿಗೆ ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಅಸಲು ದಾವೆಯನ್ನು ಶುಕ್ರವಾರ ವಿಚಾರಣೆ ನಡೆಸಿದ 31ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ಈ ಕುರಿತಂತೆ ಏಕಪಕ್ಷೀಯ ಆದೇಶ ಹೊರಡಿಸಿದ್ದಾರೆ.

'ಕನ್ನಡ ಭಾಷೆಯ ಮೇಲೆ ಭಾಷಾಶಾಸ್ತ್ರಜ್ಞರ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಯಾವುದೇ ಹೇಳಿಕೆ ಅಥವಾ ಟೀಕೆಗಳನ್ನು ಪೋಸ್ಟ್ ಮಾಡುವುದು, ನೀಡುವುದು, ಬರೆಯುವುದು, ಪ್ರಕಟಿಸುವುದು ಅಥವಾ ವಿತರಿಸುವುದನ್ನು ನಿರ್ಬಂಧಿಸಲಾಗಿದೆ' ಎಂದು ಆದೇಶಿಸಿರುವ ನ್ಯಾಯಾಧೀಶರು ಪ್ರತಿವಾದಿ ಕಮಲ್‌ಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿದ್ದಾರೆ.



'ಪ್ರತಿವಾದಿ ಅಥವಾ ಅವರ ಏಜೆಂಟರು, ನಿಯೋಜಕರು, ಪ್ರತಿನಿಧಿಗಳು ಅಥವಾ ಅವರ ಅಡಿಯಲ್ಲಿ ಅಥವಾ ಅವರ ಮೂಲಕ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿಗಳಿಗೆ ಈ ತಾತ್ಕಾಲಿಕ ನಿರ್ಬಂಧಕಾಜ್ಞೆ ಅನ್ವಯ-ವಾಗುತ್ತದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ವಾದಿಯ ಪರ ಹೈಕೋರ್ಟ್ ವಕೀಲ ಚಿಂತನ್ ಚಿನ್ನಪ್ಪ ವಾದ ಮಂಡಿಸಿದರು. ವಿಚಾರಣೆಯನ್ನು ಆಗಸ್ಟ್ 30ಕ್ಕೆ ಮುಂದೂಡಲಾಗಿದೆ.

10 ಪಾಲಿಕೆಗಳ ನೌಕರರಿಂದ 8ರಂದು ಸಾಮೂಹಿಕ ರಜೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯದಲ್ಲಿನ 10 ಮಹಾನಗರ ಪಾಲಿಕೆಗಳ ನೌಕರರು ಜುಲೈ 8ರಂದು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್‌ನ ಸದಸ್ಯರ ಸಭೆಯಲ್ಲಿ ಶುಕ್ರವಾರ ಈ ಬಗ್ಗೆ ನಿರ್ಣಯ ಕೈಗೊಂಡಿದ್ದು, ಸಾಮೂಹಿಕ ರಜೆ ಹಾಕಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

'ಪಾಲಿಕೆಗಳ ಅಧಿಕಾರಿ, ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ನಗರಾಭಿವೃದ್ಧಿ ಸಚಿವರು ಹಾಗೂ ಕಾರ್ಯ-ದರ್ಶಿಯವರಿಗೆ ಹಲವು ಬಾರಿ ಮನವಿ ಪತ್ರಗಳನ್ನು ನೀಡಲಾಗಿದೆ. ಆದರೂ ಸ್ಪಂದಿಸಿಲ್ಲ. ಹೀಗಾಗಿ, ಪ್ರತಿಭಟನೆ ನಡೆಸಲಿದ್ದೇವೆ' ಎಂದು ಪರಿಷತ್‌ನ ರಾಜ್ಯ ಘಟಕದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಿ ನೌಕರರಿಗೆ ನೀಡಿರುವ 7ನೇ ವೇತನ ಆಯೋಗದ ಸೌಲಭ್ಯ ನೀಡಲು ಪಾಲಿಕೆಗಳ ಸಿಬ್ಬಂದಿಗೂ ಆರ್ಥಿಕ ಇಲಾಖೆಯಿಂದಲೇ ಅನುದಾನ ಬಿಡುಗಡೆ ಮಾಡಬೇಕು. ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ಕರಡು ಅಧಿಸೂಚನೆ ಹೊರಡಿಸಬೇಕು. ಕೆಜಿಐಡಿ ಮತ್ತು ಜಿಪಿಎಫ್ ಸೌಲಭ್ಯವನ್ನು ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ಜಾರಿಗೊಳಿಸಬೇಕು ಎಂದು ಮನವಿ ಮಾಡಲಾಗಿದೆ' ಎಂದರು.


'ಬಿಬಿಎಂಪಿಯಲ್ಲಿ ಖಾಲಿ ಇರುವ 600ಕ್ಕೂ ಹೆಚ್ಚು ವಿವಿಧ ವೃಂದದ ಅಧಿಕಾರಿ/ ನೌಕರರ ಹುದ್ದೆಗಳನ್ನು ಭರ್ತಿ ಮಾಡಿ, ನೌಕರರ ಮೇಲಿನ ಒತ್ತಡ ಕಡಿಮೆ ಮಾಡಬೇಕು. ಪಾಲಿಕೆ ಸಿಬ್ಬಂದಿಯ ಕೆಲಸ 'ನಾನ್ ಎಕ್ಸಿಕ್ಯೂಟಿವ್' ಆಗಿದ್ದು, 'ಲಾಗ್‌ಸೇಫ್' ಪದ್ಧತಿಯ ಹಾಜರಾತಿಯನ್ನು ಕೈಬಿಡಬೇಕು. 225 ವಾರ್ಡ್‌ಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದಲೂ ಬೇಡಿಕೆಗಳನ್ನು ಇರಿಸಲಾಗಿದೆ' ಎಂದು ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ತಿಳಿಸಿದರು.

ಚಿನ್ನ ಕಳ್ಳಸಾಗಣೆ: ₹34 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಬೆಂಗಳೂರು: ದುಬೈನಿಂದ ಬೆಂಗಳೂರಿಗೆ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದಲ್ಲಿ ನಟಿ ರನ್ಯಾ ರಾವ್ ಅವರಿಗೆ ಸೇರಿದ ₹34.12 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಬೆಂಗಳೂರಿನ ವಿಕ್ಟೋರಿಯಾ ಬಡಾವಣೆಯಲ್ಲಿರುವ ಮನೆ, ಅರ್ಕಾವತಿ ಬಡಾವಣೆಯಲ್ಲಿರುವ ನಿವೇಶನ, ತುಮಕೂರಿನಲ್ಲಿನ ಕೈಗಾರಿಕಾ ನಿವೇಶನ ಮತ್ತು ಆನೇ-ಕಲ್‌ನಲ್ಲಿರುವ ಕೃಷಿ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ.

ಇದೇ ಮಾರ್ಚ್ 3ರಂದು ದುಬೈ ವಿಮಾನದಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ರನ್ಯಾ ಅವರನ್ನು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ರನ್ಯಾ ಅವರಿಂದ 14.2 ಕೆ.ಜಿ. ಯಷ್ಟು ಚಿನ್ನ ವಶಕ್ಕೆ ಪಡೆಯಲಾಗಿತ್ತು.


ರನ್ಯಾ ರಾವ್


ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಪೊಲೀಸ್ ಎಸ್‌ಐಟಿ, ಡಿಆರ್‌ಐ, ಇ.ಡಿ ಮತ್ತು ಸಿಬಿಐ ಪ್ರತ್ಯೇಕ ತನಿಖೆ ನಡೆಸುತ್ತಿವೆ. ರನ್ಯಾ ಮತ್ತು ಅವರ ಗೆಳೆಯ ತರುಣ್ ರಾಜು ಅವರು ದುಬೈ ಹಾಗೂ ಬೆಂಗಳೂರು ಮಧ್ಯೆ ಹಲವು ಬಾರಿ ಓಡಾಡಿದ್ದು, 49 ಕೆ.ಜಿ.ಗೂ ಹೆಚ್ಚು ಚಿನ್ನ ಕಳ್ಳಸಾಗಣೆ ಮಾಡಿದ್ದಾರೆ ಎಂದು ಇ.ಡಿ ಹೇಳಿತ್ತು.

ಚಿನ್ನ ಕಳ್ಳಸಾಗಣೆ ಸಂಬಂಧ ರನ್ಯಾ ವಿರುದ್ಧ ಕಾಫಿಪೋಸಾ ಅಡಿಯಲ್ಲೂ ಪ್ರಕರಣ ದಾಖಲಿಸಿದ್ದು, ಅವರೀಗ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಅಧಿಕಾರಿಗಳ ಸಂಘಕ್ಕೆ ಬಿವೈವಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯವರು ಐಎಎಸ್ ಮತ್ತು ಇತರ ಅಧಿಕಾರಿಗಳ ವಿರುದ್ಧ ಅವಮಾನ ಆಗುವಂತೆ ನಡೆದು ಕೊಂಡಾಗ ಐಎಎಸ್ ಅಧಿಕಾರಿಗಳ ಸಂಘ ಎಲ್ಲಿ ಹೋಗಿತ್ತು? ಆಗ ಏಕೆ ಮುಖ್ಯಮಂತ್ರಿ ವಿರುದ್ಧ ದೂರು ನೀಡಲಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.


ಬಿ.ವೈ. ವಿಜಯೇಂದ್ರ

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಅವರ ಹೇಳಿಕೆ ಕುರಿತು ಮಾಧ್ಯಮಗಳ ವರದಿ ಗಮನಿಸಿದ್ದೇನೆ. ರವಿಕುಮಾರ್ ಅವರು ಸ್ಪಷ್ಟನೆಯನ್ನೂ ನೀಡಿದ್ದಾರೆ. ಐಎಎಸ್ ಅಧಿಕಾರಿಗಳ ಸಂಘದವರು ಮುಖ್ಯಮಂತ್ರಿ ಭೇಟಿ ಮಾಡಿ ದೂರು ನೀಡಿದ್ದಾಗಿ ಮಾಹಿತಿ ಬಂದಿದೆ' ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯಲ್ಲಿ ಬಹಿರಂಗ ಸಭೆಯಲ್ಲಿ ಒಬ್ಬ ಹಿರಿಯ ಪೊಲೀಸ್ ಅಧಿಕಾರಿಗೆ ಕಪಾಳಕ್ಕೆ ಹೊಡೆಯಲು ಹೋಗಿದ್ದರ-ಲ್ಲವೇ? ಆಗ ಈ ಐಎಎಸ್ ಅಧಿಕಾರಿಗಳ ಸಂಘ ಎಲ್ಲಿ ಹೋಗಿತ್ತು? ಮತ್ತೊಂದು ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಯನ್ನು 'ಏಯ್ ಎದ್ದೇಳು' ಎಂದು ಎಬ್ಬಿಸಿ ಕಳುಹಿಸಿ ಅಪಮಾನ ಮಾಡಿದ್ದರು. ಈ ವಿಷಯ ಕೂಡ ಚರ್ಚೆ ಆಗಲಿ, ಅದರ ಬಗ್ಗೆಯೂ ಅಧಿಕಾರಿಗಳ ಸಂಘ ಮಾತನಾಡಲಿ. ಜನರು ಕೂಡ ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದು ತಿಳಿಸಿದರು.

ಸಂಬಳ ಕೊಡಲು ಹಣವಿಲ್ಲ: 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೊದಲ ಬಾರಿಗೆ ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಆಗುತ್ತಿಲ್ಲ. ನೀರಾವರಿ, ಪೊಲೀಸ್ ಇಲಾಖೆಗೆ ನಿಗದಿತ ದಿನದಂದು ವೇತನ ನೀಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇಂಥ ದರಿದ್ರ ಸರ್ಕಾರ ಬದುಕಿದೆಯೇ ಎಂದು ಜನರು ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನ ಯಾರೇ ಮುಖ್ಯಮಂತ್ರಿ ಇದ್ದರೂ ಪರಿಸ್ಥಿತಿ ಬದಲಾಗದು' ಎಂದರು.

> ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಹೈಕೋರ್ಟ್, ಸಿಬಿಐಗೆ ಒಪ್ಪಿಸಿದ ವಿಚಾರವನ್ನು ಮರೆ ಮಾಚಲು ಕಾಂಗ್ರೆಸ್ ಸರ್ಕಾರ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ವಿಚಾರವನ್ನು ಮುನ್ನೆಲೆಗೆ ತಂದಿದೆ
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> ಯಾರೇ ಇರಲಿ ಮಾತಿನಲ್ಲಿ ತೂಕ ಇರಬೇಕು. ಪ್ರಮುಖ ನಾಯಕರು ಮತ್ತು ಪ್ರಮುಖ ಹುದ್ದೆಯಲ್ಲಿ ಇರುವವರ ಮಾತುಗಳು ಗೌರವ ತರುವಂತಿರಬೇಕು. ಇಲ್ಲವಾದರೆ ತೊಂದರೆ ಆಗುತ್ತದೆ
> **ಡಿ.ವಿ.ಸದಾನಂದಗೌಡ.** ಬಿಜೆಪಿ ಮುಖಂಡ

ಮಡಿಕೇರಿ, ಚಿಕ್ಕಮಗಳೂರು ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಕೊಡಗು: ಜಿಲ್ಲೆಯ ಹಲವೆಡೆ ಶುಕ್ರವಾರವೂ ಧಾರಾಕಾರ ಮಳೆ ಮುಂದುವರಿಯಿತು. ಮಡಿಕೇರಿ, ನಾಪೋಕ್ಲು ಮತ್ತು ವಿರಾಜಪೇಟೆಯಲ್ಲಿ ದಿನವಿಡೀ ಮಳೆ ಸುರಿಯಿತು.

ಮಂಗಳೂರು: ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದೆ. ಬಂಟ್ವಾಳ ತಾಲ್ಲೂಕಿನಲ್ಲಿ ಎಡೆಬಿಡದೆ ಮಳೆ ಸುರಿದ ಕಾರಣ ಅಂಗನವಾಡಿ, ಶಾಲಾ– ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಕುಕ್ಕೆ ಸುಬ್ರಹ್ಮಣ್ಯ ಸುತ್ತಮುತ್ತ ಮಧ್ಯಾಹ್ನದ ನಂತರ ಮಳೆ ಬಿರುಸುಗೊಂಡಿತು. ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಹೆಬ್ರಿ, ಕಾರ್ಕಳ, ಬ್ರಹ್ಮಾವರ, ಕಾಪು ವ್ಯಾಪ್ತಿಯಲ್ಲೂ ಬಿರುಸಿನ ಮಳೆ ಸುರಿದಿದೆ.

ಚಿಕ್ಕಮಗಳೂರು: ಜಿಲ್ಲೆಯ ಚಿಕ್ಕಮಗಳೂರು, ಕಳಸ, ಎನ್.ಆರ್. ಪುರ, ಮೂಡಿಗೆರೆ, ಶೃಂಗೇರಿ, ಕೊಪ್ಪ ತಾಲ್ಲೂಕಿನ ಹಲವೆಡೆ ಮಳೆ ಸುರಿಯಿತು. ಕಳಸ ತಾಲ್ಲೂಕಿನ ಚನ್ನಹಡ್ಲು ಬಳಿ ರಸ್ತೆ ಮಣ್ಣು ಕುಸಿದು ಸಂಚಾರಕ್ಕೆ ಅಡಚಣೆಯಾಗಿತ್ತು. ಹಿರೇಬೈಲು– ಮಲ್ಲೇಶನ ಗುಡ್ಡ, ಬಾಳೆಹೊಳೆ ಸೇರಿ ಹಲವು ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿತ್ತು.

ಗಂಗಾವತಿ (ಕೊಪ್ಪಳ ಜಿಲ್ಲೆ): ತುಂಗಭದ್ರಾ ಜಲಾಶಯದಿಂದ ಶುಕ್ರವಾರ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿಸಿರುವುದರಿಂದ ತಾಲ್ಲೂಕಿನ ವಿರೂಪಾಪುರಗಡ್ಡೆ, ನವವೃಂದಾವನಗಡ್ಡೆ ರಸ್ತೆ ಸಂಪರ್ಕ ಕಡಿತವಾಗಿದೆ. ಆನೆಗೊಂದಿ ಭಾಗದ ಕೆಲ ದೇವಾಲಯ, ಮಂಟಪಗಳಿಗೆ ನೀರು ನುಗ್ಗಿದೆ. ಜಲಾಶಯದ ಒಳಹರಿವು ಹೆಚ್ಚಿದ್ದು, ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತಿದೆ. ಆನೆಗೊಂದಿಯಲ್ಲಿರುವ ಕೃಷ್ಣದೇವರಾಯನ ಸಮಾಧಿಯ 64 ಸಾಲಿನ ಕಲ್ಲಿನ ಮಂಟಪ ಭಾಗಶಃ ಮುಳುಗಡೆಯಾಗಿದೆ.


ಕಾರವಾರ ತಾಲ್ಲೂಕಿನ ಬಾಳೆಮನೆ ಸಮೀಪ ಕದ್ರಾ–ಕೊಡಸಳ್ಳಿ ಮಾರ್ಗದ ಪಕ್ಕದ ಅರಣ್ಯ ಪ್ರದೇಶದಲ್ಲಿ ಗುರುವಾರ ಸಂಭವಿಸಿದ ಭೂಕುಸಿತದ ಡ್ರೋನ್ ಚಿತ್ರವನ್ನು ಉತ್ತರ ಕನ್ನಡ ಜಿಲ್ಲಾಡಳಿತ ಶುಕ್ರವಾರ ಬಿಡುಗಡೆ ಮಾಡಿದೆ

ಅಪಘಾತ: ದಂಪತಿ ಸಾವು; ಮೂವರು ಮಕ್ಕಳಿಗೆ ಗಾಯ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಪಟ್ಟಣದ ಹೊರವಲಯದ ಕೆಪಿಟಿಸಿಎಲ್ ಕಚೇರಿ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಗುರುವಾರ ಮಧ್ಯರಾತ್ರಿ ಕಾರು ಮತ್ತು ಲಾರಿ ನಡುವೆ ಅಪಘಾತ ಸಂಭವಿಸಿ, ಕಾರಿನಲ್ಲಿದ್ದ ದಂಪತಿ ಮೃತಪಟ್ಟಿದ್ದಾರೆ. ಮೂವರು ಮಕ್ಕಳಿಗೆ ಗಾಯಗಳಾಗಿವೆ.

'ಬಾಗಲಕೋಟೆ ಜಿಲ್ಲೆ ಚೆಟ್ನಿಹಾಳು ಗ್ರಾಮದ ಕ್ಯಾಬ್ ಚಾಲಕ ಮುತ್ತಪ್ಪ ಪೂಜಾರ್ (35), ಅವರ ಪತ್ನಿ ರೇಣುಕಾ (30) ಮೃತರು. ಅವರ ಮಕ್ಕಳಾದ ಅನುಶ್ರೀ (9), ರೂಪಶ್ರೀ (6) ಮತ್ತು ಖುಷಿ (4)ಗೆ ಗಂಭೀರ ಗಾಯಗಳಾಗಿವೆ' ಎಂದು ಮರಿಯಮ್ಮನ-ಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಹೃದ್ರೋಗ; ಮಧುಸೂದನ ಸಾಯಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದ ಮಧುಸೂದನ ಸಾಯಿ ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಯು ಹೃದ್ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದು, ರೋಗಿಗಳು ಸೌಲಭ್ಯ ಸದ್ಬಳಕೆ ಮಾಡಿಕೊಳ್ಳುವಂತೆ ಸಂಸ್ಥೆ ಮನವಿ ಮಾಡಿದೆ.

ಸಂಸ್ಥೆಯ ಹೃದ್ರೋಗ ವಿಭಾಗದಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದ ಹೃದ್ರೋಗ ತಜ್ಞರು ಕೆಲಸ ಮಾಡುತ್ತಿದ್ದಾರೆ. ಅತ್ಯಾಧುನಿಕ ಹೃದಯ ಶಸ್ತ್ರಚಿಕಿತ್ಸೆಯನ್ನು ಎಲ್ಲ ವರ್ಗದ ಜನರಿಗೆ ಯಾವುದೇ ಶುಲ್ಕ-ವಿಲ್ಲದೆಯೇ ಸಂಪೂರ್ಣ ಉಚಿತವಾಗಿ ನಡೆಸಲಾಗುತ್ತಿದೆ. ಈಗಾಗಲೇ ರಾಜ್ಯ, ಹೊರ ರಾಜ್ಯದ ಮಕ್ಕಳು, ನಾಗರಿಕರು ಸೌಲಭ್ಯ ಬಳಕೆ ಮಾಡಿಕೊಂಡಿದ್ದಾರೆ.


ಮಧುಸೂದನ ಸಾಯಿ ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆ

ಆಂಜಿಯೋಗ್ರಫಿ, ಆಂಜಿಯೋಪ್ಲಾಸ್ಟಿ, ಬೈಪಾಸ್ ಶಸ್ತ್ರಚಿಕಿತ್ಸೆ, ಪೇಸ್ ಮೇಕರ್ ಅಳವಡಿಸುವಿಕೆ, ಕವಾಟ ದುರಸ್ತಿ ಮತ್ತು ಬದಲಿ ಅವಯವಗಳ ಶಸ್ತ್ರಚಿ-ಕಿತ್ಸೆ, ಜನ್ಮಜಾತ ಹೃದ್ರೋಗ ಶಸ್ತ್ರಚಿಕಿತ್ಸೆ ಸೇರಿದಂತೆ ಹೃದಯ ಸಂಬಂಧಿ ಶಸ್ತ್ರಚಿಕಿತ್ಸೆ ಉಚಿತವಾಗಿ ನೀಡಲಾಗುತ್ತಿದೆ.

ಸಂಪರ್ಕ: 08156-275811 (ಬೆಳಿಗ್ಗೆ 10ರಿಂದ ಸಂಜೆ 4). ವೆಬ್‌ಸೈಟ್: www.smsimsr.org

ಹಿಮಾಚಲ ಪ್ರದೇಶ: ಎರಡು ವಾರದ ಮಳೆಗೆ 45 ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಜೂನ್ 20ರಿಂದ ಮುಂಗಾರಿನ ಅಬ್ಬರ ಬಿರುಸುಗೊಂಡಿದೆ. ಮೇಘಸ್ಫೋಟ, ಪ್ರವಾಹ, ಭೂಕುಸಿತದಿಂದ ಇದುವರೆಗೂ 45 ಜನರು ಮೃತಪಟ್ಟಿದ್ದು, 37 ಜನರು ನಾಪತ್ತೆ ಆಗಿದ್ದಾರೆ. ಅಂದಾಜು ₹5 ಸಾವಿರ ಕೋಟಿ ನಷ್ಟವಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮೇಘಸ್ಫೋಟಕ್ಕೆ 14 ಮಂದಿ ಮೃತಪಟ್ಟಿದ್ದರೆ, ಪ್ರವಾಹದಲ್ಲಿ ಎಂಟು ಮಂದಿ, ಭೂಕುಸಿತದಿಂದ ಒಬ್ಬರು ಹಾಗೂ ನೀರಿನಲ್ಲಿ ಮುಳುಗಿ ಏಳು ಮಂದಿ ಅಸುನೀಗಿದ್ದಾರೆ.

402 ಜನರನ್ನು ರಕ್ಷಿಸಿದ್ದು, ಇವರು ಐದು ಕಾಳಜಿ ಕೇಂದ್ರಗಳಲ್ಲಿ ಆಸರೆ ಪಡೆದಿದ್ದಾರೆ. ಭಾರದ್, ದೇಜಿ, ಪಯಾಲಾ, ರುಕ್ಚುಯಿ ಗ್ರಾಮಗಳಲ್ಲಿ ಸಿಲುಕಿದ್ದ 65 ಜನರನ್ನು ಎನ್‌ಡಿಆರ್‌ಎಫ್ ಶುಕ್ರವಾರ ರಕ್ಷಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.28	28,814	36,197
ಹಾರಂಗಿ	2,859	2,852.13	6,000	8,166
ಕಬಿನಿ	2,284.00	2,279.46	13,811	5,000
ಹೇಮಾವತಿ	2,922	2,918.37	15,712	10,850
ಲಿಂಗನಮಕ್ಕಿ	1,819	1,789.45	41,036	3,760
ಸೂಪಾ (ಮೀ)	564	540.02	27,453.3	1,016.13
ಮಾಣಿ	595	584.44	5,100	0
ತುಂಗಭದ್ರಾ	1,633	1,624.80	35,052	54,938
ಮಲಪ್ರಭಾ	2,079.5	2,064.10	10,529	194
ಘಟಪ್ರಭಾ	2175	2,153.50	23,287	1,453
ಭದ್ರಾ *	186	167.1	21,982	3,394
ಆಲಮಟ್ಟಿ (ಮೀ)	519.6	517.25	94,767	1,00,670
ನಾರಾಯಣಪುರ (ಮೀ)	492.25	490.70	1,00,000	95,265

* ನೆಲಮಟ್ಟದಿಂದ

ಸಂಕಷ್ಟದಲ್ಲೇ ಶಿಕ್ಷಣ ಪೂರ್ಣಗೊಳಿಸಿದ ಅನುಷಾ ಭಟ್‌ಗೆ ಎರಡು ಚಿನ್ನದ ಪದಕ

'ಚಿನ್ನದ ನಾಣ್ಯ ಅಡವಿಟ್ಟು ಓದಿದ್ದೆ'

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: 'ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿ ತಮ್ಮ ಕೋರ್ಸ್‌ನಲ್ಲಿ ಪ್ರತಿವರ್ಷ (ಎರಡೂ ಸೆಮಿಸ್ಟರ್ ಸೇರಿ) 10ಕ್ಕೆ 9.5ಕ್ಕಿಂತ ಹೆಚ್ಚು ಸಿಜಿಪಿಎ ಅಂಕ ಗಳಿಸಿದರೆ, 10 ಗ್ರಾಂ ಚಿನ್ನದ ನಾಣ್ಯ ಬಹುಮಾನವಾಗಿ ಸಿಗುತ್ತಿತ್ತು. ನನಗೆ ನಾಲ್ಕು ವರ್ಷವೂ ಸೇರಿ, 40 ಗ್ರಾಂ ಚಿನ್ನ ಸಿಕ್ಕಿತು. ಹಣದ ಕೊರತೆಯಾದಾಗ, ಚಿನ್ನದ ನಾಣ್ಯ ಅಡವಿಟ್ಟು ಓದಿದ್ದೆ. ಅದಕ್ಕೀಗ ಫಲ ಸಿಕ್ಕಿದೆ. ಎಲ್ಲರ ಎದುರು ಚಿನ್ನದ ಪದಕ ಪಡೆಯಲು ಖುಷಿಯಾಗುತ್ತಿದೆ'


ಅನುಷಾ ಭಟ್


ನಮ್ರತಾ ಪ್ರಭು

ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) ಶುಕ್ರವಾರ 25ನೇ ವಾರ್ಷಿಕ ಘಟಿಕೋ-ತ್ಸವದಲ್ಲಿ (ಭಾಗ-1) ಎರಡು ಚಿನ್ನದ ಪದಕ ಗಳಿಸಿದ ದಾವಣಗೆರೆಯ ಜಿ.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಬಯೋಟೆಕ್ನಾಲಜಿ ವಿಭಾಗದ ಅನುಷಾ ಭಟ್ 'ಪ್ರಜಾವಾಣಿ' ಜತೆ ಹೀಗೆ ಸಂತಸ ಹಂಚಿಕೊಂಡರು.

'ಕಾಲೇಜು, ಹಾಸ್ಟೆಲ್‌ನ ಶುಲ್ಕ ಸೇರಿ ವರ್ಷಕ್ಕೆ ₹1 ಲಕ್ಷಕ್ಕೂ ಹೆಚ್ಚು ಹಣ ಬೇಕಾಗುತ್ತಿತ್ತು. ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹೊನಗದ್ದೆಯಲ್ಲಿ ಕೃಷಿಕರಾದ ತಂದೆ ಕಷ್ಟಪಟ್ಟು ಓದಿಸಿದರು. ಬಿ.ಇ ಅಂತಿಮ ವರ್ಷದಲ್ಲಿ 10ಕ್ಕೆ 9.73 ಸಿಜಿಪಿಎ ಅಂಕ ಸಿಕ್ಕಿದೆ' ಎಂದರು. ಅವರಿಗೆ ಎಂ.ಟೆಕ್ ಓದಿ, ವಿಜ್ಞಾನಿಯಾಗುವ ಗುರಿಯಿದೆ.

ನಮ್ರತಾಗೆ 13 ಪದಕ: ಸಿವಿಲ್ ವಿಭಾಗದಲ್ಲಿ ಬೆಂಗಳೂರಿನ ಆಕ್ಸ್‌ಫರ್ಡ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ನಮ್ರತಾ ಸಿ. ಪ್ರಭು 13 ಚಿನ್ನದ ಪದಕ ಗಳಿಸಿದರು. ಎಂಬಿಎ ಓದಿ, ಆಡಳಿತ ವಿಭಾಗದಲ್ಲಿ ಕೆಲಸ ಮಾಡುವ ಗುರಿಯಿದೆ' ಎಂದು ನಮ್ರತಾ ತಿಳಿಸಿದರು.

'ಇನ್‌ಫಾರ್ಮೇಷನ್ ಸೈನ್ಸ್' ವಿಭಾಗದಲ್ಲಿ 4 ಚಿನ್ನದ ಪದಕ ಗಳಿಸಿದ ಮೂಡುಬಿದಿರೆಯ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಎಂಜಿನಿಯರಿಂಗ್‌ನ ಮೇದಿನಿ ಎಸ್. ರಾವ್, 'ನನ್ನ ತಂದೆ ಜ್ಯೂಸ್ ಸೆಂಟರ್ ನಡೆಸುತ್ತ ಓದಿಸಿದ್ದಾರೆ. ಮುಂದೆ ಎಂ.ಟೆಕ್ ಮಾಡಲು ಬಯಸಿದ್ದೇನೆ' ಎಂದರು.

> ನಮ್ಮ ವಿದ್ಯಾರ್ಥಿಗಳು ವಿಟಿಯುವಿನ ಮೊದಲ 10ರಲ್ಲಿ ರ‍್ಯಾಂಕ್ ಪಡೆದರೆ, 4 ವರ್ಷ ಅವರಿಂದ ಭರಿಸಿಕೊಂಡ ಶೈಕ್ಷಣಿಕ ಶುಲ್ಕ ಮರಳಿಸುತ್ತೇವೆ
> **ತೇಜಸ್ವಿ ಕಟ್ಟೀಮನಿ,** ನಿರ್ದೇಶಕ, ತರಬೇತಿ ಮತ್ತು ಉದ್ಯೋಗ ವಿಭಾಗ, ಜಿ.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದಾವಣಗೆರೆ

ಟೇಲರಿಂಗ್ ಮಾಡಿ ಓದಿಸಿದ ತಾಯಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವಮಾಚೋಹಳ್ಳಿ ಗ್ರಾಮದಲ್ಲಿ ಟೇಲರಿಂಗ್ ಕೆಲಸ ಮಾಡುವ ಭಾಗ್ಯಶ್ರೀ ಅವರ ಪುತ್ರ, ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮೆಕ್ಯಾನಿಕಲ್ ವಿಭಾಗದ ಕಾರ್ತಿಕ್ ಎಲ್. ಏಳು ಚಿನ್ನದ ಪದಕ ಪಡೆದರು.

'ನಾನು ಅನಕ್ಷರಸ್ಥೆ. ಊರಲ್ಲೇ ಟೇಲರಿಂಗ್ ಕೆಲಸ ಮಾಡಿ ಬರುವ ಅತ್ಯಲ್ಪ ಹಣದಲ್ಲೇ, ಒಂದಿಷ್ಟು ಕೂಡಿಟ್ಟು ಓದಿಸಿದ್ದೆ. ಮಗನ ಸಾಧನೆ ಎಲ್ಲ ನೋವುಗಳನ್ನು ಮರೆಯಿಸಿದೆ' ಎಂದು ಭಾಗ್ಯಶ್ರೀ ಹೇಳಿದರು. 'ಈ ಸಾಧನೆ ನನ್ನದಲ್ಲ, ಎಲ್ಲವೂ ತಾಯಿಯದ್ದು' ಎಂದು ಕಾರ್ತಿಕ್ ತಿಳಿಸಿದರು.


ತಾಯಿ ಭಾಗ್ಯಶ್ರೀ ಅವರೊಂದಿಗೆ ಏಳು ಚಿನ್ನದ ಪದಕ ಗಳಿಸಿದ ಕಾರ್ತಿಕ್ ಎಲ್.

ಮೂವರಿಗೆ ಗೌರವ ಡಾಕ್ಟರೇಟ್

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಡಾ.ವಿ.ನಾರಾಯಣನ್, ಎಕ್ಸೆಲ್ ಇಂಡಿಯಾ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಮತ್ತು ಬೆಂಗಳೂರಿನ ಎಟ್ರಿಯ ವಿಶ್ವ-ವಿದ್ಯಾಲಯದ ಕುಲಾಧಿಪತಿ ಸಿ.ಎಸ್.ಸುಂದರ್ ರಾಜು ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, 'ಡಾಕ್ಟರ್ ಆಫ್ ಸೈನ್ಸ್' ಪ್ರದಾನ ಮಾಡಿದರು. ಕೇಂದ್ರ ಸರ್ಕಾರದ ಪ್ರಧಾನ ವೈದ್ಯಕೀಯ ಸಲಹೆಗಾರ ಪ್ರೊ.ಅಜಯ್‌ಕುಮಾರ್ ಸೂದ್ ಘಟಿಕೋತ್ಸವ ಭಾಷಣ ಮಾಡಿದರು. ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ಉಪಸ್ಥಿತರಿದ್ದರು.

‘ಬಹಿರಂಗ ಹೇಳಿಕೆ ನೀಡಿದರೆ ಕ್ರಮ’

ಪಕ್ಷ ಸಂಘಟನೆಗಾಗಿ ಕ್ರಮ: ದಾವಣಗೆರೆ, ಬಾಗಲಕೋಟೆ ಜಿಲ್ಲಾ ನಾಯಕರ ಸಭೆ

ಪ್ರಜಾವಾಣಿ ವಾರ್ತೆ



ಪ್ರಲ್ಹಾದ ಜೋಶಿ

ಬೆಂಗಳೂರು: ‘ಪಕ್ಷದ ಯಾವುದೇ ನಾಯಕರು ಬಹಿರಂಗ ಹೇಳಿಕೆಗಳನ್ನು ನೀಡಬಾರದು. ಒಂದು ವೇಳೆ ಯಾರಾದರೂ ಅಂತಹ ಹೇಳಿಕೆಗಳನ್ನು ನೀಡಿದರೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಎಚ್ಚರಿಕೆ ನೀಡಿದ್ದಾರೆ.

ಪಕ್ಷದ ಕಚೇರಿಯಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳ ನಾಯಕರ ಸಭೆಯಲ್ಲಿ ಮಾತನಾಡಿದ ಅವರು, ‘ಪಕ್ಷಕ್ಕೆ ಹಾನಿಯಾಗುವಂತೆ ಬಹಿರಂಗ ಹೇಳಿಕೆ ನೀಡುವುದನ್ನು ಸಹಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಪಕ್ಷದ ಎಲ್ಲ ನಾಯಕರೂ ಪಕ್ಷದ ಸಂಘಟನೆಗಾಗಿ ಕೆಲಸ ಮಾಡಬೇಕು. ಇಲ್ಲವಾದರೆ ಮುಂದೆ ಅವರಿಗೆ ಯಾವುದೇ ಅವಕಾಶಗಳು ಸಿಗುವುದಿಲ್ಲ. ಆದ್ದರಿಂದ ಎಲ್ಲ ನಾಯಕರು ಮೈಚಳಿ ಬಿಟ್ಟು ಪಕ್ಷಕ್ಕಾಗಿ ಶ್ರಮಿಸಬೇಕು. ಬೇಕಾಬಿಟ್ಟಿ ಹೇಳಿಕೆಗಳನ್ನು ನೀಡುವುದರಿಂದ ಪಕ್ಷ ಇಕ್ಕಟ್ಟಿಗೆ ಸಿಲುಕುತ್ತದೆ. ಪ್ರತಿಯೊಬ್ಬರೂ ಅವರ ಜವಾಬ್ದಾರಿ ಅರಿತು ಮಾತನಾಡಬೇಕು’ ಎಂದೂ ಜೋಶಿ ಹೇಳಿದರು.

‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಪದೇ ಪದೇ ಮಾಧ್ಯಮಗಳ ಮುಂದೆ ಹೇಳಿಕೆಗಳನ್ನು ನೀಡಿದ ಕಾರಣ ಅವರ ವಿರುದ್ಧ ಪಕ್ಷ ಕಠಿಣ ಕ್ರಮ ತೆಗೆದುಕೊಂಡಿತು. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ವರಿಷ್ಠರು ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಗಮನಿಸುತ್ತಾರೆ. ಸೂಕ್ತ ಸಂದರ್ಭದಲ್ಲಿ ಕ್ರಮ ಕೈಗೊಳ್ಳುತ್ತಾರೆ. ಪಕ್ಷದ ಶಿಸ್ತು ಉಲ್ಲಂಘಿಸಿ ಮಾತನಾಡಿ ರಾಜಕೀಯ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ’ ಎಂದು ಸಲಹೆ ನೀಡಿದರು.

‘ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ನಿರಂತರವಾಗಿ ಗೆಲ್ಲುತ್ತಾ ಬಂದಿತ್ತು. ಈ ಬಾರಿ ಅತ್ಯಂತ ಕಡಿಮೆ ಅಂತರದಲ್ಲಿ ಸೋತಿದೆ. ಇದಕ್ಕೆ ಕಾರಣಗಳೇನು’ ಎಂಬ ಮಾಹಿತಿಯನ್ನು ಜೋಶಿ ಅವರು ಸ್ಥಳೀಯ ನಾಯಕರಿಂದ ಪಡೆದರು. ಈ ಸಭೆಯಲ್ಲಿ ಮಾಜಿ ಸಚಿವರಾದ ಎಸ್.ಎ.ರವೀಂದ್ರನಾಥ್, ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು. ‘ಎಲ್ಲರೂ ಪರಸ್ಪರ ಸಹಕಾರದಿಂದ ಚುನಾವಣೆಯಲ್ಲಿ ಕೆಲಸ ಮಾಡಿದ್ದರೆ ಬಿಜೆಪಿಗೆ ಗೆಲುವು ಸಿಗುತ್ತಿತ್ತು’ ಎಂಬುದಾಗಿ ಜೋಶಿ ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಮಾಜಿ ಸಚಿವ ವೀರಣ್ಣ ಚರಂತಿಮಠ ಮತ್ತು ವಿಧಾನಪರಿಷತ್ ಸದಸ್ಯ ಪಿ.ಎಚ್.ಪೂಜಾರ ಅವರ ನಡುವಿನ ಅಸಮಾಧಾನವನ್ನು ಬಗೆಹರಿಸಲು ಪ್ರತ್ಯೇಕ ಸಭೆ ನಡೆಸಿ ಮಾಹಿತಿ ಪಡೆದರು. ಈ ಸಭೆಯಲ್ಲಿ ಇಬ್ಬರೂ ನಾಯಕರ ಬೆಂಬಲಿಗರೂ ಭಾಗವಹಿಸಿದ್ದರು.

ಪಕ್ಷದ ವರಿಷ್ಠರು ಮತ್ತು ಆರ್‌ಎಸ್‌ಎಸ್ ಸೂಚನೆ ಮೇರೆಗೆ ಪ್ರಲ್ಹಾದ ಜೋಶಿ ಅವರು ಆಂತರಿಕ ಸಮಸ್ಯೆ ಇರುವ ಜಿಲ್ಲಾ ಘಟಕಗಳ ನಾಯಕರನ್ನು ಕರೆಸಿ ನಡೆಸುತ್ತಿರುವ ಮೂರನೇ ಸಭೆ ಇದಾಗಿದೆ. ಮುಂದಿನ ದಿನಗಳಲ್ಲಿ ಇತರ ಜಿಲ್ಲೆಗಳ ಸಭೆಯನ್ನು ನಡೆಸಲಾಗುವುದು ಎಂದು ಬಿಜೆಪಿ ಮೂಲಗಳು ಹೇಳಿವೆ. ಸಭೆಯಲ್ಲಿ ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಗೋವಿಂದ ಕಾರಜೋಳ ಮತ್ತು ಡಿ.ವಿ. ಸದಾನಂದಗೌಡ ಭಾಗವಹಿಸಿದ್ದರು.

ಆರ್‌ಎಸ್‌ಎಸ್ ನಿಷೇಧ ಹಗಲುಗನಸು: ಜೋಶಿ

ದೇಶದಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಆಡಳಿತ ಚುಕ್ಕಾಣಿ ಹಿಡಿಯುವುದು ಮತ್ತು ಆರ್‌ಎಸ್‌ಎಸ್ ಅನ್ನು ನಿಷೇಧಿಸುವುದು ಕೇವಲ ಹಗಲುಗನಸು ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ದೇಶದಲ್ಲಿ ಆರ್‌ಎಸ್‌ಎಸ್ ನಿಷೇಧಿಸಲು ಪ್ರಿಯಾಂಕ್ ಖರ್ಗೆ ಅವರ ನಾಯಕ ರಾಹುಲ್‌ಗಾಂಧಿ, ಅವರ ಅಜ್ಜಿ ಮತ್ತು ಮುತ್ತಾತ ಪ್ರಯತ್ನ ಮಾಡಿ ವಿಫಲರಾದರು. ಆರ್‌ಎಸ್‌ಎಸ್ ಇನ್ನೂ ವಿಸ್ತಾರವಾಗಿ ಬೆಳೆಯುತ್ತದೆ’ ಎಂದರು.

1975ರಲ್ಲಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಕಾಂಗ್ರೆಸ್ ಸರ್ಕಾರ ಮುಂದಾಯಿತು. ಆದರೆ, ಅವರ ಸರ್ಕಾರವೇ ಬಿದ್ದು ಹೋಯಿತು. ನೆಹರೂ ಅವರು ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ ನಂತರ ಆಯೋಗ ರಚನೆ ಮಾಡಿದರು. ಆರ್‌ಎಸ್‌ಎಸ್ ಮೇಲಿನ ಆರೋಪಕ್ಕೆ ಯಾವುದೇ ಸಾಕ್ಷ್ಯಗಳಿರಲಿಲ್ಲ ಎಂದು ಆಯೋಗ ಹೇಳಿತು. ಪ್ರಿಯಾಂಕ್ ಖರ್ಗೆ ಅವರಿಗೆ ಇತಿಹಾಸ ಗೊತ್ತಿಲ್ಲ ಎಂದರು.

‘ಪಕ್ಷದ ಎರಡನೇ ಹಂತದ ಶುದ್ಧೀಕರಣ’



ಸದಾನಂದಗೌಡ

ಪಕ್ಷದಲ್ಲಿ ಮೊದಲ ಹಂತದ ಶುದ್ಧೀಕರಣ ಯಶಸ್ವಿಯಾಗಿದೆ. ಅಶಿಸ್ತಿನಿಂದ ವರ್ತಿಸಿದ ಹಲವರನ್ನು ಹೊರಹಾಕಲಾಗಿದೆ. ಇನ್ನಷ್ಟು ಜನರನ್ನು ಹೊರ ಹಾಕಿದರೆ ಪಕ್ಷ ಉಳಿಯುವುದು ಕಷ್ಟ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.

ಎಲ್ಲರನ್ನೂ ಸರಿ ಮಾಡುವ ಉದ್ದೇಶದಿಂದ ಎರಡನೇ ಹಂತದ ಶುದ್ಧೀಕರಣ ಪ್ರಕ್ರಿಯೆ ಆರಂಭವಾಗಿದೆ. ಎಲ್ಲೆಲ್ಲಿ ಗುಂಪುಗಾರಿಕೆ ಮತ್ತು ಸಮಸ್ಯೆಗಳು ಇವೆಯೋ ಅಂತಹ ಜಿಲ್ಲೆಗಳ ನಾಯಕರನ್ನು ಕರೆಸಿ ಮಾತನಾಡಿ, ಸಂಧಾನ ಮಾಡಲಾಗುತ್ತಿದೆ. ಪಕ್ಷದ ಹಿತದೃಷ್ಟಿಯಿಂದ ಏನು ಮಾಡಬೇಕು ಎಂಬ ಚಿಂತನೆ ಆರಂಭವಾಗಿದೆ. ಎಲ್ಲ ಸರಿಹೋಗಲು ಸ್ವಲ್ಪ ದಿನ ಬೇಕು ಎಂದು ಸುದ್ದಿಗಾರರಿಗೆ ತಿಳಿಸಿದರು. ‘ಪಕ್ಷ ಸರಿಪಡಿಸುವ ದಿಸೆಯಲ್ಲಿ ಸಕಾರಾತ್ಮಕ ಸಂದೇಶ ಸಿಕ್ಕಿದೆ. ಪಕ್ಷಕ್ಕೆ ಬದ್ಧ ರಾಗಿರುವವರು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ’ ಎಂದರು.

ಆರ್‌ಟಿಐ: 12 ಅಧಿಕಾರಿಗಳಿಗೆ ತಲಾ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ (ಆರ್‌ಟಿಐ) ಸಾರ್ವಜನಿಕರಿಗೆ ಮಾಹಿತಿ ನೀಡುವಲ್ಲಿ ವಿಫಲವಾದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 12 ಅಧಿಕಾರಿಗಳಿಗೆ, ರಾಜ್ಯ ಮಾಹಿತಿ ಆಯೋಗವು ತಲಾ ₹25,000 ದಂಡ ವಿಧಿಸಿದೆ.

ರಾಜ್ಯದ ವಿವಿಧ ಜಿಲ್ಲಾಧಿಕಾರಿ ಕಚೇರಿ, ತಹಶೀಲ್ದಾರ್ ಕಚೇರಿ, ಗ್ರಾಮ ಪಂಚಾಯಿತಿ ಕಾರ್ಯಾಲಯ ಮತ್ತು ಬಿಬಿಎಂಪಿಯ ಕಚೇರಿಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿರುದ್ಧ 2024ರಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು. ಅವುಗಳ ಪೈಕಿ 13 ಪ್ರಕರಣಗಳಲ್ಲಿ ಇದೇ ಮೇ ಮತ್ತು ಜೂನ್‌ನಲ್ಲಿ ತೀರ್ಪು ನೀಡಿದ್ದು, 12 ಅಧಿಕಾರಿಗಳಿಗೆ ದಂಡ ವಿಧಿಸಲಾಗಿದೆ ಎಂದು ಆಯೋಗವು ತಿಳಿಸಿದೆ.

ಮಾಹಿತಿ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪಾತ್ರ ಮಹತ್ವದ್ದು. ಆದರೆ ಅಧಿಕಾರಿಗಳು ಸಾರ್ವಜನಿಕರಿಗೆ ಮಾಹಿತಿ ನಿರಾಕರಿಸುವ ಮೂಲಕ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ. ಸರ್ಕಾರದ ವಿವಿಧ ಯೋಜನೆಗಳು ಸಾರ್ವಜನಿಕರಿಗೆ ತಲುಪದಿರಲು ಇದು ಕಾರಣವಾಗಿದೆ ಎಂಬುದು ದೂರುಗಳ ಪರಿಶೀಲನೆ ವೇಳೆ ಗೊತ್ತಾಗಿದೆ. ಈ ಕಾರಣದಿಂದ ಅವರಿಗೆ ದಂಡ ವಿಧಿಸಲಾಗಿದೆ ಎಂದು ಹೇಳಿದೆ.

ಯಾರಿಗೆಲ್ಲಾ ದಂಡ...

1. **ಸೋಮಶೇಖರ್**, ತಹಶೀಲ್ದಾರ್, ಹೊಸಕೋಟೆ, ಬೆಂಗಳೂರು ಗ್ರಾಮಾಂತರ
2. **ಶಶಿಧರ್ ಮಾಡ್ಯಾಳ್**, ತಹಶೀಲ್ದಾರ್, ಆನೇಕಲ್, ಬೆಂಗಳೂರು (ಎರಡು ಪ್ರಕರಣಗಳಲ್ಲಿ ಒಟ್ಟು ₹50,000 ದಂಡ)
3. **ಪೂಜಾರಪ್ಪ**, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ರಾಮಮಂದಿರ ವಾರ್ಡ್ ಬಿಬಿಎಂಪಿ
4. **ಮಂಜುನಾಥ ಪಾಟೀಲ್**, ಕಿರಿಯ ಎಂಜಿನಿಯರ್, ಹಾರೋಹಳ್ಳಿ ಪಟ್ಟಣ ಪಂಚಾಯಿತಿ, ರಾಮನಗರ
5. **ರಾಜೀವ್**, ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು
6. **ಪ್ರದೀಪ್**, ಕಾರ್ಯನಿರ್ವಾಹಕ ಎಂಜಿನಿಯರ್, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ
7. **ಬಾಲಕೃಷ್ಣ**, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ
8. **ಜಗದೀಶ್ ಕೆ. ನಾಯಕ್**, ಹೆಚ್ಚುವರಿ ಜಿಲ್ಲಾಧಿಕಾರಿ, ಬೆಂಗಳೂರು
9. **ಮಲ್ಲಿಕಾರ್ಜುನ ಜಿ.**, ಸಹಾಯಕ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ, ಚನ್ನಗಿರಿ, ದಾವಣಗೆರೆ
10. **ಶ್ರೀನಿವಾಸ**, ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು
11. **ಎಚ್.ಟಿ.ಮಂಜಪ್ಪ**, ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು
12. **ವಿಶ್ವನಾಥ ಕೆ.**, ಕಾರ್ಯದರ್ಶಿ, ನಂಗಲಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು, ಕೋಲಾರ

ದೂರು ದಾಖಲಾದಾಗ ಅಧಿಕಾರಿಗಳು ಇದ್ದ ಹುದ್ದೆಗಳ ವಿವರ

ಅಕ್ರಮ ಗಣಿಗಾರಿಕೆ: ಎಸ್‌ಐಟಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಗಣಿಗಾರಿಕೆಯ ತನಿಖೆಗೆ ರಚಿಸಲಾಗಿದ್ದ ಲೋಕಾಯುಕ್ತ ಪೊಲೀಸ್‌ನ ಎಸ್‌ಐಟಿ ಅವಧಿಯನ್ನು 2026ರ ಜುಲೈ 2ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಗಣಿಗಾರಿಕೆಯಲ್ಲಿನ ಅಕ್ರಮಗಳ ತನಿಖೆಗೆ 2013ರಲ್ಲಿ ಎಸ್‌ಐಟಿ ರಚಿಸಲಾಗಿತ್ತು. ತನಿಖೆಗೆ ಹೆಚ್ಚಿನ ಕಾಲಾವಕಾಶ ಅಗತ್ಯವಿದ್ದುದರಿಂದ ಎಸ್‌ಐಟಿಯ ಅವಧಿಯನ್ನು ಹಲವು ಬಾರಿ ವಿಸ್ತರಣೆ ಮಾಡಲಾಗಿತ್ತು.

ಇದೇ ಜುಲೈ 1ಕ್ಕೆ ಎಸ್‌ಐಟಿಯ ಅವಧಿ ಪೂರ್ಣಗೊಳ್ಳಬೇಕಿತ್ತು. ಆದರೆ ತನಿಖೆಗೆ ಮತ್ತಷ್ಟು ಕಾಲಾವಕಾಶ ಬೇಕಿದ್ದು, ಇನ್ನೂ ಒಂದು ವರ್ಷ ವಿಸ್ತರಿಸಬೇಕು ಎಂದು ಲೋಕಾಯುಕ್ತ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು.

ಕಡೂರು: ಅರಣ್ಯ ರಕ್ಷಕ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ಕೆಲ ದಿನಗಳ ಹಿಂದೆ ನಾಪತ್ತೆಯಾಗಿದ್ದ ಅರಣ್ಯ ರಕ್ಷಕ, ಮಡಿಕೇರಿಯ ಶರತ್ (33) ಶವವಾಗಿ ಪತ್ತೆಯಾಗಿದ್ದಾರೆ.

ಶರತ್ ನಾಪತ್ತೆಯಾಗಿದ್ದಾಗ ನೀಲಗಿರಿ ತೋಪಿನಲ್ಲಿ ಅವರು ಬಳಸುತ್ತಿದ್ದ ಬೈಕ್ ಮತ್ತು ಜರ್ಕಿನ್ ಪತ್ತೆಯಾಗಿತ್ತು. ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅನ್ಯ ಉದ್ದೇಶಕ್ಕೆ ನಿಧಿ ಬಳಕೆ: 9ಕ್ಕೆ ಕಾರ್ಮಿಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಕಲ್ಯಾಣ ಮಂಡಳಿ ನಿಧಿಯನ್ನು ವಸತಿಶಾಲೆ ನಿರ್ಮಾಣದಂತಹ ಅನ್ಯ ಉದ್ದೇಶಕ್ಕೆ ಬಳಸದಂತೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 9ರಂದು ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿ ರಾಜ್ಯದಾದ್ಯಂತ ಮುಷ್ಕರ ನಡೆಸಲಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್, ‘ಮಂಡಳಿಯ ನಿಧಿ ಬಳಸಿ, ₹1,125 ಕೋಟಿ ವೆಚ್ಚದಲ್ಲಿ ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆಗಳು ಮತ್ತು ₹968 ಕೋಟಿ ವೆಚ್ಚದಲ್ಲಿ ಎರಡು ಕೌಶಲ ಕೇಂದ್ರಗಳ ಸ್ಥಾಪನೆಗೆ ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಈ ಕಾರ್ಯಕ್ಕೆ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಇರಿಸಲಾದ ಮಂಡಳಿಯ ನಿಧಿ ಬಳಸುವುದು ಸರಿಯಲ್ಲ. ಕೌಶಲ ತರಬೇತಿ ಕೇಂದ್ರದ ಸ್ಥಾಪನೆಯನ್ನು ಕೈಬಿಡಬೇಕು’ ಎಂದು ಆಗ್ರಹಿಸಿದರು.

‘ಹೈಕೋರ್ಟ್ ತೀರ್ಪಿನಂತೆ ಶೈಕ್ಷಣಿಕ ಧನಸಹಾಯ, ಹೆರಿಗೆ ಭತ್ಯೆ, ಶವ ಸಂಸ್ಕಾರ ಸಹಾಯ ಧನ ನೀಡಬೇಕು. ಬಾಕಿ ಇರುವ ಪಿಂಚಣಿ ಅರ್ಜಿಗಳಿಗೆ ಹಣ ಪಾವತಿಸಬೇಕು. ಮನೆ ನಿರ್ಮಾಣಕ್ಕೆ ₹5 ಲಕ್ಷ ಸಹಾಯ ಧನ ನೀಡಬೇಕು. ಮಂಡಳಿಯನ್ನು ಭ್ರಷ್ಟಚಾರದಿಂದ ಮುಕ್ತಗೊಳಿಸಬೇಕು. ವೈದ್ಯಕೀಯ ನೆರವು ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ನಡೆಸಲಾಗುತ್ತದೆ’ ಎಂದರು.

ಸಂತೋಷವಾಗಿ ಇರುವುದು ಎಂದರೆ ಎಲ್ಲವೂ ಪರಿಪೂರ್ಣವಾಗಿದೆ ಎಂದರ್ಥವಲ್ಲ. ಕೊರತೆಗಳನ್ನು ಮೀರಿ ನಿಲ್ಲಲು ನೀವು ನಿರ್ಧರಿಸಿದ್ದೀರಿ ಎಂದರ್ಥ.
–ಗೆರಾರ್ಡ್ ವೇ



ಅಮ್ಮ ಕಲಿಸಿದ ಆ ಪಾಠ

ಮುಟ್ಟು ಎಂಬುದು ಮನುಷ್ಯನ ಸೃಷ್ಟಿಗೆ ಪೂರಕವಾದ ಅತ್ಯಂತ ನೈಸರ್ಗಿಕ ವಿದ್ಯಮಾನ. ಆದರೆ ಅದ್ಯಾಕೋ ಈಗಲೂ ಅದರ ಬಗ್ಗೆ ಮುಕ್ತವಾಗಿ ಮಾತನಾಡಲು ಹೆಚ್ಚಿನವರಿಗೆ ಮುಜುಗರ, ಹಿಂಜರಿಕೆ. ತಾಯಿಯ ಆ ದಿನಗಳ ಸಂಕಷ್ಟಕ್ಕೆ ಮಿಡಿದ ಮಗನೊಬ್ಬನ ಅಂತರಂಗದ ಅಭಿವ್ಯಕ್ತಿ ಇಲ್ಲಿದೆ. ಹೆಣ್ಣಿನಿಂದ ಒಡಮೂಡಿದ ಪ್ರತಿಯೊಬ್ಬರಲ್ಲೂ ಇರಲೇಬೇಕಾದ ಆ ಭಾವಸೂಕ್ಷ್ಮ ಗುಣದ ಪ್ರತಿನಿಧಿಯಂತೆ ಭಾಸವಾಗುತ್ತಾರೆ ಉಪನ್ಯಾಸಕ ಸಂಪತ್ ಬೆಟ್ಟಗೆರೆ

ನಾನು ಪದವಿ ಕಾಲೇಜಿನ ಕನ್ನಡ ಉಪನ್ಯಾಸಕನಾಗಿ ಕಾರ್ಯನಿರ್ವಹಿಸತೊಡಗಿದ ಆರಂಭದ ದಿನಗಳವು. ನನ್ನ ವಿದ್ಯಾರ್ಥಿಗಳಾಗಿದ್ದವರು, ನನಗಿಂತ ನಾಲ್ಕೈದು ವರ್ಷಗಳಷ್ಟೇ ಕಿರಿಯರಾಗಿದ್ದ ಹುಡುಗ–ಹುಡುಗಿಯರು. ಹೀಗಾಗಿ, ನಾನು ಅವರಿಗೆ ಮೇಷ್ಟ್ರು ಅನ್ನುವುದಕ್ಕಿಂತಲೂ ಮಿಗಿಲಾಗಿ ಸ್ನೇಹಿತನಂತಿದ್ದ ಗುರುವಾಗಿದ್ದೆ, ಅವರು ವಿದ್ಯಾರ್ಥಿಮಿತ್ರರಾಗಿದ್ದರು. ಈಗ ನನ್ನ ಈ ವೃತ್ತಿಗೆ ದಶಕವೇ ಕಳೆಯುತ್ತಾ ಬಂದಿದ್ದರೂ ನಾನು ಅದೇ ಭಾವದಲ್ಲೇ ಈಗಿನ ವಿದ್ಯಾರ್ಥಿಗಳೊಂದಿಗೂ ಒಡನಾಡುತ್ತೇನೆ. ಹೀಗಾಗಿ, ಕೆಲವು ವಿದ್ಯಾರ್ಥಿಗಳು 'ನೀವು ಕನ್ನಡ ಸರ್ ಅಷ್ಟೇ ಅಲ್ಲ ಕನ್ನಡ ಮೆಂಟರ್ ಸಹ' ಅನ್ನುತ್ತಿರುತ್ತಾರೆ. ನಾನಾಗ 'ಇದು ಸ್ವಲ್ಪ ಉತ್ಪ್ರೇಕ್ಷೆ ಅಂತ ಅನ್ನಿಸುವುದಿಲ್ಲವೇ?' ಎನ್ನುವುದೂ ಇದೆ. ಆದರೆ ಕೆಲವೊಮ್ಮೆ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಈ ರೀತಿ ವಿಶೇಷವಾಗಿ ಪ್ರಶಂಸೆ ಮಾಡಿದಾಗ 'ಏಕಿರಬಹುದು? ಅವರ ಇಷ್ಟೊಂದು ಪ್ರೀತಿಗೆ ನಾನು ಪಾತ್ರನಾಗಿದ್ದು ಹೇಗೆ' ಎಂದು ನನ್ನನ್ನು ನಾನು ಕೇಳಿಕೊಳ್ಳುತ್ತೇನೆ. ಅವಳ ಭಾವನೆಗೆ ಪ್ರತಿಸ್ಪಂದಿಸುವ ಗುಣ, ಅಂದರೆ ಹೆಣ್ಣಿನ ಅಂತರಾಳದ ಭಾವನೆಗೆ ಆ ಕ್ಷಣ ತೋರಿದ ಸ್ಪಂದನೆ ಆಗಿದ್ದಿರಬಹುದು ಅನ್ನಿಸುತ್ತದೆ.

ಕೆಲವು ಗಂಡಸರು ಜಗಳಕ್ಕೆ ನಿಂತಾಗ, 'ನಾನೇನು ಹೆಣ್ ಹೆಂಗ್ಸ್ ಹಂಗೆ ಕೈಗೆ ಬಳೆ ತೊಟ್ಕೊಂಡಿದ್ದೀನಾ' ಅಂತ ಕೇಳಿದಾಗಲೆಲ್ಲಾ ನನ್ನಂತಹ ಪುರುಷನಿಗೆ 'ಈ ಗಂಡಿನ ಅಸ್ತಿತ್ವಕ್ಕೆ ಕಾರಣಳಾದವಳೇ ಹೆಣ್ಣು, ಆಕೆ ಹೊತ್ತು, ಹೆತ್ತು, ಉಣಿಸಿ, ಬೆಳೆಸಿದವಳು ಎಂದಮೇಲೆ 'ನಾನು ಗಂಡ್ಸು' ಅಂತ ಎದೆ ತಟ್ಟಿ ವಿಶೇಷವಾಗಿ ತನ್ನನ್ನು ಗುರುತಿಸಿಕೊಂಡು ಅನ್ಯರನ್ನು ಗದರುವುದರಲ್ಲಿ ಏನಿದೆ ವಿಶೇಷ' ಎನಿಸುತ್ತದೆ. ಅಮ್ಮ, ಹೆಂಡತಿ, ಸಹೋದರಿ, ಮಗಳು, ಸೊಸೆ, ಅತ್ತೆ, ಗೆಳತಿ... ಹೀಗೆ ನಾನಾ ಬಗೆಯ ಅಸ್ಮಿತೆಗಳಿರುವ ಜೀವವನ್ನು ಪುರುಷನಾದ ನಾನು ಪ್ರಕೃತಿಯಾಗಿ ನೋಡಿದರೆ, ಅದೊಂದು ಕವಿತ್ವದ ತಾಯಿಭಾವ. ಹೆಣ್ತನ ಅನ್ನುವುದು ಹೆಣ್ಣಿನದು ಮಾತ್ರವಲ್ಲ, ಅದು ಗಂಡಿನೊಳಗಿನ ಭಾವಸ್ಫೂರ್ತಿ, ಮಂದಹಾಸದ ಪ್ರೇಮಮೂರ್ತಿ.

ಅದೇ ಪೌರುಷ ಭಾವದಲ್ಲಿ ಪ್ರದರ್ಶನಾತ್ಮಕವಾಗಿ 'ನಾನೇ ಗಂಡ್ಸು', 'ನಾನು ಗಂಡು' ಎಂದು ದರ್ಪ ತೋರಿದರೆ ಅದನ್ನು ಅವನ ಮೇಲರಿಮೆ ಎಂದಷ್ಟೇ ಅಂದುಕೊಳ್ಳಲಾಗದು. ಅದು ಕೀಳರಿಮೆಯಿಂದ ಒಡಮೂಡಿದ, ತನ್ನ ಐಡೆಂಟಿಟಿಯನ್ನು ತಾನೇ ಹೇಳಿಕೊಳ್ಳುವ ಹತಾಶೆಯ ಪರಮಾವಧಿ ಎನ್ನಲಡ್ಡಿಯಿಲ್ಲ.

ಅದೇ ರೀತಿ 'ನಾನು ಹೆಂಗ್ಸು', 'ನಾನು ನಾನೇ' ಎಂದು ಒಬ್ಬ ಸ್ತ್ರೀ ಹೇಳಿಕೊಳ್ಳುವುದು ಸಹ ಸ್ತ್ರೀವಾದ ಅನ್ನಿಸುವುದಿಲ್ಲ. ಬದಲಿಗೆ, ಸ್ವೇಚ್ಛೆ ಆಗುವ ಅಪಾಯ ಅಲ್ಲಿರುತ್ತದೆ. ಹಾಗಂತ ಹೆಂಗಸರು 'ನಾನು!' ಅಂತ ಅಷ್ಟೊಂದು ಗರ್ವದಿಂದ ಹೇಳಿಕೊಂಡ ಉದಾಹರಣೆಗಳು ಕಡಿಮೆ. ಬದಲಿಗೆ 'ನಾನೂ ನಿನ್ನ ಹಾಗೇ ಬದುಕಬಲ್ಲೆ!' ಎಂದುಕೊಳ್ಳುವ ಆತ್ಮಾಭಿಮಾನವನ್ನು ಗಮನಿಸುತ್ತೇವೆ. ಅದೇ ಪುರುಷನು 'ನಾನೂ ನಿನ್ನ ಹಾಗೇ ಮನುಷ್ಯ ಕಣೇ ಮಾನುಷಿ!' ಎಂದು ಪ್ರೀತಿಯಿಂದ ಕರೆ ಕೊಟ್ಟರೆ ಅದೊಂದು ಆತ್ಮಾನುಸಂಧಾನದ ಮಾತಾಗುತ್ತದೆ, ತುಂಬಾ ಚೆಂದದ ಅಭಿವ್ಯಕ್ತಿಯಾಗುತ್ತದೆ. ಇಲ್ಲಿ ಲಿಂಗ ಅನ್ನುವುದಷ್ಟೇ ಬದಲಾಗಿರುತ್ತದೆ. ಅದು ಹಾಗೇ ಇದ್ದರೆ ಚೆನ್ನ! ಅದು ಪ್ರಕೃತಿಯ ನಿಯಮ ಸಹ. 'ಮೊಲೆ ಮೂಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು, ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ...' ಎಂಬುದರಲ್ಲಿ ವಚನಕಾರರ ಮನದಿಂಗಿತವೂ ಅದೇ ಆಗಿತ್ತು ಎಂಬುದನ್ನು ಅರ್ಥೈಸಿಕೊಳ್ಳುವುದು ಸಾಮಾಜಿಕವಾಗಿ ತುಂಬಾ ಆರೋಗ್ಯಕರವಾದ ಭಾವ.

ಅಂದಹಾಗೆ, ಹೆಣ್ಣನ್ನು ಗಂಡು, ಗಂಡನ್ನು ಹೆಣ್ಣು ಪರಸ್ಪರ ಹೇಗೆ ಅರ್ಥಮಾಡಿಕೊಳ್ಳಬೇಕೋ ಹಾಗೇ ಹೆಣ್ಣಿನ ಭಾವನೆಯನ್ನು ಹೆಣ್ಣು, ಗಂಡಿನ ಅಂತಃಕರಣವನ್ನು ಗಂಡು ಕೂಡ ಅಂತರಂಗದಿ ಕಂಡುಕೊಂಡಾಗ 'ಸಂವೇದನೆ' ಎಂಬ ಸ್ಪಂದನೆಗೆ ನಿಜವಾದ ಅರ್ಥ ಬರುತ್ತದೆ. ಇಲ್ಲದಿದ್ದರೆ ಎರಡೂ ಕಡೆಗಳಲ್ಲಿ ಬರೀ 'ವೇದನೆ'ಯೇ ಹೆಚ್ಚಾಗುತ್ತದೆ. 'ವಿಘಟನೆ' ಸಂಭವಿಸಿ ಮಾನವೀಯತೆಯ ಅರಿವಿನ ದಾರಿಯೇ ಕೊಚ್ಚಿ ಹೋಗುತ್ತದೆ.

ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದ ದಿನಗಳಲ್ಲಿ ಒಂದು ಸಲ ಅಮ್ಮ 'ಲೇಡಿ ಡಾಕ್ಟರ್ ಹತ್ರ ತೋರಿಸಬೇಕು ಕಣೋ. ಯಾಕೋ ಗೊತ್ತಿಲ್ಲ, ಹೊಟ್ಟೆ ನೋಯುತ್ತಿರುತ್ತದೆ. ಇದು ಗ್ಯಾಸ್ಟ್ರಿಕ್ ಸಮಸ್ಯೆಯಂತೂ ಅಲ್ಲ. ಮುಟ್ಟಿನ ಸಮಸ್ಯೆಯೇ ಇರಬೇಕೇನೋ' ಎಂದಳು. 'ಮುಟ್ಟು! ಹಾಗೆಂದರೇನು ಅಮ್ಮ?' ಎಂದು ನಾನಾಗ ಕೇಳಲಿಲ್ಲ. ಏಕೆಂದರೆ, ಅಮ್ಮ ತಿಂಗಳಿಗೊಮ್ಮೆ ಮುಟ್ಟಾದಾಗ ಅಪ್ಪನ ಹಳೆಯ ಲುಂಗಿಯನ್ನು ಚೆನ್ನಾಗಿ ಒಗೆದು, ಸೌದೆ ಕೆಂಡದ ಐರನ್ ಬಾಕ್ಸ್‌ನಲ್ಲಿ ನೀಟಾಗಿ ಇಸ್ತ್ರಿ ಮಾಡಿ, ಒಂದಷ್ಟು ಅಗಲಕ್ಕೆ ಹರಿದು ನಾಲ್ಕೈದು ತುಂಡುಗಳನ್ನಾಗಿಸಿ ಇಟ್ಟುಕೊಳ್ಳುತ್ತಿದ್ದಳು. ಈಗಿನ ಸ್ಯಾನಿಟರಿ ಪ್ಯಾಡ್‌ಗಳಿಗೆ ಪೂರ್ವದಲ್ಲಿ ನನ್ನಮ್ಮನ ವಯೋಮಾನದವರು ಬಳಸುತ್ತಿದ್ದ ವಿಶೇಷ ಸ್ಯಾನಿಟರ್ ಪ್ಯಾಡ್, ಅಲ್ಲಲ್ಲ ಮುಟ್ಟಿನ ಬಟ್ಟೆ ಅದಾಗಿತ್ತು. ಅದನ್ನೇ ಒಂದೆರಡು ಸಲ ತೊಳೆತೊಳೆದು ಬಳಸುತ್ತಿದ್ದ ಅಮ್ಮನ ಮುಟ್ಟಿನ ವಿಷಯದ ಬಗ್ಗೆ ಮಗನಾಗಿ ನನಗೆ ಅರಿವಿತ್ತು.

ಅಂತಹ ಅರಿವೆಯ ತುಂಡುಗಳನ್ನು ಯಾರೂ ಹೊರಗಿನವರು ನೋಡಬಾರದೆಂಬ ಮುಜಗರದಿಂದ ನಮ್ಮನೆ ಹಿಂಬದಿಯ ಸೌದೆ ಕೊಟ್ಟಿಗೆಯ ಮೂಲೆಯಲ್ಲಿ ಹರಡುತ್ತಿದ್ದಳು. ಅಪ್ಪಿತಪ್ಪಿ ನಾವು ಚಿಟ್ಟೆ, ಕೋತರಗಿಣಿ (ಏರೋಪ್ಲೇನ್ ಚಿಟ್ಟೆ) ಹಿಡಿಯಲು ಹೋದಾಗ ಆ ಬಟ್ಟೆ ಪೀಸುಗಳು ನಮ್ಮ ತಲೆಗೆ ತಾಕುತ್ತಿದ್ದವು. 'ಹಾಗೆಲ್ಲ ತಲೆಗೆ ತಾಕಿಸಿಕೊಳ್ಳಬಾರದು. ತೊಂಬಾರ (ಮೈಲಿಗೆ) ಆಗುತ್ತದೆ. ಅದರಿಂದ ಕಣ್ಣು ಕೆಂಪಾಗುತ್ತದೆ. ಜ್ವರ ಬರುತ್ತದೆ ಜ್ವಾಪಾನ. ಇನ್ಮುಂದೆ ಆ ಕಡೆಗೆ ಹೋಗಬೇಡಿ' ಎಂದು ಎಚ್ಚರಿಸುತ್ತಿದ್ದಳು. ಅಂದರೆ ಅದು, ಇನ್ನೆಂದೂ ಮಕ್ಕಳು ಆ ಕಡೆ ಹೋಗಬಾರದು ಎಂದು ಪರೋಕ್ಷವಾಗಿ ಭಯ ಹುಟ್ಟಿಸುವ ತಂತ್ರಗಾರಿಕೆಯಾಗಿತ್ತೇ ವಿನಾ ಮೌಢ್ಯವಲ್ಲ ಎಂಬುದು ನನಗಾಗಲೇ ವೇದ್ಯವಾಗಿತ್ತು.

ಅಮ್ಮನ ಮಾತಿನಂತೆ ಆಕೆಯ ಜೊತೆ ಆಸ್ಪತ್ರೆಗೆ ಹೊರಟೆ. ಅಮ್ಮ ಎಂದಳು 'ನೋಡು ಸಂಪು, ಹೆಣ್ಣುಮಕ್ಕಳಿಗೆ ಎಷ್ಟು ಕಷ್ಟ ಇರುತ್ತೆ ಅಂತ. ಮುಟ್ಟಿನ ನೋವು, ಹೆರಿಗೆ ನೋವು ಎರಡೂ ಅಷ್ಟೆ. ಈಗಲಾದರೂ ಪರ್ವಾಗಿಲ್ಲ, ಡಾಕ್ಟರ್ ಇದ್ದಾರೆ. ಹಿಂದೆಲ್ಲಾ ಜೀರಿಗೆ ಕಷಾಯ ಅಂತೆಲ್ಲ ಸ್ವಯಂವೈದ್ಯ ಇರುತ್ತಿತ್ತು. ನಾನು ಹುಡುಗ, ನನಗೇಕೆ ಇದೆಲ್ಲ ಅಂತ ನಿರ್ಲಕ್ಷ್ಯ ಮಾಡುವುದಲ್ಲ. ಎಲ್ಲವನ್ನೂ ತಿಳಿದುಕೊಂಡಿರ್ಬೇಕು' ಎಂದು ಹೇಳಿಕೊಂಡೇ ಆಸ್ಪತ್ರೆಯ ಮೆಟ್ಟಿಲು ಹತ್ತಿದ್ದಳು.

ಪರೀಕ್ಷಿಸಿದ ಡಾಕ್ಟರ್ 'ಹೌದಮ್ಮ, ಇದು ಗ್ಯಾಸ್ಟ್ರಿಕ್ ಸಮಸ್ಯೆ ಅಲ್ಲದಿರಬಹುದು ಅಂತ ನೀವು ಊಹೆ ಮಾಡಿದ್ದು ಸರಿಯಾಗಿಯೇ ಇದೆ. ಆಗಾಗ ಹಾರ್ಮೋನ್ ವ್ಯತ್ಯಾಸದಿಂದ ಹೀಗಾಗುತ್ತಿರುತ್ತದೆ. ನೋಡಿ, ಈ ಟಾನಿಕ್ ಬೆಳಿಗ್ಗೆ ಮತ್ತು ರಾತ್ರಿ ಎರಡೆರಡು ಚಮಚ ತಗೊಳ್ಳಿ' ಎಂದು ಹೇಳುತ್ತಲೇ 'ನಿನಗೂ ಬೇಕೇನೋ' ಎಂದು ತಮಾಷೆಯಾಗಿ ನನ್ನ ನೋಡಿ ನಗಾಡಿದ್ದರು. ನಾನಾಗ ಮುಗುಳ್ನಕ್ಕಿದ್ದೆ. ಅವರ ಚೇಂಬರ್‌ನಿಂದ ಹೊರಗೆ ಬರುವಾಗ ಅಮ್ಮನಿಗೆ 'ಡಾಕ್ಟರ್ರೂಗೆ ಈ ಮುಟ್ಟಿನ ಹೊಟ್ಟೆ ನೋವು ಬರುತ್ತಾ ಅಮ್ಮ?' ಎಂದೆ. 'ಎಲ್ಲರಿಗೂ ಬರುತ್ತೆ, ಹೆಂಗಸರು ಅಂದಮೇಲೆ. ಸುಮ್ನೆ ನಡಿ, ಅಷ್ಟು ಜೋರಾಗಿ ಮನೆಯಲ್ಲಿ ಮಾತಾಡಿದ ಥರ ಮಾತಾಡ್ತೀಯಲ್ಲ, ಯಾರಾದ್ರೂ ಕೇಳಿಸಿಕೊಂಡರೆ ಏನೆಂದುಕೊಂಡಾರು? ಹೈಸ್ಕೂಲ್ ಹುಡುಗನ ಬಾಯಲ್ಲಿ ಛೀ ಮುಟ್ಟಿನ ಮಾತು ಅಂತ' ಎಂದು ಗದರಿದ್ದಳು. ಅಲ್ಲೇ ಆವರಣದ ಬೆಂಚಿನ ಮೇಲೆ ಸರದಿಯಲ್ಲಿ ಕಾಯುತ್ತಿದ್ದ ನಾಲ್ಕೈದು ಹುಡುಗಿಯರು, ಐದಾರು ಹೆಂಗಸರು ಒಮ್ಮೆಲೇ ನನ್ನೆಡೆಗೆ ಕುತೂಹಲದ ದೃಷ್ಟಿ ನೆಟ್ಟಂತೆ ಅನ್ನಿಸಿತು. ಯಾಕೋ ಗೊತ್ತಿಲ್ಲ, ನನಗೂ ಅಮ್ಮನ ಮುಟ್ಟಿನ ಮುಜುಗರದ ಬಿಸಿ ತಟ್ಟಿತೇ? ಏನೋ ಒಂದು ಬಗೆಯ ಭಯದಿಂದ ಕೈಕಾಲು ನಡುಗಿ, ತಲೆ ಸುತ್ತಿದಂತಾಯಿತು. 'ಅಮ್ಮ ನೀರು ಕೊಡು, ಗಂಟಲು ಒಣಗಿದೆ' ಎಂದೆ. 'ಮಾರ್ಚ್ ತಿಂಗಳ ಬಿಸಿಲು, ಬೇರೇನೂ ಆಗಿರಲ್ಲ, ಕುಡಿ' ಎಂದು ಬಾಟಲಿಯ ಮುಚ್ಚಳ ತೆರೆದು ಕೈಗಿಟ್ಟಳು.

ಈಗ ಅಮ್ಮನ ಮುಟ್ಟು ನಿಂತಿದೆ. ಅವಳ ಮುಟ್ಟಿನ ಬಟ್ಟೆಗಳೂ ಮಾಯ. ಆದರೆ ಮುಟ್ಟಿನ ಕಾಲದ ಆ ಸಂವೇದನೆಯ ಅನುಭವ ನನಗೆ ಆಗಾಗ ಆಗುತ್ತಲೇ ಇರುತ್ತದೆ. ಯಾವುದೋ ಮೆಡಿಕಲ್ ಶಾಪ್‌ನಲ್ಲಿ ಔಷಧಿ ಕೊಳ್ಳಲು ನಿಂತಿರುವಾಗ '... ಅದು ಕೊಡಿ ಸರ್ ಒಂದ್ ಪ್ಯಾಕ್. ಓಹೋ ಇಲ್ವಾ? ಆ ಕಂಪನಿಯದ್ದೇ ಕಂಫರ್ಟ್. ಇದು ಬೇಡ!' ಎಂದು ತಮಗೆ ಬೇಕಿದ್ದ ಕಂಪನಿಯ ಸ್ಯಾನಿಟರಿ ಪ್ಯಾಡ್‌ನ ಡಿಜಿಟಲ್ ಲೇಬಲ್ ಇದ್ದ ಮೊಬೈಲ್ ಸ್ಕ್ರೀನ್ ತೋರಿಸುವವರು, ಬಳಿಕ ಅದೇ ಧಾವಂತದಲ್ಲಿ ಮತ್ತೊಂದು ಮೆಡಿಕಲ್ ಶಾಪ್‌ನತ್ತ ಸಾಗುವ ಹುಡುಗಿಯರು ಕಾಣಸಿಗುತ್ತಾರೆ. ಇನ್ನು ಕೆಲವರು ಸಿಕ್ಕಿದ್ದನ್ನೇ 'ಓಕೆ' ಎನ್ನುತ್ತಾ ಕೊಂಡು, ಪ್ಯಾಕೆಟ್ ತಿರುಗಿಸುತ್ತಾ ಸುತ್ತಮುತ್ತಲಿನ ವಿವರಗಳನ್ನು ಓದುತ್ತಲೇ ಕುತೂಹಲದ ಕಣ್ಣುಗಳಲ್ಲಿ ಹೊಳಪು ತುಂಬಿಕೊಂಡು ಹೊರ ನಡೆಯುತ್ತಾರೆ.

ಕೆಲವರು ಬಳಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ರಸ್ತೆಬದಿಯ ಲಂಟಾನಕ್ಕೆ ಎಸೆದು ಹೋಗುವುದು, ಬೀದಿ ಕಸ ಗುಡಿಸುವವರು ಸೂಕ್ಷ್ಮ ಮನಸ್ಸಿನವರಾಗಿದ್ದರೆ ಅವುಗಳನ್ನು ಎತ್ತುತ್ತಲೇ 'ಯಾರೋ ಮಾರಾಯ ಇದು. ಹಿಂದಿನವರು ತಾವು ಬಳಸುತ್ತಿದ್ದ ಬಟ್ಟೆಯನ್ನ ಎಲ್ಲಿ ಹಾಕಬೇಕಿತ್ತೋ ಅಲ್ಲೇ ಎಷ್ಟು ಅಚ್ಚುಕಟ್ಟಾಗಿ ಹಾಕುತ್ತಿದ್ದರು. ಆದರೆ ಈಗಿನವರದು ಇದೇನೋ ಕಥೆ? ಯಾರ್‍ಯಾರದ್ದನ್ನೋ ನಾವು ಎತ್ತಿ ಕ್ಲೀನ್ ಮಾಡಬೇಕಾಗಿದೆ, ನಮ್ಮ ಹಣೆಬರಹ ನೋಡು' ಎಂದು ಗೊಣಗಾಡುವಾಗ, ಪರೋಕ್ಷವಾಗಿ ಬೈಸಿಕೊಳ್ಳುವ ಆ ಹೆಣ್ಣುಮಕ್ಕಳು ನೆನಪಾಗುತ್ತಾರೆ.

ಅಷ್ಟೇ ಅಲ್ಲ, 'ನಿನ್ನೆ ಏಕೆ ಕಾಲೇಜಿಗೆ ಬಂದಿರಲಿಲ್ಲ?' 'ಹುಷಾರಿರಲಿಲ್ಲ ಸರ್' 'ಏನು ಹುಷಾರಿರಲಿಲ್ಲ?' 'ಸ್ವಲ್ಪ ಹೊಟ್ಟೆನೋವಿತ್ತು' ಎನ್ನುವ ಉತ್ತರವೂ ನೆನಪಾಗುತ್ತದೆ. ಆ ಉತ್ತರ ಸುಳ್ಳೋ ನಿಜವೋ ಅನ್ನುವುದು ಬೇರೆ ಮಾತು. ಆದರೆ ಅಂಥ ಮಾತು ಕೇಳಿದಾಗಲೆಲ್ಲ ಅಮ್ಮ, ನಾನು ಮತ್ತು ಆ ಹೆಣ್ಣುಮಕ್ಕಳು ಮತ್ತದೇ ಮುಟ್ಟಿನ ಸಂವೇದನೆಯ ಕಾರಣಕ್ಕೆ ಪರಸ್ಪರ ಒಂದೇ ರೇಖೆಯಲ್ಲಿ ಸ್ಪಂದನೆಗೆ ಒಳಗಾಗುತ್ತಲೇ ಇರುತ್ತೇವೆ. ಬದುಕಿನ ಅಂತಃಕರಣದ ಅನಾವರಣಕ್ಕೆ ಸಾಕ್ಷಿಯಾಗುತ್ತಲೇ ಇರುತ್ತೇವೆ.


ಸಂಪತ್ ಅವರು ತಮ್ಮ ತಾಯಿ ಗೀತಾ ಅವರೊಂದಿಗೆ

ಹೆಣ್ತನ ಅನ್ನುವುದು ಹೆಣ್ಣಿನದು ಮಾತ್ರವಲ್ಲ, ಅದು ಗಂಡಿನೊಳಗಿನ ಭಾವಸ್ಫೂರ್ತಿಯೂ ಹೌದು

ಆ ಹುಡುಗನಿಗೆ ದೌಟೇದೌಟು!

ನಾನು ಮೂಡಿಗೆರೆಯ ಡಿಗ್ರಿ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಕಾರ್ಯನಿರ್ವಹಿಸುತ್ತಿದ್ದ ಮೊದಲ ವರ್ಷ. ಆಗ ವಿಶ್ವವಿದ್ಯಾಲಯದ ಸೆಮಿಸ್ಟರ್ ಪರೀಕ್ಷೆ ನಡೆಯುತ್ತಿತ್ತು. ಕೊಠಡಿ ಮೇಲ್ವಿಚಾರಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ವಿದ್ಯಾರ್ಥಿನಿಯೊಬ್ಬಳು 'ಸರ್, ವಾಷ್‌ರೂಮಿಗೆ ಹೋಗಿ ಬರುತ್ತೇನೆ' ಎಂದಳು. 'ಇದು ಪರೀಕ್ಷೆ, ಮಧ್ಯದಲ್ಲಿ ಹಾಗೆಲ್ಲ ಕಳಿಸುವ ಹಾಗಿಲ್ಲ' ಎಂದೆ. ಅದಕ್ಕವಳು 'ತುಂಬಾ ಹೊಟ್ಟೆನೋವು. ಲೇಡೀಸ್ ಪ್ರಾಬ್ಲಂ ಸರ್' ಎಂದಳು. ಮುಖದಲ್ಲಿ ಮತ್ತದೇ ಮುಜುಗರದ ಗೆರೆಗಳು. 'ಓಕೆ, ಬೇಗ ವಾಪಸ್ ಬರಬೇಕು' ಎಂದೆ. ಯೆಸ್ ಎಂಬಂತೆ ತಲೆಯಾಡಿಸಿದಳು. ಹೊರಹೋಗುತ್ತಲೇ ಪರೀಕ್ಷಾ ಕೊಠಡಿಯ ಪಕ್ಕದ ಕಾರಿಡಾರ್‌ನಲ್ಲಿ ಇದ್ದ ಬ್ಯಾಗಿನಿಂದ ಪ್ಲಾಸ್ಟಿಕ್ ಕವರ್ ತೆಗೆದು ತನ್ನ ದುಪಟ್ಟಾದ ಮರೆಯಲ್ಲಿ ಇಟ್ಟುಕೊಂಡು ವಾಷ್‌ರೂಮಿನತ್ತ ದೌಡಾಯಿಸಿದಳು. ಆದರೆ ಕಿಟಕಿಯ ಪಕ್ಕದಲ್ಲೇ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಯೊಬ್ಬನಿಗೆ ದೌಟೇದೌಟು! 'ಸರ್ ನೋಡಿ, ಅವಳು ಕಾಪಿಚೀಟಿಯನ್ನು ಮುಚ್ಚಿಟ್ಟುಕೊಂಡು ಹೋದಳು. ಬೇಕಾದರೆ ಹೋಗಿ ನೋಡಿ' ಎಂದು ಪಿಸುನುಡಿದ. ಅಷ್ಟರಲ್ಲೇ ರೌಂಡ್ಸ್ ಸ್ಕ್ವಾಡ್‌ನವರ ಎಂಟ್ರಿ. ಆಗಷ್ಟೇ ಹೊರಹೋಗಿದ್ದ ಇವಳು ಕೂಡ 'ಮೇ ಐ ಕಮ್ ಇನ್ ಸರ್' ಎನ್ನುತ್ತಾ ಅದೇ ಸಮಯಕ್ಕೆ ಒಳಬಂದಳು. 'ಯಾಕ್ರೀ, ಎಲ್ಲಿಗೆ ಕಳುಹಿಸಿದ್ರಿ? ಸ್ವಲ್ಪನೂ ಜವಾಬ್ದಾರಿಯಿಲ್ಲ. ಹುಡುಗಿ ಅಂತ ವಾಷ್‌ರೂಮ್‌ಗೆ ಕಳಿಸಿದ್ರಿ, ಅದೇ ಹುಡುಗನಾಗಿದ್ರೆ?' ಎಂದೆಲ್ಲಾ ಕೂಗಾಡಿದರು. ಮಂದಹಾಸ ಬೀರಿದ್ದಷ್ಟೇ ಆಗ ನನ್ನ ಪ್ರತಿಕ್ರಿಯೆ. ನಾನೂ ಆಗ ಮೇಲ್ವಿಚಾರಕನ ಕರ್ತವ್ಯಕ್ಕೆ ಹೊಸಬನಾಗಿದ್ದೆನಲ್ಲ? ನನ್ನದೇ ತಪ್ಪಿರಬಹುದು ಎಂದುಕೊಂಡು ಸುಮ್ಮನಾದೆ.

ಅವಳ ಮುಖದಲ್ಲಿ ಏನೋ ದುಗುಡ. ಪರೀಕ್ಷೆ ಮುಗಿದು, ಪ್ರಾಂಶುಪಾಲರ ಕೊಠಡಿಗೆ ತೆರಳಿ ಉತ್ತರ ಪತ್ರಿಕೆ ಸಲ್ಲಿಸಿ ಹೊರ ಬರುತ್ತಲೇ ಅಲ್ಲೇ ನಿಂತಿದ್ದ ಆ ಹುಡುಗಿ 'ಸರ್, ತುಂಬಾ ಥ್ಯಾಂಕ್ಸ್. ಆದರೆ ನೀವು ನನಗಾಗಿ ಆ ಸ್ಕ್ವಾಡ್‌ನವರ ಹತ್ರ ಬೈಸಿಕೊಳ್ಳುವಂತಾಯ್ತು, ಹಾಗಾಗಬಾರದಿತ್ತು. ನನಗೆ ಮಂತ್ಲಿ ಪೀರಿಯಡ್ಸ್ ಆಗಿತ್ತು. ಹೀಗಾಗಿ, ವಾಷ್‌ರೂಮ್‌ಗೆ ಹೋಗಲೇಬೇಕಿತ್ತು. ಅದಕ್ಕೇ ಕೇಳಿಕೊಂಡು ಹೋದೆ. ಸೋ ಸ್ಸಾರಿ' ಎಂದಳು ದೈನ್ಯಳಾಗಿ.

ನನಗಾಗ, ಕಿಟಕಿ ಬಳಿಯಿದ್ದ ಹುಡುಗ ಆರೋಪಿಸಿದಂತೆ ಅವಳು ಕೈಗೆತ್ತಿಕೊಂಡು ಹೋಗಿದ್ದು ಕಾಪಿಚೀಟಿಯನ್ನಲ್ಲ, ಸ್ಯಾನಿಟರಿ ಪ್ಯಾಡ್ ಆಗಿರಬಹುದು (ನೆನಪಾಯಿತು ಆಗ ಅಮ್ಮನ ಆ ಮುಟ್ಟಿನ ಬಟ್ಟೆಯೂ!) ಎಂಬ ನನ್ನ ಊಹೆಯನ್ನು ದೃಢಪಡಿಸುವ ಉತ್ತರ ದೊರಕಿತ್ತು. 'ಹೋಗಲಿ ಬಿಡು, ಇವೆಲ್ಲಾ ಜೀವನದಲ್ಲಿ ಸಹಜ' ಎಂದೆ. ಅವಳು ಆ ಮಾತನ್ನು ನಾನು ಹೇಳಿದ್ದು ಸ್ಕ್ವಾಡ್‌ನವರ ವರ್ತನೆಗೋ ತನ್ನ ಪ್ರಾರ್ಥನೆಗೋ ಯಾವುದಕ್ಕೆಂದು ಅರ್ಥ ಮಾಡಿಕೊಂಡಳೋ ಗೊತ್ತಿಲ್ಲ. ಹಾಗೇ ನಮಸ್ಕಾರ ಹೇಳಿ ಹೊರಟುಹೋದಳು.

ಯೋನಿಯಲ್ಲಿ ವಿಪರೀತ ತುರಿಕೆ ಕಾರಣ ಅರಿಯಿರಿ



ಸ್ಪಂದನ
ಡಾ. ವೀಣಾ ಎಸ್. ಭಟ್

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

- **ಇಬ್ಬರು ಮಕ್ಕಳ ತಾಯಿ ನಾನು. ಆರು ತಿಂಗಳಿನಿಂದ ಯೋನಿಯಲ್ಲಿ ವಿಪರೀತ ಎನ್ನುವಷ್ಟು ತುರಿಕೆ ಇದೆ. ಸಂತೃಪ್ತ ಲೈಂಗಿಕ ಜೀವನ ನಡೆಸುತ್ತಿದ್ದೇನೆ. ಯಾವುದೇ ಸಮಸ್ಯೆಯಿಲ್ಲ. ವೈದ್ಯರ ಬಳಿ ಹೋಗಿದ್ದೇನೆ. ಅವರು ಕೊಟ್ಟ ಮಾತ್ರೆ ಹಾಗೂ ಕ್ರೀಮ್‌ಗಳಿಂದ ಪ್ರಯೋಜನ ಆಗಿಲ್ಲ. ಏನು ಮಾಡಲಿ?**

ಮಂಗಳಾ, ತುಮಕೂರು

ಎಲ್ಲ ವಯಸ್ಸಿನ ಮಹಿಳೆಯರಲ್ಲಿಯೂ ಹೊರ ಜನನಾಂಗದ ಭಾಗದಲ್ಲಿ (ಗೊಲ್ಲಿ) ಕೆರೆತ ಸಾಮಾನ್ಯ. ಫಂಗಸ್ ಮತ್ತು ಟ್ರೈಕೋಮೊನೋಸ್‌ನಂಥ ಸೂಕ್ಷಾಣುಜೀವಿಗಳ ಸೋಂಕಿನಿಂದ ಕೆರೆತ ಉಂಟಾಗಬಹುದು. ಅಲರ್ಜಿಗೆ ಒಳಗಾದ ಒಳಉಡುಪು ಧರಿಸುವುದರಿಂದಲೂ ಆಗಬಹುದು. ಇಂಥ ಸೋಂಕು ಉಂಟಾದಾಗ ಅಸಹಜವಾದ, ವಾಸನೆಸಹಿತ ಬಿಳಿಮುಟ್ಟು ಕಾಣಿಸಿಕೊಳ್ಳಬಹುದು.

ಹಲವು ಸಂದರ್ಭಗಳಲ್ಲಿ ಈ ಗೊಲ್ಲಿ ಕೆರೆತ ಬೇರೆ ಕಾಯಿಲೆಗಳನ್ನು ತಿಳಿಸುವ ಮುನ್ಸೂಚನೆಯೂ ಆಗಿರಬಹುದು. ಉದಾಹರಣೆಗೆ, ಮಧುಮೇಹ, ಯಕೃತ್‌ನಲ್ಲಿ ತೊಂದರೆ ಹಾಗೂ ಮೂತ್ರಪಿಂಡ ಸಮಸ್ಯೆ... ಎಕ್ಸಿಮಾ, ಸಿಬೋರಿಕ್ ಡರ್ಮಟೈಟಿಸ್, ರಕ್ತಹೀನತೆ, ಬಿ 12 ವಿಟಮಿನ್ ಕೊರತೆಯಂಥ ಸಂದರ್ಭಗಳಲ್ಲಿಯೂ ಯೋನಿಯಲ್ಲಿ ಕೆರೆತ ಉಂಟಾಗಬಹುದು. ಮೂತ್ರನಾಳದ ಸೋಂಕು, ಫಿಸ್ತುಲಾ, ತೊಡೆಭಾಗದಲ್ಲಿ ಅತಿಯಾದ ಬೆವರು ಶೇಖರಣೆಯಿಂದ ತೇವಾಂಶ ಹೆಚ್ಚಾದಾಗ, ಮೂತ್ರದಲ್ಲಿ ಆಮ್ಲದ ಅಂಶ ಹೆಚ್ಚಿದ್ದಾಗ, ಹಾರ್ಮೋನುಗಳ ಕೊರತೆಯಿಂದ ಯೋನಿಯ ಆಮ್ಲತೆಯಲ್ಲಿ ವ್ಯತ್ಯಯ ಉಂಟಾದಾಗಲೂ ಕೆರೆತದ ಸಮಸ್ಯೆ ಕಾಡಬಹುದು. ಇಷ್ಟೇ ಅಲ್ಲದೆ ರಾಸಾಯನಿಕಯುಕ್ತ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸುವುದರಿಂದ, ಕಠಿಣ ರಾಸಾಯನಿಕದಿಂದ ಕೂಡಿದ ಸೋಪು ಹಾಗೂ ಆ್ಯಂಟಿಸೆಪ್ಟಿಕ್ ದ್ರಾವಣ ಬಳಸಿ ಒಗೆದ ಒಳಉಡುಪುಗಳನ್ನು ಧರಿಸುವುದರಿಂದ, ಬಿಸಿಲಿನಲ್ಲಿ ಸರಿಯಾಗಿ ಒಣಗದೇ ಇರುವ ಒಳಉಡುಪು ಧರಿಸುವುದರಿಂದ, ನಿರೋಧ್ ರಬ್ಬರ್ ಮತ್ತು ಮೆನ್‌ಸ್ಟ್ರುಯಲ್ ಕಪ್‌ನ ಲೇಟೆಕ್ಸ್ ರಬ್ಬರ್‌ಗಳ ಬಳಕೆಯಿಂದಲೂ ಅಲರ್ಜಿ ಉಂಟಾಗಬಹುದು. ಸಂಕೋಚದಿಂದ ಸೂಕ್ತ ಚಿಕಿತ್ಸೆ ಪಡೆಯದೆ ಯಾತನೆ ಅನುಭವಿಸುತ್ತಾರೆ. ಕೆರೆತಕ್ಕೆ ಚಿಕಿತ್ಸೆ ನೀಡುವ ಮೊದಲು ಕಾರಣವನ್ನು ಕಂಡುಹಿಡಿಯಬೇಕು. ಹೆಚ್ಚಿನ ಮಹಿಳೆಯರಿಗೆ ಇಂಥ ಕೆರೆತದ ಸಂದರ್ಭದಲ್ಲಿಯೇ ಮಧುಮೇಹ ಇರುವುದು ಪತ್ತೆಯಾಗುತ್ತದೆ. ಹಾಗಾಗಿ, ನೀವೊಮ್ಮೆ ಮೂತ್ರ ಮತ್ತು ರಕ್ತದ ತಪಾಸಣೆ ಮಾಡಿಸಿ, ಮಧುಮೇಹ ಇಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳಿ. ಚರ್ಮದ ಕಾಯಿಲೆಯಿದ್ದರೆ ಸೂಕ್ತ ಪರೀಕ್ಷೆ ಮಾಡಿಸಿಕೊಳ್ಳಿ. ಬಿಗಿಯಾದ ಒಳಉಡುಪು ಧರಿಸಬೇಡಿ. ಮೂತ್ರ ಹಾಗೂ ಮಲ ವಿಸರ್ಜನೆಯ ನಂತರ ಸ್ವಚ್ಛವಾಗಿ ತೊಳೆದುಕೊಳ್ಳಿ. ಸೋಪು ಅಥವಾ ಆ್ಯಂಟಿಸೆಪ್ಟಿಕ್ ಬಳಸಬೇಡಿ. ತೀವ್ರವಾದ ಸೋಂಕು ಇದ್ದಾಗ ಮಾತ್ರ ವೈದ್ಯರ ಶಿಫಾರಸಿನ ಮೇರೆಗೆ ಆ್ಯಂಟಿಫಂಗಲ್ ಮತ್ತು ಆ್ಯಂಟಿಬಯಾಟಿಕ್, ಆ್ಯಂಟಿಹಿಸ್ಟಮಿನ್ ಮಾತ್ರೆಗಳನ್ನು ಸೇವಿಸಿ. ಯೋನಿಯ ಕೆರೆತ ಹಲವು ರೋಗಗಳ ಲಕ್ಷಣವೂ ಆಗಿರುವುದರಿಂದ ತಡ ಮಾಡದೆ ಚಿಕಿತ್ಸೆ ಪಡೆಯಿರಿ.

ರೊಟ್ಟಿ ಬಡಿಯೂದು ಹ್ಯಾಂಗss ಗೊತ್ತೇನ್ರೀ?

ರಸಾಸ್ವಾದ

ಜೋಳದ ರೊಟ್ಟಿ ತಿನ್ನಲು ಇಷ್ಟ. ಆದರೆ, ಮಾಡಲು ಹೆಚ್ಚಿನವರಿಗೆ ಕಷ್ಟ. ಹಿಟ್ಟು ಕಲಸಿಕೊಳ್ಳುವಾಗ ನೀರಿನ ಅಳತೆಯಲ್ಲಿ ತುಸು ವ್ಯತ್ಯಾಸವಾದರೂ ಲಟ್ಟಿಸುವಾಗ ಅರ್ಧಕ್ಕೇ ತುಂಡಾಗುತ್ತದೆ. ತೆಗೆದು ಬಿಸಾಡಬೇಕೆಂಬಷ್ಟು ರೇಜಿಗೆ ಹುಟ್ಟಿಸುತ್ತದೆ. ತೆಳ್ಳಗೆ, ರುಚಿರುಚಿಯಾದ ರೊಟ್ಟಿ ಬೇಕೆಂದರೆ ಮೊದಲು ಹಿಟ್ಟನ್ನು ಕಲಸುವ, ನಾದುವ ಹದ ಕರಗತವಾಗಬೇಕು. ಅಂತಹ ಹದವರಿತ ರೊಟ್ಟಿ ತಯಾರಿಯ ಕ್ರಮವನ್ನು ಸರಳವಾದ ಮಾದರಿಯಲ್ಲಿ ಹೇಳಿಕೊಡುತ್ತಾರೆ ತ್ರಿವೇಣಿ ಪಾಟೀಲ್.

'ಉತ್ತರ ಕರ್ನಾಟಕ ರೆಸಿಪೀಸ್' ಯೂಟ್ಯೂಬ್ ಚಾನೆಲ್ ಮೂಲಕ ರವಾ ಉಂಡಿ, ಬೇಸನ್ ಲಾಡು, ಮಾದ್ಲಿ, ಸಜ್ಜಕದ ಹೋಳಿಗೆ, ಶೇಂಗಾ ಹೋಳಿಗೆ... ಹೀಗೆ ರಾಜ್ಯದ ಉತ್ತರ ಭಾಗದ ದೇಸಿ ಸೊಗಡಿನ ತರಹೇವಾರಿ ಪಾಕಗಳ ರುಚಿವೈವಿಧ್ಯವನ್ನು 9 ವರ್ಷಗಳಿಂದಲೂ ಉಣಬಡಿಸುತ್ತಿದ್ದಾರೆ ಅವರು.

'ಜ್ವಾಳದ್ ರೊಟ್ಟಿ ಕೈಯಲ್ಲಿ ತಟ್ಟಿ ಮಾಡಿದ್ರ ಅದ್ರ ರುಚಿನೇ ಬ್ಯಾರೆ. ಈಗೆಲ್ಲ ಲಟ್ಟಣಿಗೆ ಬಂದಾವ್ರೀ. ಕೈಯಾಗ ತಟ್ಟೂದಂದ್ರ ತುಸು ತ್ರಾಸಾಕತಿ, ಅಲ್ದೆ ಬಾಳೊತ್ತು ಬೇಕಾಕತಿ. ಈಗಿನ್ ಧಾವಂತದ್ ಬದ್ಕಿಗೆ ಲಟ್ಟಣಿಗೇನೆ ಛೊಲೊ. ಬೆಂಗ್ಳೂರಿಗ್ ಹೊಸ್ದಾಗಿ ಬಂದಾಗ ನಾ ರೊಟ್ಟಿ ಬಡಿಯೋ ಸದ್ ಕೇಳಿ ಆಜುಬಾಜಿನ್ ಮನೆಯವ್ರೆಲ್ಲ ನಮ್ಮನಿಗ್ ಬಂದ್ ಕೇಳ್ತಿದ್ರು ಏನದು ಸದ್ದು ಅಂತ. ಈಗ್ಲೂ ನಾ ರೊಟ್ಟಿನ ಬಡದೇ ಮಾಡ್ತೀನಿ' ಎಂದು ನಗೆ ಬೀರುತ್ತಾರೆ ತ್ರಿವೇಣಿ.

ಜೋಳದ ರೊಟ್ಟಿಗೆ ಎಣ್ಣೆಗಾಯಿ ಪಲ್ಯ, ಕೊರೆದಿಟ್ಟ ಜುಣುಕ, ಸಿಹಿಗೊಂದಷ್ಟು ಮಾದ್ಲಿ, ಖಾರಕ್ಕೊಂದು ತುಂಬಿದ್ ಮೆಣಸಿನಕಾಯಿ, ಮತ್ತೆ ಮತ್ತೆ ಮೆಲ್ಲಬೇಕೆನಿಸುವ ಚೂಡಾ, ಬಾಯಲ್ಲಿ ನೀರೂರಿಸುವ ಮಿರ್ಚಿ ಬಜ್ಜಿ... ಆಹಾ... ಈ ಸ್ವಾದಿಷ್ಟ ತಿನಿಸುಗಳ ಘಮ ಈಗ ಈ ಭಾಗಕ್ಕಷ್ಟೇ ಸೀಮಿತವಾಗಿಲ್ಲ. ಪ್ರಾದೇಶಿಕ ಭೇದವಿಲ್ಲದೆ ಎಲ್ಲರ ಅಡುಗೆಮನೆಗಳಲ್ಲೂ ಅವು ಮೆರೆಯತೊಡಗಿವೆ.

'ಗಂಡು ಮೆಟ್ಟಿನ' ನಾಡಿನ ಪಾಕಗಳ ನಾಡಿಮಿಡಿತವನ್ನು ಅರಿತಿರುವ ತ್ರಿವೇಣಿ, ತಮ್ಮ ಧಾರವಾಡ ಕನ್ನಡದ ಶೈಲಿಯಿಂದಲೇ ಅಸಂಖ್ಯಾತರನ್ನು ಸೆಳೆದಿದ್ದಾರೆ. 'ಸಿಲಿಕಾನ್ ಸಿಟಿ'ಯಲ್ಲಿ ವಾಸ್ತವ್ಯವಿದ್ದರೂ ಭಾಷಾ ಸೊಗಡನ್ನು ಕಾಪಿಟ್ಟುಕೊಂಡಿರುವ ಅವರು, ಆರೋಗ್ಯಕರ ಆಹಾರಗಳ ಪಾಠ ಹೇಳಿಕೊಡುತ್ತಿದ್ದಾರೆ. ತಮ್ಮ ಚಾನೆಲ್‌ನಲ್ಲಿರುವ ಸ್ವವಿವರದಲ್ಲಿ, ಆರೋಗ್ಯ ಕಾಯ್ದುಕೊಳ್ಳುವಲ್ಲಿ ಆಹಾರ ವಹಿಸುವ ಪ್ರಮುಖ ಪಾತ್ರದ ವಿವರಣೆಗೇ ಹೆಚ್ಚು ಒತ್ತು ನೀಡಿರುವುದು ಅವರ ಈ ಕಾಳಜಿಗೆ ಪೂರಕವಾಗಿಯೇ ಇದೆ.

ಅಡುಗೆ ಮಾಡುವುದೆಂದರೆ ಮೊದಲಿನಿಂದಲೂ ತ್ರಿವೇಣಿ ಅವರಿಗೆ ತುಂಬು ಪ್ರೀತಿ. ಅವಿಭಕ್ತ ಕುಟುಂಬದಿಂದ ಬಂದಿರುವ ಅವರು, 8ನೇ ತರಗತಿಯಲ್ಲಿ ಇದ್ದಾಗಲೇ ಜೋಳದ ರೊಟ್ಟಿಯನ್ನು ಹದವಾಗಿ ಬಡಿದು ಮನೆಯವರ ಹುಬ್ಬೇರಿಸಿದ್ದರು.

ಈವರೆಗೆ 1,400ಕ್ಕೂ ಹೆಚ್ಚು ವೈವಿಧ್ಯಮಯ ಪಾಕಗಳು ಈ ಯೂಟ್ಯೂಬ್ ಚಾನೆಲ್ ಒಡತಿಯ ಹೆಸರಿನಲ್ಲಿ ದಾಖಲಾಗಿವೆ. ಪೌಷ್ಟಿಕಾಂಶಯುಕ್ತ ಜೋಳ ಸಿರಿಧಾನ್ಯಗಳ ಸಾಲಿಗೆ ಸೇರುತ್ತದೆ. ಉತ್ತರ ಕರ್ನಾಟಕದ ಆಹಾರ ಕ್ರಮದಲ್ಲಿ ರಾಜನಂತೆ ಮೆರೆಯುವ ಇದು, ವೈವಿಧ್ಯಮಯ ಪಾಕ ಪ್ರಯೋಗಗಳಿಗೆ ತೆರೆದುಕೊಂಡಿದೆ. ಎಲ್ಲ ಬಗೆಯ ಪಾಕಗಳಲ್ಲೂ ರುಚಿಯ ಸವಿಯನ್ನು ಹತ್ತಿಸುವ ಜೋಳ, ತ್ರಿವೇಣಿ ಅವರ ಪಾಕಶಾಲೆಯಲ್ಲೂ ಹಲವು ಪ್ರಯೋಗಗಳಿಗೆ ಒಡ್ಡಿಕೊಂಡಿದೆ. ಜೋಳದ ವಡೆ, ಮಸಾಲ ರೊಟ್ಟಿ, ಚಕ್ಕುಲಿ, ಜೋಳದ ನುಚ್ಚು, ಹುಳಿ ನುಚ್ಚು, ಸಪ್ಪನ ನುಚ್ಚು, ಮುದ್ದೆ, ತಾಲಿಪೆಟ್ಟು, ಜೋಳದ ಅಂಬಲಿ, ಬಾನ ಬುತ್ತಿ, ಕಿಚಡಿ, ಉಪ್ಪಿಟ್ಟು... ಹೀಗೆ ಜೋಳದ ತರಹೇವಾರಿ ರೆಸಿಪಿಗಳು ಆರೋಗ್ಯದ ಅಭಿಲಾಷೆ ಮತ್ತು ಬಾಯಿರುಚಿ ಎರಡನ್ನೂ ತಣಿಸುತ್ತವೆ. ಅಕ್ಕಿಹಿಟ್ಟು, ಕಡಲೆಹಿಟ್ಟು, ಗೋಧಿಹಿಟ್ಟು ಬೆರೆಸಿ, ಮಸಾಲೆ ಹಾಕಿ ಮಾಡುವ 'ಧಪಾಟಿ', ಗಟ್ಟಿ ಬ್ಯಾಳಿ, ಬಗೆಬಗೆಯ ಚಟ್ನಿಪುಡಿ, ಎಣ್ಣೆಯಲ್ಲಿ ಕರಿದು ಮಾಡುವ ಸಿಹಿ ಗಾರ್ಗಿ, ಸಿಹಿಪಾಕ, ಸಂಜೆ ವೇಳೆ ಚಹಾದೊಂದಿಗೆ ಸವಿಯಲು ಇಷ್ಟವಾಗುವ ನರ್ಗೀಸ್ ಮಂಡಕ್ಕಿ, ಮಿರ್ಚಿ, ಬಾಯಲ್ಲಿಟ್ಟರೆ ಕರಗುವ ಶಂಕರಪೋಳಿ, ಹುಳಿ ಅವಲಕ್ಕಿ... ನೋಡನೋಡುತ್ತಾ ಈಗಲೇ ಮಾಡಿ ತಿಂದುಬಿಡಬೇಕೆನ್ನಿಸುವ ಭಾವ ಸ್ಫುರಿಸುತ್ತವೆ. 'ನಮ್ ಅಡುಗೆಗಳ್ನ ಕರಾವಳಿ, ಮಲ್ನಾಡ್ ಮಂದಿನೂ ಇಷ್ಟಪಟ್ ಮಾಡ್ತಾರ್ರಿ. ಅವ್ರು ಕಳಿಸೊ ಕಾಮೆಂಟ್ ನೋಡಿ ಖುಷಿ ಆಗ್ತೇತಿ. ನಮ್ಮ ಭಾಗದ ಊಟದ್ ರುಚಿ ಎಲ್ಲರಿಗೂ ಹಂಚಿದ್ ತೃಪ್ತಿ ಐತ್ರಿ' ಎನ್ನುತ್ತಾರೆ ತ್ರಿವೇಣಿ

–ಸುಮಾ ಬಿ.

ರಾಗುದಾಸ್ ಹೀಗೆ ಮಾಡಿ

ಹುಬ್ಬಳ್ಳಿ–ಧಾರವಾಡದ ವಿಶೇಷ ಖಾದ್ಯ 'ರಾಗುದಾಸ್' ಸಿಹಿಪ್ರಿಯರ ಬಾಯಲ್ಲಿ ನೀರೂರಿಸುತ್ತದೆ. ಈ ಭಾಗದಲ್ಲಿ ಪಂಚಮಿ ಹಬ್ಬದ ಸಮಯದಲ್ಲಿ ತಯಾರಿಸುವ ರಾಗುದಾಸ್, ಮಹಾರಾಷ್ಟ್ರದ ಅಡುಗೆ ಮನೆಗಳಲ್ಲಿ ದೀಪಾವಳಿ ಹಬ್ಬದ ವೇಳೆಗೆ ಹಾಜರಾಗುತ್ತದೆ. ಕಡಿಮೆ ಪದಾರ್ಥಗಳನ್ನು ಬಳಸಿ ಸುಲಭವಾಗಿ ಇದನ್ನು ತಯಾರಿಸಬಹುದು.

ಬೇಕಾಗುವ ಸಾಮಗ್ರಿ: ಒಂದು ಕಪ್ ಮೀಡಿಯಂ ರವೆ, ಅರ್ಧ ಕಪ್ ಕಡಲೆಹಿಟ್ಟು, ಅರ್ಧ ಕಪ್ ತುಪ್ಪ, ಒಂದು ಕಪ್ ಸಕ್ಕರೆ (ಸಕ್ಕರೆ ಬದಲು ಬೆಲ್ಲವನ್ನೂ ಬಳಸಬಹುದು), ಸ್ವಲ್ಪ ಗೋಡಂಬಿ, ಬಾದಾಮಿ, ಒಣದ್ರಾಕ್ಷಿ, ಒಣಕೊಬ್ಬರಿ.

ಮಾಡುವ ವಿಧಾನ: ಒಂದು ಪಾತ್ರೆಯಲ್ಲಿ ಸ್ವಲ್ಪ ತುಪ್ಪ ಹಾಕಿ ಒಣಹಣ್ಣುಗಳನ್ನು ಹುರಿದು ತೆಗೆದಿಟ್ಟುಕೊಳ್ಳಬೇಕು. ಆ ಪಾತ್ರೆಯಲ್ಲಿ ಉಳಿದ ತುಪ್ಪದಲ್ಲಿ ಕಡಲೆಹಿಟ್ಟು ಹಾಕಿ ಹಸಿ ವಾಸನೆ ಹೋಗುವವರೆಗೂ ಹುರಿದುಕೊಳ್ಳಬೇಕು. ನಂತರ ಅದಕ್ಕೆ ರವೆ ಸೇರಿಸಿ ಹುರಿಯಬೇಕು. ಬಳಿಕ ಒಣಕೊಬ್ಬರಿ ಹಾಕಿ ಕೈಯಾಡಿಸಬೇಕು. ಹುರಿದದ್ದನ್ನು ಪಕ್ಕಕ್ಕೆ ಎತ್ತಿಟ್ಟು, ಸಕ್ಕರೆ ಪಾಕ ಮಾಡಿಕೊಳ್ಳಬೇಕು. ಗಟ್ಟಿ ಪಾಕ ಬರುವವರೆಗೂ ಸಕ್ಕರೆಯನ್ನು ಕುದಿಸಬೇಕು. ಈ ಪಾಕಕ್ಕೆ ಹುರಿದುಕೊಂಡಿರುವ ಮಿಶ್ರಣವನ್ನು ಹಾಕಿ ಕೈಬಿಡದೆ ತಿರುಗಿಸಬೇಕು. ಆಗ ಹುಡಿಹುಡಿಯಾದ ರಾಗುದಾಸ್ ತಯಾರಾಗುತ್ತದೆ. ಅದಕ್ಕೆ ಒಣ ಹಣ್ಣುಗಳನ್ನು ಬೆರೆಸಿ ಸವಿಯಬಹುದು. ಸಕ್ಕರೆ ಪಾಕ ಸರಿಯಾದ ಕ್ರಮದಲ್ಲಿ ಬಂದರೆ ಮಾತ್ರ ರಾಗುದಾಸ್ ರುಚಿಕಟ್ಟಾಗಿ ಇರುತ್ತದೆ ಎಂಬುದನ್ನು ಮರೆಯಬಾರದು.


ತ್ರಿವೇಣಿ ಪಾಟೀಲ್

ಆ್ಯಂಟಿ ಏಜಿಂಗ್ ಚಿಕಿತ್ಸೆ ತರವೇ?



ಸದಾ ಸುಂದರವಾಗಿ, ಯೌವನಿಗರಂತೆ ಕಾಣಿಸಿಕೊಳ್ಳಬೇಕು ಎನ್ನುವ ಧೋರಣೆ ಗ್ಲ್ಯಾಮರ್ ಲೋಕದಲ್ಲಷ್ಟೇ ಅಲ್ಲ ಶ್ರೀಸಾಮಾನ್ಯರಲ್ಲಿಯೂ ಹೆಚ್ಚುತ್ತಿದೆ. ಅದಕ್ಕಾಗಿ, ಮಾರುಕಟ್ಟೆಯಲ್ಲಿ ಸಿಗುವ ಬಗೆಬಗೆಯ ಕ್ರೀಮ್‌ಗಳನ್ನು ಹಚ್ಚುವ, ಮಾತ್ರೆಗಳನ್ನು ನುಂಗುವ, ಇಂಜೆಕ್ಷನ್ ತೆಗೆದುಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ. ಬಾಲಿವುಡ್ ನಟಿ, 42 ವರ್ಷದ ಶೆಫಾಲಿ ಜರಿವಾಲ ಇತ್ತೀಚೆಗೆ ಹೃದಯಾಘಾತದಿಂದ ಅಕಾಲಿಕ ಮರಣಕ್ಕೆ ತುತ್ತಾದರು. ವರ್ಷದಿಂದಲೂ 'ಆ್ಯಂಟಿ ಏಜಿಂಗ್' ಚಿಕಿತ್ಸೆ ಪಡೆಯುತ್ತಿದ್ದ ಅವರು, ಅಂದು ಉಪವಾಸದಲ್ಲಿ ಇದ್ದರೂ ಚಿಕಿತ್ಸೆ ಮುಂದುವರಿಸಿದ್ದು ದುರಂತಕ್ಕೆ ಕಾರಣ ಎಂಬ ಮಾತು ಕೇಳಿಬರುತ್ತಿದೆ. ಈ ಸಂದರ್ಭದಲ್ಲಿ, ಆ್ಯಂಟಿ ಏಜಿಂಗ್ ಚಿಕಿತ್ಸೆಯ ಸಾಧಕ–ಬಾಧಕಗಳ ಕುರಿತು ಶಿವಮೊಗ್ಗದ ನಂಜಪ್ಪ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ. ಅನ್ವಿತಾ ಚಿದಾನಂದ ಅವರ ವಿಶ್ಲೇಷಣೆ ಇಲ್ಲಿದೆ:

ಕ್ರೀಂ, ಮಾತ್ರೆ, ಇಂಟ್ರಾವೀನಸ್ ಇಂಜೆಕ್ಷನ್ ಹೀಗೆ ಮೂರು ವಿಧಾನಗಳಿಂದ ಚರ್ಮದ ಮೇಲಿನ ಸುಕ್ಕು ತೆಗೆಯಲಾಗುತ್ತದೆ ಹಾಗೂ ಕಳೆಗುಂದಿದ ಚರ್ಮವನ್ನು ಸರಿಪಡಿಸಲಾಗುತ್ತದೆ. ಸಾಮಾನ್ಯವಾಗಿ ರೆಟಿನಾಲ್ ಎಂಬ ಅಂಶವಿರುವ ಕ್ರೀಂ ಸುಕ್ಕಿನ ನಿವಾರಣೆಗೆ ಸಹಾಯ ಮಾಡುತ್ತದೆ. ಪಿಗ್ಮೆಂಟೇಷನ್ ನಿಯಂತ್ರಣಕ್ಕೆ ಕೋಜಿಕ್ ಆ್ಯಸಿಡ್ ನೆರವಾಗುತ್ತದೆ.

ಆದರೆ ವೈದ್ಯರ ಸೂಕ್ತ ಮಾರ್ಗದರ್ಶನವಿಲ್ಲದೆ ಸ್ವಚಿಕಿತ್ಸೆ ಮಾಡಿಕೊಂಡರೆ ಅಪಾಯ ತಪ್ಪಿದ್ದಲ್ಲ. ಚರ್ಮಕ್ಕೆ ಏನನ್ನೇ ಹಚ್ಚಿದರೂ ಅದು ರಕ್ತವನ್ನು ಸೇರಿಕೊಳ್ಳುತ್ತದೆ ಎಂಬುದನ್ನು ಗಮನದಲ್ಲಿ ಇಡಬೇಕು. ಹಾಗೆಯೇ ಯಾವುದೇ ಕ್ರೀಂ ಇರಲಿ, ಚರ್ಮದ ಕೋಶದೊಳಗೆ ಹೋಗುತ್ತಾ ರಕ್ತವನ್ನು ಸೇರುತ್ತದೆ. ಇದು ಸಹಜವಾದ ಪ್ರಕ್ರಿಯೆ. ಕೆಲವರು ವಿಟಮಿನ್ ಸಪ್ಲಿಮೆಂಟ್‌ಗಳನ್ನು ಊಟದಂತೆ ತಿನ್ನುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ. ಇದು ಕೂಡ ಅಪಾಯವನ್ನು ತಂದೊಡ್ಡುತ್ತದೆ. ಎ, ಡಿ, ಇ, ಕೆ ವಿಟಮಿನ್ ಸಪ್ಲಿಮೆಂಟ್‌ಗಳನ್ನು ಊಟ ಆದ ಮೇಲಷ್ಟೆ ತೆಗೆದುಕೊಳ್ಳಬೇಕು.

ಚರ್ಮದ ಮೇಲೆ ಶಿಲೀಂಧ್ರ (ಫಂಗಲ್) ಸೋಂಕು ಉಂಟಾಯಿತೆಂದು ಬರುತ್ತಾರೆ. ಅಷ್ಟರಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಬಗೆ ಬಗೆಯ ಸ್ಟಿರಾಯ್ಡ್ ಕ್ರೀಂಗಳನ್ನು ಹಚ್ಚಿ ಆಗಿರುತ್ತದೆ. ಅಂತಹ ಕ್ರೀಂಗಳನ್ನು ವೈದ್ಯರ ಮಾರ್ಗದರ್ಶನವಿಲ್ಲದೇ ಹಚ್ಚುವಂತಿಲ್ಲ. ವೈದ್ಯರು ಕೊಟ್ಟರೂ ಅವರು ತಿಳಿಸಿದ ನಿಗದಿತ ಸಮಯದವರೆಗಷ್ಟೇ ಬಳಸಬೇಕು.

ವಯಸ್ಸಾಗುವುದನ್ನು ತಡೆಯಲು ಸಾಧ್ಯವಿಲ್ಲ. ಹಾಗೊಮ್ಮೆ ಮಾಡಿದರೆ ಅದು ಪ್ರಕೃತಿಗೆ ವಿರುದ್ಧವಾದ ನಡೆಯಾಗಿರುತ್ತದೆ. ಯಾವ ವಯಸ್ಸಿನಲ್ಲಿದ್ದರೂ 'ಪ್ರೆಸೆಂಟಬಲ್' ಆಗಿ ಕಾಣುವುದು ಮುಖ್ಯ. ಚರ್ಮ ಬಿಳಿಯಾಗಿರುವುದು ಚಂದದ ಸಂಕೇತವಲ್ಲ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಚರ್ಮದ ಬಣ್ಣ ಯಾವುದೇ ಇರಲಿ, ಅದು ಆರೋಗ್ಯದಿಂದ ನಳನಳಿಸುತ್ತಾ ಇರಬೇಕು. ಅದಕ್ಕಾಗಿ ಉತ್ತಮ ಜೀವನಶೈಲಿ, ಆಹಾರ ಪದ್ಧತಿಯನ್ನು ಅನುಸರಿಸಬೇಕು. ಸದಾ ದೇಹದಲ್ಲಿ ನೀರಿನಂಶ ಸಮಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಯೋಗ, ಪ್ರಾಣಾಯಾಮ ಹಾಗೂ ಧ್ಯಾನದ ಕಡೆಗೆ ಒತ್ತು ನೀಡಬೇಕು.


ಡಾ. ಅನ್ವಿತಾ ಚಿದಾನಂದ

ಶೆಫಾಲಿ ಅವರ ಮರಣೋತ್ತರ ಪರೀಕ್ಷೆಯ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಆ್ಯಂಟಿ ಏಜಿಂಗ್ ಅಷ್ಟೇ ಅಲ್ಲ ಪಿಗ್ಮೆಂಟೇಷನ್‌ಗೂ ಅವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದುದು ತಿಳಿದುಬರುತ್ತದೆ. ವಿಟಮಿನ್ 'ಸಿ' ಮತ್ತು ಗ್ಲುಟೋಥಯೋನ್‌ಗಳನ್ನು ಇಂಟ್ರಾವೀನಸ್ ಮೂಲಕ, ಅಂದರೆ ನರಗಳಿಗೆ ಇಂಜೆಕ್ಷನ್ ಕೊಟ್ಟುಕೊಳ್ಳುವ ಮೂಲಕ ನೇರವಾಗಿ ಪಡೆಯುತ್ತಿದ್ದರು.

ವೈದ್ಯರ ಮೇಲ್ವಿಚಾರಣೆ ಇಲ್ಲದೆ ಸ್ವತಃ ಇಂಜೆಕ್ಷನ್ ತೆಗೆದುಕೊಳ್ಳುವುದರಿಂದ ತೊಂದರೆ ಆಗಬಹುದು. ಈ ರೀತಿ ಸ್ವಚಿಕಿತ್ಸೆ ಮಾಡಿಕೊಂಡಾಗ, ಕೆಲವೊಮ್ಮೆ ಗಾಳಿಯು ನೇರವಾಗಿ ಹೃದಯಕ್ಕೆ ತಲುಪಿ, ಹೃದಯದ ಕಾರ್ಯ ಚಟುವಟಿಕೆಗಳಿಗೆ ತೀವ್ರ ತೊಂದರೆ ಉಂಟು ಮಾಡುತ್ತದೆ. ಇದರಿಂದ ಹೃದಯಾಘಾತ ಆಗುವ ಸಾಧ್ಯತೆ ಇರುತ್ತದೆ.

ಚಿಟಿಕೆ ಸುದ್ದಿ

ಶಂಕಿತ 'ನಿಫಾ' ಕೇರಳದ ಮೂರು ಜಿಲ್ಲೆಗಳಲ್ಲಿ ಕಟ್ಟೆಚ್ಚರ



ತಿರುವನಂತಪುರ (ಪಿಟಿಐ): ರಾಜ್ಯದಲ್ಲಿ ಎರಡು ಶಂಕಿತ ನಿಫಾ ವೈರಾಣು ಪ್ರಕರಣಗಳು ವರದಿಯಾಗಿರುವ ಬೆನ್ನಲ್ಲೇ ಕೇರಳದ ಆರೋಗ್ಯ ಇಲಾಖೆಯು ಮಲಪ್ಪುರಂ, ಕೋಯಿಕ್ಕೋಡ್ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಅಲ್ಲಿನ ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕೋಯಿಕ್ಕೋಡ್ ಮತ್ತು ಮಲಪ್ಪುರಂ ವೈದ್ಯಕೀಯ ಕಾಲೇಜಿನಲ್ಲಿ ಸೋಂಕಿತರ 'ಮಾದರಿ' ಪರೀಕ್ಷೆ ವೇಳೆ ಇಬ್ಬರಲ್ಲಿ ವೈರಾಣು ಇರುವ ಶಂಕೆ ವ್ಯಕ್ತವಾಗಿದೆ. ಇದನ್ನು ಖಚಿತಪಡಿಸಿಕೊಳ್ಳಲು 'ಮಾದರಿ'ಯನ್ನು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಲಾಗಿದ್ದು, ಅಲ್ಲಿಂದ ವರದಿ ಬಂದ ನಂತರವೇ ಇದನ್ನು ಖಚಿತಪಡಿಸಲು ಸಾಧ್ಯ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಬಿಜೆಪಿಗೆ ದಕ್ಷಿಣದ ಮಹಿಳೆ ಸಾರಥ್ಯ?

ನಿರ್ಮಲಾ ಸೀತಾರಾಮನ್, ಪುರಂದೇಶ್ವರಿ, ವನತಿ ಹೆಸರು ಮುಂಚೂಣಿಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಸ್ತಾವಕ್ಕೆ ಆರ್‌ಎಸ್‌ಎಸ್ ಪ್ರಮುಖರ ಒಪ್ಪಿಗೆ
- ಬಿಹಾರ, ತಮಿಳುನಾಡು, ಕೇರಳ, ಪ.ಬಂಗಾಳ ಚುನಾವಣೆಗಾಗಿ ತಂತ್ರ
- ಸಂಸತ್ ಅಧಿವೇಶನ ಆರಂಭಕ್ಕೂ ಮುನ್ನ ಪ್ರಕ್ರಿಯೆ ಪೂರ್ಣ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಈ ಸಲ ಮಹಿಳೆಯೊಬ್ಬರನ್ನು ನೇಮಿಸುವ ಸಂಭವ ಇದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂವರ ಹೆಸರು ಮುಂಚೂಣಿಗೆ ಬಂದಿದೆ.

ನೂತನ ಅಧ್ಯಕ್ಷರ ನೇಮಕದ ಸಂಬಂಧ ಪಕ್ಷದ ಉನ್ನತ ನಾಯಕರು ಸರಣಿ ಸಮಾಲೋಚನೆಗಳನ್ನು ನಡೆಸಿದ್ದಾರೆ. ಇದೀಗ, ಪಕ್ಷದ ಉನ್ನತ ಹುದ್ದೆಗೆ ನಿರ್ಮಲಾ ಸೀತಾರಾಮನ್, ಕೇಂದ್ರದ ಮಾಜಿ ಸಚಿವೆ ಡಿ.ಪುರಂದೇಶ್ವರಿ ಹಾಗೂ ತಮಿಳುನಾಡಿನ ಶಾಸಕಿ ವನತಿ ಶ್ರೀನಿವಾಸನ್ ಹೆಸರು ಪ್ರಮುಖವಾಗಿ ಕೇಳಿ ಬಂದಿದೆ. ಕಮಲ ಪಾಳಯದ ನಾಯಕರ ಈ ಪ್ರಸ್ತಾವಕ್ಕೆ ಆರ್‌ಎಸ್‌ಎಸ್ ಪ್ರಮುಖರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಈ ವರ್ಷಾಂತ್ಯದಲ್ಲಿ ಬಿಹಾರ, ಮುಂದಿನ ವರ್ಷ ಕೇರಳ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಸಂಘಟನಾತ್ಮಕ ಹಾಗೂ ಕಾರ್ಯತಂತ್ರದಲ್ಲಿ ಎಷ್ಟೇ ಕಸರತ್ತು ನಡೆಸಿದರೂ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಪ್ರಬಲವಾಗಿ ನೆಲೆಯೂರಲು ಸಾಧ್ಯವಾಗಿಲ್ಲ. ಈ ಸಲ ದಕ್ಷಿಣ ಭಾರತದವರಿಗೆ ಅಧ್ಯಕ್ಷ ಗಾದಿ ನೀಡಲು ಪಕ್ಷ ಚಿಂತನೆ ನಡೆಸಿದೆ. ಜತೆಗೆ, ಪಕ್ಷವು ಇಲ್ಲಿಯವರೆಗೆ ಮಹಿಳಾ ಅಧ್ಯಕ್ಷರನ್ನು ಕಂಡಿಲ್ಲ.

ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಮುನ್ನ ಶೇ 50 ರಾಜ್ಯಗಳಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡಿರಬೇಕು. ಈ ವಾರ ಆರು ರಾಜ್ಯಗಳಲ್ಲಿ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಮುಗಿದಿದೆ. ಈ ಮೂಲಕ, 22 ರಾಜ್ಯಗಳಲ್ಲಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡಂತಾಗಿದೆ. ಇದರಿಂದಾಗಿ, ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಗೆ ಹಾದಿ ಸುಗಮಗೊಂಡಿದೆ. ಸಂಸತ್ ಅಧಿವೇಶನ ಆರಂಭವಾಗುವ ಮುನ್ನ ಈ ಪ್ರಕ್ರಿಯೆ ಪೂರ್ಣಗೊಳಿಸಲು ಬಿಜೆಪಿ ಯೋಜಿಸಿದೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಸುದೀರ್ಘವಾಗಿ ಸಮಾಲೋಚನೆ ನಡೆಸಿದ್ದರು. ಅವರ ವ್ಯಾಪಕ ಅನುಭವ ಹಾಗೂ ನಾಯಕತ್ವ ಸಾಮರ್ಥ್ಯವನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳಲು ಪಕ್ಷ ಬಯಸಿದೆ.

ಹರಿಯಾಣ, ಮಹಾರಾಷ್ಟ್ರ ಹಾಗೂ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭೂತಪೂರ್ವ ಗೆಲುವಿಗೆ ಮಹಿಳಾ ಮತದಾರರು ಕೈ ಹಿಡಿದಿದ್ದು ಪ್ರಮುಖ ಕಾರಣ. ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆಗೆ ಸಂಸತ್‌ನಲ್ಲಿ 2023ರಲ್ಲಿ ಒಪ್ಪಿಗೆ ಸಿಕ್ಕಿದೆ. ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಮುಗಿದ ಬಳಿಕ ಶೇ 33ರಷ್ಟು ಮೀಸಲಾತಿ ಜಾರಿಗೆ ಬರಲಿದೆ. ಮಹಿಳಾ ಮತ ಬ್ಯಾಂಕ್ ಅನ್ನು ಭದ್ರಪಡಿಸಲು ಇನ್ನೊಂದು ಪ್ರಯೋಗಕ್ಕೆ ಕಮಲ ಪಾಳಯ ಮುಂದಾಗಿದೆ.

ಮೂವರ ಕಿರು ಪರಿಚಯ



ನಿರ್ಮಲಾ ಸೀತಾರಾಮನ್: ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಈ ಹಿಂದೆ ರಕ್ಷಣಾ ಸಚಿವರಾಗಿದ್ದರು. 2019ರಿಂದ ಹಣಕಾಸು ಸಚಿವರಾಗಿದ್ದಾರೆ. ನಿರ್ಮಲಾ ಮೂಲತಃ ತಮಿಳುನಾಡಿನವರು. ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದರೆ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹೆಚ್ಚು ಅನುಕೂಲವಾಗಬಹುದು ಎಂಬುದು ಪಕ್ಷದ ನಾಯಕರ ಲೆಕ್ಕಾಚಾರ.



ಡಿ.ಪುರಂದೇಶ್ವರಿ: ಯುಪಿಎ ಸರ್ಕಾರದಲ್ಲಿ ಅವರು ಕೇಂದ್ರ ಸಚಿವರಾಗಿದ್ದರು. ಆಂಧ್ರ ಪ್ರದೇಶದ ಬಿಜೆಪಿ ಘಟಕದ ಮಾಜಿ ಅಧ್ಯಕ್ಷೆ. ಲೋಕಸಭಾಧ್ಯಕ್ಷ ಸ್ಥಾನಕ್ಕೆ ಅವರ ಹೆಸರು ಪ್ರಮುಖವಾಗಿ ಕೇಳಿಬಂದಿತ್ತು.



ವನತಿ ಶ್ರೀನಿವಾಸನ್: ವಕೀಲೆಯಾಗಿರುವ ವನತಿ ಅವರು ಕೊಯಮತ್ತೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕಿ. 1993ರಲ್ಲಿ ಬಿಜೆಪಿಗೆ ಸೇರಿದ್ದ ಅವರು ಪಕ್ಷದ ರಾಜ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷೆ ಸೇರಿದಂತೆ ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದರು. ಬಿಜೆಪಿ ರಾಷ್ಟ್ರೀಯ ಮಹಿಳಾ ಮೋರ್ಚಾದ ಅಧ್ಯಕ್ಷರಾಗಿ 2020ರಲ್ಲಿ ನೇಮಿಸಲಾಗಿತ್ತು. 2022ರಲ್ಲಿ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿತ್ತು.

ಜೆ.ಪಿ.ನಡ್ಡಾ ಅವರು ಪಕ್ಷದ ಅಧ್ಯಕ್ಷರಾಗಿ ನೇಮಕವಾಗಿದ್ದು 2020ರ ಜನವರಿಯಲ್ಲಿ. ಅವರ ಮೂರು ವರ್ಷಗಳ ಅಧಿಕಾರದ ಅವಧಿ 2023ರ ಜನವರಿಗೆ ಮುಗಿದಿತ್ತು. ಬಳಿಕ ಒಂದು ವರ್ಷ ಅವಧಿ ವಿಸ್ತರಿಸಲಾಗಿತ್ತು. ಲೋಕಸಭಾ ಚುನಾವಣಾ ಕಾರಣಕ್ಕೆ ಮತ್ತೆ ಆರು ತಿಂಗಳು ಅವಧಿ ವಿಸ್ತರಣೆ ಮಾಡಲಾಗಿತ್ತು. 2024ರಲ್ಲಿ ಅವರು ಕೇಂದ್ರ ಸಂಪುಟಕ್ಕೆ ಸೇರ್ಪಡೆಯಾಗಿದ್ದರು.

ನಟ ವಿಜಯ್ 'ಟಿವಿಕೆ' ಮುಖ್ಯಮಂತ್ರಿ ಅಭ್ಯರ್ಥಿ



ವಿಜಯ್

ಚೆನ್ನೈ (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸ್ಥಾಪಕ, ನಟ ವಿಜಯ್ ಅವರು 2026ರ ತಮಿಳುನಾಡು ವಿಧಾನಸಭಾ ಚುನಾವಣೆಯ 'ಟಿವಿಕೆ' ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ಇಲ್ಲಿ ನಡೆದ 'ಟಿವಿಕೆ' ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿಶೇಷ ನಿರ್ಣಯದ ಮೂಲಕ ವಿಜಯ್ ಆಯ್ಕೆಯನ್ನು ಅಂತಿಮಗೊಳಿಸಲಾಯಿತು. 2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಡಿಎಂಕೆಯೊಂದಿಗೆ ಯಾವುದೇ ಮೈತ್ರಿ ಇಲ್ಲ ಎಂದೂ ಟಿವಿಕೆ ಸ್ಪಷ್ಟಪಡಿಸಿದೆ.

ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಬೆನ್ನಲ್ಲೇ, ಮುಂದಿನ ತಿಂಗಳು ದೊಡ್ಡ ಮಟ್ಟದಲ್ಲಿ ರಾಜ್ಯ ಮಟ್ಟದ ಸಮ್ಮೇಳನ ನಡೆಸಲಾಗುವುದು. ಪಕ್ಷದ ಸಿದ್ಧಾಂತಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಹಳ್ಳಿಗಳಲ್ಲಿ ಸಾರ್ವಜನಿಕ ಸಭೆಗಳನ್ನು ಆಯೋಜಿಸಲಾಗುವುದು ಎಂದು 'ಟಿವಿಕೆ' ಹೇಳಿದೆ.

ಮುಂದಿನ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಲವು ಪ್ರಮುಖ ನಿರ್ಣಯಗಳನ್ನು ಟಿವಿಕೆ ಕಾರ್ಯಕಾರಿ ಸಮಿತಿ ಅಂಗೀಕರಿಸಿದೆ.

ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ಹಗೆತನದಿಂದ ಕೂಡಿದ್ದು, ಇದು ತಮಿಳುನಾಡಿನ 'ದ್ವಿಭಾಷಾ' ನೀತಿಯ ಮೇಲೆ ನಡೆದಿರುವ ನೇರ ದಾಳಿ. ತಮಿಳುನಾಡಿನಲ್ಲಿ ಹಿಂದಿ ಮತ್ತು ಸಂಸ್ಕೃತ ಹೇರಿಕೆಯನ್ನು ಒಪ್ಪುವುದಿಲ್ಲ ಎಂದೂ ಟಿವಿಕೆ ಕಾರ್ಯಕಾರಿ ಸಮಿತಿ ಅಭಿಪ್ರಾಯಪಟ್ಟಿದೆ.

ಚುನಾವಣಾ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆಗೆ ಮುಂದಾಗಿರುವುದನ್ನೂ ಪಕ್ಷ ಖಂಡಿಸುತ್ತದೆ. ತಮಿಳುನಾಡಿನಲ್ಲಿ ಅಲ್ಪಸಂಖ್ಯಾತರ ಮತಗಳನ್ನು ಕಡಿತ ಮಾಡಿ, ಬಿಜೆಪಿ ಪರ ಮತಗಳನ್ನು ಹೆಚ್ಚಿಸುವುದೇ ಇದರ ಮುಖ್ಯ ಉದ್ದೇಶ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ' ಎಂದು 'ಟಿವಿಕೆ' ಹೇಳಿದೆ.

ಮೈತ್ರಿ ಇಲ್ಲ: ಬಿಜೆಪಿ ಮತ್ತು ಎಐಎಡಿಎಂಕೆ ಜೊತೆಯಲ್ಲಿ ಯಾವುದೇ ರೀತಿಯ ಚುನಾವಣಾ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ವಿಜಯ್ ಅವರು ಪ್ರತಿಕ್ರಿಯಿಸಿದರು.

ಮರಾಠಿ ಮಾತನಾಡದ್ದಕ್ಕೆ ಮಳಿಗೆ ಮಾಲೀಕನ ಮೇಲೆ ಹಲ್ಲೆ ನಡೆಸಿದ ಪ್ರಕರಣ

ಎಂಎನ್‌ಎಸ್ ಕಾರ್ಯಕರ್ತರು ವಶಕ್ಕೆ

ಮುಂಬೈ (ಪಿಟಿಐ): ಮರಾಠಿ ಮಾತನಾಡಿಲ್ಲ ಎಂಬ ಕಾರಣಕ್ಕೆ ಆಹಾರ ಮಳಿಗೆ ಮಾಲೀಕನ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ರಾಜ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ನವನಿರ್ಮಾಣ ಸೇನೆಯ (ಎಂಎನ್‌ಎಸ್) ಏಳು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಠಾಣೆ ಜಿಲ್ಲೆಯ ಭಯಂದರ್ ಪ್ರದೇಶದಲ್ಲಿ ಆಹಾರ ಮಳಿಗೆಯ ಮಾಲೀಕನಿಗೆ ಗುಂಪೊಂದು ಮಂಗಳವಾರ ಹಲ್ಲೆ ನಡೆಸಿತ್ತು. ಹಲ್ಲೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಹಲ್ಲೆ ನಡೆಸಿದ ವ್ಯಕ್ತಿಗಳು ಎಂಎನ್‌ಎಸ್‌ನ ಲಾಂಛನ ಹೊಂದಿರುವ ಶಾಲು ಧರಿಸಿದ್ದು ವಿಡಿಯೊದಲ್ಲಿ ಕಂಡುಬಂದಿತ್ತು.

ಆಹಾರ ಖರೀದಿಸಲು ಬಂದವರಲ್ಲಿ ಒಬ್ಬನು ಅಂಗಡಿಯ ಮಾಲೀಕನಲ್ಲಿ ಮರಾಠಿಯಲ್ಲಿ ಮಾತನಾಡುವಂತೆ ಕೇಳಿಕೊಂಡಿದ್ದಾನೆ. ಅದಕ್ಕೆ ಮಾಲೀಕ ಒಪ್ಪಲಿಲ್ಲ. ಇದರಿಂದ ಎರಡೂ ಕಡೆಯವರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಕೆಲವರು ಅಂಗಡಿಯ ಮಾಲೀಕನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಕಾಶಿಮಿರಾ ಠಾಣೆ ಪೊಲೀಸರು ಎಂಎನ್‌ಎಸ್‌ನ ಏಳು ಕಾರ್ಯಕರ್ತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯಡಿ ಗಲಭೆ, ಬೆದರಿಕೆ ಮತ್ತು ಹಲ್ಲೆ ಪ್ರಕರಣ ದಾಖಲಿಸಿದ್ದಾರೆ. ಆರೋಪಿಗಳನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ ಬಳಿಕ ಎಚ್ಚರಿಕೆ ಕೊಟ್ಟು ಕಳುಹಿಸಲಾಯಿತು ಎಂದು ಎಸ್ಐ ಕಿರಣ್ ಕದಮ್ ಶುಕ್ರವಾರ ತಿಳಿಸಿದ್ದಾರೆ.

ಮಹಾರಾಷ್ಟ್ರದ ವಾಣಿಜ್ಯ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳಲ್ಲಿ ಸಿಬ್ಬಂದಿಯು ಗ್ರಾಹಕರ ಜತೆ ಮರಾಠಿಯಲ್ಲೇ ವ್ಯವಹರಿಸುವುದನ್ನು ಕಡ್ಡಾಯಗೊಳಿಸಬೇಕು ಎಂದು ಎಂಎನ್‌ಎಸ್ ಒತ್ತಾಯಿಸುತ್ತಲೇ ಬಂದಿದೆ.

ಪುರಿ: ಸಾವಿರಾರು ಭಕ್ತರಿಂದ ದರ್ಶನ

ಪುರಿ (ಪಿಟಿಐ): 'ನವಮಿ ತಿಥಿ'ಯ ಸಂದರ್ಭದಲ್ಲಿ 'ಸಂಧ್ಯಾ ದರ್ಶನ'ಕ್ಕಾಗಿ ಇಲ್ಲಿನ ಶ್ರೀ ಗುಂಡಿಚಾ ದೇವಸ್ಥಾನಕ್ಕೆ ಸಾವಿರಾರು ಭಕ್ತರು ಆಗಮಿಸಿದ್ದರು. ಶನಿವಾರ 'ಬಹುದ ಯಾತ್ರೆ' ನಡೆಯಲಿರುವುದರಿಂದ ಜನ್ಮಸ್ಥಳದಲ್ಲಿ ಬಲಭದ್ರ, ದೇವಿ ಸುಭದ್ರ ಹಾಗೂ ಸ್ವಾಮಿ ಜಗನ್ನಾಥ ದೇವರ ದರ್ಶನ ಪಡೆಯಲು ಶುಕ್ರವಾರ ಕೊನೆಯ ದಿನವಾಗಿತ್ತು.

ಬಹುದ ಯಾತ್ರೆಯೊಂದಿಗೆ ಎಲ್ಲಾ ದೇವರುಗಳನ್ನು ಮೂಲ ನಿವಾಸ ಎನ್ನಲಾಗುವ ದೇವಸ್ಥಾನಕ್ಕೆ ಕರೆದೊಯ್ಯಲಾಗುತ್ತದೆ. ಜೂನ್ 27ರಂದು ಆರಂಭವಾದ 9 ದಿನದ ಯಾತ್ರೆಯು ಶನಿವಾರ ಮುಕ್ತಾಯವಾಗಲಿದೆ. ದರ್ಶನ ಸುಗಮವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಡಿಜಿಪಿ ವೈ.ಬಿ ಖುರಾನಿಯಾ ಹಾಗೂ ಇತರ ಅಧಿಕಾರಿಗಳು ಸ್ಥಳದಲ್ಲಿ ಮೇಲ್ವಿಚಾರಣೆ ನಡೆಸಿದರು.

'ಭಕ್ತರು ಸರತಿ ಸಾಲಿನಲ್ಲಿ ದರ್ಶನ ಪಡೆಯುತ್ತಿದ್ದು, ಮುಂಜಾನೆಯಿಂದಲೂ ದರ್ಶನ ಸುಗಮವಾಗಿ ನಡೆಯುತ್ತಿದೆ. ಭಕ್ತರ ಭದ್ರತೆಗೆ ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎಂದು ಖುರಾನಿಯಾ ಹೇಳಿದರು.

ಶುಕ್ರವಾರ ಸಂಜೆ 6 ಗಂಟೆವರೆಗೆ ದೇವಸ್ಥಾನ ಪ್ರವೇಶಕ್ಕೆ ಭಕ್ತರಿಗೆ ಅವಕಾಶ ನೀಡಲಾಗುವುದು ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿತು.

ಆಷಾಢ ಏಕಾದಶಿ

ಪಿಟಿಐ ಚಿತ್ರ



ಆಷಾಢ ಏಕಾದಶಿ ಅಂಗವಾಗಿ ಮುಂಬೈನಲ್ಲಿ ಶುಕ್ರವಾರ ನಡೆದ 'ದಿಂಡಿ' ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಮಕ್ಕಳು

ಹಿಂದೂಗಳನ್ನು ಗುರಿಪಡಿಸಲಾಗುತ್ತಿದೆ: ನಿತೇಶ್ ರಾಣೆ

ಮರಾಠಿಯಲ್ಲಿ ಮಾತನಾಡದ್ದಕ್ಕೆ ಹಿಂದೂಗಳನ್ನು ಗುರಿಯಾಗಿಸಲಾಗುತ್ತಿದೆ ಎಂದು ಬಿಜೆಪಿ ನಾಯಕ ಮತ್ತು ಮಹಾರಾಷ್ಟ್ರ ಸಚಿವ ನಿತೇಶ್ ರಾಣೆ ಆರೋಪಿಸಿದ್ದು, 'ಟೋಪಿ ಧರಿಸುವವರು ಮರಾಠಿಯನ್ನು ಚೆನ್ನಾಗಿ ಮಾತನಾಡುವರೇ' ಎಂದು ಪ್ರಶ್ನಿಸಿದ್ದಾರೆ.

ಮರಾಠಿ ಮಾತನಾಡದ್ದಕ್ಕೆ ವ್ಯಕ್ತಿಯ ಮೇಲೆ ಹಲ್ಲೆ ನಡೆದ ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಒಬ್ಬ ಹಿಂದೂ ವ್ಯಕ್ತಿಯನ್ನು ಥಳಿಸಲಾಯಿತು... ಬಡ ಹಿಂದೂಗಳ ಮೇಲೆ ಯಾಕಾಗಿ ಹಲ್ಲೆ ನಡೆಸಲಾಗುತ್ತಿದೆ? ನಿಮಗೆ ಧೈರ್ಯವಿದ್ದರೆ, ನಲ್ ಬಜಾರ್ ಅಥವಾ ಮೊಹಮ್ಮದ್ ಅಲಿ ರಸ್ತೆಗೆ ಹೋಗಿ ತಾಕತ್ತು ಪ್ರದರ್ಶಿಸಿ' ಎಂದು ಹೇಳಿದ್ದಾರೆ.

ದಕ್ಷಿಣ ಮುಂಬೈನ ನಲ್ ಬಜಾರ್ ಮತ್ತು ಮೊಹಮ್ಮದ್ ಅಲಿ ರಸ್ತೆ ಮುಸ್ಲಿಂ ಬಾಹುಳ್ಯದ ಪ್ರದೇಶಗಳಾಗಿವೆ. 'ಮೊಹಮ್ಮದ್ ಅಲಿ ರಸ್ತೆಯಲ್ಲಿರುವ ಗಡ್ಡಧಾರಿಗಳು ಮತ್ತು ಟೋಪಿ ಧರಿಸಿದವರು ಮರಾಠಿಯನ್ನು ಚೆನ್ನಾಗಿ ಮಾತನಾಡುವರೇ? ಜಾವೇದ್ ಅಖ್ತರ್ ಅಥವಾ ಅಮೀರ್ ಖಾನ್ ಮರಾಠಿ ಮಾತನಾಡುವರೇ?' ಎಂದಿದ್ದಾರೆ.

'ಹಿಂದೂಗಳನ್ನು ಒಡೆಯುವ ಹುನ್ನಾರದೊಂದಿಗೆ ಹಿಂದಿ ಭಾಷೆಯ ಕುರಿತ ವಿವಾದ ಸೃಷ್ಟಿಸಲಾಗಿದೆ' ಎಂದು ದೂರಿದ್ದಾರೆ.

'ಹಿಂಸೆ ಒಪ್ಪಲಾಗದು'

'ರಾಜ್ಯದ ಜನರು ಮರಾಠಿ ಮಾತನಾಡಬೇಕೆಂದು ನಿರೀಕ್ಷಿಸುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ, ಭಾಷೆಯ ಹೆಸರಿನಲ್ಲಿ ಹಿಂಸೆಗಿಳಿಯುವುದನ್ನು ಒಪ್ಪಲಾಗದು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರತಿಕ್ರಿಯಿಸಿದ್ದಾರೆ.

'ಮಹಾರಾಷ್ಟ್ರದಲ್ಲಿ ನೀವು ಮರಾಠಿ ಮಾತನಾಡುವಂತೆ ಜನರನ್ನು ಕೇಳಬಹುದು. ಆದರೆ, ಭಾಷೆಯ ವಿಚಾರದಲ್ಲಿ ಒಬ್ಬರು 'ಹಠಮಾರಿ' ಆಗಿರಬಾರದು. ಮರಾಠಿಗರು ಇತರ ಭಾಷೆಗಳ ವಿರುದ್ಧ ಇಷ್ಟೊಂದು ದ್ವೇಷ ಹೊಂದಲು ಸಾಧ್ಯವಿಲ್ಲ' ಎಂದು ಶುಕ್ರವಾರ ಹೇಳಿದ್ದಾರೆ.

ಇ.ಡಿ ಪ್ರಕರಣವೇ ವಿಚಿತ್ರ: ಸೋನಿಯಾ



ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): 'ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣ ನಿಜವಾಗಿಯೂ ವಿಚಿತ್ರವಾಗಿದೆ. ವಿಚಿತ್ರ ವಷ್ಟೆ ಅಲ್ಲ, ಇದೊಂದು ಅಸಾಮಾನ್ಯ ಪ್ರಕರಣವೂ ಆಗಿದೆ' ಎಂಬ ವಾದವನ್ನು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಶುಕ್ರವಾರ ಮಂಡಿಸಿದ್ದಾರೆ.

ಸೋನಿಯಾ ಗಾಂಧಿ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಹಣದ ಅಕ್ರಮ ವರ್ಗಾವಣೆ ನಡೆದಿದೆ ಎಂದು ಆರೋಪಿಸಲಾಗಿರುವ ಪ್ರಕರಣವಿದು. ಆದರೆ, ಇಲ್ಲಿ ಯಾವುದೇ ಸ್ವತ್ತು ಒಳಗೊಂಡಿರದ ಅಥವಾ ಕೇವಲ ಸ್ವತ್ತಿನ ಕಲ್ಪನೆ ಆಧಾರದಲ್ಲಿ ಆರೋಪ ಮಾಡಲಾಗಿರುವ ಪ್ರಕರಣ ಇದಾಗಿದೆ' ಎಂದು ವಾದಿಸಿದರು.

ಜಾರಿ ನಿರ್ದೇಶನಾಲಯ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಜುಲೈ 3ರಂದು ತಮ್ಮ ವಾದ ಪೂರ್ಣಗೊಳಿಸಿದ್ದರು. ಶುಕ್ರವಾರ ಪ್ರತಿವಾದ ಮಂಡನೆ ವೇಳೆ, ಸಿಂಘ್ವಿ ಅವರು ಈ ಮಾತು ಹೇಳಿದರು.

ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ₹90 ಕೋಟಿ ಸಾಲ ಪಡೆದಿತ್ತು. ಈ ಸಾಲ ತೀರಿಸುವುದಕ್ಕೆ ಪ್ರತಿಯಾಗಿ ವಂಚನೆ ಮಾರ್ಗದ ಮೂಲಕ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಯಂಗ್ ಇಂಡಿಯನ್ ಕಂಪನಿಯಲ್ಲಿ ಶೇ 76ರಷ್ಟು ಷೇರುಗಳನ್ನು ಪಡೆದು ಕೊಂಡಿದ್ದಾರೆ ಎಂದು ಇ.ಡಿ ಆರೋಪಿಸಿದೆ.


ಇದನ್ನು ಪ್ರಸ್ತಾಪಿಸಿ ವಾದ ಮುಂದುವರಿಸಿದ ಸಿಂಘ್ವಿ, 'ಎಜೆಎಲ್ ಅನ್ನು ಸಾಲಮುಕ್ತ ಮಾಡುವ ಭಾಗವಾಗಿ ಯಂಗ್ ಇಂಡಿಯನ್ ಕಂಪನಿಯ ಷೇರುಗಳನ್ನು ಪಡೆದುಕೊಳ್ಳಲಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿದರು.

'ಸಾಲ ಮುಕ್ತವಾಗುವುದಕ್ಕೆ ಪ್ರತಿಯೊಂದು ಕಂಪನಿಗೆ ಕಾನೂನಿನಡಿ ಹಲವು ಅವಕಾಶಗಳು ಇವೆ. ಒಂದು ಸಂಸ್ಥೆಯನ್ನು ಸಾಲ ಮುಕ್ತ ಮಾಡಿದ ಮೇಲೆ, ಆ ಸಾಲವನ್ನು ಮತ್ತೊಂದು ಕಂಪನಿಗೆ ವಹಿಸಲಾಗುತ್ತದೆ. ಹೀಗಾಗಿ ಒಂದು ಕಂಪನಿ ಸಾಲದಿಂದ ಮುಕ್ತವಾಗುತ್ತದೆ. ಅದರಲ್ಲೂ ಯಂಗ್ ಇಂಡಿಯನ್, ಲಾಭ ಮಾಡಿಕೊಳ್ಳುವ ಉದ್ದೇಶದ ಕಂಪನಿಯಲ್ಲ' ಎಂದು ಸಿಂಘ್ವಿ ವಾದಿಸಿದರು. 'ಹಲವು ವರ್ಷಗಳ ಕಾಲ ಯಾವ ಕ್ರಮವನ್ನೂ ಜರುಗಿಸದ ಜಾರಿ ನಿರ್ದೇಶನಾಲಯ, ಖಾಸಗಿ ದೂರು ಆಧರಿಸಿ ಪ್ರಕರಣ ದಾಖಲಿಸಿದೆ' ಎಂದೂ ಹೇಳಿದರು.

ಅರ್ಜಿ ತಿರಸ್ಕರಿಸಿದ ಹೈಕೋರ್ಟ್

ಲಖನೌ: ಮಥುರಾದ ಶ್ರೀ ಕೃಷ್ಣ ಜನ್ಮಭೂಮಿ ದೇವಸ್ಥಾನದ ಪಕ್ಕದಲ್ಲಿರುವ 'ಶಾಹಿ ಈದ್ಗಾ ಮಸೀದಿಯನ್ನು ವಿವಾದಿತ ರಚನೆ ಪರಿಗಣಿಸಬೇಕು ಎಂದು ಕೋರಿ ಹಿಂದೂ ಪ್ರತಿವಾದಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ. 'ಸಾಕ್ಷ್ಯ ಹಾಗೂ ದಾಖಲೆಗಳನ್ನು ಒದಗಿಸದೇ, ಶಾಹಿ ಈದ್ಗಾ ಮಸೀದಿಯನ್ನು ವಿವಾದಿತ ರಚನೆ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದು ತಿಳಿಸಿದ ನ್ಯಾಯ ಮೂರ್ತಿ ರಾಮ್ ಮನೋಹರ್ ಮಿಶ್ರಾ ನೇತೃತ್ವದ ಏಕಸದಸ್ಯ ಪೀಠವು ಅರ್ಜಿ ತಿರಸ್ಕರಿಸಿತು.

ಗ್ಯಾನವಾಪಿ: ಆಗಸ್ಟ್ 6ಕ್ಕೆ ವಿಚಾರಣೆ ಮುಂದೂಡಿಕೆ



ಪ್ರಯಾಗ್‌ರಾಜ್ (ಪಿಟಿಐ): ಗ್ಯಾನವಾಪಿ ಮಸೀದಿ ಸಂಕೀರ್ಣದ ಒಳಗಿರುವ ಶಿವಲಿಂಗ ಹೊರತುಪಡಿಸಿ, ಶುದ್ಧೀಕರಣದ ಕೊಳದ ಕುರಿತಂತೆ ಭಾರತೀಯ ಪುರಾತತ್ವ ಇಲಾಖೆಯು (ಎಎಸ್ಐ) ಸಮೀಕ್ಷಾ ವರದಿ ಕುರಿತಾದ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಆಗಸ್ಟ್ 6ಕ್ಕೆ ಮುಂದೂಡಿದೆ.

ಯಾವುದೇ ಸಮೀಕ್ಷೆ ಅಥವಾ ಅಂತಿಮ ಆದೇಶ ಹೊರಡಿಸುವುದನ್ನು ನಿರ್ಬಂಧಿಸಿ ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ ಪ್ರಕಟಿಸಿತ್ತು. ಶುಕ್ರವಾರ ಪ್ರಕರಣದ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ ಜಾರಿಯಲ್ಲಿದೆ ಎಂದು ವಕೀಲರೊಬ್ಬರು ನ್ಯಾಯಾಲಯದ ಗಮನಕ್ಕೆ ತಂದರು. ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿ ರಂಜನ್ ಅಗರ್‌ವಾಲ್ ವಿಚಾರಣೆಯನ್ನು ಮುಂದೂಡಿದರು. ಈ ಕುರಿತು ಪುನರ್ ಪರಾಮರ್ಶಿಸುವಂತೆ ಕೋರಿ ರಾಖಿ ಸಿಂಗ್ ಅರ್ಜಿ ಸಲ್ಲಿಸಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಪ್ರತಿಭೆ ನಿಜವಾಗಿ ಒಂದು ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು.

–ತೀ.ನಂ. ಶ್ರೀಕಂಠಯ್ಯ

ಸಂಪಾದಕೀಯ

ದಲೈ ಲಾಮಾ ಉತ್ತರಾಧಿಕಾರಿ ಆಯ್ಕೆ ಮತ್ತೆ ಬಯಲಾದ ಚೀನಾ ಹುನ್ನಾರ

ಟಿಬೆಟ್‌ನ ಬೌದ್ಧರ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರ ಉತ್ತರಾಧಿಕಾರಿಯ ಆಯ್ಕೆಗೆ ತನ್ನ ಸಮ್ಮತಿ ಅಗತ್ಯ ಎಂದು ಪ್ರತಿಪಾದಿಸುವ ಮೂಲಕ ಚೀನಾ ಧಾರ್ಷ್ಟ್ಯ ಪ್ರದರ್ಶಿಸಿದೆ. ಉತ್ತರಾಧಿಕಾರಿ ಆಯ್ಕೆಯ ವಿಷಯದಲ್ಲಿ ಅನಗತ್ಯವಾಗಿ ಮೂಗು ತೂರಿಸುವ ಮೂಲಕ ಧರ್ಮದ ವ್ಯವಹಾರದಲ್ಲಿ ರಾಜಕೀಯ ಮಾಡುವ ಹುನ್ನಾರವನ್ನು ಅದು ನಡೆಸಿದೆ. 'ಟಿಬೆಟ್ ವಿಷಯದಲ್ಲಿ ಭಾರತವು ಎಚ್ಚರಿಕೆಯಿಂದ ವರ್ತಿಸಬೇಕು' ಎಂದು ಬೇರೆ ತನ್ನ ನೆರೆಯ ದೇಶಕ್ಕೆ ತಾಕೀತು ಮಾಡಿದೆ. ಟಿಬೆಟ್‌ನ ಬೌದ್ಧಮತದ ಮೇಲೆ ನಿಯಂತ್ರಣ ಸಾಧಿಸುವ ಆಕಾಂಕ್ಷೆಯಿಂದ, ಆ ಧರ್ಮದಲ್ಲಿ ಒಡಕು ಉಂಟುಮಾಡುವ ದುಸ್ಸಾಹಸಕ್ಕೂ ಚೀನಾ ಕೈಹಾಕಿದೆ. ದಲೈ ಲಾಮಾ ಅವರನ್ನು ಪ್ರತ್ಯೇಕತಾವಾದಿ ಎಂದು ಪರಿಗಣಿಸಿರುವ ಚೀನಾ, ಟಿಬೆಟ್ ಬೌದ್ಧಮತದ ಮೇಲೆ ಹಿಡಿತ ಸಾಧಿಸುವಲ್ಲಿ ಅವರೇ ದೊಡ್ಡ ಅಡೆತಡೆ ಎಂದು ಬಲವಾಗಿ ನಂಬಿದೆ. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಜೂನ್ 30ರಂದು ನಡೆದ ತಮ್ಮ 90ನೇ ಹುಟ್ಟುಹಬ್ಬದ ಪೂರ್ವಭಾವಿ ಸಭೆಯಲ್ಲಿ ದಲೈ ಲಾಮಾ ಅವರು ಆಡಿದ ಮಾತು, ಚೀನಾದ ಷಿ ಜಿನ್‌ಪಿಂಗ್ ಆಡಳಿತಕ್ಕೆ ಕಸಿವಿಸಿ ಉಂಟುಮಾಡಿದೆ. ತಮ್ಮ ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆಯು 'ಗಾಡೆನ್ ಫೋಡ್ರಾಂಗ್ ಟ್ರಸ್ಟ್' (ದಲೈ ಲಾಮಾ ಅವರು ಭಾರತದಲ್ಲಿ ಸ್ಥಾಪಿಸಿರುವ ಸ್ವಯಂಸೇವಾ ಸಂಸ್ಥೆ) ಮೂಲಕ ನಡೆಯಲಿದ್ದು, ಟಿಬೆಟ್ ಬೌದ್ಧಧರ್ಮದ ಸಂಪ್ರದಾಯಕ್ಕೆ ಅನುಗುಣವಾಗಿ ಆ ಪ್ರಕ್ರಿಯೆ ಇರಲಿದೆ ಎಂದು ಅವರು ಪ್ರಕಟಿಸಿದ್ದಾರೆ. ಬೌದ್ಧರ ಈ ಆಧ್ಯಾತ್ಮಿಕ ಗುರು ತಮ್ಮ ಉತ್ತರಾಧಿಕಾರಿಯನ್ನು ತಾವೇ ಆಯ್ಕೆ ಮಾಡುವ ಅಧಿಕಾರ ಹೊಂದಿದ್ದಾರೆ ಎನ್ನುವುದು ಭಾರತ ಸರ್ಕಾರದ ನಿಲುವಾಗಿದೆ. ಹೀಗಾಗಿ, ಭಾರತ ಕೂಡ ಷಿ ಜಿನ್‌ಪಿಂಗ್ ಆಡಳಿತದ ಕೆಂಗಣ್ಣಿಗೆ ಗುರಿಯಾಗಿದೆ.



ದಲೈ ಲಾಮಾ ಅವರೇ ತಮ್ಮ ಉತ್ತರಾಧಿಕಾರಿ ಆಯ್ಕೆಯ ನಿರ್ಧಾರ ಕೈಗೊಳ್ಳಬೇಕು, ಅದರಲ್ಲಿ ಯಾವುದೇ ಸರ್ಕಾರದ ಪಾತ್ರವಿರಬಾರದು ಎನ್ನುವ ಭಾರತದ ನಿಲುವು ತುಂಬಾ ಸ್ಪಷ್ಟವಾಗಿದೆ.

ಟಿಬೆಟ್‌ನ ಸ್ವಾತಂತ್ರ್ಯಕ್ಕಾಗಿ ಚೀನಾದ ಕಮ್ಯುನಿಸ್ಟ್ ನಾಯಕ ಮಾವೊ ವಿರುದ್ಧ ವಿಫಲ ಹೋರಾಟ ನಡೆಸಿ, 1959ರಲ್ಲಿ ತಮ್ಮ ಅನುಯಾಯಿಗಳೊಂದಿಗೆ ಭಾರತಕ್ಕೆ ಪಲಾಯನ ಮಾಡಿದವರು ದಲೈ ಲಾಮಾ. ಟಿಬೆಟ್‌ನಿಂದ ಬಂದ ಅವರ ಲಕ್ಷಾಂತರ ಅನುಯಾಯಿಗಳಿಗೂ ಭಾರತವು ನೆಲೆ ಒದಗಿಸಿದೆ. ಟಿಬೆಟ್‌ನಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಹೆಬ್ಬಯಕೆಯನ್ನು ದಲೈ ಲಾಮಾ ಹೊಂದಿದ್ದಾರೆ. ತಮ್ಮ ಈ ಹೀಗೆ ಸದ್ದು ಹೊಡೆದಿರುವುದಕ್ಕಾಗಿಯೇ ಚೀನಾ ಕೂಡ ಈ ಆಧ್ಯಾತ್ಮಿಕ ಗುರುವಿನ ವಿರುದ್ಧ ಗುರುಗುಟ್ಟುತ್ತಿದೆ. ಟಿಬೆಟ್ ಬೌದ್ಧಮತದಲ್ಲಿ ಎರಡನೇ ಅತ್ಯುನ್ನತ ಸ್ಥಾನವಾದ ಪಂಚೆನ್ ಲಾಮಾ ಹುದ್ದೆಗೆ ದಲೈ ಲಾಮಾ ಅವರು 1995ರಲ್ಲಿ ನೇಮಿಸಿದ್ದ ಆರು ವರ್ಷದ ಬಾಲ ಭಿಕ್ಕು ಅದೃಶ್ಯರಾಗಿದ್ದಾರೆ, ಮತ್ತೆ ಎಂದಿಗೂ ಆ ಪತ್ತೆ ಆಗಲಿಲ್ಲ. ಬೇರೊಬ್ಬ ವ್ಯಕ್ತಿಯನ್ನು ಚೀನಾ ಸರ್ಕಾರವೇ ಪಂಚೆನ್ ಲಾಮಾ ಆಗಿ ನೇಮಕ ಮಾಡಿದೆ. ಅದರೆ, ಬೌದ್ಧಮತದ ಬಹುಪಾಲು ಮಂದಿ ಆ ವ್ಯಕ್ತಿಯನ್ನು ಪಂಚೆನ್ ಲಾಮಾ ಎಂದು ಸ್ವೀಕರಿಸಿಲ್ಲ. ದಲೈ ಲಾಮಾ ಅವರ ಉತ್ತರಾಧಿಕಾರಿಯ ನೇಮಕದ ವಿಷಯದಲ್ಲಿ ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ನಿರ್ಧಾರಕ್ಕೆ ಬದ್ಧರಾಗಿರುವ ಪಂಚೆನ್ ಲಾಮಾ ಅವರನ್ನು ಚೀನಾ ಪೋಷಿಸುತ್ತಿದೆ. ತೊಂಬತ್ತು ವರ್ಷ ಪೂರೈಸಿರುವ ದಲೈ ಲಾಮಾ ಅವರು ನಿಧನ ಹೊಂದಿದ ಮೇಲೆ, ಆ ಅವಕಾಶವನ್ನು ಬಳಸಿಕೊಂಡು, ಧರ್ಮವನ್ನೇ 'ಇಬ್ಭಾಗ' ಮಾಡಲು ಚೀನಾ ಹವಣಿಸುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಇದನ್ನೆಲ್ಲ ಗಮನಿಸಿಯೇ ದಲೈ ಲಾಮಾ ಅವರು, 'ಇಬ್ಬರು ಧರ್ಮಗುರುಗಳು ಬಂದರೂ ಯಾರೂ ಅವರಿಗೆ ಗೌರವ ನೀಡುವುದಿಲ್ಲ. ನನ್ನ ಉತ್ತರಾಧಿಕಾರಿ ಚೀನಾದ ಹೊರಗಿನವರಾಗಿರುತ್ತಾರೆ' ಎಂದು ಹೇಳಿದ್ದಾರೆ.

ದಲೈ ಲಾಮಾ, ಪಂಚೆನ್ ಲಾಮಾ ಸೇರಿದಂತೆ ಎಲ್ಲ ಧರ್ಮಗುರುಗಳ ಆಯ್ಕೆಯು ಧಾರ್ಮಿಕ ಹಾಗೂ ಚಾರಿತ್ರಿಕ ರೀತಿ–ರಿವಾಜುಗಳಿಗೆ ಅನುಗುಣವಾಗಿ ನಡೆಯಲಿದೆ ಮತ್ತು ಸರ್ಕಾರದ ಒಪ್ಪಿಗೆಯನ್ನು ಅದು ಅವಲಂಬಿಸಿದೆ ಎಂದು ಚೀನಾ ಹೇಳಿದೆ. ಆದರೆ, ದಲೈ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆಯ ವಿಷಯದಲ್ಲಿ ಭಾರತದ ನಿಲುವು ತುಂಬಾ ಸ್ಪಷ್ಟವಾಗಿದೆ ಮತ್ತು ಸೂಕ್ತವಾಗಿದೆ. 'ದಲೈ ಲಾಮಾ ಅವರೇ ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳಬೇಕು. ಅದರಲ್ಲಿ ಯಾವುದೇ ಸರ್ಕಾರಕ್ಕೂ ಪಾತ್ರವಿಲ್ಲ' ಎಂದು ಸ್ಪಷ್ಟಪಡಿಸಿದೆ. ಚೀನಾ–ಭಾರತ ನಡುವೆ ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷದ ಬಳಿಕ ಎರಡೂ ದೇಶಗಳ ಮಧ್ಯೆ ಸೌಹಾರ್ದದ ಮಾತುಕತೆಗಳು ನಡೆದ ಹೊತ್ತಿನಲ್ಲೇ ಈ ವಿಷಯ ಮುನ್ನೆಲೆಗೆ ಬಂದಿದೆ. 'ಸಂಬಂಧಗಳು ಸಹಜ ಸ್ಥಿತಿಗೆ ಮರಳುತ್ತಿರುವ ಹೊತ್ತಿನಲ್ಲಿ ಭಾರತ ತಳೆದಿರುವ ನಿಲುವು ಮಾತುಕತೆಯ ಹಳಿ ತಪ್ಪಿಸಲಿದೆ' ಎಂಬ ಚೀನಾದ ಎಚ್ಚರಿಕೆಯನ್ನು ಭಾರತ ಸದ್ಯ ಗಣನೆಗೆ ತೆಗೆದುಕೊಂಡಿಲ್ಲ. ಟಿಬೆಟ್ ಹೋರಾಟವನ್ನು ಬೆಂಬಲಿಸುತ್ತಲೇ ಬಂದಿದ್ದ ಅಮೆರಿಕ, ಚೀನಾ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಯಾವ ನಿಲುವು ತಾಳಲಿದೆ ಎಂಬುದು ಕೂಡ ಕುತೂಹಲಕಾರಿ. ದಲೈ ಲಾಮಾ ಅವರ ಉತ್ತರಾಧಿಕಾರಿಯ ಆಯ್ಕೆ ಹೇಗೆ ನಡೆಯಲಿದೆ ಎಂಬ ಸಂಗತಿಯು ಭೌಗೋಳಿಕ ರಾಜಕೀಯ ಯಾವ ದಿಕ್ಕು ಪಡೆಯಲಿದೆ ಎಂಬುದರ ದ್ಯೋತಕವೂ ಆಗಿರಲಿದೆ.

ಜವಾಬ್ದಾರಿ ಯಾರದು?



ಜೋಗ ಜಲಪಾತವು ಮೈದುಂಬಿದೆ. ಪ್ರವಾಸಿಗರು ಜೀವ ಪಣಕ್ಕಿಟ್ಟು ನೀರು ಧುಮ್ಮಿಕ್ಕುವ ಕಲ್ಲುಬಂಡೆಗಳ ಸನಿಹಕ್ಕೆ ಹೋಗುತ್ತಿದ್ದಾರೆ. ಈ ಎಲ್ಲಾ ಸಾಹಸವೂ 'ರೀಲ್–ಲೈಫ್' ಅನುಭವಕ್ಕಾಗಿ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಮೃತದೇಹಗಳನ್ನು ಸಂಗ್ರಹಿಸಲು ಅವರು ಜಲಪಾತದ ಕೆಳಗೆ ಕಾಯುತ್ತಿದ್ದಾರೆಯೇ?

ಅನಿಲ್ ಬುಡೂರ್ ಲುಲ್ಲಾ, ಲೇಖಕ, 'ಎಕ್ಸ್'ನಿಂದ

ಕಿಡಿನುಡಿ



ಬಿಜೆಪಿಯವರು ರಾಮಾಯಣದ ಬಗ್ಗೆ ಹೇಳುತ್ತಾರೆ. ರಾಮ– ಸೀತೆ ಕುರಿತು ಮಾತನಾಡುತ್ತ ಮಹಿಳೆಯರನ್ನು ಗೌರವಿಸಬೇಕು ಎನ್ನುತ್ತಾರೆ. ಇನ್ನೊಂದು ಕಡೆ ಸ್ತ್ರೀಯರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ. ಇದು ಬಿಜೆಪಿಯವರ ಸಂಸ್ಕೃತಿಗೆ ಕನ್ನಡಿ ಹಿಡಿದಿದೆ.

ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

25 ವರ್ಷಗಳ ಹಿಂದೆ

ಬುಧವಾರ, 5-7-2000

• ಸ್ವಾಯತ್ತತೆ ನಿರ್ಣಯ ಕೇಂದ್ರ ತಿರಸ್ಕಾರ

ನವದೆಹಲಿ, ಜುಲೈ 4– ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯು ರಾಜ್ಯಕ್ಕೆ ಹೆಚ್ಚು ಸ್ವಾಯತ್ತತೆ ಕೋರಿ ಅಂಗೀಕರಿಸಿದ್ದ ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಇಂದು ಸಾರಾಸಗಟಾಗಿ ತಿರಸ್ಕರಿಸಿತು.

ಆಯ್ದ ಕೆಲವು ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದಂತೆ ಕೇಂದ್ರ ಸರ್ಕಾರದ ಅಧಿಕಾರವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಈ ಸ್ವಾಯತ್ತತೆಯ ನಿರ್ಣಯದಿಂದ 'ಇತಿಹಾಸದ ಕಾಲಚಕ್ರವನ್ನು ಹಿಂದಕ್ಕೆ ಸರಿಸದಂತಾಗುವುದು' ಮಾತ್ರವಲ್ಲ ಅದರಿಂದಾಗಿ ರಾಷ್ಟ್ರೀಯ ಹಿತಾಸಕ್ತಿಯ ವಿರುದ್ಧದ ಚರ್ಚೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಸಚಿವ ಸಂಪುಟ ಅಭಿಪ್ರಾಯಪಟ್ಟಿತು.

• ಶಾಲಾ ವೇಳೆ ಬದಲಾವಣೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಬೆಂಗಳೂರು, ಜುಲೈ 4– ಹೊಸ ಶಾಲಾ ವೇಳೆಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಶಾಲೆಗಳ ಬಂದ್ ಕರೆಗೆ ಬಿಜೆಪಿ ನೀಡಿದ್ದ ಕರೆಗೆ ರಾಜ್ಯದಾದ್ಯಂತ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

75 ವರ್ಷಗಳ ಹಿಂದೆ

ಬುಧವಾರ, 5-7-1950

• ಕೊರಿಯದ ಮೇಲೆ ಅಮೆರಿಕದ ಆಟಂ ಬಾಂಬ್?

ವಾಷಿಂಗ್‌ಟನ್, ಜುಲೈ 4– ಉತ್ತರ ಕೊರಿಯದ ಕಮ್ಯುನಿಸ್ಟ್ ದಳಗಳು ಸ್ವಸ್ಥಾನಕ್ಕೆ ಮರಳಲು ನಿರಾಕರಿಸಿದರೆ 'ಆಟಂ ಬಾಂಬ್' ಪ್ರಯೋಗ ಮಾಡುತ್ತೇವೆ ಎಂದು ಉತ್ತರ ಕೊರಿಯಕ್ಕೆ ಎಚ್ಚರಿಕೆ ಕೊಡಬೇಕೆಂಬುದಾಗಿ 'ವಾಷಿಂಗ್‌ಟನ್ ಪೋಸ್ಟ್' ಪತ್ರಿಕೆ ಬರೆದಿದೆ.

ಸಂಪಾದಕೀಯ ಬರೆಯುತ್ತಾ ಈ ಪತ್ರಿಕೆ ಈ ಪೊಲೀಸ್ ಕಾರ್ಯಾಚರಣೆಯಲ್ಲಿ ಅಮೆರಿಕದ ಪ್ರಚಾರ ಯುದ್ಧವೂ ಮಿಲಿಟರಿ ದೃಷ್ಟಿಯಿಂದ ಅಷ್ಟೇ ಸತ್ಯಪೂರ್ಣ' ಎಂದಿದೆ.

'ಹೈಕಮಾಂಡ್ ಮಾದರಿ' ಪ್ರಜಾತಂತ್ರ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಜಗತ್ತಿನಾದ್ಯಂತ ತನ್ನದೇ ಆದ ಮಾನದಂಡ ಬಳಸಿ ಪ್ರತೀ ವರ್ಷ ಪ್ರಜಾಪ್ರಭುತ್ವವನ್ನು ಅಳೆಯುವ ವ್ಯವಸ್ಥಿತ ಕಾರ್ಯವನ್ನು ಸ್ವೀಡನ್ ದೇಶದ 'ವಿ–ಡೆಮ್' (ವೆರೈಟೀಸ್ ಆಫ್ ಡೆಮಾಕ್ರಸೀಸ್) ಸಂಸ್ಥೆ ಮಾಡುತ್ತಿದೆ. ಗೋಥೆನ್‌ಬರ್ಗ್ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಭಾಗವಾಗಿರುವ ಈ ಸಂಸ್ಥೆ ಇದೀಗ ತನ್ನ 2025ನೇ ಸಾಲಿನ 'ಡೆಮಾಕ್ರಸಿ ರಿಪೋರ್ಟ್' ಅನ್ನು ಬಿಡುಗಡೆ ಮಾಡಿದೆ. '25 ವರ್ಷಗಳ ನಿರಂಕುಶೀಕರಣ: ಪ್ರಜಾಪ್ರಭುತ್ವದ ಸೋಲು?' ಶೀರ್ಷಿಕೆಯ ಈ ವರದಿ ಹೊರಗೆಡವಿರುವ ಮಾಹಿತಿ ಹಾಗೂ ವಸ್ತುನಿಷ್ಠ ವಿಶ್ಲೇಷಣೆಯು ಪ್ರಜಾಪ್ರಭುತ್ವ ಪ್ರೇಮಿಗಳನ್ನು ಹಲವು ಆಯಾಮಗಳ ಚಿಂತನೆಗೆ ಹಚ್ಚುತ್ತದೆ.

ಈ ವರದಿಯ ಇಂಗ್ಲಿಷ್ ಶೀರ್ಷಿಕೆಯಲ್ಲಿ ಬಳಸಿರುವ 'Trumped' ಪದವಂತೂ ಜಾಗತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ವಿಶೇಷ ಅರ್ಥ ಹೊಳೆಯಿಸುತ್ತದೆ. 'ಟ್ರಂಪ್ ಆಡಳಿತವು ದೇಶೀಯವಾಗಿ ತೆಗೆದುಕೊಳ್ಳುತ್ತಿರುವ ಕ್ರಮಗಳು ಸತತ ಕುಸಿತದತ್ತ ಸಾಗುತ್ತಿರುವ ಪ್ರಜಾಪ್ರಭುತ್ವವನ್ನು ಇನ್ನಷ್ಟು ಆಳಕ್ಕೆ ಸೆಳೆಯುವುದು ಸ್ಪಷ್ಟವಾಗಿದೆ' ಎಂಬುದನ್ನು ವರದಿಯ ಮುನ್ನುಡಿಯಲ್ಲಿಯೇ ಉಲ್ಲೇಖಿಸಲಾಗಿದೆ. ಯಾವ ಮಾನದಂಡದಿಂದ ಅಳೆದರೂ ವರ್ಷಗಳು ಉರುಳಿದಂತೆ ಪ್ರಜಾಪ್ರಭುತ್ವ ಹಾನಿ ಅನುಭವಿಸುತ್ತಿರುವುದು ಹಾಗೂ ಹೆಚ್ಚಿನ ದೇಶಗಳು ನಿರಂಕುಶ ಪ್ರಭುತ್ವದತ್ತ ದಾಪುಗಾಲು ಇಡುತ್ತಿರುವುದನ್ನು ಗಮನಿಸಬಹುದು. ಇದು ಆತಂಕಕಾರಿ ಬೆಳವಣಿಗೆ.

'ಡೆಮಾಕ್ರಸಿ ರಿಪೋರ್ಟ್'ನಲ್ಲಿ 'ಚುನಾವಣಾ ನಿರಂಕುಶಾಧಿಕಾರ'ದ ವರ್ಗೀಕರಣದಲ್ಲಿ ಭಾರತವನ್ನು ಗುರ್ತಿಸಲಾಗಿದ್ದು, ಈ ಬಗೆಯ ರಾಜಕೀಯ ವ್ಯವಸ್ಥೆಯಲ್ಲಿ ನಡೆಯುವ ಚುನಾವಣೆಗಳು ಮುಕ್ತ ಮತ್ತು ನ್ಯಾಯಸಮ್ಮತ ಆಗಿರುವುದಿಲ್ಲ ಎಂದು ಹೇಳಲಾಗಿದೆ. ಸಮೀಕ್ಷೆಯ ಮುಖ್ಯಾಂಶಗಳನ್ನು ಹೀಗೆ ಗುರ್ತಿಸಬಹುದು: ಕೇಂದ್ರದ ಆಡಳಿತಾರೂಢ ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಹಾಳುಗೆಡವಿದ ಕಾರಣ 2017ರಲ್ಲಿ ಭಾರತ ಈ ಸ್ಥಿತಿಗೆ ಪರಿವರ್ತನೆಯಾಯಿತು. ವಿವಿಧ ಪ್ರಜಾಪ್ರಭುತ್ವ ಸೂಚ್ಯಂಕಗಳಲ್ಲಿ ಭಾರತದ ಶ್ರೇಯಾಂಕಗಳು ಗಮನಾರ್ಹ ಕುಸಿತಗಳನ್ನು ಪ್ರತಿಬಿಂಬಿಸುತ್ತವೆ: 'ಲಿಬರಲ್ ಡೆಮಾಕ್ರಸಿ' ಸೂಚ್ಯಂಕದಲ್ಲಿ 0.29 ಅಂಕಗಳೊಂದಿಗೆ 100ನೇ ಸ್ಥಾನ, 'ಚುನಾವಣಾ ಡೆಮಾಕ್ರಸಿ' ಸೂಚ್ಯಂಕದಲ್ಲಿ 0.40 ಅಂಕಗಳೊಂದಿಗೆ 105ನೇ ಸ್ಥಾನ. ಈ ಅಂಕಗಳು, ಕಳೆದ ದಶಕದಲ್ಲಿನ ದೇಶದ ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಆಚರಣೆಗಳ ಅವನತಿಯನ್ನು ಎತ್ತಿ ತೋರಿಸುತ್ತವೆ.

'ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ, ಪ್ರಜೆಗಳಿಂದ, ಪ್ರಜೆಗಳಿಗಾಗಿ ಇರುವ ಆಡಳಿತ ವ್ಯವಸ್ಥೆ' ಎಂಬ ಅಬ್ರಹಾಂ ಲಿಂಕನ್ ಅವರ ಪ್ರಸಿದ್ಧ ವ್ಯಾಖ್ಯಾನವು ಕಾಲದ ನಡಿಗೆಯಲ್ಲಿ ಸವಕಲಾದ ಸಂದರ್ಭವಿದು. 'ಬಂಡವಾಳಶಾಹಿಗಳ, ಬಂಡವಾಳಶಾಹಿಗಳಿಂದ, ಬಂಡವಾಳಶಾಹಿಗಳಿಗಾಗಿ' ರೂಪುಗೊಂಡ ವ್ಯವಸ್ಥೆಯಲ್ಲಿ ನಾವಿದ್ದೇವೆ. ಮತ್ತೊಂದೆಡೆ, ವಿಶ್ವಮಾನವ ಪರಿಕಲ್ಪನೆ ಪ್ರತಿಪಾದಿಸಿದ ಕುವೆಂಪು ಅವರು 'ನಿರಂಕುಶಮತಿಗಳಾಗಿ' ಎಂದು ಕರೆ ಕೊಟ್ಟರು. ಆದರೆ, ತಮ್ಮ ಮತಿಗೆ ಅಂಕುಶ ಕೊಟ್ಟುಕೊಂಡ ಮತದಾರರು ನಿರಂಕುಶ ಪ್ರಭುತ್ವದ ಹುಟ್ಟಿಗೆ, ಬೆಳವಣಿಗೆಗೆ ಕಾರಣರಾಗುತ್ತಿರುವುದು ದಾರುಣ ವಾಸ್ತವ.

ನಿರಂಕುಶ ಪ್ರಜಾಪ್ರಭುತ್ವದ ಉಪ–ಉತ್ಪನ್ನ ಎಂದು ಅನುಮಾನವಿಲ್ಲದೇ ಪರಿಗಣಿಸಬಹುದಾದ ಹೈಕಮಾಂಡ್ ಹಸ್ತಕ್ಷೇಪವು ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಬಹುಕಾಲದಿಂದ ಜಾರಿಯಲ್ಲಿದೆ. ಹೊಚ್ಚ ಹೊಸ ಬೆಳವಣಿಗೆ ಎಂದರೆ, ಈ ವ್ಯವಸ್ಥೆಯು 'ಹೈಕಮಾಂಡ್ ಮಾದರಿ ಪ್ರಜಾತಂತ್ರ' ಎಂದು ಧಾರಾಳವಾಗಿ ಹೆಸರಿಸಬಹುದಾದ ಅವಸ್ಥೆಗೆ ತಲುಪಿರುವುದು!

ಎಚ್. ಕಾಂತರಾಜು ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಸಿದ್ಧಪಡಿಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ವರದಿಯು ಒಂದು ದಶಕದಿಂದ ಆಡಳಿತಗಾರರ ಅಂಗಳದಲ್ಲಿ ನನೆಗುದಿಗೆ ಬಿದ್ದಿತ್ತು. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿಯೇ ಸಿದ್ಧವಾಗಿದ್ದ ಈ ವರದಿಯನ್ನು ಯಾವುದೋ ಕಾರಣಕ್ಕೆ ಬಾಕಿ ಉಳಿಸಿದ್ದರು. ನಂತರ, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಮತ್ತು ಮೀಸಲಾತಿ ವರ್ಗೀಕರಣ ವಿಷಯವನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಂಡು ಗೊಂದಲ ಹುಟ್ಟಿಸಿದ್ದೂ ಆಯ್ತು. ಸಿದ್ದರಾಮಯ್ಯನವರು ತಮ್ಮ ಅಧಿಕಾರದ ಎರಡನೇ ಅವಧಿಯಲ್ಲಿ ಈ ವರದಿ ಕುರಿತು ವಿಶೇಷ ಮುತುವರ್ಜಿ ವಹಿಸಿ ವ್ಯಾಪಕ ಚರ್ಚೆಗೆ, ವಿವಾದಕ್ಕೆ ಆಸ್ಪದ ಒದಗಿಸಿದರು.

ಇದೀಗ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಬದಿಗೆ ಸರಿಸಿರುವ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರ, ಹೊಸದಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಲು ನಿರ್ಧರಿಸಿದೆ. ಈ ನಿರ್ಧಾರ ತೆಗೆದುಕೊಂಡಿದ್ದು ರಾಜ್ಯ ಸಚಿವ ಸಂಪುಟ ಅಲ್ಲ; ಕಾಂಗ್ರೆಸ್ ಪಕ್ಷದ ಹೈಕಮಾಂಡ್! ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಇನ್ನೇನು ಜಾರಿಗೊಳಿಸುವ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್ 'ತಡೆ' ನೀಡಿದೆ. ಈ ವರದಿಯ ವಿಚಾರವಾಗಿ ಗಟ್ಟಿ ನಿಲುವು ತಳೆದಿದ್ದ ಸಿದ್ದರಾಮಯ್ಯ, ಇದೀಗ ಹೈಕಮಾಂಡ್ ಸೂಚನೆಗೆ ಮಣಿದು ಮರು ಸಮೀಕ್ಷೆಗೆ ಮುಂದಾಗಿದ್ದಾರೆ. ಇದು 'ಹೈಕಮಾಂಡ್ ಮಾದರಿ' ಪ್ರಜಾತಂತ್ರಕ್ಕೆ ತಾಜಾ ನಿದರ್ಶನ.

ಇತ್ತೀಚೆಗೆ ನಂದಿ ಗಿರಿಧಾಮದಲ್ಲಿ ನಡೆದ ಸಚಿವ ಸಂಪುಟ ಸಭೆಗೆ ಹೊರಡುವ ಮೊದಲು ಸಿದ್ದರಾಮಯ್ಯ ಅವರಿಗೆ ಮಾಧ್ಯಮದವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾಗುತ್ತಾರೆ ಅಂತ ಬಿಜೆಪಿಯವರು, ಜೆಡಿಎಸ್‌ನವರು ಹೇಳ್ತಿದ್ದಾರೆ...' ಎಂಬ ಪ್ರಶ್ನೆ ಮುಂದಿಟ್ಟರು. 'ಅವರು ನಮ್ಮ ಹೈಕಮಾಂಡಾ...? ಬಿಜೆಪಿಯ ಆರ್. ಅಶೋಕ, ಬಿ.ವೈ. ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ನಮ್ಮ ಹೈಕಮಾಂಡ್ ಅಲ್ಲ. ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ'– ಇದು ಮಾಧ್ಯಮದವರ ಪ್ರಶ್ನೆಗೆ ಸಿದ್ದರಾಮಯ್ಯ ಅವರ ಖಚಿತ ನುಡಿ.

> ಪಕ್ಷದ ಆಂತರಿಕ ವಿಚಾರಗಳಲ್ಲಿ ಹೈಕಮಾಂಡ್ ಪಾತ್ರ ವಹಿಸಬಹುದೇ ಹೊರತು, ಸರ್ಕಾರದ ನೀತಿ ನಿಲುವುಗಳನ್ನು ನಿರ್ದೇಶಿಸುವಂತೆ ಆಗಬಾರದು. ಆದರೆ, 'ಹೈಕಮಾಂಡ್ ಮಂತ್ರ' ಜಪಿಸುವುದರಲ್ಲಿ ನಮ್ಮ ರಾಜಕಾರಣಿಗಳು ಪೈಪೋಟಿ ನಡೆಸುತ್ತಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಾನು ಏನನ್ನೂ ಚರ್ಚೆ ಮಾಡಲು ಹೋಗುವುದಿಲ್ಲ. ಹೈಕಮಾಂಡ್ ಏನನ್ನು ಅಪೇಕ್ಷಿಸುತ್ತದೆಯೋ ಅದು ಅಂತಿಮ ಮತ್ತು ಅದನ್ನು ಈಡೇರಿಸಲಾಗುವುದು'– ಇದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ.

ರಾಯಚೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುವಾಗ ಸಚಿವ ಸತೀಶ ಜಾರಕಿಹೊಳಿ ಅವರಿಗೆ, 'ನವೆಂಬರ್, ಡಿಸೆಂಬರ್‌ನಲ್ಲಿ ಸಿಎಂ ಬದಲಾವಣೆ ಆಗ್ತದಂತೆ... ನಿಜಾನಾ...?' ಎಂಬ ಪ್ರಶ್ನೆ ಎದುರಾದಾಗ, ಅವರು ನೀಡಿದ ವಿವರಣೆ: 'ಅದನ್ನು ವರಿಷ್ಠರಿಗೆ ಕೇಳಬೇಕು. ನಾವು ಹೇಳಲಿಕ್ಕಾಗಲ್ಲ. ಅದು ಹೈಕಮಾಂಡ್ ಮಟ್ಟದಲ್ಲಿ ಇರುವಂಥ ವಿಷಯ, ನಮ್ಮ ಮಟ್ಟದಲ್ಲಿ ಇಲ್ಲ. ಅದರ ಬಗ್ಗೆ ಹೇಳುವಂಥ ಅಧಿಕಾರ, ಅದನ್ನು ಚರ್ಚೆ ಮಾಡುವಂಥ ಅಧಿಕಾರವೂ ನಮಗೆ ಇಲ್ಲ. ಅಲ್ಲಿ ಕೇಳಿದರೆ ಸರಿಯಾದ ಉತ್ತರ ಸಿಗಬಹುದು...'

'2028ಕ್ಕೆ ಡಿಕೆ ಸರ್ಕಾರ ತನ್ನಿ' ಎಂಬ ಡಿ.ಕೆ. ಶಿವಕುಮಾರ್ ಕರೆಗೆ ಸಹಕಾರ ಸಚಿವ ರಾಜಣ್ಣ, 'ಎಲ್ಲ ವಿಷಯಗಳಲ್ಲೂ ಅಂತಿಮ ನಿರ್ಧಾರ ಹೈಕಮಾಂಡಿನದ್ದು' ಎಂದು ಪುನರುಚ್ಚರಿಸಿದ್ದಾರೆ. 'ಅಧಿಕಾರಕ್ಕೆ ಬರಬೇಕಾದರೆ ಬಹುಮತ ಬೇಕು. ಸರ್ಕಾರ ರಚಿಸಲು ಬೇಕಾದಷ್ಟು ನಂಬರುಗಳು ಸಿಕ್ಕರೆ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ' ಎಂಬ ಜನತಂತ್ರ ವಿರೋಧಿ ನಿಲುವನ್ನು ಅವರು ಯಾವ ಮುಜುಗರವೂ ಇಲ್ಲದೆ ವ್ಯಕ್ತಪಡಿಸುತ್ತಾರೆ.

ಹೈಕಮಾಂಡ್ ಮಂತ್ರ ಜಪಿಸುವವರ ಸಾಲಿನಲ್ಲಿ ಹಿರಿಯ ರಾಜಕಾರಣಿಗಳಾದ ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿ, ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಎಂ.ಬಿ. ಪಾಟೀಲ, ಆರ್.ಬಿ. ತಿಮ್ಮಾಪುರ, ಎಚ್.ಸಿ. ಮಹಾದೇವಪ್ಪ ಮುಂತಾದವರೂ ಸೇರಿರುವುದು ಬೇರೇನನ್ನೋ ಸೂಚಿಸುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆ, ಸಂವಿಧಾನದ ಚೌಕಟ್ಟು ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರ ಆಶಯ ಕುರಿತು ಸಾಕಷ್ಟು ಗಟ್ಟಿದನಿಯಲ್ಲಿ ಮಾತನಾಡುವ ಸಚಿವರಾದ ಸಂತೋಷ್ ಲಾಡ್ ಮತ್ತು ಪ್ರಿಯಾಂಕ್ ಖರ್ಗೆ ಅವರು ಹೈಕಮಾಂಡಿನ ಸಂವಿಧಾನ ಬಾಹಿರ ಮಧ್ಯಪ್ರವೇಶವನ್ನು ಯಾವ ತಾತ್ವಿಕತೆಯ ಸಂಕಥನಕ್ಕೆ ಜೋಡಿಸುತ್ತಾರೆ ಎಂಬುದು ಮತ್ತೊಂದು ಕುತೂಹಲಕಾರಿ ಸಂಗತಿ.

ಅಧಿಕಾರದಲ್ಲಿರುವ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ನ ಹಸ್ತಕ್ಷೇಪದ ಉದಾಹರಣೆಗಳನ್ನು ಪ್ರಸ್ತಾಪಿಸಿದರೂ 'ಜೀ ಹುಜೂರ್' ವಿಷಯದಲ್ಲಿ ಕಾಂಗ್ರೆಸ್‌ಗಿಂತಲೂ ಬಿಜೆಪಿ ಭಿನ್ನವಲ್ಲ. ಹೈಕಮಾಂಡ್ ಸಮ್ಮುಖದಲ್ಲಿ ಇಬ್ಬರ ಬೆನ್ನುಮೂಳೆಯೂ ದುರ್ಬಲವೇ.

ಕರ್ನಾಟಕದಲ್ಲಿ ಹೈಕಮಾಂಡ್ ಹಸ್ತಕ್ಷೇಪ ಕೇವಲ ಆ ಪಕ್ಷಕ್ಕೆ ಸಂಬಂಧಿಸಿದ ವಿಷಯ ಅಥವಾ ಸಮಸ್ಯೆಯಲ್ಲ; ಅದು ಒಕ್ಕೂಟ ಪ್ರಜಾಪ್ರಭುತ್ವ ವ್ಯವಸ್ಥೆಗೇ ಮಾರಕ, ಪ್ರಾದೇಶಿಕತೆ ಮತ್ತು ಸ್ಥಳೀಯ ಆಶಯಗಳಿಗೆ ಕಂಟಕ. ಬಹುಮುಖ್ಯವಾಗಿ, ಹೈಕಮಾಂಡ್ ಸೂತ್ರಧಾರತ್ವವು ಪಕ್ಷದ ಶಿಸ್ತಿನ ಸೋಗಿನಲ್ಲಿ ಕೇಂದ್ರೀಕೃತ ಸರ್ವಾಧಿಕಾರ ಬೆಳೆಸುವ ಅಪಾಯವನ್ನು ತಂದೊಡ್ಡುತ್ತದೆ.

ಸಂದಿಗ್ಧ ಸಮಯದಲ್ಲಿ ರಾಜಕೀಯ ಜಾಣತನದ ಭಾಗವಾಗಿ ಹೈಕಮಾಂಡ್ ಕಡೆ ಕೈ ತೋರಿಸುವುದನ್ನು ಅರ್ಥ ಮಾಡಿಕೊಳ್ಳಬಹುದು. ಆಯಾ ಪಕ್ಷಗಳು ತಮ್ಮ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುವಾಗ ಇಲ್ಲವೇ ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳನ್ನು ನಿರ್ಧರಿಸುವಾಗ ಹೈಕಮಾಂಡ್ ಅವಲಂಬಿಸಿದರೆ ಯಾರ ಅಭ್ಯಂತರವೂ ಇರಲಾರದು. ಆದರೆ, ಒಂದು ರಾಜ್ಯದ ಮುಖ್ಯಮಂತ್ರಿಯಂತಹ ಮಹತ್ವದ ಆಯ್ಕೆಯ ವಿಷಯವನ್ನು ಕೂಡ ಹೈಕಮಾಂಡ್ ಪಾದಗಳಿಗೆ ಅರ್ಪಿಸಿದರೆ ಹೇಗೆ? ಇಂತಹ ನಿಲುವು, ವರ್ತನೆಗಳು ಪ್ರಜಾಪ್ರಭುತ್ವದ ಗುಣಮಟ್ಟವನ್ನು ಯಾವ ಹಂತಕ್ಕೆ ಇಳಿಸಬಹುದು ಎಂಬ ಎಚ್ಚರಿಕೆ ಇರಬೇಡವೇ? ಇನ್ನು, ರಾಜಕೀಯ ಪಕ್ಷಗಳಂತೂ ಆಂತರಿಕ ಪ್ರಜಾಪ್ರಭುತ್ವ ಕುರಿತು ಮಾತನಾಡುವುದನ್ನೂ ನಿಲ್ಲಿಸಿವೆ.

'ವಿ–ಡೆಮ್' ಸಂಸ್ಥೆಯ ವರದಿಯಲ್ಲಿ ಉಲ್ಲೇಖಿಸಿದಂತೆ, ಭಾರತ ಈಗಾಗಲೇ 'ಚುನಾವಣಾ ನಿರಂಕುಶಾಧಿಕಾರ' ಇರುವ ದೇಶವಾಗಿ ವರ್ಗೀಕರಣ ಹೊಂದಿದೆ. ಅಂದರೆ, ಇಲ್ಲಿ ಮುಕ್ತ ಮತ್ತು ನ್ಯಾಯಯುತ ಮಾರ್ಗದಲ್ಲಿ ಚುನಾವಣೆಗಳು ನಡೆಯುತ್ತಿಲ್ಲ. ಹಾಗಾಗಿ ಶಾಸನಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಾಥಮಿಕ ಹಂತದಲ್ಲೇ ಪ್ರಜಾತಂತ್ರದ ಮೌಲ್ಯಗಳು ಪೆಟ್ಟು ತಿನ್ನುತ್ತಿವೆ. ಹೀಗೆ ಆಯ್ಕೆಯಾದ ಶಾಸಕರು ನಿರ್ಧರಿಸಬೇಕಾದ ಶಾಸಕಾಂಗ ಪಕ್ಷದ ನಾಯಕನನ್ನು ಹೈಕಮಾಂಡ್ ಹೇರಿಕೆಗೆ ಬಿಡುವುದು ಪ್ರಜಾಸತ್ತಾತ್ಮಕ ನಡಾವಳಿ ಅನುಭವಿಸುವ ಎರಡನೇ ಹಂತದ ಆಘಾತ!

ಹಾಗಾದರೆ ಹೈಕಮಾಂಡ್ ಸಂಸ್ಕೃತಿಗೆ ಪರ್ಯಾಯವೇನು?

ಸಾಮಾನ್ಯವಾಗಿ ಈ ವಿಷಯದ ಚರ್ಚೆ ಬಂದಾಗ ಹೈಕಮಾಂಡ್ ರಹಿತ ವ್ಯವಸ್ಥೆಯಾಗಿ ಪ್ರಾದೇಶಿಕ ಪಕ್ಷಗಳ ಕಡೆ ದೃಷ್ಟಿ ಬೀರಲಾಗುತ್ತದೆ. ಆದರೆ, ಪ್ರಾದೇಶಿಕ ಪಕ್ಷಗಳಲ್ಲಿನ ಕುಟುಂಬ ರಾಜಕಾರಣದಿಂದ ಪ್ರಜಾತಂತ್ರ ಮತ್ತೊಂದು ಬಗೆಯಲ್ಲಿ ಅಪಚಾರಕ್ಕೆ ಈಡಾಗುವುದನ್ನು ಕಾಣಬಹುದು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು, 'ಪ್ರಾದೇಶಿಕ ಪಕ್ಷಗಳು ಪ್ರಜಾಪ್ರಭುತ್ವದ ಜೀವಾಳ' ಎಂದು ಇತ್ತೀಚೆಗೆ ಪ್ರತಿಪಾದಿಸಿದ್ದಾರೆ. ಗೌಡರು ಈ ಮಾತು ಆಡುವಾಗ ಅವರ ಅಕ್ಕಪಕ್ಕದಲ್ಲಿ ಮಗ ಎಚ್.ಡಿ. ಕುಮಾರಸ್ವಾಮಿ ಮತ್ತು ಮೊಮ್ಮಗ ನಿಖಿಲ್ ಕುಮಾರಸ್ವಾಮಿ ನಿಂತಿದ್ದರು!

ವಾಚಕರ ವಾಣಿ

ದಲೈ ಲಾಮಾ ಆಯ್ಕೆ: ವಿವಾದ ಬೇಡ

ಟಿಬೆಟ್‌ನ ಧರ್ಮಗುರು ದಲೈ ಲಾಮಾ ಅವರು 'ನನಗೆ 90 ವರ್ಷ ತುಂಬಿತು, ಇನ್ನು ನನ್ನ ಸ್ಥಾನಕ್ಕೆ ಬೇರೆ ಧರ್ಮಗುರುವನ್ನು ಆಯ್ಕೆ ಮಾಡಿಕೊಳ್ಳಿ' ಎಂದು ಮನವಿ ಮಾಡಿಕೊಂಡಿದ್ದಾರೆ (ಪ್ರ.ವಾ., ಜುಲೈ 3). ಆದರೆ, ಚೀನಾ ತನ್ನ ಅನುಮತಿ ಇಲ್ಲದೆ ಮುಂದಿನ ದಲೈ ಲಾಮಾ ಅವರ ಆಯ್ಕೆ ಕೂಡದು ಎಂದು ಅಸಮ್ಮತಿ ವ್ಯಕ್ತಪಡಿಸಿದೆ. ಮುಂದಿನ ದಲೈ ಲಾಮಾ ಅವರ ಆಯ್ಕೆ ವಿಚಾರದಲ್ಲಿ ವಿವಾದಕ್ಕೆ ಆಸ್ಪದ ಕಲ್ಪಿಸದೆ, ಜಾಗತಿಕ ಧರ್ಮಶಾಲೆಗಳ ಪ್ರಮುಖರೆಲ್ಲಾ ಒಂದೆಡೆ ಸಭೆ ಸೇರಿ, ಸೌಹಾರ್ದಯುತವಾಗಿ ಮಹಾ ಧರ್ಮಗುರುವಿನ ಆಯ್ಕೆ ಮಾಡುವುದು ನಾವು ಬುದ್ಧನಿಗೆ ತೋರುವ ಗೌರವವಾಗಿದೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಬೈಕ್ ಟ್ಯಾಕ್ಸಿಗೆ ಅನುಮತಿ ಸ್ವಾಗತಾರ್ಹ

ರಾಜ್ಯದಲ್ಲಿ ನಿಷೇಧ ಹೇರಲಾಗಿದ್ದ ಬೈಕ್ ಟ್ಯಾಕ್ಸಿ ಸೇವೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿರುವುದು ಸ್ವಾಗತಾರ್ಹ. ಬೈಕ್ ಟ್ಯಾಕ್ಸಿಗಳು ಕೈಗೆಟುವ ದರದಲ್ಲಿ ಸೇವೆ ಒದಗಿಸುತ್ತಿದ್ದವು. ಮಧ್ಯಮ ವರ್ಗದವರು, ವಿದ್ಯಾರ್ಥಿಗಳು, ಮಹಿಳೆಯರು ಇವುಗಳನ್ನು ಬಳಸಿಕೊಳ್ಳುತ್ತಿದ್ದರು. ನಿರುದ್ಯೋಗಿ ಯುವಜನರು, ಕೆಲವು ಕಾಲೇಜು ವಿದ್ಯಾರ್ಥಿಗಳೂ ಬೈಕ್ ಟ್ಯಾಕ್ಸಿ ಓಡಿಸುವುದನ್ನು ಅರೆಕಾಲಿಕ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು.

ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು 1988ರ ಮೋಟಾರು ವಾಹನ ಕಾಯ್ದೆ ಅನ್ವಯ ಅಗ್ರಿಗೇಟರ್ ಮಾರ್ಗಸೂಚಿ ಬಿಡುಗಡೆ ಮಾಡಿ, ಖಾಸಗಿ ಬೈಕ್ ಟ್ಯಾಕ್ಸಿಗಳ ಸೇವೆಯನ್ನು ಪ್ರಯಾಣಿಕರ ಸಂಚಾರಕ್ಕೆ ಬಳಸಲು ರಾಜ್ಯ ಸರ್ಕಾರ ಅನುಮತಿ ಕೊಡಬಹುದು ಎಂದು ಹೇಳಿದೆ. ಹಾಗಾಗಿ, ರಾಜ್ಯ ಸರ್ಕಾರ ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ ಮತ್ತು ಸುರಕ್ಷಿತ ಸೇವೆ ಒದಗಿಸುವ ನಿಟ್ಟಿನಲ್ಲಿ ನಿಯಮ ರೂಪಿಸಿ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಗೆ ಅನುವು ಮಾಡಿಕೊಡಬೇಕಾಗಿದೆ.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಅತಿಥಿ ಉಪನ್ಯಾಸಕರು: ಗೊಂದಲ ನಿವಾರಿಸಿ

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ಪ್ರಥಮದರ್ಜೆ ಕಾಲೇಜುಗಳಲ್ಲಿ ಪೂರ್ಣಾವಧಿ ಉಪನ್ಯಾಸಕರಿಗೆ ಆಗಿ ಮಿಕ್ಕುಳಿದ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗುತ್ತದೆ. ಅದರಂತೆ, ಪ್ರಸಕ್ತ ಸಾಲಿನಲ್ಲಿ ಪೂರ್ಣಾವಧಿ ಉಪನ್ಯಾಸಕರ ಕಡ್ಡಾಯ ವರ್ಗಾವಣೆ ಮುಗಿದ ನಂತರ ಅತಿಥಿ ಉಪನ್ಯಾಸಕರನ್ನು ಪ್ರತ್ಯೇಕ ಕೌನ್ಸೆಲಿಂಗ್ ಮೂಲಕ ನಿಯೋಜಿಸಲು ಇಲಾಖೆಯು ಸಿದ್ಧತೆ ಮಾಡಿಕೊಂಡಿದೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ವಿವಿಧ ಹಂತದ ಆದೇಶಗಳು ಹಾಗೂ ಯುಜಿಸಿ ನಿಯಮಾವಳಿಗಳಲ್ಲಿ ಯಾವುದನ್ನು ಪಾಲಿಸುವ ಮೂಲಕ ಇವರನ್ನು ನೇಮಕ ಮಾಡಿಕೊಳ್ಳಬೇಕೆಂಬ ಗೊಂದಲ ಉಂಟಾಗಿದೆ. ಪ್ರತಿ ವರ್ಷವೂ ಇದು ಬಗೆಹರಿಯದ ಕಗ್ಗಂಟಾಗಿದೆ. ಹಾಗಾಗಿ, ಸರ್ಕಾರವು ಇದಕ್ಕೊಂದು ಶಾಶ್ವತ ಪರಿಹಾರ ಒದಗಿಸಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

'ನೈಸ್' ಟೋಲ್ ದರ ಇನ್ನಷ್ಟು ಹೆಚ್ಚಲಿ

ಜುಲೈ 1ರಿಂದ ಅನ್ವಯವಾಗುವಂತೆ 'ನೈಸ್' ಸಂಸ್ಥೆಯು ಟೋಲ್ ದರವನ್ನು ಶೇ 10ರಷ್ಟು ಹೆಚ್ಚಿಸಿದೆ. ಆದರೆ, ಇದು ಅತ್ಯಲ್ಪ ಏರಿಕೆಯಾಗಿದ್ದು ಯಾವುದಕ್ಕೂ ಸಾಕಾಗುವುದಿಲ್ಲ. ಇದನ್ನು ಕನಿಷ್ಠ ಶೇ 20ರಿಂದ 30ರಷ್ಟು ಏರಿಸಿದರೆ ಒಳಿತು. ಕಾರಣವಿಷ್ಟೇ. ದೇಶದಲ್ಲಿಯೇ ನೈಸ್ ರಸ್ತೆಯ ಬಳಕೆದಾರರ ಶುಲ್ಕ ಅತ್ಯಂತ ದುಬಾರಿ ಎಂಬುದು ಸ್ಪಷ್ಟ. ಈಗ ಈ ದರವನ್ನು ಮತ್ತಷ್ಟು ಹೆಚ್ಚಿಸಿದಲ್ಲಿ 'ಅತ್ಯಂತ ದುಬಾರಿ ರಸ್ತೆ' ಎಂಬ ಹೆಗ್ಗಳಿಕೆಯನ್ನು ನೈಸ್ ಸಂಸ್ಥೆಯೇ ಉಳಿಸಿಕೊಂಡಂತಾಗುತ್ತದೆ. ಇದು 'ಬ್ರ್ಯಾಂಡ್ ಬೆಂಗಳೂರಿಗೆ' ಹೆಮ್ಮೆಯ ವಿಷಯವೇ ಸರಿ.

ಟೋಲ್ ದರ ಏರಿಕೆಗೆ ಬಡವರು ಹಾಗೂ ಮಧ್ಯಮ ವರ್ಗದವರು ಪ್ರತಿಭಟಿಸಿದರೆ ತಲೆ ಕೆಡಿಸಿಕೊಳ್ಳಬೇಕಿಲ್ಲ. ಏಕೆಂದರೆ, ಇದೇ ರಸ್ತೆಯನ್ನು ಬಳಸಬೇಕೆಂದು ಸರ್ಕಾರವೇನೂ ಕಡ್ಡಾಯ ಮಾಡಿಲ್ಲ. ನೈಸ್ ರಸ್ತೆಯಲ್ಲಿ ಕೇವಲ ಹೈಎಂಡ್ ಎಸ್‌ಯುವಿಗಳು ಓಡಾಡಿದರೆ, ಜಗತ್ತಿಗೆ ಬೆಂಗಳೂರಿನ ಸೌಕರ್ಯಗಳನ್ನು ತೋರಿಸಿದಂತಾಗುತ್ತದೆ. ಆಗ ಬೆಂಗಳೂರಿಗೆ ಜಾಗತಿಕ ಬಂಡವಾಳ ಹರಿದು ಬಂದು ನಿರುದ್ಯೋಗ ನಿವಾರಣೆಯಾಗುತ್ತದೆ. ಈ ರಸ್ತೆಯಲ್ಲಿ ಓಡಾಡಬೇಕೆಂಬ ಹಂಬಲದಿಂದ ಜನರು ವಾರಕ್ಕೆ 70 ಗಂಟೆಗೂ ಹೆಚ್ಚು ದುಡಿದು, ಹಣ ಗಳಿಸಿ, ಶ್ರೀಮಂತರಾಗುತ್ತಾರೆ. ಈ ಎಲ್ಲ ಕಾರಣಗಳಿಗಾಗಿ ನೈಸ್ ರಸ್ತೆಯ ಬಳಕೆದಾರರ ಶುಲ್ಕವನ್ನು ಮತ್ತಷ್ಟು ಏರಿಸಬೇಕಾಗಿ ಕಳಕಳಿಯ ವಿನಂತಿ.

ಸುಘೋಷ ಸ. ನಿಗಳೆ, ಬೆಂಗಳೂರು

ಆಕ್ಷೇಪಾರ್ಹ ಮಾತು ಸರಿಯಲ್ಲ

ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಆಡಿರುವ ಆಕ್ಷೇಪಾರ್ಹ ಮಾತುಗಳು ಖಂಡನೀಯ. ಕಲಬುರಗಿ ಜಿಲ್ಲಾಧಿಕಾರಿ ವಿರುದ್ಧವೂ ಅಸಾಂವಿಧಾನಿಕ ಪದ ಬಳಸಿದ್ದರು. ಮಹಿಳಾ ಅಧಿಕಾರಿಗಳನ್ನೇ ಗುರಿಯಾಗಿಸಿ ಹೇಳಿಕೆ ನೀಡುವುದು ಜನಪ್ರತಿನಿಧಿಯಾದವರಿಗೆ ಶೋಭೆ ತರುವುದಿಲ್ಲ.


ರಾಮಚಂದ್ರ ಮಂಚಲದೊರೆ, ಗುಬ್ಬಿ

ಆನ್‌ಲೈನ್ ಗೇಮ್‌ಗೆ ಕಡಿವಾಣ ಬೇಕು

ದಾವಣಗೆರೆಯ ಯುವಕನೊಬ್ಬ ಆನ್‌ಲೈನ್ ಗೇಮ್‌ನ ದುಶ್ಚಟಕ್ಕೆ ಸಿಲುಕಿ ₹18 ಲಕ್ಷ ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ (ಪ್ರ.ವಾ., ಜುಲೈ 4). ಯುವಜನ ದಿಢೀರ್ ಶ್ರೀಮಂತರಾಗುವ ಆಸೆಗೆ ಬಿದ್ದು, ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಕಾನೂನುಬಾಹಿರವಾಗಿ ನಡೆಯುವ ಆನ್‌ಲೈನ್ ಗೇಮ್‌ಗಳ ವಿರುದ್ಧ ಕ್ರಮಕೈಗೊಳ್ಳದೆ ಸರ್ಕಾರವು ಜಾಣಕುರುಡು ಪ್ರದರ್ಶಿಸುತ್ತಿರುವುದು ಎಷ್ಟು ಸರಿ?

ಮುರುಗೇಶ ಡಿ., ದಾವಣಗೆರೆ

ಚುರುಮುರಿ



ಮೌಂಟನ್ ಮೀಟಿಂಗ್!

• ತುರುವೇಕೆರೆ ಪ್ರಸಾದ್

'**ಇದೇನಪ್ಪ** ನಮ್ ಸರ್ಕಾರದೋರು ಬೆಟ್ಟ, ಗುಡ್ಡದ ಮ್ಯಾಲೆಲ್ಲಾ ಕ್ಯಾಬಿನೆಟ್ ಮೀಟಿಂಗ್ ಶುರು ಹಚ್ಕಂಡವ್ರೆ' ಎಂದು ಸಿಬಿರೆಬ್ಬಿದ ಗುದ್ಲಿಂಗ.

'ವಿಧಾನಸೌಧದಲ್ಲಿ ಇದ್ದೂ ಇದ್ದೂ ಬೇಜಾರಾಗದೆ, ಫಾರ್ ಎ ಚೇಂಜ್ ಅಂತ ಮಾಡವ್ರೆ ಕಣ್ಲಾ' ಎಂದ ಮಾಲಿಂಗ.

'ಬೆಳಗಾವಿದು ಚೇಂಜೇ ಅಲ್ವಾ? ಎಲ್ಲಂದ್ರಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಕ್ಕೆ ಮಂತ್ರಿಮಂಡಲ ಏನ್ ಟೂರಿಂಗ್ ಟಾಕೀಸೇನ್ಲಾ?'

'ಶಾಸಕರ ಅಹವಾಲು, ಆಪರೇಷನ್ ಸುರ್ಜೆವಾಲು ಅದೂ ಇದೂ ಅಂತ ವಿಪರೀತ ತಲೆಬಿಸಿ. ತಂಪಾಗಿರಣ ಅಂತ ಹಿಲ್ ಸ್ಟೇಷನ್ ಹುಡಿಕ್ಕಂಡವ್ರೆ ಕಣ್ಲಾ'.

'ಅಂಗೇ ಈ ನೆವದಲ್ಲಿ ಬೆಟ್ಟ ಹತ್ತಿ ಇಳುದ್ರೆ ಮೀಟಿಂಗ್ ನೆವದಲ್ಲಿ ಅವರ ಫಿಟ್ನೆಸ್ಸೂ ಚೆನ್ನಾಗಿರುತ್ತೆ'.

'ಸುಮ್ಕಿರ್ಲಾ? ಅಲ್ಯಾರ್ ಉಸ್ ಅಂತ ಹೋಗೆ ಬಿಟ್ಕಂಡು ನಡ್ದಾರು? ಕಾರಲ್ ಓಯ್ತರೆ, ಕಾರಲ್ಲಿ ಬತ್ತಾರೆ'.

'ಅದೇನೋ ನಿಜಾನೇ! ಜೊತೆಗೆ ದೇವ್ರುಗೆ ಹರಕೆ, ಪರಕೆನ ಗುಟ್ಟಾಗಿ ತೀರ್‍ಸಕ್ಕೂ ಅನುಕೂಲ ಆಯ್ತದೆ. ವಿಧಾನಸೌಧದಲ್ಲಿ ಗೊರಕೆ ಹೊಡ್ದಿದ್ದೇ ಆಗಿರ್‍ತದೆ'.

'ಆದ್ರೆ ಬೆಟ್ಟ ಗುಡ್ಡದ ಮ್ಯಾಲೆಲ್ಲಾ ಕ್ಯಾಬಿನೆಟ್ ಮೀಟಿಂಗ್ ಮಾಡುದ್ರ ಸಿಕ್ಕಾಪಟ್ಟೆ ಖರ್ಚು ಬರಕಿಲ್ವಾ?' ಕೇಳಿದ ಪರ್ಮೇಶಿ.

'ಬೆಟ್ಟದ ಮೇಲೊಂದು ಕ್ಯಾಬಿನೆಟ್ ಮೀಟಿಂಗ್ ಮಾಡಿ ವಿರೋಧಿಗಳ ನಿಂದೆಗೆ ಅಂಜಿದೊಡೆಂತಯ್ಯಾ! ಖರ್ಚು ಬತ್ತದಪ್ಪ, ಅಂಗಂತ ಕುಂತ್ ಕಡೇನೆ ಕುಂತು ಕುರ್ಚಿ ಸವೆಸಕ್ಕಾಯ್ತದಾ? ಥಿಂಕ್ ಹೈ, ಲಿವ್ ಹೈ ಅಂತ ಹೇಳಕಿಲ್ವೇನ್ಲಾ?'

'ಅಂಗಾರೆ ಮುಳ್ಳಯ್ಯನ ಗಿರಿ, ದೇವರಾಯನ ದುರ್ಗ ಎಲ್ಲಾ ಕಡೆ ತಿಂಗಳಿಗೊಂದು ಮೀಟಿಂಗ್ ಮಡಿಕ್ಕಂಡ್ ಬುಡ್ಬಹುದಲ್ವಾ?'

'ಸುಮ್ಕೆ ಮಾಡದಲ್ಲ, ಕ್ಲಿಯರ್ ಆಗ್ಬೇಕು ಫೈಲು, ಆಗಬಾರದು ಬೆಟ್ಟಕ್ಕೆ ಹೊತ್ತಂಗೆ ಕಲ್ಲು'.

'ಲೇಯ್! ರಾಜಕೀಯದೋರು ಬೆಟ್ಟಕ್ಕೆ ಕಲ್ ಹೊರಕಿಲ್ಲ ಕಣ್ರೋ, ಬೆಟ್ಟದಿಂದ ಕಲ್ ಇಳುಸ್ತಾರೆ' ಎಂದು ಕಣ್ ಹೊಡೆದ ಪರ್ಮೇಶಿ. ಎಲ್ಲಾ ಹೌದೌದು ಎಂದು ತಲೆಯಾಡಿಸಿದರು.

ಸಂಗತ

ರಸ್ತೆಗಳಿಗೆ ಬೇಡವೆ ಹಸುರು ಆಸರೆ?

ರಸ್ತೆ ಅಭಿವೃದ್ಧಿ ಕಾಮಗಾರಿ ಹೆಸರಲ್ಲಿ ಪ್ರತಿ ವರ್ಷವೂ ಲಕ್ಷಾಂತರ ಮರಗಳನ್ನು ಕತ್ತರಿಸಲಾಗುತ್ತಿದೆ, ಬೆಟ್ಟ– ಗುಡ್ಡಗಳ ಬೆನ್ನುಮುರಿದು ಮಲಗಿಸಲಾಗುತ್ತಿದೆ.

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಹಸುರಿನ ಆಸರೆ ಇಲ್ಲದೆ ಹೋದರೆ ಜೀವಸಂಕುಲಕ್ಕೆ ಅರೆಗಳಿಗೆಯ ಬದುಕೂ ಕಷ್ಟಕರ. ಪ್ರಗತಿಯ ಹಾದಿಯಲ್ಲಿ ಗಿಡ–ಮರಗಳು ಇಲ್ಲವಾದರೆ, ನಮಗೆ ಉಳಿಗಾಲ ಇಲ್ಲ ಎಂದೇ ಅರ್ಥ. ಪರಿಸರದ ಮೂಲಭೂತ ಘಟಕಗಳಾದ ಗಾಳಿ, ನೀರು, ನೆಲವೆಲ್ಲ ಹಸಿಯಾಗಿ ಹಸುರಾಗಿ ಇರದೇ ಹೋದರೆ ಭೂಮಿ ಬಂಜರು. ಹಾಗಾಗಿ, ಇಲ್ಲಿ ಪರಿಸರ ಸಂರಕ್ಷಣೆಗಿಂತ ಮಹತ್ಕಾರ್ಯ ಬೇರೊಂದು ಇರಲಾರದು.

ನಾವೀಗ ಹಣ, ಆಸ್ತಿ, ಒಡವೆ, ವ್ಯವಹಾರಗಳನ್ನು ಮುಂದಿನ ಪೀಳಿಗೆಗೆ ಬಿಟ್ಟು ಹೋದರೆ ಸಾಲದು; ಮುಂದಿನ ತಲೆಮಾರುಗಳ ನೆಮ್ಮದಿಯ ಬದುಕಿಗೆ ವಿಷಮುಕ್ತ ಮಣ್ಣು, ಶುದ್ಧವಾದ ನೀರು- ಗಾಳಿ, ಮರಗಿಡಗಳ ಸಾಂಗತ್ಯವನ್ನೂ ಉಳಿಸಬೇಕು. ಏಕಮುಖ ಅಭಿವೃದ್ಧಿಯಿಂದ ಸುಸ್ಥಿರ ಅಭಿವೃದ್ಧಿಯ ಕಡೆಗೆ ನಮ್ಮ ನಡೆ ಹೊರಳಬೇಕು. ಪ್ರಗತಿ– ಪ್ರಕೃತಿಯ ಚಿಂತನೆ ಏಕಕಾಲದಲ್ಲಿ ಸಾಧ್ಯವಾಗಿ, ಪರಿಸರ ಕಾಳಜಿಯ ಕ್ರಿಯಾಯೋಜನೆಗಳು ರೂಪುಗೊಳ್ಳಬೇಕು. ಅವಸರ, ಆವೇಗಕ್ಕೆ ಒಳಗಾಗದೆ, ಸಂಯಮ ಹಾಗೂ ಸ್ವಯಂನಿಯಂತ್ರಣವನ್ನು ಬದುಕಿನ ಭಾಗ ಆಗಿಸಿಕೊಳ್ಳುವುದು ಸದ್ಯದ ತುರ್ತು.

ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಆಧುನಿಕತೆಯ ಒತ್ತಡ– ಅನಿವಾರ್ಯತೆಗಳಲ್ಲಿ ರಸ್ತೆ ವಿಸ್ತರಣೆ ಪ್ರಕ್ರಿಯೆಯೂ ಒಂದು. ಮೂಲಸೌಕರ್ಯ ಅಭಿವೃದ್ಧಿ, ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವುದು, ಸೇತುವೆ, ಕಟ್ಟಡ, ಜಲಾಶಯಗಳ ನಿರ್ಮಾಣ, ಕೈಗಾರಿಕೆಗಳ ಸ್ಥಾಪನೆ, ವಸತಿ ಯೋಜನೆ, ಇವುಗಳೆಲ್ಲವೂ ಅಭಿವೃದ್ಧಿಯ ಮಾಪನವಾಗಿ ಒದಗಲೇಬೇಕಾದ ಜರೂರತ್ತು ಇವತ್ತಿನದು. ಹಾಗಿದ್ದೂ, ನಮ್ಮ ಆರೋಗ್ಯ ಹಾಗೂ ಮುಂದಿನ ತಲೆಮಾರುಗಳ ಹಿತದೃಷ್ಟಿಯಿಂದ ಪ್ರಾಕೃತಿಕ ಸಂಪತ್ತುಗಳ ಸಂರಕ್ಷಣೆಯು ಪ್ರತಿಯೊಬ್ಬರ ಆದ್ಯತೆಯಾಗಬೇಕು. ಆಳುವ ವ್ಯವಸ್ಥೆಗೂ ಈ ಬಗ್ಗೆ ಬದ್ಧತೆ, ಸೂಕ್ಷ್ಮತೆ ಬೇಕು. ಜನಪ್ರಿಯ ಅಭಿವೃದ್ಧಿ ಯೋಜನೆಗಳ ಜೊತೆ ಜೊತೆಗೆ ದೂರಗಾಮಿ ನಿಲುವಿನ ಪರಿಸರ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಸುಸ್ಥಿರ ಹಸಿರು ಹೆದ್ದಾರಿ ನೀತಿಯು ಕಡ್ಡಾಯವಾಗಿ ಜಾರಿಯಾಗಬೇಕು.

ಜನಸಂದಣಿ ಮತ್ತು ವಾಹನ ದಟ್ಟಣೆಯ ಒತ್ತಡದಲ್ಲಿ ರಸ್ತೆಗಳು ಕಿರಿದಾಗುತ್ತಿವೆ. ದೇಶದಾದ್ಯಂತ ಪ್ರತಿ ವರ್ಷವೂ ಹೆದ್ದಾರಿಗಳ ನಿರ್ಮಾಣ, ವಿಸ್ತರಣೆ ಹಾಗೂ ತಿರುವು, ತೆರವು, ನೇರಗೊಳಿಸುವಿಕೆಯ ಕಾಮಗಾರಿಗಳು ಜರುಗುತ್ತಿವೆ.

ಆದರೆ, 1915ರಲ್ಲಿ ಅನುಷ್ಠಾನಗೊಂಡ 'ಹಸಿರು ಹೆದ್ದಾರಿ ನೀತಿ'ಯ ಅಳವಡಿಕೆ ಮಾತ್ರ ಈವರೆಗೆ ಎಲ್ಲಿಯೂ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ರಸ್ತೆ ಕಾಮಗಾರಿ ಹೆಸರಲ್ಲಿ ಪ್ರತಿ ವರ್ಷವೂ ಲಕ್ಷಾಂತರ ಮರಗಳನ್ನು ಕತ್ತರಿಸಲಾಗುತ್ತಿದೆ, ಬೆಟ್ಟ–ಗುಡ್ಡಗಳ ಬೆನ್ನುಮುರಿದು ಮಲಗಿಸಲಾಗುತ್ತಿದೆ. ಅಪಾರ ಪ್ರಮಾಣದ ಕೃಷಿ– ಅರಣ್ಯ ಭೂಮಿ, ಕೆರೆಕಟ್ಟೆಗಳು ಅಭಿವೃದ್ಧಿಯ ಹೆಸರಿನಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿವೆ.



ಯೋಜನಾ ವೆಚ್ಚದಲ್ಲಿ ನಿರ್ದಿಷ್ಟ ಭಾಗವನ್ನು ಹಸಿರು ನಿಧಿಗೆ ವರ್ಗಾಯಿಸಿ, ಹೆಚ್ಚು ಹೆಚ್ಚು ಸಸಿ ನೆಡುವ ಮೂಲಕ ರಸ್ತೆಗಳ ಬದಿಯನ್ನು ಹಸುರೀಕರಣಗೊಳಿಸುವುದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹೊಣೆ. ಅಗತ್ಯವಾದರೆ ಗಿಡ–ಮರಗಳನ್ನು ಸ್ಥಳಾಂತರಿಸುವ ಮತ್ತು ನೆಡುತೋಪು ನಿರ್ಮಿಸುವ ಕಾರ್ಯ ವ್ಯವಸ್ಥಿತವಾಗಿ ಜರುಗಬೇಕು.

ಪ್ರಗತಿಯ ಮುನ್ನೋಟದಲ್ಲಿ ಜಪಾನ್, ಜರ್ಮನಿ, ಮ್ಯಾನ್ಮಾರ್‌ನಂತಹ ದೇಶಗಳ ಪರಿಸರ ಕಾಳಜಿ ಗಮನಾರ್ಹ. ಮರವೊಂದನ್ನು ಉಳಿಸಲು ಮಹತ್ವಾಕಾಂಕ್ಷೆಯ ಯೋಜನೆಯನ್ನೇ ಬದಲಾಯಿಸುವ ಸಂವೇದನಾಶೀಲ ಆಡಳಿತ ವೈಖರಿಯ ಉದಾಹರಣೆಗಳಲ್ಲಿ ನಾವು ಗಮನಿಸಬೇಕಾದ ಸಂಗತಿಗಳಿವೆ. ಸ್ಥಳೀಯ ಪರಿಸರಕ್ಕೆ ಹೊಂದಿಕೊಂಡು ಬೆಳೆದ ಮರವೊಂದರ ಸುತ್ತ ಹೆಣೆದುಕೊಂಡಿರುವ ಪರಿಸರ ವ್ಯವಸ್ಥೆಯ ಅರಿವು ಆಡಳಿತ ನಡೆಸುವವರಿಗೆ ಅಗತ್ಯ. ಹೊಸ ಗಿಡವನ್ನು ಬೆಳೆಸುವುದಕ್ಕಿಂತಲೂ ನೈಸರ್ಗಿಕವಾಗಿ ಬೆಳೆದ ಗಿಡವೊಂದನ್ನು ಉಳಿಸಿಕೊಳ್ಳುವುದು ಹೆಚ್ಚು ಉಪಯುಕ್ತ ಎಂಬುದನ್ನೂ ನಾವು ಮನಗಾಣಬೇಕು.

ಹೆದ್ದಾರಿ ಪ್ರಾಧಿಕಾರದ ಬೇಜವಾಬ್ದಾರಿತನದ ಬಗ್ಗೆ ಹಸಿರು ನ್ಯಾಯಮಂಡಳಿಯು ಚಾಟಿ ಬೀಸಿರುವುದಿದೆ. ಅಷ್ಟಾದರೂ ಅಭಿವೃದ್ಧಿ ಮಾರ್ಗದಲ್ಲಿ ಪರಿಸರಕ್ಕೆ ಪೂರಕವಾದ ಪರಿಣಾಮಕಾರಿ ಕ್ರಮಗಳಿನ್ನೂ ಜಾರಿಗೊಳ್ಳದಿರುವುದು ಸೋಜಿಗ. ಕಳೆದೊಂದು ದಶಕದ ಅವಧಿಯಲ್ಲಿ ಕೈಗೊಂಡ ಲಕ್ಷಾಂತರ ಕಿ.ಮೀ ರಸ್ತೆ ಕಾಮಗಾರಿಯಲ್ಲಿ ಪರಿಸರ ತೀವ್ರವಾಗಿ ಗಾಸಿಗೊಂಡಿದೆ.


ಪರಿಸರದಲ್ಲಿ ಸ್ಥಿರತೆ ಕಾಪಾಡಿಕೊಳ್ಳಲು ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದ ಕನಿಷ್ಠ ಶೇ 33ರಷ್ಟು ಪ್ರದೇಶವು ಅರಣ್ಯದಿಂದ ಆವೃತವಾಗಿರಬೇಕು ಎಂದು ದೇಶದ ರಾಷ್ಟ್ರೀಯ ಅರಣ್ಯ ನೀತಿ ಹೇಳುತ್ತದೆ. ಆದರೆ, ಅರಣ್ಯ ನೀತಿ ನಿಗದಿಪಡಿಸಿರುವ ಪ್ರಮಾಣಕ್ಕಿಂತಲೂ ಕಡಿಮೆ ಕಾಡು ನಮ್ಮಲ್ಲಿದೆ ಎಂದು ಅಂಕಿ ಅಂಶಗಳು ಹೇಳುತ್ತಿವೆ. ದಿನೇ ದಿನೇ ಉಲ್ಬಣಿಸುತ್ತಿರುವ ಹವಾಮಾನ ವೈಪರೀತ್ಯದಲ್ಲೂ ಕಾಡಿನ ಸವಕಳಿಯ ಪಾತ್ರವಿದೆ.

ಇನ್ನು ಮುಂದಾದರೂ ಅಭಿವೃದ್ಧಿ ಯೋಜನೆಗಳು ಕಡ್ಡಾಯವಾಗಿ ಪರಿಸರಸ್ನೇಹಿ ಆಗಿರಬೇಕು. ನಮ್ಮೆಲ್ಲರ ನಿತ್ಯದ ಬದುಕಿನಲ್ಲಿಯೂ ಪರಿಸರ ಕಾಳಜಿ ಹಾಸುಹೊಕ್ಕಾಗಿ ಇರಬೇಕು. 'ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ'ಯ ಅನುಸಾರ, ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳು 'ಮರ ಪ್ರಾಧಿಕಾರ' ರಚಿಸಿಕೊಂಡು ಅರಣ್ಯವನ್ನು ಉಳಿಸಲು ಮುಂದಾಗುವಂತೆ ರಾಜ್ಯದ ಹೈಕೋರ್ಟ್ 1976ರಲ್ಲಿ ಮಹತ್ವದ ತೀರ್ಪಿತ್ತಿದೆ. ಸರ್ಕಾರಿ– ಖಾಸಗಿ ಭೂಮಿಯಲ್ಲಿ ಅವಕಾಶವಿರುವ ಎಲ್ಲೆಡೆಯೂ ಇರುವ ಮರಗಳನ್ನು ಉಳಿಸಿಕೊಳ್ಳುವುದು ಮತ್ತು ಹೊಸ ಮರಗಳನ್ನು ಬೆಳೆಸುವುದು ನಮ್ಮೆಲ್ಲರ ಹೊಣೆಗಾರಿಕೆ. ಮರ– ಗಿಡಗಳ ಬೆಳೆಸುವುದಕ್ಕೆ ಮುಂಗಾರಿಗಿಂತಲೂ ಪ್ರಶಸ್ತ ಸಮಯ ಇದೆಯೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಿರ್ಲಕ್ಷಿಸದಿರಿ ರೇಬಿಸ್





ನಾಯಿ ಕಡಿತದ ಬಗ್ಗೆ ಇರಲಿ ಎಚ್ಚರ; ಚುಚ್ಚುಮದ್ದೇ ಪರಿಹಾರ

ಉತ್ತರ ಪ್ರದೇಶದ ಯುವ ಕಬಡ್ಡಿ ಆಟಗಾರ ಬ್ರಿಜೇಶ್ ಸೋಲಂಕಿ ಅವರು ರೇಬಿಸ್ ಕಾಯಿಲೆಯಿಂದ ನರಳಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಹಲವು ದಿನ ನರಳಿದ ಅವರು, ನಂತರ ಉಸಿರು ಚೆಲ್ಲಿದರು. ಕರ್ನಾಟಕದಲ್ಲೂ ಈ ವರ್ಷದ ಮೊದಲ ಆರು ತಿಂಗಳಲ್ಲಿ 19 ಮಂದಿ ರೇಬಿಸ್‌ಗೆ ಬಲಿಯಾಗಿದ್ದಾರೆ. ನೆರೆಯ ಕೇರಳದಲ್ಲೂ ರೇಬಿಸ್‌ನಿಂದ ಜನರು ಸಾಯುವುದು ಹೆಚ್ಚುತ್ತಿದ್ದು, ಇತ್ತೀಚಿನ ತಿಂಗಳಲ್ಲಿ ಮೂವರು ಮಕ್ಕಳು ಇದರಿಂದಾಗಿ ಮೃತಪಟ್ಟಿದ್ದಾರೆ. ಕೇಂದ್ರ ಸರ್ಕಾರವು 2030ರ ಒಳಗಾಗಿ ದೇಶವನ್ನು ರೇಬಿಸ್‌ಮುಕ್ತಗೊಳಿಸುವ ಯೋಜನೆ ಹಾಕಿಕೊಂಡಿದೆ. ಹಾಗಿದ್ದರೂ ವರ್ಷದಿಂದ ವರ್ಷಕ್ಕೆ ರೇಬಿಸ್ ಸಾವುಗಳು ಹೆಚ್ಚುತ್ತಿವೆ. ರೇಬಿಸ್ ತಡೆಯಲು ಕೈಗೊಳ್ಳಬೇಕಾದ ಮುಂಜಾಗ್ರತೆಗಳು, ತಜ್ಞರ ಸಲಹೆಗಳು ಇಲ್ಲಿವೆ

ಪ್ರಜಾವಾಣಿ ವಾರ್ತೆ

ಚರಂಡಿಯಲ್ಲಿ ಬಿದ್ದಿದ್ದ ನಾಯಿ ಮರಿಯನ್ನು ರಕ್ಷಿಸಲು ಹೋಗಿದ್ದ 22 ವರ್ಷದ ಕಬಡ್ಡಿ ಆಟಗಾರ ಬ್ರಿಜೇಶ್ ಸೋಲಂಕಿ ಅವರ ಜೀವಕ್ಕೆ ಮುಳುವಾಗಿದೆ. ನಾಯಿ ಮರಿಯನ್ನು ರಕ್ಷಿಸುವ ವೇಳೆ ಅದು ಅವರಿಗೆ ಕಚ್ಚಿತ್ತು. ಕಚ್ಚಿದ್ದು ಚಿಕ್ಕ ಮರಿ ಎಂದು ಅವರು ನಾಯಿ ಕಡಿತವನ್ನು ನಿರ್ಲಕ್ಷಿಸಿದರು. ಅಂತಿಮವಾಗಿ, ಅದು ರೇಬಿಸ್‌ಗೆ ಕಾರಣವಾಗಿ, ನೊಯಿಡಾದ ಆಸ್ಪತ್ರೆಯೊಂದರಲ್ಲಿ ಅವರು ಅಸುನೀಗಿದ್ದಾರೆ. ಈ ಘಟನೆಯು ಜನರನ್ನು ಬೆಚ್ಚಿಬೀಳಿಸಿದ್ದು, ನಾಯಿ ಕಡಿತ ಮತ್ತು ರೇಬಿಸ್ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿದೆ.

ನಾಯಿ ಕಡಿತವೇ ಮೂಲ: ರೇಬಿಸ್ ಇಂದಿಗೂ ಜಗತ್ತಿನ ಅತ್ಯಂತ ಅಪಾಯಕಾರಿ ಕಾಯಿಲೆ ಆಗಿದ್ದು, ಮನುಷ್ಯರಲ್ಲಿ ಮತ್ತು ಪ್ರಾಣಿಗಳಲ್ಲಿ ಅದರ ಮರಣ ಪ್ರಮಾಣ ಶೇ 100ರಷ್ಟಿದೆ. ಅಂದರೆ, ಒಮ್ಮೆ ರೇಬಿಸ್ ತಗುಲಿದರೆ, ಅದು ಗುಣವಾಗುವುದೇ ಇಲ್ಲ. ನಾಯಿ ಕಡಿತವೇ ರೇಬಿಸ್‌ಗೆ ಮುಖ್ಯ ಮೂಲವಾಗಿದೆ. ಕೆಲವೊಮ್ಮೆ ಬೆಕ್ಕು ಕಡಿತದಿಂದಲೂ ರೇಬಿಸ್ ಸೋಂಕು ಹರಡುವ ಅಪಾಯ ಇದೆ. ಜಗತ್ತಿನ ರೇಬಿಸ್ ಪ್ರಕರಣಗಳಲ್ಲಿ ಶೇ 99ರಷ್ಟು ನಾಯಿ ಕಡಿತದಿಂದಲೇ ಬಂದಂಥವು. ಆರೋಗ್ಯವಂತ ನಾಯಿ ಕಡಿದರೆ, ಅದರಿಂದ ರೇಬಿಸ್ ಸೋಂಕು ಹರಡುವುದಿಲ್ಲ. ಆದರೆ, ರೇಬಿಸ್ ವೈರಾಣು ಇರುವ (ಹುಚ್ಚು) ನಾಯಿ ಕಡಿದರೆ ರೇಬಿಸ್ ಸೋಂಕು ಹರಡುತ್ತದೆ. ಕೆಲವು ಸಂದರ್ಭಗಳಲ್ಲಿ ನಾಯಿ, ಬೆಕ್ಕು ಪರಚುವಿಕೆಯಿಂದಲೂ ಇದು ಹರಡುತ್ತದೆ.

ರೇಬಿಸ್ ಒಂದು ವೈರಾಣು ಕಾಯಿಲೆಯಾಗಿದ್ದು, ಅದು ಮನುಷ್ಯರೂ ಸೇರಿದಂತೆ ನಾಯಿ, ಬೆಕ್ಕು, ನರಿಗಳ ನರಮಂಡಲ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ರೇಬಿಸ್ ವೈರಸ್ ಸೋಂಕಿತ ಪ್ರಾಣಿಗಳ ಎಂಜಲು ಮತ್ತು ಮಿದುಳಿನಲ್ಲಿ ಸ್ಥಾನಪಡೆದಿರುತ್ತದೆ. ಸೋಂಕಿತ ಪ್ರಾಣಿಗಳು ಇತರ ಯಾವುದೇ ಪ್ರಾಣಿ ಅಥವಾ ಮನುಷ್ಯನನ್ನು ಕಚ್ಚಿದರೆ, ಅವರಿಗೂ ಸೋಂಕು ಹರಡುತ್ತದೆ. ಬಾವಲಿಯಂಥ ಕೆಲವು ಪಕ್ಷಿಗಳಲ್ಲೂ ವೈರಾಣು ಇರುತ್ತದೆ. ಕಾಡುಪ್ರಾಣಿಗಳ ನಡುವೆ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ, ಅದು ಸಾಕು ಪ್ರಾಣಿಗಳಿಗೆ ಹರಡಿ, ಅವುಗಳಿಂದ ಮನುಷ್ಯರಿಗೆ ಹರಡುವ ಅಪಾಯ ಹೆಚ್ಚಿರುತ್ತದೆ. ರೇಬಿಸ್‌ನಿಂದ ಜಾಗತಿಕವಾಗಿ ಪ್ರತಿವರ್ಷ ಸುಮಾರು 59,000 ಸಾವುಗಳು ಸಂಭವಿಸುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ರೇಬಿಸ್ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ನಂತರ ಅದನ್ನು ತಡೆಯುವುದು ಸಾಧ್ಯವಿಲ್ಲ. ಆದರೆ, ರೇಬಿಸ್ ಬರದಂತೆ ತಡೆಯುವುದು ಸಾಧ್ಯವಿದೆ. ಲಸಿಕೆ, ಔಷಧಗಳಿಂದ ರೇಬಿಸ್ ಸಾವುಗಳನ್ನು ತಡೆಗಟ್ಟಬಹುದಾಗಿದೆ. ನಾಯಿಗಳಿಗೆ ಲಸಿಕೆ ಹಾಕಿಸುವುದರಿಂದ ರೇಬಿಸ್ ಹರಡುವಿಕೆಯ ಸರಪಳಿಯನ್ನು ತುಂಡರಿಸಬಹುದಾಗಿದೆ.

ಆಫ್ರಿಕಾ, ಏಷ್ಯಾದಲ್ಲಿ ಹೆಚ್ಚು ಸಾವು: ಜಗತ್ತಿನ 150ಕ್ಕೂ ಹೆಚ್ಚು ದೇಶಗಳಲ್ಲಿ ಸಾವಿರಾರು ಜನ ರೇಬಿಸ್‌ನಿಂದ ಸತ್ತಿರುವುದಾಗಿ ವರದಿಗಳು ಹೇಳುತ್ತಿವೆ. ವ್ಯವಸ್ಥಿತ ಹಾಗೂ ನಿರಂತರ ಪ್ರಯತ್ನ, ಲಸಿಕೆಗಳಿಂದ ಕೆಲವು ದೇಶಗಳು ರೇಬಿಸ್‌ನಿಂದ ಮುಕ್ತವಾಗಿವೆ. ಪಶ್ಚಿಮ ಯುರೋಪ್, ಉತ್ತರ ಅಮೆರಿಕ, ಜಪಾನ್, ದಕ್ಷಿಣ ಕೊರಿಯಾ ಮತ್ತು ಲ್ಯಾಟಿನ್ ಅಮೆರಿಕದ ಕೆಲವು ಭಾಗಗಳು ಸೇರಿದಂತೆ ಹಲವು ದೇಶಗಳು ರೇಬಿಸ್‌ಮುಕ್ತವಾಗಿವೆ. ಆದರೆ, ಆಫ್ರಿಕಾ ಮತ್ತು ಏಷ್ಯಾ ಖಂಡದಲ್ಲಿ ಅತಿ ಹೆಚ್ಚು ಮಂದಿ ರೇಬಿಸ್‌ನಿಂದ ಮೃತರಾಗುತ್ತಿದ್ದು, ಜಗತ್ತಿನ ಒಟ್ಟು ಪ್ರಕರಣಗಳ ಪೈಕಿ ಈ ಎರಡು ಖಂಡಗಳಲ್ಲಿಯೇ ಶೇ 95ರಷ್ಟು ಸಾವುಗಳು ವರದಿಯಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ರೇಬಿಸ್ ಹೆಚ್ಚಾಗಿ (ಶೇ 80ರಷ್ಟು) ಕಾಣಿಸಿಕೊಳ್ಳುತ್ತಿದ್ದು, ಆರೋಗ್ಯ ಸೇವೆಗಳ ಲಭ್ಯತೆ, ಲಸಿಕೆ ಸಮಯಕ್ಕೆ ಸಿಗದಿರುವುದು, ಆಸ್ಪತ್ರೆಗೆ ಹೋಗಿ ತೋರಿಸಿಕೊಳ್ಳದಿರುವುದು, ತಿಳಿವಳಿಕೆಯ ಕೊರತೆ, ಮೂಢನಂಬಿಕೆ, 'ನಾಟಿ' ಔಷಧದ ಮೊರೆ ಹೋಗುವುದು ಸೇರಿದಂತೆ ಹಲವು ಅಂಶಗಳು ಇದಕ್ಕೆ ಕಾರಣ. ಆಘಾತಕಾರಿ ವಿಚಾರವೇನೆಂದರೆ, ರೇಬಿಸ್‌ನಿಂದ ಮೃತಪಡುತ್ತಿರುವವರಲ್ಲಿ ಶೇ 50ರಷ್ಟು ಮಂದಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು.

ಆಧಾರ: ಡಬ್ಲ್ಯುಎಚ್‌ಒ, ವರ್ಲ್ಡ್ ಆರ್ಗನೈಸೇಷನ್ ಫಾರ್ ಆ್ಯನಿಮಲ್ ಹೆಲ್ತ್, ಪಿಟಿಐ, ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ, ಕರ್ನಾಟಕ ಆರೋಗ್ಯ ಇಲಾಖೆ



ಚಿಕಿತ್ಸೆ ಪಡೆಯಿರಿ



ನಾಯಿ ಕಚ್ಚಿದರೆ ನಿರ್ಲಕ್ಷ್ಯ ಮಾಡಬಾರದು. ರೇಬಿಸ್ ಸೋಂಕು ದೇಹದ ನರವ್ಯೂಹ ಸೇರಿದ ಬಳಿಕ ಬಲಿಷ್ಠಗೊಂಡು ವ್ಯಕ್ತಿಯನ್ನು ಗಾಸಿಗೊಳಿಸುತ್ತದೆ. ನಾಯಿ ಕಚ್ಚಿದಾಗ ಆದಷ್ಟು ಬೇಗ ಚಿಕಿತ್ಸೆ ಪಡೆದುಕೊಳ್ಳಬೇಕು. ಸಾಬೂನಿನಿಂದ ಗಾಯವನ್ನು ಸ್ವಚ್ಛಗೊಳಿಸಿದಲ್ಲಿ ಸೋಂಕು ದೇಹದ ನರವ್ಯೂಹ ಸೇರುವುದನ್ನು ತಡೆಯಬಹುದು. ರಕ್ತಸ್ರಾವ ಜಾಸ್ತಿ ಇದ್ದಲ್ಲಿ ಶುಭ್ರವಾದ ಬಟ್ಟೆಯನ್ನು ಕಟ್ಟಿಕೊಳ್ಳಬೇಕು. ಬಳಿಕ ಹತ್ತಿರದ ಆಸ್ಪತ್ರೆಗೆ ತೆರಳಿ ಚುಚ್ಚುಮದ್ದನ್ನು ಪಡೆಯಬೇಕು. ಕಚ್ಚಿದ ನಾಯಿ ಮೇಲೆ ಕೂಡ ನಿಗಾ ಇಡಬೇಕಾಗುತ್ತದೆ. ಯಾವುದೇ ಕಾರಣಕ್ಕೂ ನಾಯಿಯನ್ನು ಸಾಯಿಸಬಾರದು

ಡಾ.ಅನ್ಸರ್ ಅಹಮದ್, ಆರೋಗ್ಯ ಇಲಾಖೆಯ ಐಡಿಎಸ್‌ಪಿಯ ನಿವೃತ್ತ ನಿರ್ದೇಶಕ

150ಕ್ಕೂ ಹೆಚ್ಚು
ರೇಬಿಸ್ ಕಾಯಿಲೆ ವರದಿಯಾಗುತ್ತಿರುವ ರಾಷ್ಟ್ರಗಳ ಸಂಖ್ಯೆ

59,000
ಜಗತ್ತಿನಲ್ಲಿ ವಾರ್ಷಿಕವಾಗಿ ರೇಬಿಸ್‌ನಿಂದ ಮೃತಪಡುತ್ತಿರುವವರ ಸಂಖ್ಯೆ

21,000
ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಭಾರತದಲ್ಲಿ ಪ್ರತಿ ವರ್ಷ ರೇಬಿಸ್‌ಗೆ ಬಲಿಯಾಗುತ್ತಿರುವವರು

36%
ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಜಗತ್ತಿನ ರೇಬಿಸ್ ಪ್ರಕರಣಗಳಲ್ಲಿ ಭಾರತದ ಪಾಲು

6,644
2012ರಿಂದ 2022ರ ನಡುವೆ ಭಾರತದಲ್ಲಿ ವರದಿಯಾದ ಶಂಕಿತ ರೇಬಿಸ್ ಪ್ರಕರಣಗಳು ಮತ್ತು ಸಾವುಗಳು


ಇಲ್ಲ ನಿಖರ ಮಾಹಿತಿ

ಭಾರತದಲ್ಲಿ ರೇಬಿಸ್ ಅತ್ಯಂತ ಗಂಭೀರ ಸ್ವರೂಪದ ಕಾಯಿಲೆ ಎಂದು ಹೇಳುತ್ತದೆ ವಿಶ್ವಆರೋಗ್ಯ ಸಂಸ್ಥೆ. ಅದರ ಪ್ರಕಾರ, ಜಗತ್ತಿನಲ್ಲಿ ವಾರ್ಷಿಕವಾಗಿ ವರದಿಯಾಗುತ್ತಿರುವ ರೇಬಿಸ್‌ನಿಂದ ಮನುಷ್ಯರ ಸಾವಿನ ಪ್ರಕರಣಗಳಲ್ಲಿ ಶೇ 36ರಷ್ಟು ಪ್ರಕರಣಗಳು ಭಾರತದಲ್ಲಿಯೇ ಕಂಡುಬರುತ್ತಿವೆ. ಆದರೆ, ಕೇಂದ್ರ ಸರ್ಕಾರದ ಅಂಕಿ ಅಂಶಗಳ ಪ್ರಕಾರ, 2022ರಿಂದೀಚೆಗೆ ದೇಶದಲ್ಲಿ ಪ್ರತಿವರ್ಷ ರೇಬಿಸ್‌ನಿಂದ ಮೃತಪಟ್ಟವರ ಸಂಖ್ಯೆ ಮೂರು ಅಂಕಿ ದಾಟಿಲ್ಲ. ದಶಕಗಳ ಹಿಂದೆ ದೇಶದಲ್ಲಿ ರೇಬಿಸ್ ಪ್ರಕರಣಗಳು ಮತ್ತು ಅದರಿಂದಾಗಿ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಜಾಸ್ತಿ ಇತ್ತು. ಆದರೆ, ಅದೀಗ ಗಣನೀಯವಾಗಿ ಕಡಿಮೆಯಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಲ್ಯಾನ್ಸೆಟ್‌ನಲ್ಲಿ ಪ್ರಕಟವಾದ ಅಧ್ಯಯನ ವರದಿಯೊಂದರಲ್ಲಿ 2012ರಿಂದ 2022ರ ನಡುವೆ ಭಾರತದಲ್ಲಿ 6,644 ಶಂಕಿತ ರೇಬಿಸ್ ಮತ್ತು ಸಾವಿನ ಪ್ರಕರಣಗಳು ವರದಿಯಾಗಿವೆ ಎಂದು ಉಲ್ಲೇಖಿಸಲಾಗಿದೆ. ಸಂಸತ್ತಿನಲ್ಲಿ ಆರೋಗ್ಯ ಸಚಿವರು ನೀಡುವ ಅಂಕಿ ಅಂಶಗಳಲ್ಲೂ ವ್ಯತ್ಯಾಸ ಇದೆ. ದೇಶದಲ್ಲಿ ನಾಯಿ ಕಡಿತ ಮತ್ತು ರೇಬಿಸ್ ಪ್ರಕರಣಗಳು ನಿಖರವಾಗಿ ವರದಿಯಾಗುತ್ತಿಲ್ಲ ಎಂಬುದನ್ನು ಇದು ಬೊಟ್ಟು ಮಾಡುತ್ತದೆ. ಭಾರತದಲ್ಲಿ ಎಲ್ಲ ಪ್ರಕರಣಗಳೂ ಬೆಳಕಿಗೆ ಬರುತ್ತಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯೂ ಹೇಳಿದೆ.

ಗ್ರಾಮೀಣ ಭಾಗಗಳಲ್ಲಿ ರೇಬಿಸ್ ರೋಗದ ಬಗ್ಗೆ ತಪ್ಪು ಕಲ್ಪನೆಗಳಿದ್ದು, ಮೂಢನಂಬಿಕೆಯನ್ನು ಪಾಲಿಸುತ್ತಾರೆ. ನಾಯಿ ಕಚ್ಚಿದರೂ ವೈದ್ಯರ ಬಳಿಗೆ ಹೋಗಿ ಚುಚ್ಚುಮದ್ದು ಪಡೆಯದೆ, ನಾಟಿ ವೈದ್ಯರ ಬಳಿಗೆ ಹೋಗುವ ಪದ್ಧತಿ ಇದೆ. ಹಸು ಸೇರಿದಂತೆ ಇನ್ನಿತರ ಜಾನುವಾರುಗಳಿಗೆ ನಾಯಿ ಕಚ್ಚಿ, ಅವುಗಳಿಗೆ ರೇಬಿಸ್ ತಗುಲಿ ಸಾವುಗಳು ಸಂಭವಿಸುತ್ತಲೇ ಇವೆ. ಹೀಗಿದ್ದರೂ ಅನೇಕರು ನಾಯಿ ಕಡಿತಕ್ಕೆ ಚಿಕಿತ್ಸೆ ನೀಡಲು ಹೋಗುವುದಿಲ್ಲ. ಬೀದಿ ನಾಯಿಗಳ ಹಾವಳಿ ಹೆಚ್ಚಿರುವ ಪ್ರದೇಶದಲ್ಲಿ ಅವುಗಳಿಗೆ ರೇಬಿಸ್ ನಿರೋಧಕ ಲಸಿಕೆ ನೀಡಲಾಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿ ಬಹುಪಾಲು ಜನರು ಸಾಕು ನಾಯಿಗಳಿಗೆ ಚುಚ್ಚುಮದ್ದು ಕೊಡಿಸುವುದಿಲ್ಲ.

ಭಾರತದಲ್ಲಿ ರೇಬಿಸ್‌ನಿಂದ ಮೃತಪಟ್ಟವರು

(ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ)



ರೋಗ ಲಕ್ಷಣಗಳೇನು?

ರೇಬಿಸ್ ಸೋಂಕು ಹೊಂದಿದ ನಾಯಿ, ಬೆಕ್ಕು ಹಾಗೂ ಇತರ ಪ್ರಾಣಿಗಳು ಕಚ್ಚಿದ ನಂತರ ಮನುಷ್ಯನ ರಕ್ತ ಸೇರುವ ವೈರಾಣು ನಂತರ ಮಿದುಳಿಗೆ ಸೇರುತ್ತದೆ. ಆ ಬಳಿಕ ರೋಗ ಲಕ್ಷಣಗಳು ಗೋಚರಿಸಲು ಶುರುವಾಗುತ್ತದೆ. ಇದಕ್ಕೆ ಕೆಲವು ವಾರಗಳಿಂದ ತಿಂಗಳುವರೆಗೆ ಸಮಯ ತೆಗೆದುಕೊಳ್ಳುತ್ತದೆ.

- **ಮೊದಲ 10 ದಿನಗಳಲ್ಲಿ ಜ್ವರ, ತಲೆನೋವು, ತಲೆಸುತ್ತು, ಸುಸ್ತು ಮುಂತಾದ ಸಾಮಾನ್ಯ ರೋಗ ಲಕ್ಷಣಗಳು**
- **ಕಚ್ಚಿದ ಜಾಗದಲ್ಲಿ ತುರಿಕೆ, ಜುಮ್ಮೆನ್ನುವುದು**

ಎರಡು ವಾರಗಳ ನಂತರ ತೀವ್ರತರದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆ ಸಂದರ್ಭದಲ್ಲಿ ವೈರಸ್ ಮನುಷ್ಯನ ಮಿದುಳಿಗೆ ಹಾನಿ ಮಾಡಿರುತ್ತದೆ.

- **ನಿದ್ರಾಹೀನತೆ, ಗೊಂದಲ, ವ್ಯಾಕುಲತೆ, ಭಾವೋನ್ಮಾದ, ಭ್ರಾಂತಿ, ನೀರಿನ ಭಯ, ಹೆಚ್ಚು ಜೊಲ್ಲು ಸುರಿಸುವುದು, ಮೂರ್ಛೆ/ಪಾರ್ಶ್ವವಾಯು**

ಚುಚ್ಚುಮದ್ದು ಪಡೆದಿದ್ದರೂ ಸಾವು

ಕೇರಳದಲ್ಲೂ ರೇಬಿಸ್‌ನಿಂದಾಗಿ ಹೆಚ್ಚು ಸಾವಿನ ಪ್ರಕರಣಗಳು ವರದಿಯಾಗುತ್ತಿವೆ. ಈ ವರ್ಷದ ಏಪ್ರಿಲ್–ಮೇ ತಿಂಗಳಲ್ಲಿ 15 ವರ್ಷ ವಯಸ್ಸಿನ ಒಳಗಿನ ಮೂವರು ಮಕ್ಕಳು, ನಾಯಿ ಕಚ್ಚಿದ ಬಳಿಕ ಲಸಿಕೆ ಪಡೆದಿದ್ದರೂ ರೇಬಿಸ್‌ನಿಂದಾಗಿ ಮೃತಪಟ್ಟಿರುವುದು ರಾಜ್ಯದಲ್ಲಿ ಆತಂಕ ಸೃಷ್ಟಿಸಿದೆ. ಲಸಿಕೆಯ ಗುಣಮಟ್ಟ, ಅದರ ನಿರ್ವಹಣೆಯ ಬಗ್ಗೆ ಪ್ರಶ್ನೆ ಏಳುವಂತೆ ಮಾಡಿದೆ.

ನಾಯಿಗಳು ಕಚ್ಚಿದ ಜಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಗಾಯ ಆಗಿದ್ದರೆ, ಬಹುಬೇಗ ವೈರಸ್ ನರವ್ಯೂಹಕ್ಕೆ ತಲುಪಿ ಚುಚ್ಚುಮದ್ದು ನೀಡಿದ್ದರೂ ಸೋಂಕಿನ ತೀವ್ರತೆಯನ್ನು ಹೆಚ್ಚಿಸಬಹುದು. ಮೃತಪಟ್ಟ ಮೂವರು ಮಕ್ಕಳಿಗೂ ನಾಯಿ ಕಚ್ಚಿದ ಜಾಗದಲ್ಲಿ ದೊಡ್ಡ ಗಾಯಗಳಾಗಿದ್ದವು ಎಂದು ವರದಿಯಾಗಿದೆ.

ಕರ್ನಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್

'ವರ್ಷಗಳಿಗೆ ಬೇಕಾದಷ್ಟು ಬಂಡವಾಳ ನಮ್ಮಲ್ಲಿದೆ'

• ವಿಜಯ್ ಜೋಷಿ



ಪಿ. ಪ್ರದೀಪ್ ಕುಮಾರ್

101 ವರ್ಷಗಳನ್ನು ಪೂರೈಸಿರುವ ಕರ್ನಾಟಕ ಬ್ಯಾಂಕ್ ಸುದ್ದಿಯಲ್ಲಿದೆ. ಬ್ಯಾಂಕ್‌ನ ಎಂ.ಡಿ ಮತ್ತು ಸಿಇಒ ಹುದ್ದೆಗೆ ಶ್ರೀಕೃಷ್ಣನ್ ಹರಿಹರ ಶರ್ಮ ಅವರು 'ವೈಯಕ್ತಿಕ ಕಾರಣ'ಗಳಿಗಾಗಿ ರಾಜೀನಾಮೆ ಸಲ್ಲಿಸಿದ್ದಾರೆ. ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗೆ ಶೇಖರ್ ರಾವ್ ರಾಜೀನಾಮೆ ನೀಡಿದ್ದಾರೆ.

ಇವರಿಬ್ಬರ ರಾಜೀನಾಮೆಯ ನಂತರ ಬ್ಯಾಂಕ್‌ನ ಷೇರುಮೌಲ್ಯವು ಒಂದು ದಿನದ ವಹಿವಾಟಿನ ನಡುವಿನಲ್ಲಿ ಶೇಕಡ 8ರವರೆಗೂ ಇಳಿಕೆ ಕಂಡಿತ್ತು. ಬ್ಯಾಂಕ್‌ನ ಆಡಳಿತ ಮಂಡಳಿ ಹಾಗೂ ಸಿಇಒ ನಡುವೆ ಹೊಂದಾಣಿಕೆ ಬಾರದ ಕಾರಣಕ್ಕೆ ಈ ರಾಜೀನಾಮೆ ಎಂಬ ಮಾತುಗಳು ಇವೆ. ಸಾಮಾಜಿಕ ಜಾಲತಾಣಗಳಲ್ಲಿ ಬ್ಯಾಂಕ್‌ನ ಆರ್ಥಿಕ ಸ್ಥಿತಿಯ ಬಗ್ಗೆ 'ಆತಂಕ'ದ ಮಾತುಗಳೂ ಹರಿದಾಡಿವೆ.

ಈ ಹೊತ್ತಿನಲ್ಲಿ ಬ್ಯಾಂಕ್‌ನ ಅಧ್ಯಕ್ಷ ಪಿ.ಪ್ರದೀಪ್ ಕುಮಾರ್ ಅವರು 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದಲ್ಲಿ ಕೆಲವು ಸ್ಪಷ್ಟನೆಗಳನ್ನು ನೀಡಿದ್ದಾರೆ. ಬ್ಯಾಂಕ್ ಆರ್ಥಿಕವಾಗಿ ಸುಭದ್ರವಾಗಿದೆ, ಹೂಡಿಕೆದಾರರಿಗೆ ಹಾಗೂ ಠೇವಣಿದಾರರಿಗೆ ಆತಂಕ ಬೇಡ ಎಂದು ಹೇಳಿದ್ದಾರೆ. ಸಂದರ್ಶನದ ಆಯ್ದ ಭಾಗ ಇಲ್ಲಿದೆ...

ಪ್ರಜಾವಾಣಿ ಸಂದರ್ಶನ

• **ಪ್ರ: ಕರ್ನಾಟಕ ಬ್ಯಾಂಕ್ ಎಂ.ಡಿ ಹಾಗೂ ಸಿಇಒ ಹುದ್ದೆಗೆ ಶ್ರೀಕೃಷ್ಣನ್ ಹರಿಹರ ಶರ್ಮ ಅವರು ರಾಜೀನಾಮೆ ನೀಡಿದ ನಂತರದ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯೆ ಏನು?**

ಈ ಪ್ರಶ್ನೆಯನ್ನು ಆಧಾರ ಇಲ್ಲದೆ ಗದ್ದಲ ಮಾಡಿದವರ ಬಳಿಯೇ ಕೇಳಬೇಕು. ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಜನರು ಬದಲಾಗುವುದು ಹೊಸದೇನೂ ಅಲ್ಲ. ಬದಲಾವಣೆ ಆಗುತ್ತಲೇ ಇರುತ್ತದೆ.

• **ಪ್ರ: ಶರ್ಮ ಅವರು ಇದ್ದಕ್ಕಿದ್ದಂತೆ ಹೊರನಡೆಯಲು ಕಾರಣ ಏನು?**

ಅವರಿಗೆ ಮುಂಬೈಗೆ ಮರಳಬೇಕಾಗಿತ್ತು, ಅದಕ್ಕೆ ಕೌಟುಂಬಿಕ ಕಾರಣಗಳು ಇದ್ದಿರಬಹುದು. ಅವನ್ನೆಲ್ಲ ನಾವು ಕೇಳಲು ಆಗುವುದಿಲ್ಲ. ವೈಯಕ್ತಿಕ ಕಾರಣಗಳಿಗೆ ರಾಜೀನಾಮೆ ನಿಡುತ್ತಿರುವುದಾಗಿ ಅವರು ಹೇಳಿದ್ದಾರೆ.

• **ಪ್ರ: ಆದರೆ, ಲೆಕ್ಕಪರಿಶೋಧನೆ ವೇಳೆ ಕೆಲವು ವಿಷಯಗಳಿಗೆ ಆಕ್ಷೇಪ ಎತ್ತಲಾಗಿದೆ ಎಂದು ವರದಿಗಳು ಹೇಳುತ್ತಿವೆಯಲ್ಲ?**

ಅದೊಂದು ಚಿಕ್ಕ ಮೊತ್ತ. ಅವೆಲ್ಲವೂ ಈಗ ಪರಿಹಾರ ಕಂಡಿವೆ.

• **ಪ್ರ: ಬ್ಯಾಂಕ್‌ನ ಆಡಳಿತ ಮಂಡಳಿಯ ಅನುಮೋದನೆ ಪಡೆಯದೆ ಡಿಜಿಎಂ ಹುದ್ದೆಗೆ ನೇಮಕ ಮಾಡಿದ್ದವರನ್ನು, ಆಡಳಿತ ಮಂಡಳಿಯ ಆಕ್ಷೇಪದ ನಂತರದಲ್ಲಿ ಮತ್ತೆ ಎಜಿಎಂ ಆಗಿ ನೇಮಕ ಮಾಡಿದ್ದು ಏಕೆ?**

ಡಿಜಿಎಂ ಹುದ್ದೆಗೆ ನೇಮಕ ಮಾಡಲು ಕೆಲವು ಪ್ರಕ್ರಿಯೆಗಳನ್ನು ಪಾಲಿಸಬೇಕು. ಅವುಗಳ ಪಾಲನೆ ಆಗಿರಲಿಲ್ಲ. ಹೀಗಾಗಿ, ನಾವು (ಆಡಳಿತ ಮಂಡಳಿ) ಅದನ್ನು ಅವರಿಗೆ ತಿಳಿಸಿದ್ದೆವು. ಮಾಡಿದ್ದು ಸರಿಯಲ್ಲ ಎಂದು ಹೇಳಿದ್ದೆವು. ಅವರು ಎಜಿಎಂ ಆಗಿದ್ದರೆ ಸಾಕು ಎಂದು ನಂತರ ಆ ಹುದ್ದೆಗೆ ನೇಮಿಸುವ ತೀರ್ಮಾನ ತೆಗೆದುಕೊಂಡರು.

• **ಪ್ರ: ಶರ್ಮ ಅವರು ಕರ್ನಾಟಕ ಬ್ಯಾಂಕಿನ ಸಿಇಒ ಹುದ್ದೆಗೆ ಹೊರಗಿನಿಂದ ನೇಮಕ ಆದವರಾದ ಕಾರಣಕ್ಕೆ ಬ್ಯಾಂಕಿನ ಕೆಲಸದ ಸಂಸ್ಕೃತಿಗೆ ಹೊಂದಿಕೊಳ್ಳಲು ಆಗಲಿಲ್ಲವೇ?**

ಕರ್ನಾಟಕ ಬ್ಯಾಂಕ್ ಇತಿಹಾಸದಲ್ಲಿ ಹೊರಗಡೆಯಿಂದ ಬಂದು ದೊಡ್ಡ ಹುದ್ದೆಗೆ ಏರಿದವರು ಇದ್ದಾರೆ. ಸೂರ್ಯನಾರಾಯಣ ಅಡಿಗರ ನಂತರ ಹಲವರು ಆ ರೀತಿ ಬಂದಿದ್ದು ಇದೆ. ಅನಂತಕೃಷ್ಣ, ಪಿ. ಜಯರಾಮ ಭಟ್, ಎಂ.ಎಸ್. ಮಹಾಬಲೇಶ್ವರ ಅವರು ಇಲ್ಲಿನವರೇ ಆಗಿದ್ದರು. ಶರ್ಮ ಅವರು ಹೊರಗಿನಿಂದ ಬಂದವರು, ಸಾಂಸ್ಕೃತಿಕವಾಗಿ ಸಮಸ್ಯೆ ಇತ್ತು ಎಂಬುದನ್ನು ನಾನು ಒಪ್ಪುವುದಿಲ್ಲ.

• **ಪ್ರ: ಬ್ಯಾಂಕ್‌ನ ಹಣಕಾಸಿನ ಸ್ಥಿತಿ ಹೇಗಿದೆ?**

ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಪರಿಶೀಲನೆ ನಡೆಸದೆ ಏನೇನೋ ಮಾಹಿತಿ ಹಂಚಿಕೊಳ್ಳಲಾಗಿದೆ. ಏಕೆ ಆ ರೀತಿ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ ಬ್ಯಾಂಕಿನ ನೆಲಗಟ್ಟು ಬಹಳ ಗಟ್ಟಿಯಾಗಿದೆ. ಬ್ಯಾಂಕಿಗೆ ಅಗತ್ಯ ಇರುವುದು ಬಂಡವಾಳ. ಆರ್‌ಬಿಐ ನಿಗದಿ ಮಾಡಿರುವ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇಕಡ 11.5ರಷ್ಟು. ಆದರೆ ನಾವು ಮಾತ್ರ ಅದನ್ನು ಶೇಕಡ 13ರಷ್ಟು ಇರಿಸಬೇಕು ಎಂದು ತೀರ್ಮಾನ ಮಾಡಿದ್ದೆವು. ಹೀಗಿದ್ದರೂ, ಈ ವರ್ಷದ ಮಾರ್ಚ್ ವೇಳೆಗೆ ಅದು ಶೇ 19.85ರಷ್ಟು ಆಗಿದೆ. ಇನ್ನೂ ನಾಲ್ಕು ವರ್ಷಗಳಿಗೆ ಬೇಕಾಗುವಷ್ಟು ಬಂಡವಾಳ ನಮ್ಮ ಬಳಿ ಇದೆ. ಬ್ಯಾಂಕ್‌ನ ಬೆಳವಣಿಗೆಗೆ ಯಾವ ತೊಂದರೆಯೂ ಇಲ್ಲ. ಠೇವಣಿಗಳು ಬರುತ್ತಲೇ ಇವೆ. ಕೆಲವರ ಮನಸ್ಸಿನಲ್ಲಿ ಇದ್ದ ಆತಂಕ ನಿವಾರಣೆ ಆಗಿದೆ. ಲಾಭವೂ ಚೆನ್ನಾಗಿ ಇದೆ.

• **ಪ್ರ: ಈಚಿನ ಬೆಳವಣಿಗೆಗಳಿಂದ ಹೂಡಿಕೆದಾರರ ವಿಶ್ವಾಸಕ್ಕೆ ಏಟು ಬಿದ್ದಿದೆಯೇ?**

ರಾಜೀನಾಮೆಯ ಮರುದಿನ ಬ್ಯಾಂಕ್‌ನ ಷೇರು ಬೆಲೆ ಮೇಲೆ ತುಸು ಪರಿಣಾಮ ಆಗಿತ್ತು. ನಂತರದಲ್ಲಿ ಅಷ್ಟು ಪರಿಣಾಮ ಕಾಣುತ್ತಿಲ್ಲ. ಷೇರು ಮೌಲ್ಯ ಹೆಚ್ಚು ಕುಸಿದಿಲ್ಲ. ಹೂಡಿಕೆದಾರರ ವಿಶ್ವಾಸದ ಮೇಲೆ ಒಂದಿಷ್ಟು ಪರಿಣಾಮ ಆಗಿರಬಹುದು, ಅದನ್ನು ಇಲ್ಲ ಎನ್ನಲಾರೆ. ಆದರೆ ನಾನು ಹಲವರ ಬಳಿ ಮಾತನಾಡುತ್ತಿದ್ದೇನೆ. ಹೂಡಿಕೆದಾರರು ಭವಿಷ್ಯದತ್ತ ನೋಡುತ್ತಾರೆ. ಶರ್ಮ ಅವರು ಆರಂಭಿಸಿದ ಉಪಕ್ರಮಗಳನ್ನು ನಾವು ಮುಂದುವರಿಸುತ್ತೇವೆ. ಗುರಿ ತಲುಪಲು ಬೇಕಿರುವುದನ್ನೆಲ್ಲ ನಾವು ಮುಂದುವರಿಸುತ್ತೇವೆ. ಆತಂಕ ಬೇಡ.

• **ಪ್ರ: ಶರ್ಮ ಅವರು ಬ್ಯಾಂಕಿನ ಸಿಇಒ ಆಗಿದ್ದ ಅವಧಿಯಲ್ಲಿ ಬ್ಯಾಂಕಿನ ಲಾಭ ಇಳಿಯಿತು, ವೆಚ್ಚಗಳು ಹೆಚ್ಚಾದವು. ಅಲ್ಲವೇ?**

ನಾವು ತಂತ್ರಜ್ಞಾನದ ಮೇಲೆ ಹೆಚ್ಚು ಹೂಡಿಕೆ ಮಾಡಿದ್ದೇವೆ ಎಂಬುದನ್ನು ಇಲ್ಲಿ ಹೇಳಬೇಕು. ಆರ್‌ಬಿಐ ಹೊಸ ಲೆಕ್ಕಾಚಾರದ ಕ್ರಮವೊಂದನ್ನು ಜಾರಿಗೆ ತಂದಿದೆ. ಅದರಿಂದಾಗಿ ₹130 ಕೋಟಿಯು ಬಂಡವಾಳ ಎಂದು ಪರಿಗಣನೆ ಆಗಿದೆ. ಲೆಕ್ಕಾಚಾರ ಕ್ರಮದಲ್ಲಿ ವ್ಯತ್ಯಾಸದಿಂದಾಗಿ ಹೀಗೆ ಆಗಿದೆ ಅಷ್ಟೇ.

• **ಪ್ರ: ಹೊಸ ನಾಯಕ ಯಾವಾಗ? ಅವರು ಬ್ಯಾಂಕಿಗೆ ಹೊರಗಿನವರಾಗಿರುತ್ತಾರೋ?**

ಒಳಗಿನವರು ಅಥವಾ ಹೊರಗಿನವರು ಎಂಬುದು ಇಲ್ಲಿ ಪರಿಗಣನೆ ಆಗುವುದಿಲ್ಲ. ನಾವು ಬ್ಯಾಂಕನ್ನು ಮುಂದೆ ನಡೆಸುವ ಪ್ರತಿಭೆಯನ್ನು ಹುಡುಕಬೇಕು. ಹೊಸ ನಾಯಕನ ಹುಡುಕಾಟಕ್ಕೆ 3–4 ತಿಂಗಳು ಬೇಕಾಗಬಹುದು. ಅಲ್ಲಿಯವರೆಗೆ ಮಧ್ಯಂತರ ಎಂ.ಡಿ ನೇಮಕಕ್ಕೆ ಹೆಸರನ್ನು ಆರ್‌ಬಿಐ ಒಪ್ಪಿಗೆಗೆ ಕಳುಹಿಸಿದ್ದೇವೆ.

ಗುಂಡಣ್ಣ



ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ. ಕಮ್ಮರಡಿ

05 ಜುಲೈ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದಶಮಿ ಗಂ. 18-59 **ನಕ್ಷತ್ರ:** ಸ್ವಾತಿ ಗಂ. 19-52 **ಯೋಗ:** ಸಿದ್ಧ ಗಂ. 20-36 **ಕರಣ:** ತೈತಿಲ ಗಂ. 5-47, ಮಿಥುನ ಮಾಸದ 21 ನೇ ದಿನ. **ಮಳೆ ನಕ್ಷತ್ರ :** ಆರ್ದ್ರಾ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 – 10-30. **ಸೂರ್ಯೋದಯ :** 06-12 ಸೂರ್ಯಾಸ್ತ : 06-58 **ಮುಸ್ಲಿಂ ದಿನಾಂಕ :** 09 ಮೊಹರಮ್. **ಅದೃಷ್ಟ ಸಂಖ್ಯೆ :** 1, 12

ಮೇಷ: ಪತ್ನಿಯ ಆರೋಗ್ಯದಲ್ಲಿ ರಕ್ತದೊತ್ತಡದಂಥ ಸಮಸ್ಯೆಗಳು ಉಂಟಾಗಬಹುದು. ಆಟಿಕೆ ವ್ಯಾಪಾರದಿಂದ ಅಧಿಕ ಲಾಭ ಪಡೆಯುವಂತಾಗಲಿದೆ. ದೀರ್ಘಕಾಲದ ಬಂಡವಾಳ ಹೂಡಿಕೆಯ ಆಲೋಚನೆ ಲಾಭ ತರುವುದು.

ವೃಷಭ: ಅಚ್ಚುಕಟ್ಟಾದ ಕೆಲಸಗಳಿಂದ ಜನರ ಅಭಿಪ್ರಾಯಗಳು ಬದಲಾಗಲಿವೆ. ಸೌಂದರ್ಯದ ಬಗ್ಗೆ ಪ್ರಾಮುಖ್ಯತೆ ನೀಡುವ ಮನಸ್ಸಾಗಲಿದೆ. ವಹಿವಾಟುಗಳು ಸರಾಗವಾಗಿ ನಡೆಯಲಿವೆ.

ಮಿಥುನ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ಜೀವನದ ದಿನಗಳು ನೆಮ್ಮದಿದಾಯಕವಾಗಲಿವೆ. ಶ್ರಮಕ್ಕೆ ತಕ್ಕ ಸಂಪಾದನೆ ಇಲ್ಲವಾದರೂ ನೆಮ್ಮದಿ ಕೊರತೆ ಇರುವುದಿಲ್ಲ.

ಕರ್ಕಾಟಕ: ಕಾರ್ಮಿಕ ವರ್ಗದವರಿಗೆ ಸವಲತ್ತುಗಳು ಒದಗಲಿವೆ. ಪರೋಪಕಾರ ಮತ್ತು ಮಾನವೀಯತೆ ಮುಖ್ಯ ಧ್ಯೇಯವಾಗಿರಲಿ. ನಡೆ-ನುಡಿ ನೇರವಾದಷ್ಟು ಸಂಬಂಧದ ಮಧ್ಯ ಇರುವ ಬಿರುಕು ಕಡಿಮೆಯಾಗುವುದು

ಸಿಂಹ: ಬಾಕಿ ಇರುವ ಸಾಲ ತೀರಿಸಿ. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿವೆ. ಏಳಿಗೆಗೆ ನೆರವಾಗುವವರ ಸಹಾಯ ಸಿಗುವುದು.

ಕನ್ಯಾ: ಹತಾಶೆಯಿಂದಾಗಿ ಮನಸ್ಸು ಅಧ್ಯಾತ್ಮದ ಕಡೆಗೆ ಎಳೆಯುತ್ತದೆ. ಖರ್ಚು ವೆಚ್ಚಗಳು ಹೆಚ್ಚೆ ಇರುವುದರಿಂದ ಪೂರ್ವ ತಯಾರಿ ಮಾಡಿಕೊಳ್ಳುವುದು ಉತ್ತಮ. ಕೃಷಿಗಾಗಿ ಪರಿಶ್ರಮ ವಹಿಸುವಿರಿ.

ತುಲಾ: ಹಲವು ವಿಚಾರಗಳು ತಲುಪುವುದರಿಂದ ತಳಮಳವಾಗಬಹುದು. ಹೂಡಿಕೆಯ ಬಗ್ಗೆ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳಿ. ಬೂದು ಬಣ್ಣ ಶುಭಪ್ರದ.

ವೃಶ್ಚಿಕ: ಜೀವನದ ಕಷ್ಟ ಸುಖಗಳು ತಿರುಗುವ ಚಕ್ರದಂತಿರುವುದರಿಂದ ಒಳ್ಳೆಯ ದಿನಗಳು ಜೀವನದಲ್ಲಿದೆ ಎಂಬ ಆಶಾ ಭಾವನೆಯನ್ನು ಮರೆಯದಿರಿ. ಮನೆಯಲ್ಲಿ ಮಕ್ಕಳ ಒಡನಾಟದಿಂದಾಗಿ ಮನಸ್ಸು ಸರಾಗವಾಗುವುದು.

ಧನು: ಬಹಳವಾಗಿ ಹಚ್ಚಿಕೊಂಡ ಸಾಕುಪ್ರಾಣಿಯ ಅನಾರೋಗ್ಯವು ತೀರ ಬೇಸರ ಪಡಿಸುವ ಸಾಧ್ಯತೆ ಇದೆ. ಸುತ್ತ ನಡೆಯುವ ಕೆಲವು ಸನ್ನಿವೇಶಗಳಿಂದ ಅಗಲಿದ ಹಿರಿಯರ ನೆನಪು ತರಿಸಲಿದೆ.

ಮಕರ: ಆತ್ಮವಿಶ್ವಾಸವು ಒಳ್ಳೆಯದು. ಆದರೆ, ಅತಿ ಆತ್ಮವಿಶ್ವಾಸವು ಕೆಲಸದ ಗುಣಮಟ್ಟವನ್ನು ಕುಂಠಿತಗೊಳಿಸುತ್ತದೆ. ಒದಗಿಬರಲಿರುವ ಅವಕಾಶಗಳನ್ನು ಕೈತಪ್ಪಿಸುವ ಪ್ರಯತ್ನ ಕೆಲವರು ಮಾಡಲಿದ್ದಾರೆ.

ಕುಂಭ: ಬೇಕಾದ ಸಮಯದಲ್ಲಿ ವಿರಾಮ ಪಡೆಯದೇ ಇದ್ದರೆ, ದೇಹವು ಅಗತ್ಯವಿರುವ ಸಮಯದಲ್ಲಿ ಕೈಕೊಡುವ ಸಾಧ್ಯತೆಗಳಿವೆ. ಆತುರ ಯೋಚನೆಗಳಿಗೆ ಕಡಿವಾಣ ಹಾಕಿ.

ಮೀನ: ಉದ್ಯೋಗದಲ್ಲಿ ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಬಳಸಿಕೊಳ್ಳಲು ಪ್ರಯತ್ನವನ್ನು ಮಾಡಿ. ಮಹಿಳೆಯರಿಗೆ ಭಾವುಕರಾಗುವಂಥ ಸನ್ನಿವೇಶಗಳು ಎದುರಾಗಬಹುದು.

ಪದಬಂಧ 6094


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಉಪಕಾರಕ್ಕೆ ಪ್ರತಿಯಾಗಿ ಮಾಡುವ ಸಹಾಯ (5)
4. ಉತ್ತರದವರ ಬಾಯಲ್ಲಿ ಅಧಿಕ (3)
5. ಸರಕ್ಕನೆ ತಂದಿರುವ ಸಾಮಾನು (3)
6. ವನದಲ್ಲಿ ಮುಂಡನ (3)
7. ನೂಲು ತೆಗೆಯುವ ಸಾಧನ (3)
9. ಆಸ್ಥಾನದಲ್ಲಿ ಸಿಕ್ಕಿರುವ ಹುದ್ದೆ!(2)
10. ಸೂಟು ಧರಿಸಿದ್ದಕ್ಕೇ ಸಿಕ್ಕಿರುವ ರಜಾ (2)
12. ಸುರನ ಸಮೀಪಿಸಿರುವ ರಾಕ್ಷಸ(3)
14. ಹುಚ್ಚು ಎನ್ನುವುದಕ್ಕೊಂದು ಪರ್ಯಾಯ ಪದ (3)
15. ಹಾಸ್ಯ ಈ ವಿಧವಾಗಿ ಬಂದಿದೆ (3)
16. ಕೆರ ತಿರುಗಿಸಿ ಮಾಡಿದ ಮಿಶ್ರಣ! (3)
17. ರುಚಿಕಟ್ಟಾದ ಭೋಜನವಿದು (5)

ಮೇಲಿಂದ ಕೆಳಕ್ಕೆ

1. ಪಡಿನೆಳಲು ಇಲ್ಲಿ ಕಾಣುತ್ತಿದೆ (4)
2. ಅಂತ್ಯ ಅಥವಾ ಸಾವು ಎಂದರೂ ಸರಿಯೇ (5)
3. ನರನ ಜಿಹ್ವೆಯಿದು (3)
4. ವಿರಳವಾಗಿ ಕಾಣುತ್ತಿರುವ ರಕ್ತ (3)
8. ಕಟಕಟೆಯಲ್ಲಿರುವ ವಂಚಕ (3)
9. ಈ ರೀತಿ ನೆಲೆಗೊಳಿಸು (3)
10. ಕನ್ನಡಿಗನು ಹಿಡಿದಿರುವ ಮೈಕ್ರೊಸ್ಕೋಪ್ (5)
11. ನಡುವಿನ ಜಾಗ (4)
13. ಕುಪ್ಪಸವನ್ನು ಹೀಗೂ ಹೇಳುವರು(3)
14. ಉದಾರ ಮನಸ್ಸಿನವನ ಹೊಟ್ಟೆ (3)



6093ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
12.ವಿಜಯೋತ್ಸವ
4.ಪಾತಕ 5.ನಡುಕ
7.ಜನಕ 9.ತೋಳ
10.ನರಿ 11.ನಕುಲ
13.ಕರ್ತಾರ 15.ಸಲಗ
16.ಸುಮನೋಹರ

ಮೇಲಿಂದ ಕೆಳಕ್ಕೆ:
1.ಪ್ರಯೋಜನ 2.ವಿಕ 3.ವನ
4.ಪಾರಿತೋಷಕ 6.ಕಸ್ತೂರಿಮೃಗ
7.ಜವಾನ 8.ಕಮಲ
12.ಕುಡಿನೋಟ 14.ರಸು 15.ಸರ

ಸುಡೊಕು 6478


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

6477 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,405
ಇಂದಿನ ಅಂತ್ಯ: 25,461
ದಿನದ ಗರಿಷ್ಠ: 25,470
55

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹620
12 ಕ್ಕೆ ₹80
ಮೈಸೂರು: 100 ಕ್ಕೆ ₹625

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹302-550
ದ್ವಿತಳಿ (ಬಿ.ವಿ) ₹362-677

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹198.50
ಆರ್‌ಎಸ್‌ಎಸ್-5 ₹192.50
ಗುಡ್ ಲಾಟ್ ₹181.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹29000-30850
ಬೆಳ್ಳಂಗಡಿ ₹12000-25000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1405 (1405)
ಸೋಯಾ (ರಿಫೈನ್ಡ್) ₹1210 (1210)
ಸೂರ್ಯಕಾಂತಿ (ರಿಫೈನ್ಡ್) ₹1350 (1335)
ಪಾಮೋಲಿನ್ ₹1170 (1170)

ಬಿಒಎಂ: ಸಾಲ ನೀಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಸಾಲ ನೀಡುವ ಪ್ರಮಾಣದಲ್ಲಿ ಶೇ 15ರಷ್ಟು ಏರಿಕೆ ದಾಖಲಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2.09 ಲಕ್ಷ ಕೋಟಿ ಸಾಲ ನೀಡಲಾಗಿತ್ತು. ಈ ಬಾರಿ ₹2.41 ಲಕ್ಷ ಕೋಟಿ ಸಾಲ ನೀಡಲಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಒಟ್ಟು ಠೇವಣಿಯು ಶೇ 14ರಷ್ಟು ಹೆಚ್ಚಳವಾಗಿದ್ದು, ₹3.09 ಲಕ್ಷ ಕೋಟಿಯಾಗಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ (ಸಾಲ ಮತ್ತು ಠೇವಣಿ) ₹5.46 ಲಕ್ಷ ಕೋಟಿಯಷ್ಟಾಗಿದ್ದು, ಶೇ 14.64ರಷ್ಟು ಏರಿಕೆಯಾಗಿದೆ. ಒಟ್ಟು ಠೇವಣಿಯಲ್ಲಿ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಅನುಪಾತವು ಶೇ 50.07ರಷ್ಟಾಗಿದೆ. ಸಾಲ ಮತ್ತು ಠೇವಣಿ ಅನುಪಾತವು ಶೇ 79.04ರಷ್ಟಾಗಿದೆ ಎಂದು ತಿಳಿಸಿದೆ.

ಭಾರತ ಎಚ್ಚರಿಕೆಯಿಂದ ಹೆಜ್ಜೆ ಇಡಲಿ: ಚೀನಾ

ದಲೈಲಾಮಾ ಉತ್ತರಾಧಿಕಾರಿ ಸಂಘರ್ಷ ವಿಚಾರ: ಚೀನಾ ಸಚಿವರ ಪ್ರತಿಕ್ರಿಯೆ

ಬೀಜಿಂಗ್ (ಪಿಟಿಐ): ಟಿಬೆಟ್‌ಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಭಾರತ ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದು ಚೀನಾ ಶುಕ್ರವಾರ ತಾಕೀತು ಮಾಡಿದೆ.

ಈ ಮೂಲಕ, 'ದಲೈ ಲಾಮಾ ಅವರ ಅವತಾರವು ಸ್ಥಾಪಿತ ಆಚಾರದಂತೆ ಮತ್ತು ಅವರ ಇಚ್ಛೆಯ ಪ್ರಕಾರ ನಡೆಯಬೇಕು' ಎಂಬ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಹೇಳಿಕೆಗೆ ಚೀನಾ ಆಕ್ಷೇಪ ವ್ಯಕ್ತಪಡಿಸಿದೆ.

'14ನೇ ದಲೈ ಲಾಮಾ ಅವರ ಚೀನಾ ವಿರೋಧಿ ಪ್ರತ್ಯೇಕತಾವಾದಿ ನಿಲುವುಗಳ ಬಗ್ಗೆ ಭಾರತ ಸ್ಪಷ್ಟತೆ ಹೊಂದಿರಬೇಕು. ಷಿ-ಜಂಗ್ (ಟಿಬೆಟ್) ಕುರಿತ ವಿಚಾರಗಳಲ್ಲಿ ಚೀನಾ ಬದ್ಧತೆಯನ್ನು ಭಾರತವು ಗೌರವಿಸಬೇಕು' ಎಂದು ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವ ಮಾವೊ ನಿಂಗ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಾಂಶಗಳು

- ರಿಜಿಜು ಹೇಳಿಕೆಗೆ ಚೀನಾ ಆಕ್ಷೇಪ
- ಚೀನಾ–ಟಿಬೆಟ್ ವಿಚಾರಗಳಲ್ಲಿ ಹಸ್ತಕ್ಷೇಪ ಸಲ್ಲ
- ದ್ವಿಪಕ್ಷೀಯ ಸಂಬಂಧ ಮೇಲೆ ಪರಿಣಾಮ ಬೀರುವ ಎಚ್ಚರಿಕೆ

'ಟಿಬೆಟ್ ವಿಚಾರಗಳ ಕುರಿತ ಭಾರತದ ಮಾತು ಮತ್ತು ಕೃತಿಯಲ್ಲಿ ಎಚ್ಚರಿಕೆ ಇರಬೇಕು. ಚೀನಾ–ಟಿಬೆಟ್ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪವನ್ನು ನಿಲ್ಲಿಸಬೇಕು. ಇಲ್ಲದಿದ್ದಲ್ಲಿ ಅದು ಭಾರತ–ಚೀನಾ ದ್ವಿಪಕ್ಷೀಯ ಸಂಬಂಧದ ಮೇಲೆ ಋಣಾತ್ಮಕ ಪರಿಣಾಮ ಬೀರಲಿದೆ' ಎಂದು ಎಚ್ಚರಿಸಿದರು.

ದಲೈ ಲಾಮಾ, ಪಂಚೆನ್ ಲಾಮಾ ಆಯ್ಕೆಯು ಧಾರ್ಮಿಕ ಹಾಗೂ ಚಾರಿತ್ರಿಕ ರೀತಿ–ರಿವಾಜುಗಳಿಗೆ ಅನುಗುಣವಾಗಿ ನಡೆಯಲಿದೆ ಮತ್ತು ಸರ್ಕಾರದ ಒಪ್ಪಿಗೆಯನ್ನು ಅದು ಅವಲಂಬಿಸಿದೆ ಎಂದು ಅವರು ಹೇಳಿದರು.

ಮುಂದಿನ ದಲೈ ಲಾಮಾ ಯಾರೆಂಬ ನಿರ್ಧಾರವನ್ನು ಸ್ಥಾಪಿತ ಸಂಸ್ಥೆ ಮತ್ತು ಟಿಬೆಟಿಯನ್ ಬೌದ್ಧ ನಾಯಕರು ತೆಗೆದುಕೊಳ್ಳುತ್ತಾರೆಯೇ ಹೊರತು, ಬೇರೆ ಯಾರಿಗೂ ಅದರ ಹಕ್ಕಿಲ್ಲ ಎಂದು ಕಿರಣ್ ರಿಜಿಜು ಗುರುವಾರ ಪ್ರತಿಪಾದಿಸಿದ್ದರು.

ಸಂಸತ್‌ನಲ್ಲಿ ಭಾರತ–ಚೀನಾ ಬಂಧದ ಬಗ್ಗೆ ಚರ್ಚೆಯಾಗಲಿ: ಕಾಂಗ್ರೆಸ್

ಭಾರತ–ಚೀನಾ ಸಂಬಂಧದ ಬಗ್ಗೆ ಸಂಸತ್‌ನಲ್ಲಿ ಚರ್ಚೆ ನಡೆಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಒಪ್ಪಿಗೆ ನೀಡಲಿ ಎಂದು ಕಾಂಗ್ರೆಸ್ ಶುಕ್ರವಾರ ಒತ್ತಾಯಿಸಿದೆ.

'ಈ ಬಗ್ಗೆ ಚರ್ಚೆ ನಡೆದಲ್ಲಿ ಚೀನಾ ದೇಶವು ನೇರವಾಗಿ ಅಥವಾ ಪಾಕಿಸ್ತಾನದ ಮೂಲಕ ಭಾರತದ ಮೇಲೆ ಒಡ್ಡುತ್ತಿರುವ ಆರ್ಥಿಕ ಮತ್ತು ಭೌಗೋಳಿಕ ರಾಜಕೀಯ ಸವಾಲುಗಳ ಕುರಿತು ವ್ಯಕ್ತವಾಗುವ ಸಾಮೂಹಿಕ ಪ್ರತಿಕ್ರಿಯೆಗಳಲ್ಲಿ ಒಮ್ಮತ ಮೂಡಲು ಸಾಧ್ಯ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದರು.

'ದಲೈ ಲಾಮಾ ಅವರೇ ನಿರ್ಧರಿಸಲಿ ಎಂಬುದು ಭಕ್ತರ ಇಂಗಿತ'

ನವದೆಹಲಿ (ಪಿಟಿಐ): ಉತ್ತರಾಧಿಕಾರಿ ಯಾರಾಗಬೇಕು ಎಂದು ಟಿಬೆಟ್‌ನ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರೇ ನಿರ್ಧರಿಸಬೇಕು ಎಂಬುದು ಅವರ ಭಕ್ತರು ಮತ್ತು ಅನುಯಾಯಿಗಳ ಇಂಗಿತ ಎಂದು ಕಿರಣ್ ರಿಜಿಜು ಶುಕ್ರವಾರ ಒತ್ತಿ ಹೇಳಿದರು.



ಕಿರಣ್ ರಿಜಿಜು

ಈ ಸಂದರ್ಭದಲ್ಲಿ, 'ನಾನು ಭಾರತ ಸರ್ಕಾರದ ಪರವಾಗಿ ಅಥವಾ ಚೀನಾದ ಅಭಿಪ್ರಾಯಕ್ಕೆ ಪ್ರತಿಯಾಗಿ ಈ ಹೇಳಿಕೆ ನೀಡುತ್ತಿಲ್ಲ' ಎಂದು ಸ್ಪಷ್ಟನೆ ನೀಡಿದರು.

'ದಲೈ ಲಾಮಾ ಅವರ ಅನುಯಾಯಿಯಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ' ಎಂದರು.

'ಉತ್ತರಾಧಿಕಾರಿ ನೇಮಕ ವಿಚಾರದಲ್ಲಿ ಗೊಂದಲದ ಅವಶ್ಯಕತೆ ಇಲ್ಲ. ದಲೈ ಲಾಮಾ ಅವರೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕು ಎಂಬುದು ಬೌದ್ಧ ಧರ್ಮದ ಮತ್ತು ದಲೈ ಲಾಮಾ ಅವರ ಅನುಯಾಯಿಗಳ ಬಯಕೆ. ಈ ಬಗ್ಗೆ ಸರ್ಕಾರವಾಗಲೀ, ನಾನಾಗಲೀ ಏನನ್ನೂ ಹೇಳುವ ಅಗತ್ಯ ಇಲ್ಲ' ಎಂದು ಹೇಳಿದರು.

ಮುಂಬೈ ಧಾರಣೆ (ಶೇಂಗಾ)

04-07-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	7900-8000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1168 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1260)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,700 (97,250)
ಬೆಳ್ಳಿ ಕೆ.ಜಿಗೆ	1,07,600 (1,08,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

₹4,843 ಕೋಟಿ ಮರುಪಾವತಿಗೆ ಆದೇಶ

ಜೇನ್ ಸ್ಟ್ರೀಟ್‌ಗೆ ಸೆಬಿ ನಿರ್ಬಂಧ

ನವದೆಹಲಿ (ಪಿಟಿಐ): ಅಮೆರಿಕ ಮೂಲದ ಜೇನ್ ಸ್ಟ್ರೀಟ್ ಸಮೂಹವನ್ನು ಭಾರತ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸೆಕ್ಯೂರಿಟಿ ಮಾರುಕಟ್ಟೆಯಿಂದ ನಿರ್ಬಂಧಿಸಿದೆ.

ಷೇರು ಮಾರುಕಟ್ಟೆಯಲ್ಲಿ ಅಕ್ರಮವಾಗಿ ಹಣ ಗಳಿಸಿರುವ ಆರೋಪ ಜೇನ್ ಸಮೂಹದ ಮೇಲಿರುವುದರಿಂದ, ಅದರಲ್ಲಿ ಗಳಿಸಿದ ₹4,843 ಕೋಟಿಯನ್ನು ಮರುಪಾವತಿಸುವಂತೆಯೂ ಸೆಬಿ ಆದೇಶಿಸಿದೆ. ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಮೊತ್ತದ ಹಣ ಮರುಪಾವತಿಗೆ ಸೆಬಿ ಸೂಚಿಸಿದೆ.

ತನಿಖೆ ಮುಂದುವರಿಯಲಿದ್ದು, ಜೇನ್ ಸಮೂಹದ ಜೆಎಸ್‌ಐ ಇನ್ವೆಸ್ಟ್‌ಮೆಂಟ್ಸ್, ಜೆಎಸ್‌ಐ2 ಇನ್ವೆಸ್ಟ್‌ಮೆಂಟ್ಸ್ ಪ್ರೈ.ಲಿ, ಜೇನ್ ಸ್ಟ್ರೀಟ್ ಸಿಂಗಪುರ ಪ್ರೈ.ಲಿ ಮತ್ತು ಜೇನ್ ಏಷಿಯಾ ಟ್ರೇಡಿಂಗ್ ಸೆಬಿಯ ಮುಂದಿನ ಆದೇಶದವರೆಗೆ ಷೇರು ವಹಿವಾಟು ನಡೆಸದಂತೆ ಮಧ್ಯಂತರ ಆದೇಶ ಹೊರಡಿಸಲಾಗಿದೆ.

ಷೇರು ವಹಿವಾಟು ಮೇಲೆ ಪ್ರಭಾವ ಬೀರಲು ಮತ್ತು ಉತ್ತಮ ಸ್ಥಾನವನ್ನು ಗಳಿಸಲು ಜೇನ್ ಸ್ಟ್ರೀಟ್ ಸಮೂಹವು 2023ರ ಜನವರಿಯಿಂದ 2025 ಮೇವರೆಗೆ ಟ್ರೇಡಿಂಗ್ ಮುಕ್ತಾಯದ 21 ದಿನಗಳಲ್ಲಿ (ಎಕ್ಸ್‌ಪೈರಿ ಡೇಸ್) ನಗದು ಮತ್ತು ದೊಡ್ಡ ಪ್ರಮಾಣದ ವಹಿವಾಟುಗಳನ್ನು ನಡೆಸಿರುವುದು ಸೆಬಿ ತನಿಖೆಯಿಂದ ಬಹಿರಂಗವಾಗಿದೆ.

ಜೇನ್ ಸ್ಟ್ರೀಟ್ ಮತ್ತು ಅದರ ಸಹ ಸಂಸ್ಥೆಗಳು ಷೇರುಮಾರುಕಟ್ಟೆ ವಹಿವಾಟಿನಲ್ಲಿ ಅನಧಿಕೃತ ತಂತ್ರಗಳನ್ನು ಬಳಸಿಕೊಂಡಿದ್ದಾವೆ ಎಂದು ಆರೋಪಿಸಿ 2024 ಏಪ್ರಿಲ್‌ನಲ್ಲಿ ಪ್ರಕಟವಾಗಿದ್ದ ಮಾಧ್ಯಮ ವರದಿಯ ಆಧಾರದಲ್ಲಿ ತನಿಖೆ ಆರಂಭಗೊಂಡಿತ್ತು.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ			
ಚಾಲಿ	38869-42700	ಬಿಳಿಗೋಟು	24809-31489	ಕೆಂಪುಗೋಟು	10919-24599
ಚಿಪ್ಪು	23869-29099	ಚಾಲಿ	33599-41299	ರಾಶಿ	46299-47809
ಕೋಕ	6869-23099	ಕೋಕ	16269-22899	**ಯಲ್ಲಾಪುರ**	
ಫ್ಯಾಕ್ಟರಿ	3589-24129	ಕೆಂಪುಗೋಟು	20219-23129	ಅಪಿ	63869-63869
ಹೊಸಚಾಲಿ	35099-42529	ರಾಶಿ	40899-46499	ಬಿಳಿಗೋಟು	14601-33200
ಶಿವಮೊಗ್ಗ		ತಟ್ಟಿಬೆಟ್ಟೆ	26199-32099	ಚಾಲಿ	33419-42899
ಬೆಟ್ಟೆ	52509-60299	**ಶಿರಸಿ**		ಕೋಕ	6009-19699
ಗೊರಬಲು	15000-29309	ಬೆಟ್ಟೆ	28999-35509	ಕೆಂಪುಗೋಟು	15489-28889
ರಾಶಿ	44669-56569	ಬಿಳಿಗೋಟು	18011-32699	ರಾಶಿ	41299-51799
ಸರಕು	55009-83340	ಚಾಲಿ	35699-42099	ತಟ್ಟಿಬೆಟ್ಟೆ	32369-38105

ಪ್ರಯಾಣಿಕರ ಸಂತೃಪ್ತಿ ಸೂಚ್ಯಂಕ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ 8ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂತೃಪ್ತಿ ಸೂಚ್ಯಂಕ ವರದಿಯನ್ನು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಬಿಡುಗಡೆ ಮಾಡಿದ್ದು, ಹುಬ್ಬಳ್ಳಿ ವಿಮಾನ ನಿಲ್ದಾಣವು ಕಳೆದ ವರ್ಷಕ್ಕಿಂತ 0.2ರಷ್ಟು ಹೆಚ್ಚಿನ ಅಂಕ ಪಡೆದಿದೆ. ದೇಶದ 62 ವಿಮಾನ ನಿಲ್ದಾಣಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣವು 8ನೇ ಸ್ಥಾನದಲ್ಲಿದೆ.

ವಿಮಾನ ನಿಲ್ದಾಣದಲ್ಲಿ ಸುರಕ್ಷತೆ, ಸ್ವಚ್ಛತೆ, ಸರಕು ಸಾಗಣೆ ವ್ಯವಸ್ಥೆ, ಸಹಾಯ ಒದಗಿಸುವ ಬಗೆ, ವಿಮಾನಗಳ ಆಗಮನ–ನಿರ್ಗಮನ ವೇಳಾ ಪಟ್ಟಿ ಪ್ರದರ್ಶನ, ಕಾಯುವ ವ್ಯವಸ್ಥೆ, ತಪಾಸಣೆ ವ್ಯವಸ್ಥೆ ಸೇರಿ ಒಟ್ಟು 33 ಮಾನದಂಡ ಆಧರಿಸಿ ಪ್ರತಿ ಆರು ತಿಂಗಳಿಗೊಮ್ಮೆ ಪ್ರಯಾಣಿಕರ ಸಂತೃಪ್ತಿ ಸೂಚ್ಯಂಕ ವರದಿ ಹಾಗೂ ರ‍್ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ.

2024ನೇ ಸಾಲಿನಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣವು 5 ಅಂಕಗಳ ಪೈಕಿ 4.91 ಅಂಕದೊಂದಿಗೆ 10ನೇ ಸ್ಥಾನದಲ್ಲಿತ್ತು. ಈ ಸಲ 4.93 ಅಂಕ ಪಡೆದಿದೆ. ಮೈಸೂರು, ಕಲಬುರಗಿ ವಿಮಾನ ನಿಲ್ದಾಣಗಳು 16ನೇ ಸ್ಥಾನದಲ್ಲಿ ಹಾಗೂ ಬೆಳಗಾವಿ 7ನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ರಾಜಸ್ಥಾನದ ಉದಯಪುರ ವಿಮಾನ ನಿಲ್ದಾಣವಿದೆ.

ಸಂಕ್ಷಿಪ್ತ ಸುದ್ದಿ

ಎಪ್ಸನ್ ಘಟಕ ಉದ್ಘಾಟನೆ

ನವದೆಹಲಿ (ಪಿಟಿಐ): ಪ್ರಿಂಟರ್ ಮತ್ತು ಪ್ರೊಜೆಕ್ಟರ್ ಉಪಕರಣಗಳ ತಯಾರಿಕಾ ಸಂಸ್ಥೆ ಸೀಕೊ ಎಪ್ಸನ್‌ನ ಅಂಗಸಂಸ್ಥೆ ಎಪ್ಸನ್ ಇಂಡಿಯಾ, ಭಾರತದಲ್ಲಿ ತನ್ನ ಮೊದಲ ಇಂಕ್ ಟ್ಯಾಂಕ್ ಪ್ರಿಂಟರ್‌ನ ತಯಾರಿಕಾ ಘಟಕವನ್ನು ಶುಕ್ರವಾರ ಉದ್ಘಾಟನೆ ಮಾಡಿದೆ.

ತಮಿಳುನಾಡಿನ ಚೆನ್ನೈ ಬಳಿಯ ಶ್ರೀಪೆರಂಬದೂರಿನಲ್ಲಿ ಘಟಕವನ್ನು ಸ್ಥಾಪಿಸಲಾಗಿದೆ. ಇದು ನೇರವಾಗಿ 200 ಉದ್ಯೋಗಗಳನ್ನು ಸೃಷ್ಟಿಸಲಿದೆ. ಎಪ್ಸನ್‌ನ ತಯಾರಿಕಾ ಪಾಲುದಾರ ರಿಕುನ್ ಸಹಭಾಗಿತ್ವದಲ್ಲಿ ಸ್ಥಾಪನೆ ಮಾಡಿದ್ದು, ಅಕ್ಟೋಬರ್ ವೇಳೆಗೆ ಘಟಕವು ಕಾರ್ಯಾಚರಣೆ ಆರಂಭಿಸುವ ನಿರೀಕ್ಷೆ ಇದೆ ಎಂದು ಕಂಪನಿ ತಿಳಿಸಿದೆ.

ಪ್ರತಿ ತಿಂಗಳು 20 ಸಾವಿರ ಪ್ರಿಂಟರ್‌ಗಳನ್ನು ಉತ್ಪಾದನೆ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದೆ.

ಫಿನ್‌ಟೆಕ್ ವಲಯ: ₹7,593 ಕೋಟಿ ಬಂಡವಾಳ ಸಂಗ್ರಹ



ನವದೆಹಲಿ (ಪಿಟಿಐ): 2025ರ ಜನವರಿಯಿಂದ ಜೂನ್‌ವರೆಗೆ ದೇಶದ ಫಿನ್‌ಟೆಕ್ ವಲಯವು ₹7,593 ಕೋಟಿ ಬಂಡವಾಳ ಸಂಗ್ರಹಿಸಿದೆ ಎಂದು ಮಾರುಕಟ್ಟೆ ಗುಪ್ತಚರ ವೇದಿಕೆ ಟ್ರಾಕ್ಸನ್ ಸಂಸ್ಥೆ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಇದು ₹7,994 ಕೋಟಿಯಷ್ಟಿತ್ತು. 2024ರ ದ್ವಿತೀಯಾರ್ಧದಲ್ಲಿ ₹10,250 ಕೋಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 26ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಬಂಡವಾಳ ಸಂಗ್ರಹದ ಪೈಕಿ ಅಮೆರಿಕ, ಬ್ರಿಟನ್ ನಂತರ ಭಾರತವು ಮೂರನೇ ಸ್ಥಾನದಲ್ಲಿದೆ ಎಂದು ತಿಳಿಸಿದೆ.

ಜಾಗತಿಕ ಫಿನ್‌ಟೆಕ್‌ನ ಶಕ್ತಿಕೇಂದ್ರವಾಗಿ ಬೆಂಗಳೂರು ದೇಶದ ಸ್ಥಾನವನ್ನು ಭದ್ರಪಡಿಸುತ್ತಿದೆ. ಒಟ್ಟು ಸಂಗ್ರಹದ ಪೈಕಿ ಶೇ 55ರಷ್ಟು ಬೆಂಗಳೂರು ಹೊಂದಿದೆ. ಮುಂಬೈ ಶೇ 14ರಷ್ಟಿದೆ. ಪೀಕ್ ಎಕ್ಸ್‌ವಿ, ಏಜೆಂಲ್ ಲಿಸ್ಟ್ ಮತ್ತು ಲೆಟ್ಸ್‌ವೆಂಚರ್ ಹೆಚ್ಚು ಹೂಡಿಕೆ ಮಾಡಿವೆ ಎಂದು ತಿಳಿಸಿದೆ.

ವೇತನ ಪಾವತಿ ಹಿಂಬಾಕಿ ಆದೇಶ ಇಲ್ಲ: ಸಿಎಂ

ಬೆಂಗಳೂರು: ವೇತನ ಪರಿಷ್ಕರಣೆಯ ಹಿಂಬಾಕಿ ಕುರಿತು ಮುಂದಿನ ವಾರ ಮತ್ತೆ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳ ಜತೆ ಸಮಾಲೋಚನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವೇತನ ಪರಿಷ್ಕರಣೆಯ 38 ತಿಂಗಳ ಹಿಂಬಾಕಿ ಪಾವತಿ ಕುರಿತು ಸರ್ಕಾರದ ಯಾವುದೇ ಆದೇಶ ಇಲ್ಲ ಎಂದು ಅವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಜತೆ ನಡೆದ ಸಭೆಯಲ್ಲಿ ಹೇಳಿದರು.

ರಾಜ್ಯ ಸರ್ಕಾರವು 2020 ರ ಜನವರಿ 1ರ ವೇತನ ಪರಿಷ್ಕರಣೆಯ 38 ತಿಂಗಳ ಹಿಂಬಾಕಿಯನ್ನು ಪಾವತಿಸಬೇಕು. 2024 ರ ಜನವರಿ 1ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು ಮತ್ತು ಆ ದಿನದಿಂದ ಇಂದಿನವರೆಗಿನ ಹಿಂಬಾಕಿಯನ್ನು ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಬೇಡಿಕೆ ಮುಂದಿಟ್ಟರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಡಿ–ಮಾರ್ಟ್ ವರಮಾನ ಏರಿಕೆ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳ ಒಡೆತನ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ವರಮಾನವು 2025–26ರ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹15,932 ಕೋಟಿಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹13,711 ಕೋಟಿ ವರಮಾನ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 16ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ಚಿನ್ನ, ಬೆಳ್ಳಿ ಧಾರಣೆ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹600 ಇಳಿಕೆಯಾಗಿ, ₹99,020ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹500 ಕಡಿಮೆಯಾಗಿ, ₹98,500 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಕಡಿಮೆಯಾಗಿ, ₹1,04,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಎಫ್ಐಆರ್ ರದ್ದು ಕೋರಿಕೆ: 'ಸುಪ್ರೀಂ'ನಿಂದ ಎಚ್‌ಡಿಎಫ್‌ಸಿ ಬ್ಯಾಂಕ್ ಸಿಇಒ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ವಂಚನೆ ಆರೋಪದಡಿ ತಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಎಚ್‌ಡಿಎಫ್‌ಸಿ ಬ್ಯಾಂಕ್ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಜಗದೀಶನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಆರ್.ಮಹಾದೇವನ್ ಅವರು ಇದ್ದ ನ್ಯಾಯಪೀಠ, ಬಾಂಬೆ ಹೈಕೋರ್ಟ್‌ಗೆ ಪುನಃ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿತು.

ಶಶಿಧರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಜುಲೈ 14ರಂದು ನಿಗದಿ ಮಾಡಿದೆ.

'ನಾನು ಪ್ರತಿಷ್ಠಿತ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕನಾಗಿದ್ದು, ನನಗೂ ಈ ವಂಚನೆ ಪ್ರಕರಣಕ್ಕೂ ಸಂಬಂಧವೇ ಇಲ್ಲ. ಟ್ರಸ್ಟಿಗಳ ನಡುವಿನ ವೈಯಕ್ತಿಕ ವ್ಯಾಜ್ಯದಿಂದಾಗಿ ನನ್ನ ವಿರುದ್ಧ ಕ್ಷುಲ್ಲಕ ಎಫ್‌ಐಆರ್ ದಾಖಲಿಸಲಾಗಿದೆ. ಒಂದೆಡೆ ಬ್ಯಾಂಕಿಗೆ ತೊಂದರೆಯಾಗುತ್ತಿದ್ದರೆ, ಮತ್ತೊಂದೆಡೆ ನನಗೆ ಕಿರುಕುಳ ನೀಡಲಾಗುತ್ತಿದೆ' ಎಂದು ಶಶಿಧರ ಅವರು ಮೇಲ್ಮನವಿಯಲ್ಲಿ ವಿವರಿಸಿದ್ದಾರೆ.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಬಾಂಬೆ ಹೈಕೋರ್ಟ್ ಅರ್ಜಿ ವಿಚಾರಣೆ ಪೂರ್ಣಗೊಳಿಸುವವರೆಗೆ ನನ್ನ ಕಕ್ಷಿದಾರನಿಗೆ ಬಲವಂತದ ಕ್ರಮದಿಂದ ಮಧ್ಯಂತರ ರಕ್ಷಣೆ ನೀಡಬೇಕು' ಎಂದು ಪೀಠಕ್ಕೆ ಮನವಿ ಮಾಡಿದರು.

ದೂರುದಾರರ ಪರ ಹಾಜರಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಎರಡೂ ಕಡೆಯವರ ಒಪ್ಪಿಗೆ ಮೇರೆಗೆ, ಬಾಂಬೆ ಹೈಕೋರ್ಟ್ ವಿಚಾರಣೆಯನ್ನು ಜುಲೈ 14ಕ್ಕೆ ನಿಗದಿ ಮಾಡಿದೆ' ಎಂದು ತಿಳಿಸಿದರು.

'ನಿಮ್ಮ ಪರಿಸ್ಥಿತಿ ಬಗ್ಗೆ ಸಹಾನುಭೂತಿ ಇದೆ. ಹಲವು ನ್ಯಾಯಪೀಠಗಳು ವಿಚಾರಣೆಯಿಂದ ಹಿಂದೆ ಸರಿದಿದ್ದು, ನಿಮ್ಮ ಅರ್ಜಿಯನ್ನು ಪದೇಪದೇ ವಿಚಾರಣಾ ಪಟ್ಟಿಗೆ ಸೇರಿಸಲಾಗುತ್ತಿದೆ. ಈಗ, ಜುಲೈ 14ರಂದು ವಿಚಾರಣೆ ನಿಗದಿಯಾಗಿರುವ ಕಾರಣ, ಈ ಹಂತದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವುದು ಸರಿಯಲ್ಲ' ಎಂದು ಹೇಳಿದ ಪೀಠ, ಅರ್ಜಿ ವಿಲೇವಾರಿ ಮಾಡಿತು.

ಮುಂಬೈನ ಪ್ರತಿಷ್ಠಿತ ಲೀಲಾವತಿ ಆಸ್ಪತ್ರೆ ನಡೆಸುತ್ತಿರುವ ಲೀಲಾವತಿ ಕೀರ್ತಿಲಾಲ್ ಮೆಹ್ತಾ ಟ್ರಸ್ಟ್ ನೀಡಿರುವ ದೂರಿನ ಆಧಾರದಲ್ಲಿ ಶಶಿಧರ ಜಗದೀಶನ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ

ಟ್ರಿನಿಡಾಡ್–ಟೊಬಾಗೊ ಜೊತೆ ಬಿಹಾರದ ನಂಟು

ಪೋರ್ಟ್ ಆಫ್ ಸ್ಪೇನ್ (ಪಿಟಿಐ): 'ಟ್ರಿನಿಡಾಡ್–ಟೊಬಾಗೊ ದೇಶದ ಜೊತೆ ಬಿಹಾರದ ನಂಟಿನ ಕುರಿತು ಪ್ರಶಂಸಿಸಿದ ಪ್ರಧಾನಿ ನರೇಂದ್ರ ಮೋದಿ, ಬಿಹಾರದ ಪರಂಪರೆಯು ಭಾರತ ಹಾಗೂ ಇಡೀ ವಿಶ್ವದ ಹೆಮ್ಮೆಯಾಗಿದೆ' ಎಂದು ತಿಳಿಸಿದರು.

ಕೊವ್ವಾದ ರಾಷ್ಟ್ರೀಯ ಸೈಕ್ಲಿಂಗ್ ಕ್ರೀಡಾಂಗಣದಲ್ಲಿ ಶುಕ್ರವಾರ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಇಲ್ಲಿ ಭಾಗಿಯಾಗಿರುವ ಹಲವರ ಪೂರ್ವಜರು ಬಿಹಾರದಿಂದಲೇ ಬಂದಿದ್ದಾರೆ. ಬಿಹಾರದ ಪರಂಪರೆಯು ಇಡೀ ದೇಶ ಮಾತ್ರವಲ್ಲದೇ, ವಿಶ್ವಕ್ಕೇ ಹೆಮ್ಮೆಯಾಗಿದೆ' ಎಂದರು.

'ಟ್ರಿನಿಡಾಡ್–ಟೊಬಾಗೊದ ಪ್ರಧಾನಿ ಕಮಲಾ ಪೆಸ್ರಾದ್ ಬಿಸ್ಸೆಸ್ಸರ್ ಅವರ ಪೂರ್ವಜರು ಬಿಹಾರದವರೇ ಆಗಿದ್ದು, ಅವರನ್ನು ಇಡೀ ಭಾರತವೇ 'ಬಿಹಾರದ ಮಗಳು' ಎಂದು ಹೇಳಲು ಹೆಮ್ಮೆಪಡುತ್ತದೆ' ಎಂದು ನೆನಪಿಸಿಕೊಂಡರು.

'ಎರಡು ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಸಂಬಂಧ ಹಾಗೂ ಬಿಹಾರದ ಪ್ರಮುಖ ಭಾಷೆಯಾದ ಭೋಜ್‌ಪುರಿ ಭಾಷೆಯನ್ನು ಕೆರಿಬಿಯನ್ ದೇಶದಲ್ಲಿ ನೆಲಸಿರುವ ಭಾರತೀಯ ಸಮುದಾಯವರು ಹೆಚ್ಚಾಗಿ ಬಳಸುತ್ತಾರೆ' ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಟ್ರಿನಿಡಾಡ್–ಟೊಬಾಗೊ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಅಲ್ಲಿನ ಪ್ರಧಾನಿ ಕಮಲಾ ಪೆಸ್ರಾದ್ ಬಿಸ್ಸೆಸ್ಸರ್ ಆಯೋಜಿಸಿದ್ದ ಔತಣಕೂಟದ ವೇಳೆ ಸೊಹರಿ ಎಲೆಯಲ್ಲಿ ಉಪಾಹಾರ ಸವಿದರು–ಪಿಟಿಐ ಚಿತ್ರ

'ಪ್ರಜಾಪ್ರಭುತ್ವ ಇರಲಿ, ರಾಜಕೀಯ, ರಾಜತಾಂತ್ರಿಕತೆ, ಉನ್ನತ ಶಿಕ್ಷಣದ ವಿಚಾರವೇ ಇರಲಿ; ಬಿಹಾರವು ಶತಮಾನಗಳ ಹಿಂದೆಯೇ ಇಡೀ ವಿಶ್ವಕ್ಕೆ ಹೊಸ ದಿಕ್ಕು ನೀಡಿತ್ತು. ಹೊಸ ಸ್ಫೂರ್ತಿಗಳು ಹಾಗೂ ಹೊಸ ಅವಕಾಶಗಳು 21ನೇ ಶತಮಾನದಲ್ಲಿಯೇ ಬಿಹಾರದಲ್ಲಿ ಸೃಷ್ಟಿಯಾಗುತ್ತಿವೆ' ಎಂದು ವಿವರಿಸಿದ್ದಾರೆ.

'ಗಿರ್‌ಮಿಟಿಯಾ ಸಮುದಾಯಗಳ ಸಮಗ್ರ ದತ್ತಾಂಶಗಳ ಸಂಗ್ರಹ ನಿಟ್ಟಿನಲ್ಲಿ ಭಾರತವು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ಇದರಿಂದ ಟ್ರಿನಿಡಾಡ್–ಟೊಬಾಗೊ ದೇಶದ ಸಹೋದರ–ಸಹೋದರಿಯರ ಜೊತೆಗೆ ಭಾರತದ ಐತಿಹಾಸಿಕ ಸಂಬಂಧವನ್ನು ಮುಂದುವರಿಸಲು ನೆರವಾಗಲಿದೆ' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಉತ್ತರ ಪ್ರದೇಶ, ಬಿಹಾರದಿಂದ ನೂರಾರು ಕಾರ್ಮಿಕರು ಆಫ್ರಿಕಾ ರಾಷ್ಟ್ರಗಳಾದ ದಕ್ಷಿಣ ಆಫ್ರಿಕಾ, ಫಿಜಿ, ಮಾರಿಷಸ್ ಹಾಗೂ ಕೆರಿಬಿಯನ್ ದೇಶಗಳ ತೋಟಗಳಲ್ಲಿ ಕೆಲಸ ಮಾಡಲು ಹೋಗಿ ಅಲ್ಲಿಯೇ ನೆಲಸಿದ್ದರು.

ಸೊಹರಿ ಎಲೆಯಲ್ಲಿ ಉಪಾಹಾರ, ಗಂಗಾಜಲ ಉಡುಗೊರೆ

ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಅಲ್ಲಿನ ಪ್ರಧಾನಿ ಕಮಲಾ ಪೆಸ್ರಾದ್ ಬಿಸ್ಸೆಸ್ಸರ್ ಅವರು ಪೋರ್ಟ್ ಆಫ್ ಸ್ಪೇನ್‌ನಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ಸೊಹರಿ ಎಲೆಯಲ್ಲಿ ಉಪಾಹಾರ ಸೇವಿಸಿದರು.

'ಇದು ಸಾಂಸ್ಕೃತಿಕವಾಗಿ ಮಹತ್ವವಾಗಿದ್ದು, ಭಾರತೀಯರಿಗೆ ಇಷ್ಟವಾಗುತ್ತದೆ. ಯಾವುದೇ ವಿಶೇಷ ಸಂದರ್ಭದಲ್ಲಿ ಎಲೆಯಲ್ಲಿ ಆಹಾರ ಸೇವಿಸಲಾಗುತ್ತದೆ' ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ವಿಮಾನ ನಿಲ್ದಾಣಕ್ಕೆ ಬಂದಿಳಿದ ಮೋದಿ ಅವರನ್ನು ಭೋಜ್‌ಪುರಿ ಶೈಲಿಯಲ್ಲಿ ಕಲಾವಿದರು ಸ್ವಾಗತಿಸಿದರು. ಈ ವೇಳೆ ಪ್ರಧಾನಿ ಕಮಲಾ ಅವರಿಗೆ ಮಹಾಕುಂಭಮೇಳದ ಗಂಗಾಜಲ ಹಾಗೂ ಅಯೋಧ್ಯೆ ರಾಮಮಂದಿರದ ಬೆಳ್ಳಿ ಪ್ರತಿಕೃತಿಯನ್ನು ಮೋದಿ ಅವರು ಉಡುಗೊರೆ ನೀಡಿದರು.

ಆಕಾಶದಷ್ಟು ಅವಕಾಶ: 'ಭಾರತವು ಶೀಘ್ರದಲ್ಲಿ ವಿಶ್ವದ ಮೂರು ಪ್ರಮುಖ ಆರ್ಥಿಕ ರಾಷ್ಟ್ರಗಳಲ್ಲಿ ಒಂದಾಗಲಿದೆ. ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್, ಕ್ವಾಟಂ ಎಂಜಿನಿಯರ್ ಕ್ಷೇತ್ರವು ದೇಶದ ಅಭಿವೃದ್ಧಿಯ ಪ್ರಮುಖ ಎಂಜಿನ್ ಆಗಿರಲಿದೆ' ಎಂದು ಪ್ರಧಾನಿ ಮೋದಿ ತಿಳಿಸಿದರು.

ಭಾರತವು ಹಲವು ಅವಕಾಶಗಳ ತಾಣವಾಗಿದ್ದು, ಅಭಿವೃದ್ಧಿಯ ಫಲವು ಅಗತ್ಯವಿರುವವರಿಗೂ ತಲುಪುತ್ತಿದೆ. ಹೊಸ ಭಾರತಲ್ಲಿ ಅವಕಾಶ ಆಕಾಶದಷ್ಟಿದೆ' ಎಂದು ತಿಳಿಸಿದರು.

ಐದು ರಾಷ್ಟ್ರಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ಮೋದಿ, ಪ್ರವಾಸದ ಎರಡನೇ ರಾಷ್ಟ್ರದ ಭೇಟಿಯಾಗಿ ಇಲ್ಲಿಗೆ ಬಂದಿಳಿದ್ದಾರೆ.

ಮುಖ್ಯಾಂಶಗಳು

- ವರ್ಷಾಂತ್ಯದಲ್ಲಿ ಬಿಹಾರ ವಿಧಾನಸಭಾ ಚುನಾವಣೆ
- ಟ್ರಿನಿಡಾಡ್– ಟೊಬಾಗೊ ಪ್ರವಾಸದಲ್ಲಿ ರಾಜ್ಯದ ನಂಟು ಮೆಲುಕು
- ಕಮಲಾ ಪೆಸ್ರಾದ್ ಅವರನ್ನು ಬಿಹಾರದ ಮಗಳು ಎಂದ ಪ್ರಧಾನಿ

1999ರ ಬಳಿಕ ಕೆರಿಬಿಯನ್ ದ್ವೀಪರಾಷ್ಟ್ರಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನಿಯಾಗಿದ್ದಾರೆ.

ಕೊಲ್ಹಾಪುರಿ ಚಪ್ಪಲಿ ಪ್ರಾಡಾ ವಿರುದ್ಧ ಕೋರ್ಟ್‌ನಲ್ಲಿ ಅರ್ಜಿ



ಮುಂಬೈ (ಪಿಟಿಐ): ಕರ್ನಾಟಕ ಮತ್ತು ಮಹಾರಾಷ್ಟ್ರದ ಪಾರಂಪರಿಕ ಕೊಲ್ಹಾಪುರಿ ಚಪ್ಪಲಿಗಳನ್ನು ತನ್ನದೆಂದು ಪ್ರದರ್ಶಿಸಿರುವ ಇಟಲಿಯ 'ಪ್ರಾಡಾ' ಕಂಪನಿಯ ವಿರುದ್ಧ ಬಾಂಬೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಲಾಗಿದೆ.

ವಿನ್ಯಾಸವನ್ನು ನಕಲು ಮಾಡಿದ್ದಕ್ಕೆ ಪ್ರತಿಯಾಗಿ ಭಾರತೀಯ ಕುಶಲಕರ್ಮಿಗಳಿಗೆ ಪರಿಹಾರ ನೀಡಬೇಕೆಂದು ಕೋರಲಾಗಿದೆ.

ಪ್ರಾಡಾ ಕಂಪನಿಯು ಪ್ರದರ್ಶಿಸಿರುವ ಚಪ್ಪಲಿಗಳು ಕೊಲ್ಹಾಪುರಿ ಚಪ್ಪಲಿಗಳಂತೆಯೇ ಇವೆ. ಒಂದು ಜೊತೆ ಚಪ್ಪಲಿಗೆ ₹1 ಲಕ್ಷ ಬೆಲೆ ನಿಗದಿ ಮಾಡಲಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಕೊಲ್ಹಾಪುರಿ ಚಪ್ಪಲಿಗಳು ಮಹಾರಾಷ್ಟ್ರದ ಸಂಸ್ಕೃತಿಯ ಸಂಕೇತ. ಅನುಮತಿ ಪಡೆಯದೆ ಈ ಮಾದರಿಯ ಚಪ್ಪಲಿಗಳನ್ನು ಮಾರಾಟ ಮಾಡುತ್ತಿರುವ ಕಂಪನಿಯು ಸಾರ್ವಜನಿಕವಾಗಿ ಕ್ಷಮೆಯಾಚಿಸಲು ನಿರ್ದೇಶನ ನೀಡಬೇಕು' ಎಂದು ಪುಣೆ ಮೂಲದ ಆರು ವಕೀಲರು ಮನವಿ ಮಾಡಿದ್ದಾರೆ.

ಕುಶಲಕರ್ಮಿಗಳು ಮತ್ತು ಜಿಐ ನೋಂದಣಿ ಪಡೆದಿರುವ ಸಂಸ್ಥೆಗಳ ಹಕ್ಕುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪ್ರಾಡಾ ವಿರುದ್ಧ ತನಿಖೆಗೆ ಆದೇಶಿಸಬೇಕು. ಪ್ರಾಡಾ ಕಂಪನಿಯು ಈ ಚಪ್ಪಲಿಗಳ ಮಾರಾಟ, ರಫ್ತು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕು ಎಂದು ಕೋರಿದ್ದಾರೆ.

ಕೊಲ್ಹಾಪುರಿ ಚಪ್ಪಲಿಗಳು ಸರಕುಗಳ ಭೌಗೋಳಿಕ ಗುರುತು (ನೋಂದಣಿ ಮತ್ತು ಸಂರಕ್ಷಣೆ) ಕಾಯ್ದೆಯಡಿ ಭೌಗೋಳಿಕ ಗುರುತು (ಜಿಯಾಗ್ರಾಫಿಕಲ್ ಇಂಡಿಕೇಷನ್–ಜಿಐ) ನೋಂದಣಿ ಹೊಂದಿವೆ.

‘ಎನ್‌ಸಿ ಕ್ಲಾಸಿಕ್’ ಚಾರಿತ್ರಿಕ ಉತ್ಸವಕ್ಕೆ ಕಂಠೀರವ ಸಜ್ಜು

• ಗಿರೀಶ ದೊಡ್ಡಮನಿ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ನೀರಜ್ ಚೋಪ್ರಾ ಕ್ಲಾಸಿಕ್ 2025 ಟೂರ್ನಿಯ ಮುನ್ನಾದಿನ ಭಾರತದ ಒಲಿಂಪಿಕ್ಸ್ ಪದಕ ವಿಜೇತ, ವಿಶ್ವದ ನಂಬರ್ ಒನ್ ಜಾವೆಲಿನ್ ಎಸೆತಗಾರರಾದ ನೀರಜ್ ಚೋಪ್ರಾ ಅವರು ಅಭ್ಯಾಸದ ಸಂದರ್ಭ ಕ್ರೀಡಾಂಗಣದಲ್ಲಿ ಕೆಲಸ ಮಾಡುವ ಮಹಿಳೆಯರ ಜೊತೆ ಫೋಟೋ ಕ್ಲಿಕ್ಕಿಸಿ ಕೊಂಡರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಶನಿವಾರ ಸಂಜೆಯ ಸೂರ್ಯ ಪಶ್ಚಿಮದತ್ತ ಜಾರುವ ಹೊತ್ತಿಗೆ ಕಂಠೀರವ ಕ್ರೀಡಾಂಗಣದಲ್ಲಿ ಬೆಳಗಲಿರುವ ಹೊನಲು ಬೆಳಕಿನಲ್ಲಿ ಭಾರತ ಕ್ರೀಡಾರಂಗದ ಇತಿಹಾಸದ ಪುಸ್ತಕಕ್ಕೆ ಹೊಸ ಅಧ್ಯಾಯವೊಂದು ಸೇರ್ಪಡೆಯಾಗಲಿದೆ. ಆ ಅಧ್ಯಾಯದ ಹೆಸರು ‘ನೀರಜ್ ಚೋಪ್ರಾ ಕ್ಲಾಸಿಕ್’.

ಭಾರತದಲ್ಲಿ ನಡೆಯುತ್ತಿರುವ ಮೊಟ್ಟಮೊದಲ ವಿಶ್ವ ಅಥ್ಲೆಟಿಕ್ ಕಾಂಟಿನೆಂಟಲ್ ಟೂರ್ ಗೋಲ್ಡ್ ಲೆವೆಲ್ ಅಥವಾ ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಕೆಟಗರಿ ಎ ಸ್ಪರ್ಧೆ ಇದಾಗಿದೆ.

2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಚಿನ್ನ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಸಾಧನೆ ಮಾಡಿರುವ ನೀರಜ್ ಅವರೇ ಕಳೆದ ಒಂದು ವಾರದಿಂದ ಕೂಟದ ಸಿದ್ಧತೆಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಅದರೊಂದಿಗೆ ತಮ್ಮ ಅಭ್ಯಾಸವನ್ನೂ ಮಾಡುತ್ತಿದ್ದಾರೆ. ಅವರಿಗೆ ಸ್ಪರ್ಧೆಯೊಡ್ಡಲು ಪೋಲೆಂಡ್‌ನ ಸೈಪ್ರಿಯಾನ್ ಮ್ರೈಜಿಗ್ಲಾಡ್, ಬ್ರೆಜಿಲ್‌ನ ಲೂಯಿಸ್ ಮಾರಿಸಿಯೊ ಡಿಸಿಲ್ವಾ, ಜರ್ಮನಿಯ ಥಾಮಸ್ ರೊಲೆ, ಅಮೆರಿಕದ ಕರ್ಟಿಸ್ ಥಾಮ್ಸನ್ ಮತ್ತು ಕೆನ್ಯಾದ ಜೂಲಿಯಸ್ ಯೆಗೊ, ಶ್ರೀಲಂಕೆಯ ರುಮೇಶ್ ಪತಿರಾಗೆ ಅವರೂ ಸಿದ್ಧರಾಗಿದ್ದಾರೆ.

ನೀರಜ್ ಯಶೋಗಾಥೆಯ ಪ್ರಭಾವಳಿಯಿಂದಾಗಿ ಭಾರತದಲ್ಲಿ ಜಾವೆಲಿನ್ ಥ್ರೋ ಕ್ರೀಡೆಯತ್ತ ಒಲವು ಹೆಚ್ಚುತ್ತಿರುವುದರ ನಿದರ್ಶನ ಈ ಕೂಟದಲ್ಲಿ ಕಾಣಸಿಗುತ್ತಿದೆ. ಯುವ ಅಥ್ಲೀಟ್‌ಗಳಾದ ಸಚಿನ್ ಯಾದವ್, ರೋಹಿತ್ ಯಾದವ್, ಸಾಹಿಲ್ ಸಿಲವಾಲ್ ಮತ್ತು ಯಶ್ ವೀರ್ ಸಿಂಗ್ ಕೂಡ ದಿಗ್ಗಜರೊಂದಿಗೆ ಕಣಕ್ಕಿಳಿದು ತಮ್ಮ ಭುಜಬಲ ಪರೀಕ್ಷೆ ಗೊಡ್ಡಲು ಕಾತುರರಾಗಿದ್ದಾರೆ. ಕಿಶೋರ್ ಕುಮಾರ್ ಜೇನಾ ಕೂಡ ಈ ಮೊದಲು ಕಣದಲ್ಲಿದ್ದರು. ಆದರೆ ಈಚೆಗೆ ಗಾಯವಾಗಿದ್ದರಿಂದ ಹಿಂದೆ ಸರಿದರು.



ಥಾಮಸ್ ರೊಲೆ

‘ಇಂತಹದೊಂದು ದೊಡ್ಡ ಮಟ್ಟದ ಜಾವೆಲಿನ್ ಕೂಟ ನಡೆಯುತ್ತದೆ ಎಂದೂ ನಾನು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಇದೀಗ ಅದು ನಡೆಯಲಿದೆ ಎಂಬುದೇ ನನಗೆ ಪುಳಕ ಮೂಡಿಸುತ್ತಿದೆ. ಇಲ್ಲಿ ಭಾಗವಹಿಸುವ ಅಥ್ಲೀಟ್‌ಗಳು ಎಷ್ಟು ದೂರ ಥ್ರೋ ಮಾಡಲಿದ್ದಾರೆ, ಯಾವ ಪದಕ ಜಯಿಸುವರು ಎಂಬಿತ್ಯಾದಿ ವಿಷಯಗಳನ್ನು ಪಕ್ಕಕ್ಕಿಟ್ಟುಬಿಡಿ. ಈ ಆಟದ ಸೊಬಗನ್ನು ಮನದುಂಬಿ ಆಸ್ವಾದಿಸಿಕೊಳ್ಳಿ. ಏಕೆಂದರೆ; ಈ ಕೂಟವು ಭಾರತದ ಕ್ರೀಡಾ ಕ್ಷೇತ್ರಕ್ಕೆ ಹೊಸ ದಿಕ್ಸೂಚಿಯಾಗುವ ನಿರೀಕ್ಷೆ ಇದೆ’ ಎಂದು ನೀರಜ್ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಳೆದ ನಾಲ್ಕು ವರ್ಷಗಳಿಂದ ನೀರಜ್ ಅವರು 90 ಮೀಟರ್ಸ್ ದೂರ ಥ್ರೋ ಮಾಡುವ ಪ್ರಯತ್ನ ದಲ್ಲಿದ್ದರು. ಆದರೆ ಇತ್ತೀಚೆಗಷ್ಟೇ ದೋಹಾದಲ್ಲಿ ನಡೆದಿದ್ದ ಡೈಮಂಡ್ ಲೀಗ್‌ನಲ್ಲಿ ಅವರು 90.23 ಮೀಟರ್ ದೂರ ಥ್ರೋ ಸಾಧನೆ ಮಾಡಿದ್ದರು.

‘ಇದೆಲ್ಲವೂ ಬರೀ ಅಂಕಿ ಸಂಖ್ಯೆಯಷ್ಟೇ. ಒಬ್ಬರು ದಾಖಲೆ ಮಾಡುತ್ತಾರೆ. ಇನ್ನೊಬ್ಬರು ಅದನ್ನು ಮೀರಿ ಮತ್ತೊಂದು ದಾಖಲೆ ಬರೆಯು ತ್ತಾರೆ. ದಶಕದ ಹಿಂದೆ ಜಾವೆಲಿನ್ ಥ್ರೋನಲ್ಲಿ 84 ಮೀಟರ್ಸ್ ಎಸೆದವರೂ ಚಾಂಪಿಯನ್ ಆಗಿದ್ದರು. ಈಗ 90 ಮೀಟರ್ ದಾಟಬೇಕೆಂದು ಜನ ನಿರೀಕ್ಷಿಸುತ್ತಾರೆ. ಅದೆಲ್ಲಕ್ಕಿಂತ ಮುಖ್ಯ ಒಂದು ಕ್ರೀಡೆಯು ಬೆಳೆಯುತ್ತಿದೆ ಎನ್ನುವುದು ಸಂತಸದ ಸಂಗತಿ. ಟ್ರ್ಯಾಕ್ ಸ್ಪರ್ಧೆಗಳಲ್ಲಿ ಒಂದಾಗಿರುವ ಜಾವೆಲಿನ್ ಥ್ರೋಗೆ ಭಾರತದಲ್ಲಿ ದೊಡ್ಡ ಗೌರವ ಸಿಗುತ್ತಿರುವುದು ವಿಶೇಷ. ಅದಕ್ಕೆ ಚೋಪ್ರಾ ಅಭಿನಂದನಾರ್ಹರು’ ಎಂದು ಜರ್ಮನಿಯ ಥಾಮಸ್ ರೊಲೆ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಅವರು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. 2017ರಲ್ಲಿ ಅವರು 93.90 ಮೀ ದೂರ ಥ್ರೋ ಸಾಧನೆ ಮಾಡಿದ್ದರು. ಈ ಕೂಟದಲ್ಲಿ ಭಾಗವಹಿಸುತ್ತಿರುವ ಕೆನ್ಯಾದ ಜೂಲಿಯಸ್ ಕೂಡ 2015ರಲ್ಲಿ 92.72 ಮೀ. ಥ್ರೋ ಸಾಧಿಸಿದ್ದರು. ಇದರಿಂದಾಗಿ ‘ನೀರಜ್ ಚೋಪ್ರಾ ಕ್ಲಾಸಿಕ್’ ಕೂಟದಲ್ಲಿ ಪೈಪೋಟಿ ರಂಗೇರುವ ನಿರೀಕ್ಷೆ ಗರಿಗೆದರಿದೆ.

ಈ ಕೂಟವು ಮೇ ತಿಂಗಳಲ್ಲಿ ಪಂಚಕುಲಾದಲ್ಲಿ ನಿಗದಿಯಾಗಿತ್ತು. ಆದರೆ ಅಲ್ಲಿಯ ಕ್ರೀಡಾಂಗಣದಲ್ಲಿ ಫ್ಲಡ್ ಲೈಟ್ ವ್ಯವಸ್ಥೆ ಸರಿಯಿಲ್ಲದ ಕಾರಣ ಬೆಂಗಳೂರಿಗೆ ಸ್ಥಳಾಂತರವಾಯಿತು.

ಸ್ಪರ್ಧೆ ಆರಂಭ: ಸಂಜೆ 7ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೊಂಡೊ ಕ್ಲಾಸಿಕ್ ಪೋಲ್‌ವಾಲ್ಟ್

ಜಾವೆಲಿನ್ ಥ್ರೋ ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡೆಗಳಲ್ಲಿ ಒಂದು ವಿಭಾಗವಷ್ಟೇ. ಈ ಸ್ಪರ್ಧೆಯು ಯಾವಾಗಲೂ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಆಗುತ್ತದೆ. ಆದರೆ ಇದೀಗ ಇದೊಂದೇ ಕ್ರೀಡೆಯನ್ನು ಉನ್ನತ ದರ್ಜೆಯ ಆಹ್ವಾನಿತ ಸ್ಪರ್ಧೆಯಾಗಿ ನಡೆಸಲಾಗುತ್ತಿದೆ. ಭಾರತದಲ್ಲಿ ಇಂತಹ ಪ್ರಯತ್ನ ಇದೇ ಮೊದಲು.

ಸ್ವೀಡನ್‌ನಲ್ಲಿ ಪೋಲ್‌ವಾಲ್ಟ್‌ನಲ್ಲಿ ಇದೇ ರೀತಿಯ ಪ್ರಯತ್ನ ಯಶಸ್ವಿಯಾಗಿದೆ. ಮೊಂಡೊ ಕ್ಲಾಸಿಕ್ ನಡೆಸಲಾಗುತ್ತದೆ. ವಿಶ್ವದಾಖಲೆ ವೀರ ಮತ್ತು ಒಲಿಂಪಿಕ್ ಚಾಂಪಿಯನ್ ಅರ್ಮಾಂಡೊ ಡುಪ್ಲಾಂಟೀಸ್ ಅವರ ತವರೂರು ಉಪ್ಪಸಲಾದಲ್ಲಿ ‘ಮೊಂಡೊ ಕ್ಲಾಸಿಕ್’ ಆಯೋಜನೆಯಾಗುತ್ತದೆ.

ಸ್ಪರ್ಧಾ ಕಣದಲ್ಲಿರುವ ಅಥ್ಲೀಟ್‌ಗಳು

• **ನೀರಜ್ ಚೋಪ್ರಾ (ಭಾರತ)**
ಒಲಿಂಪಿಕ್ಸ್: 2020 (ಚಿನ್ನ), 2024 (ಬೆಳ್ಳಿ)
ವಿಶ್ವ ಅಥ್ಲೆಟಿಕ್ಸ್ : 2022 (ಬೆಳ್ಳಿ), 2023 (ಚಿನ್ನ)
ಡೈಮಂಡ್ ಲೀಗ್: 2022 (ಚಿನ್ನ), 2023 (ಬೆಳ್ಳಿ), 2024(ಬೆಳ್ಳಿ)
ಶ್ರೇಷ್ಠ ಥ್ರೋ: 90.23 ಮೀ (2025)

• **ಥಾಮಸ್ ರೊಲೆ (ಜರ್ಮನಿ)**
ಒಲಿಂಪಿಕ್ಸ್: 2016 (ಚಿನ್ನ)
ಯುರೋಪಿಯನ್ ಚಾಂಪಿಯನ್‌ಷಿಪ್ 2018 (ಚಿನ್ನ)
ಕಾಂಟಿನೆಂಟಲ್ ಕಪ್ 2018 (ಚಿನ್ನ)
ಶ್ರೇಷ್ಠ : 93.90ಮೀ
ವಯಸ್ಸು: 33

• **ಜೂಲಿಯಸ್ ಯೆಗೊ (ಕೆನ್ಯಾ)**
ಒಲಿಂಪಿಕ್ಸ್: 2016 (ಬೆಳ್ಳಿ)
ವಿಶ್ವ ಚಾಂಪಿಯನ್‌ಷಿಪ್: 2015 (ಚಿನ್ನ)
ಶ್ರೇಷ್ಠ: 92.72 ಮೀ
ವಯಸ್ಸು: 36

• **ಲೂಯಿಸ್ ಮಾರಿಸಿಯೊ ಡಿ ಸಿಲ್ವಾ (ಬ್ರೆಜಿಲ್)**
ಸೌತ್ ಅಮೆರಿಕ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್ (ಚಿನ್ನ)
ಪ್ಯಾರಿಸ್ ಒಲಿಂಪಿಕ್ಸ್ –2024 (11ನೇ ಸ್ಥಾನ), ಶ್ರೇಷ್ಠ: 85.91 ಮೀ
ವಯಸ್ಸು: 25
ಶ್ರೇಷ್ಠ: 85.91 ಮೀ

• **ಸೈಪ್ರಿಯಾನ್ ಮ್ರುಝ್ಯಿಗ್ಲಾಡ್ (ಪೋಲೆಂಡ್)**
ಯುರೋಪಿಯನ್ 23 ವರ್ಷದೊಳಗಿನವರ ಚಾಂಪಿಯನ್‌ಷಿಪ್ 2019 (ಚಿನ್ನ),
ಜಾಗತಿಕ ವಿಶ್ವವಿದ್ಯಾಲಯ ಗೇಮ್ಸ್ : 2021 (ಬೆಳ್ಳಿ)
ಯುರೋಪಿಯನ್ ಥ್ರೋಯಿಂಗ್ ಕಪ್ 2025 (ಕಂಚು), ಶ್ರೇಷ್ಠ: 85.92 ಮೀ

• **ಕರ್ಟಿಸ್ ಥಾಮ್ಸನ್ (ಅಮೆರಿಕ)**
ಪ್ಯಾನ್ ಅಮೆರಿಕ ಗೇಮ್ಸ್ 2023 (ಚಿನ್ನ)
ಶ್ರೇಷ್ಠ: 87.76 ಮೀ
ವಯಸ್ಸು: 29

• **ಮಾರ್ಟಿನ್ ಕೊನೆಸ್ನಿ (ಜೆಕ್ ಗಣರಾಜ್ಯ)**
ರಾಷ್ಟ್ರೀಯ ಚಾಂಪಿಯನ್‌ಷಿಪ್
ಹೊಡೊನಿನ್ 2022 (ಕಂಚು)
ಕ್ಲಾಡ್ನೊ ಹಾಜಿ ಕ್ಲಾಡ್ನೊ ಕೂಟ –2022 (ಕಂಚು)
ಶ್ರೇಷ್ಠ: 79.86 ಮೀ
ವಯಸ್ಸು:25

• **ರುಮೇಶ್ ಪತಿರಾಗೆ (ಶ್ರೀಲಂಕಾ)**
ವಿಶ್ವ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧೆ
ಶ್ರೇಷ್ಠ: 85.41 ಮೀ
ವಯಸ್ಸು: 22

• **ಸಚಿನ್ ಯಾದವ್ (ಭಾರತ)**
ಏಷ್ಯನ್ ಚಾಂಪಿಯನ್‌ಷಿಪ್: ಬೆಳ್ಳಿ
ಶ್ರೇಷ್ಠ: 85.16 ಮೀ
ವಯಸ್ಸು 25

• **ರೋಹಿತ್ ಯಾದವ್ (ಭಾರತ)**
ಶ್ರೇಷ್ಠ: 83.4 ಮೀ
2023ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದರು. ಆದರೆ ಗಾಯಗೊಂಡಿದ್ದರಿಂದ ಹಿಂದೆ ಸರಿದಿದ್ದರು.

• **ಸಾಹಿಲ್ ಸಿಲ್ವಾಲ್ (ಭಾರತ)**
ವಯಸ್ಸು: 24
ಶ್ರೇಷ್ಠ: 81.81 ಮೀ
ರಾಷ್ಟ್ರೀಯ ಚಾಂಪಿಯನ್
ಅಂತರರಾಷ್ಟ್ರೀಯ ಕೂಟಗಳಲ್ಲಿ ಸ್ಪರ್ಧೆ

• **ಯಶ್ ವೀರ್ ಸಿಂಗ್ (ಭಾರತ)**
ವಯಸ್ಸು: 23
ಶ್ರೇಷ್ಠ: 82.57 ಮೀ

ಭಾರತದ ಕ್ರೀಡೆಗೆ ಶಕ್ತಿ ತುಂಬುವ ನಿರೀಕ್ಷೆ



ಬೆಂಗಳೂರಿನಲ್ಲಿ ನೀರಜ್ ಚೋಪ್ರಾ ಕ್ಲಾಸಿಕ್ ನಡೆಯುತ್ತಿರುವುದು ಬಹಳ ಖುಷಿಯ ವಿಷಯ. ಇದೊಂದು ಐತಿಹಾಸಿಕ ಕೂಟವಾಗಲಿದೆ. ಜಾವೆಲಿನ್ ಥ್ರೋ ಕ್ರೀಡೆಗೆ ಭವಿಷ್ಯದಲ್ಲಿ ಬಹಳಷ್ಟು ಪ್ರೋತ್ಸಾಹ ಸಿಗಲು ಕಾರಣವಾಗಲಿದೆ. ಈ ಕೂಟಕ್ಕೆ ಈಗ ಬಹಳಷ್ಟು ಖ್ಯಾತನಾಮ ಸಂಸ್ಥೆಗಳು ಪ್ರಾಯೋಜಕತ್ವ ನೀಡುತ್ತಿವೆ. ಅದರಿಂದಾಗಿ ಮುಂದಿನ ದಿನಗಳಲ್ಲಿ ಜಾವೆಲಿನ್ ಅಥ್ಲೀಟ್‌ಗಳಿಗೂ ಉತ್ತಮ ಮೊತ್ತ ಪ್ರಾಯೋಜಕತ್ವ ದೊರೆಯುವ ನಿರೀಕ್ಷೆ ಮೂಡಿದೆ. ನೀರಜ್ ಸಾಧನೆಯಿಂದಾಗಿ ಬಹಳಷ್ಟು ಮಕ್ಕಳು ಈ ಕ್ರೀಡೆಯತ್ತ ಒಲವು ತೋರುತ್ತಿದ್ದಾರೆ. ಆದ್ದರಿಂದ ಈ ಕೂಟ ಮಹತ್ವ ಪಡೆದಿದೆ. ಈ ಕ್ರೀಡೆಯಲ್ಲಿ ಬಳಕೆಯಾಗುವ ಸಲಕರಣೆಗಳು ಬಹಳಷ್ಟು ದುಬಾರಿಯಾಗಿವೆ. ಆದ್ದರಿಂದ ಆರ್ಥಿಕ ಬೆಂಬಲ ಅಗತ್ಯವಾಗಿದೆ. ಮಕ್ಕಳಿಗೆ ಉತ್ತಮ ಪ್ರೋತ್ಸಾಹ ದೊರೆತರೆ ಕ್ರೀಡೆ ಬೆಳೆಯಲಿದೆ.

–ಕಾಶಿನಾಥ್ ನಾಯ್ಕ

(ಮೂಲತಃ ಉತ್ತರ ಕನ್ನಡ ಜಿಲ್ಲೆಯವರು. 2010ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚುಗೆದ್ದ ಜಾವೆಲಿನ್ ಥ್ರೋಪಟು. ಪುಣೆ ಡಿಫೆನ್ಸ್ ಅಕಾಡೆಮಿಯಲ್ಲಿ ಕೋಚ್ ಆಗಿದ್ದಾಗ ನೀರಜ್ ಅವರಿಗೆ ಕೆಲಕಾಲ ಮಾರ್ಗದರ್ಶನ ನೀಡಿದ್ದರು. ಸದ್ಯ ಕುವೈತ್ ತಂಡದ ಕೋಚ್ ಆಗಿದ್ದಾರೆ)



ರೇಸಿಂಗ್ ಕಾರಿನೊಂದಿಗೆ ನಟ ಸುದೀಪ್

‘ಕಿಚ್ಚಾಸ್ ಕಿಂಗ್ಸ್’ಗೆ ಸುದೀಪ್ ಮಾಲೀಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಮುಖ ಮೋಟಾರ್ ಸ್ಪೋರ್ಟ್ಸ್ ಲೀಗ್ ಆಗಿರುವ ಇಂಡಿಯನ್ ರೇಸಿಂಗ್ ಫೆಸ್ಟಿವಲ್ (ಐಆರ್‌ಎಫ್)ನಲ್ಲಿ ಪಾಲ್ಗೊಳ್ಳುವ ಬೆಂಗಳೂರು ಫ್ರಾಂಚೈಸಿಯ ಮಾಲೀಕತ್ವವನ್ನು ಕನ್ನಡದ ನಟ ಕಿಚ್ಚ ಸುದೀಪ್ ವಹಿಸಿಕೊಂಡಿದ್ದಾರೆ. ನಗರದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಅವರು ತಮ್ಮ ರೇಸಿಂಗ್ ತಂಡ ‘ಕಿಚ್ಚಾಸ್ ಕಿಂಗ್ಸ್ ಬೆಂಗಳೂರು’ (ಕೆಕೆಬಿ) ತಂಡದ ಘೋಷಣೆ ಮಾಡಿದರು.

ಆಗಸ್ಟ್‌ನಲ್ಲಿ ನಡೆಯುವ ಈ ಮೋಟಾರ್ ರೇಸಿಂಗ್ ಲೀಗ್‌ನಲ್ಲಿ ಬೆಂಗಳೂರು, ಹೈದರಾಬಾದ್, ದೆಹಲಿ, ಕೋಲ್ಕತ್ತ, ಚೆನ್ನೈ, ಗೋವಾ ಮತ್ತು ಇತರ ನಗರಗಳ ತಂಡಗಳು ಭಾಗವಹಿಸಲಿವೆ. ವಿಶ್ವ ದರ್ಜೆಯ ಟ್ರ್ಯಾಕ್‌ಗಳು ಮತ್ತು ಸರ್ಕ್ಯೂಟ್‌ಗಳಲ್ಲಿ ಐದು ಸುತ್ತುಗಳನ್ನು ಒಳಗೊಂಡು ಈ ಲೀಗ್ ನಡೆಯಲಿದೆ.

ಖಾಸಗಿ ಹೋಟೆಲ್‌ನಲ್ಲಿ ಸುದೀಪ್ ಅವರು ರೇಸಿಂಗ್ ಕಾರಿನೊಂದಿಗೆ ಫೋಟೊಗೆ ಪೋಸ್ ನೀಡಿದ್ದಾರೆ.

‘ಕ್ರಿಕೆಟ್ ಅಂದರೆ ಹೆಚ್ಚು ಮಾತನಾಡುತ್ತಿದ್ದೆ. ಕ್ರೀಡೆ ಅಂದರೆ ಅದರ ಜೊತೆ ಗುರುತಿಸಿಕೊಳ್ಳುತ್ತೇನೆ. ಮೋಟಾರ್ ರೇಸಿಂಗ್ ಸುಲಭವಲ್ಲ. ಈ ಕ್ಷೇತ್ರಕ್ಕೆ ಬರುವ ಮೊದಲು ಸಾಕಷ್ಟು ಚರ್ಚೆ ಮಾಡಿದ್ದೇವೆ. ಮಾಲೀಕರಾದರೂ ಕಾರಿನೊಳಗೆ ಕೂರುವ ಅವಕಾಶವಿಲ್ಲ. ಅದಕ್ಕೆ ಲೈಸೆನ್ಸ್ ಬೇಕಾಗುತ್ತದೆ’ ಎಂದರು.

‘ನಾನು ಕೆಸಿಸಿ ಹಾಗೂ ಸಿಸಿಎಲ್ ಆಡಿದ್ದೇನೆ. ಆದರೆ ನಾನು ಬೆಂಗಳೂರಿನ ತಂಡ ಖರೀದಿಸುತ್ತೇನೆ ಅಂದುಕೊಂಡಿರಲಿಲ್ಲ. ಪತ್ನಿ ಪ್ರಿಯಾ ಸಹ ನಿರ್ಧಾರ ಕೈಗೊಳ್ಳಲು ನೆರವಾದರು’ ಎಂದು ಅವರು ಹೇಳಿದರು. ಪ್ರಿಯಾ ಅವರೂ ಈ ವೇಳೆ ಹಾಜರಿದ್ದರು.

ರೇಸಿಂಗ್ ಪ್ರಮೋಷನ್ಸ್ ಪ್ರೈವೇಟ್ ಲಿಮಿಟೆಡ್‌ನ ಆಡಳಿತ ನಿರ್ದೇಶಕ ಅಖಿಲೇಶ್ ರೆಡ್ಡಿ ಮಾತನಾಡಿ ‘ಸುದೀಪ್ ಅಂಥ ಸೂಪರ್‌ಸ್ಟಾರ್ ಪ್ರವೇಶದಿಂದ ತಾರಾಬಲದ ಜೊತೆಗೆ ಇಂಡಿಯನ್ ರೇಸಿಂಗ್ ಲೀಗ್‌ನ ವರ್ಚಸ್ಸು ಹೆಚ್ಚಿಸಲಿದೆ’ ಎಂದರು.

ಇತರ ಕೆಲವು ತಂಡಗಳನ್ನೂ ಸೆಲೆಬ್ರಿಟಿಗಳು ಖರೀದಿಸಿದ್ದಾರೆ. ಜಾನ್ ಅಬ್ರಹಾಂ (ಗೋವಾ), ಸೌರವ್ ಗಂಗೂಲಿ (ಕೋಲ್ಕತ್ತ) ಇವರಲ್ಲಿ ಪ್ರಮುಖರು.

ಬೆಂಗಳೂರು ರೇಸ್

ಫಾರ್ಚೂನೇಟ್ ಸನ್ ಗೆಲ್ಲುವ ನಿರೀಕ್ಷೆ

ವೆಟರಿನೇರಿಯನ್ಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರ್ಚೂನೇಟ್ ಸನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಥ್ರಿಲ್ ಆಫ್ ಬ್ರೆಜಿಲ್ 7; ವೂಲ್ಫ್ ಕ್ರೀಕ್ 1, ಡಾ.ಆಶ್ 2
2ನೇ ರೇಸ್: ಮಿರಾಕಲ್ ಸ್ಟಾರ್ 8, ಸ್ಟಾರ್ ಸ್ಟಡೆಡ್ 3, ಮೆಷಿಯಾವೆಲ್ಲಿಯನ್ 1
3ನೇ ರೇಸ್: ಹಾನೆಸ್ಟ್ ಡಿಸೈರ್ 6, ಸೂಪರ್ ಕೈಂಡ್ 4, ರೆಸ್ಪ್ಲೆಂಡೆನ್ಸ್ 2
4ನೇ ರೇಸ್: ಥಂಡರಿಂಗ್ ಫಿನಿಕ್ಸ್ 1, ಎಲ್ಫಿನ್ ನೈಟ್ 2, ಸ್ಕಾರ್ಲೆಟ್ ಲೇಡಿ 3
5ನೇ ರೇಸ್: ಫಾರ್ಚೂನೇಟ್ ಸನ್ 3, ಗೋಲ್ಡನ್ ಟೈಮ್ 5, ಟ್ರೂ ಫೈಥ್ 4
6ನೇ ರೇಸ್: ಸ್ಟಾರ್ ಸೆರೆನೇಡ್ 1, ಚಿಂಕಿ ಪಿಂಕಿ 2, ಸ್ಟಾರ್ ಸಿಂಪೋನಿ 4
7ನೇ ರೇಸ್: ಈಸ್ಟರ್ನ್ ಗೋಲ್ಡ್ 2, ಫ್ಲಾಶ್ 1, ಫೆಲಿಸ 3

ಉತ್ತಮ ಬೆಟ್: ಮಿರಾಕಲ್ ಸ್ಟಾರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕಾರ್ಲ್‌ಸನ್ ಮಣಿಸಿದ ಗುಕೇಶ್

ಝಾಗ್ರೆಬ್ (ಕ್ರೊವೇಷ್ಯಾ) (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಮೇಲೆ ಸ್ಫೂರ್ತಿಯುತ ಗೆಲುವು ಸಾಧಿಸಿದರು. ಸೂಪರ್ ಯುನೈಟೆಡ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಆನೇ ಸುತ್ತಿನ ನಂತರ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ಗುರುವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ ದೊರೆತ ಗೆಲುವು ಗುಕೇಶ್ ಅವರಿಗೆ ಸತತ ಐದನೇಯದ್ದು. ಅವರು ಸಂಭವನೀಯ 12 ಪಾಯಿಂಟ್‌ಗಳಲ್ಲಿ 10 ಪಾಯಿಂಟ್ಸ್ ಕಲೆಹಾಕಿದ್ದಾರೆ.

ಭಾರತದ ಆಟಗಾರ ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡುಡಾ ಅವರಿಗಿಂತ ಎರಡು ಪಾಯಿಂಟ್ ಮುಂದೆಯಿದ್ದಾರೆ. ಏಳು ಪಾಯಿಂಟ್ ಗಳಿಸಿರುವ ಅಮೆರಿಕದ ವೆಸ್ಲಿ ಸೊ ಮೂರನೇ ಸ್ಥಾನದಲ್ಲಿ ಇದ್ದಾರೆ. ನಾರ್ವೆಯ ಕಾರ್ಲ್‌ಸನ್, ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ಸ್ಥಳೀಯ ಆಟಗಾರ ಇವಾನ್ ಸರಿಕ್ (ತಲಾ 6 ಪಾಯಿಂಟ್ಸ್) ಅವರು ನಾಲ್ಕರಿಂದ ಆರರವರೆಗಿನ ಸ್ಥಾನಗಳನ್ನು ಪಡೆದಿದ್ದಾರೆ.

ಆರ್.ಪ್ರಜ್ಞಾನಂದ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ತಲಾ ಐದು ಪಾಯಿಂಟ್ಸ್ ಸಂಗ್ರಹಿಸಿ ದ್ದಾರೆ. ಫ್ರಾನ್ಸ್‌ನ ಆಟಗಾರ ಅಲಿರೇಝಾ ಫಿರೋಝ್‌ಜಾ (4 ಪಾಯಿಂಟ್ಸ್) ಒಂಬತ್ತನೇ ಸ್ಥಾನ ಪಡೆದಿದ್ದಾರೆ. ನದಿರ್ಬೆಕ್ ಅಬ್ದುಸತ್ತಾರೋವ್ (3) ಕೊನೆಯ (10ನೇ) ಸ್ಥಾನದಲ್ಲಿದ್ದಾರೆ.

ಕಿಂಗ್ ಪಾನ್ ಓಪನಿಂಗ್ ಕಂಡ ಈ ಆಟದಲ್ಲಿ ಕಾರ್ಲ್‌ಸನ್ ಆರಂಭದಲ್ಲಿ ಸ್ವಲ್ಪ ಅನುಕೂಲ ಹೊಂದಿದ್ದರು. ಆದರೆ ಗುಕೇಶ್ ಅವರು ಪರಿಪೂರ್ಣ ಪ್ರತಿಹೋರಾಟಕ್ಕೆ ನಾರ್ವೆಯ ಆಟಗಾರನ ಬಳಿ ಉತ್ತರವಿರಲಿಲ್ಲ.

49 ನಡೆಗಳಲ್ಲಿ ಗುಕೇಶ್ ಜಯಗಳಿಸಿದರು. ಈ ಪಂದ್ಯಕ್ಕೆ ಮೊದಲು ಗುಕೇಶ್ ಅವರು ಅಬ್ದುಸತ್ತಾರೋವ್ ಅವರನ್ನು ಮಣಿಸಿದ್ದರು. ಪ್ರಜ್ಞಾನಂದ ಅವರಿಗೆ ಗುರುವಾರವೂ ಗೆಲುವು ಒಲಿಯಲಿಲ್ಲ. ಅವರು ಕರುವಾನ, ಕಾರ್ಲ್‌ಸನ್ ಮತ್ತು ಅನಿಶ್ ಗಿರಿ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು.



ಕಾರ್ಲ್‌ಸನ್ (ಎಡ) ವಿರುದ್ಧ ಆಡಿದ ಗುಕೇಶ್ ‘ಎಕ್ಸ್’ ಚಿತ್ರ

ಚಿಟಿಕೆ ಸುದ್ದಿ

ಬಾಂಗ್ಲಾ ಪ್ರವಾಸ ಮುಂದೂಡಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಚುಟುಕು ಮತ್ತು ಏಕದಿನ ಕ್ರಿಕೆಟ್ ಸರಣಿಗಾಗಿ ನಿಗದಿಯಾಗಿದ್ದ ಭಾರತ ತಂಡದ ಪ್ರವಾಸ ಇದೀಗ ಮುಂದಕ್ಕೆ ಹೋಗುವ ಸಾಧ್ಯತೆಯಿದೆ. ಶೇಖ್ ಹಸೀನಾ ಪದಚ್ಯುತಿಯ ನಂತರ ಅಲ್ಲಿ ತಲೆದೋರಿದ್ದ ಆಂತರಿಕ ಸಂಘರ್ಷ ಇನ್ನೂ ಶಮನ ಆಗದಿರುವುದು ಬಿಸಿಸಿಐ ಕಳವಳಕ್ಕೆ ಕಾರಣ ಎನ್ನಲಾಗಿದೆ.

ಭಾರತ ತಂಡವು ಆಗಸ್ಟ್ 17ರಿಂದ 31ರ ವರೆಗಿನ ಪ್ರವಾಸದಲ್ಲಿ ತಲಾ ಮೂರು ಟಿ20 ಹಾಗೂ ಏಕದಿನ ಪಂದ್ಯಗಳನ್ನು ಆಡಬೇಕಾಗಿತ್ತು.

‘ಭಾರತ–ಬಾಂಗ್ಲಾದೇಶ ವೈಟ್‌ಬಾಲ್ ಸರಣಿ ರದ್ದಾಗಿಲ್ಲ. 2027ರ ನಡೆಯಲಿರುವ ಐಸಿಸಿ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯಲು ಈ ಸರಣಿಯ ಅಂಕಗಳು ಮಹತ್ವದ್ದಾಗಿವೆ. ಹೀಗಾಗಿ, ಸರಣಿ ಬಹು ಮಟ್ಟಿಗೆ 2026ರಲ್ಲಿ ನಡೆಯುವ ಸಾಧ್ಯತೆ ಇದೆ’ ಎಂದು ಮಂಡಳಿಯ ಮೂಲವೊಂದು ಪಿಟಿಐಗೆ ತಿಳಿಸಿದೆ.

ಭಾರತಕ್ಕೆ ಇಂದು ಥಾಯ್ಲೆಂಡ್ ವಿರುದ್ಧ ಮಹತ್ವದ ಪಂದ್ಯ

ಚಿಯಾಂಗ್ ಮೈ (ಥಾಯ್ಲೆಂಡ್), (ಪಿಟಿಐ): ಮುಂದಿನ ವರ್ಷದ ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಟೂರ್ನಿಯಲ್ಲಿ ಸ್ಥಾನ ಪಡೆಯುವ ದೃಷ್ಟಿಯಿಂದ ನಿರ್ಣಾಯಕವಾಗಿರುವ ಪಂದ್ಯದಲ್ಲಿ ಭಾರತ ತಂಡವು ತನಗಿಂತ ಮೇಲಿನ ಕ್ರಮಾಂಕದ ಥಾಯ್ಲೆಂಡ್ ತಂಡವನ್ನು ಶನಿವಾರ ಇಲ್ಲಿ ಎದುರಿಸಲಿದೆ.

ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಕ್ವಾಲಿಫೈಯರ್‌ನಲ್ಲಿ ಇದುವರೆಗಿನ ಮೂರು ಪಂದ್ಯಗಳನ್ನು ಲೀಲಾಜಾಲವಾಗಿ ಗೆದ್ದಿರುವ ಭಾರತಕ್ಕೆ ಆತಿಥೇಯರಿಂದ ಪ್ರಬಲ ಪೈಪೋಟಿ ಎದುರಾಗುವ ನಿರೀಕ್ಷೆಯಿದೆ. ತಂಡವೂ ಶತಪ್ರಯತ್ನ ಹಾಕಬೇಕಿದೆ.

ಭಾರತ ತಂಡವು, ಹಿಂದೆಂದೂ ಥಾಯ್ಲೆಂಡ್ ತಂಡವನ್ನು ಸೋಲಿಸಿಲ್ಲ. ಕ್ವಾಲಿಫೈಯರ್ ಮೂಲಕ ಏಷ್ಯಾ ಖಂಡದ ಅತಿ ದೊಡ್ಡ ಟೂರ್ನಿಯಾದ ಎಎಫ್‌ಸಿ ಮಹಿಳಾ ಕಪ್‌ಗೆ ತೇರ್ಗಡೆ ಸಹ ಪಡೆದಿಲ್ಲ. ಭಾರತ 2003ರಲ್ಲಿ ಕೊನೆಯ ಬಾರಿ ಆಡಿತ್ತು. ಆದರೆ ಆಗ ಅರ್ಹತಾ ಸುತ್ತು ಇರಲಿಲ್ಲ. 2022ರ ಟೂರ್ನಿಯಲ್ಲಿ ಭಾರತ ಆತಿಥೇಯವಾಗಿದ್ದರೂ ಆಡಿರಲಿಲ್ಲ. ಆಗ ತಂಡದ ಆಟಗಾರ್ತಿಯರಿಗೆ ಕೊರೊನಾ ಸೋಂಕು ಕಾಡಿತ್ತು.

ಹೈದರಾಬಾದ್‌ನಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ಉತ್ಪಾದನಾ ಘಟಕ ಆರಂಭ

ಮುಂಬೈ: ವಿಶ್ವದ 5ನೇ ಅತಿದೊಡ್ಡ ಆಭರಣ ಚಿಲ್ಲರೆ ವ್ಯಾಪಾರ ಸಂಸ್ಥೆ ಮಲಬಾರ್ ಗೋಲ್ಡ್ & ಡೈಮಂಡ್ಸ್, ಹೈದರಾಬಾದ್‌ನಲ್ಲಿ ತನ್ನ ಅತ್ಯಾಧುನಿಕ, ಸುಸಜ್ಜಿತ ಆಭರಣ ಸಂಯೋಜಿತ ಉತ್ಪಾದನಾ ಘಟಕವನ್ನು ಪ್ರಾರಂಭಿಸಿದೆ.

ಭಾರತ, ಜಿಸಿಸಿ ದೇಶಗಳಲ್ಲಿರುವ 14 ಉತ್ಪಾದನಾ ಘಟಕಗಳಿಗಿಂತ ಮಿಗಿಲಾದ ಬೃಹತ್ ಆಭರಣ ಉತ್ಪಾದನಾ ಘಟಕವನ್ನು ರಂಗಾರೆಡ್ಡಿ ಜಿಲ್ಲೆಯ ಮಹೇಶ್ವರಂನ ಜನರಲ್ ಪಾರ್ಕ್‌ನಲ್ಲಿ ಸ್ಥಾಪಿಸಲಾಗಿದೆ. ಉತ್ಪಾದನಾ ಘಟಕವನ್ನು ತೆಲಂಗಾಣದ ಸಿಎಂ ರೇವಂತ್ ರೆಡ್ಡಿ ಅವರು ಉದ್ಘಾಟಿಸಿದರು.

ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮ್ಮದ್, ಉಪಾಧ್ಯಕ್ಷ ಅಬ್ದುಲ್ ಸಲಾಂ ಕೆ.ಪಿ, ಸಂಸ್ಥೆಯ ಭಾರತ ಕಾರ್ಯಾಚರಣೆ ವ್ಯವಸ್ಥಾಪಕ ನಿರ್ದೇಶಕ ಆಶರ್ ಒ, ಕಾರ್ಯನಿರ್ವಾಹಕ ನಿರ್ದೇಶಕ ನಿಶಾದ್ ಎ.ಕೆ. ಮತ್ತು ಮಲಬಾರ್ ಗ್ರೂಪ್‌ನ ಹಿರಿಯ ನಿರ್ವಹಣಾ ತಂಡದ ಸದಸ್ಯರು, ಸರ್ಕಾರದ ಗಣ್ಯರು ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್‌ನ ಎಂಡಿ-ಇಂಡಿಯಾ ಆಪರೇಷನ್ಸ್ ಶ್ರೀ ಆಶರ್ ಒ ಮಾತನಾಡಿ "ಹೈದರಾಬಾದ್‌ನಲ್ಲಿರುವ ನಮ್ಮ ಅತ್ಯಾಧುನಿಕ ಸಂಯೋಜಿತ ಆಭರಣ ಉತ್ಪಾದನಾ ಘಟಕವು ಸಂಪ್ರದಾಯ, ಕಲೆ, ಆಧುನಿಕತೆ ಮತ್ತು ನಿಖರತೆ ಜೊತೆ ಆಭರಣ ತಯಾರಿಕೆಯಲ್ಲಿ ಹೊಸ ಯುಗವನ್ನು ಸೃಷ್ಟಿಸುತ್ತದೆ. ' ಮೇಕ್ ಇನ್ ಇಂಡಿಯಾ, ಮಾರ್ಕೆಟ್ ಟು ದಿ ವರ್ಲ್ಡ್' ದೃಷ್ಟಿಕೋನಕ್ಕೆ ಅನುಗುಣವಾಗಿ, ಈ ಸೌಲಭ್ಯವು ಜಾಗತಿಕ ಮಾರುಕಟ್ಟೆಗಳಿಗಾಗಿ ಭಾರತದಲ್ಲಿ ವಿಶ್ವ ದರ್ಜೆಯ ಆಭರಣಗಳನ್ನು ಉತ್ಪಾದಿಸುವ ಬದ್ಧತೆಯನ್ನು ಹೆಚ್ಚಿಸುತ್ತದೆ. ಹಣಕಾಸು ವರ್ಷದ ಅಂತ್ಯದ ವೇಳೆಗೆ 22 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಮ್ಮ ಉಪಸ್ಥಿತಿಯನ್ನು ವಿಸ್ತರಿಸಲು ಸಜ್ಜಾಗುತ್ತಿದ್ದೇವೆ ಎಂದು ತಿಳಿಸಿದರು.

"ಈ ಉತ್ಪಾದನಾ ಘಟಕಕ್ಕೆ ಅಮೆರಿಕ, ಜರ್ಮನಿ, ಇಟಲಿ ಮತ್ತು ಟರ್ಕಿಯಿಂದ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಇದರಿಂದ ಉತ್ಪಾದನೆ ಮತ್ತು ನಾವೀನ್ಯತೆಯಲ್ಲಿ ವಿಶ್ವ ದರ್ಜೆಯ ಮಾನದಂಡಗಳನ್ನು ಕಾಣಬಹುದಾಗಿದೆ ಎಂದು ಮಲಬಾರ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ನಿಶಾದ್ ಎಕೆ ಹೇಳಿದರು .



(ಎಡದಿಂದ ಬಲಕ್ಕೆ) ಮಲಬಾರ್ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ನಿಶಾದ್ ಎಕೆ; ತೆಲಂಗಾಣ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬೊಮ್ಮ ಮಹೇಶ್ ಕುಮಾರ್ ಗೌಡ್, ಮಲಬಾರ್ ಗ್ರೂಪ್ ಅಧ್ಯಕ್ಷ ಎಂಪಿ ಅಹಮ್ಮದ್, ಮುಖ್ಯಮಂತ್ರಿ ಎ ರೇವಂತ್ ರೆಡ್ಡಿ, ಸಚಿವ ಡಿ. ಶ್ರೀಧರ್ ಬಾಬು, ಮಲಬಾರ್ ಗ್ರೂಪ್‌ನ ಅಬ್ದುಲ್ ಸಲಾಂ ಕೆಪಿ, ಆಶರ್ ಒ, ಫೈಸಲ್ ಎಕೆ, ಅಬ್ದುಲ್ಲಾ ಇಬ್ರಾಹಿಂ ಇದ್ದರು.

- **3.45 ಲಕ್ಷ ಚದರ ಅಡಿ ವಿಸ್ತೀರ್ಣದ ಸುಸಜ್ಜಿತ ಸಂಯೋಜಿತ ಘಟಕ**
- **ಒಂದೇ ಸೂರಿನಡಿ ವಿನ್ಯಾಸ, ಸಂಸ್ಕರಣೆ ಮತ್ತು ಉತ್ಪಾದನೆ**
- **2,750ಕ್ಕೂ ಹೆಚ್ಚು ಕುಶಲಕರ್ಮಿಗಳು, ಅತ್ಯಾಧುನಿಕ ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿ**
- **ಜಾಗತಿಕ ಚಿಲ್ಲರೆ ವಿಸ್ತರಣೆಗೆ ಶಕ್ತಿ ತುಂಬಲಿರುವ ಘಟಕ**
- **ವಾರ್ಷಿಕ 4.7 ಟನ್ ಚಿನ್ನಾಭರಣ ಮತ್ತು 1.8 ಲಕ್ಷ ಕ್ಯಾರೆಟ್ ವಜ್ರಾಭರಣ ಉತ್ಪಾದನೆ ಸೌಲಭ್ಯ.**

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಜೇಮಿ– ಬ್ರೂಕ್ ಪ್ರತ್ಯಾಕ್ರಮಣ

ಫಾಲೋಆನ್ ತಪ್ಪಿಸಿದ ಇಂಗ್ಲೆಂಡ್ • ಕೊನೆಯಲ್ಲಿ ಮಿಂಚಿದ ಸಿರಾಜ್, ಆಕಾಶ್ • ಭಾರತಕ್ಕೆ ಒಟ್ಟು 244 ರನ್ ಮುನ್ನಡೆ

• ಸಿದ್ಧಿ ಕಿರಣ್

ಎಜ್‌ಬಾಸ್ಟನ್: ಇಂಗ್ಲೆಂಡ್ ಕ್ರಿಕೆಟ್‌ನ ಭಾವಿ ಬ್ಯಾಟಿಂಗ್ ತಾರೆಗಳಾದ ಹ್ಯಾರಿ ಬ್ರೂಕ್ ಮತ್ತು ಜೇಮಿ ಸ್ಮಿತ್ ಅವರು ಭಾರತದ ಬೌಲರ್‌ಗಳ ಮೇಲೆ ಸವಾರಿ ನಡೆಸಿ 'ಬಾಝ್‌ಬಾಲ್' ಕ್ರಿಕೆಟ್‌ನ ಉಗ್ರ ರೂಪ ಪ್ರದರ್ಶಿಸಿದರು. ಎರಡನೇ ಟೆಸ್ಟ್‌ನ ಮೂರನೇ ದಿನವಾದ ಶುಕ್ರವಾರ ಇಬ್ಬರೂ ಭರ್ಜರಿ ಶತಕಗಳನ್ನು ಬಾರಿಸಿದರು.

ಆದರೆ ಇವರಿಬ್ಬರಿಂದ ಆದ ಹಾನಿ ತೀವ್ರವಾಗದಂತೆ, ದಿನದ ಕೊನೆಯ ಅವಧಿಯಲ್ಲಿ ಮೊಹಮ್ಮದ್ ಸಿರಾಜ್ (70ಕ್ಕೆ6) ಮತ್ತು ಆಕಾಶ್ ದೀಪ್ (88ಕ್ಕೆ4) ನೋಡಿಕೊಂಡರು.

ಒಂದು ಹಂತದಲ್ಲಿ ಇಂಗ್ಲೆಂಡ್ 84 ರನ್‌ಗಳಾಗುಷ್ಟರಲ್ಲಿ 5 ವಿಕೆಟ್ ಕಳೆದುಕೊಂಡು ಅಪಾಯಕ್ಕೆ ಸಿಲುಕಿತ್ತು. ಈ ವೇಳೆ ಪ್ರತ್ಯಾಕ್ರಮಣ ನಡೆಸಿದ ಬ್ರೂಕ್ (158, 234 ಎಸೆತ) ಮತ್ತು ಸ್ಮಿತ್ (ಔಟಾಗದೇ 184, 207 ಎಸೆತ) ಆರನೇ ವಿಕೆಟ್‌ಗೆ 303 ರನ್‌ಗಳ ಅಮೂಲ್ಯ ಜೊತೆಯಾಟದಲ್ಲಿ ಪಾಲ್ಗೊಂಡು ದಿನದ ಬಹುತೇಕ ಅವಧಿಯಲ್ಲಿ ತಂಡದ ರಕ್ಷಣೆಗೆ ನಿಂತರು. ಆದರೆ ಕೊನೆಯ ಅವಧಿಯಲ್ಲಿ ಎರಡನೇ ಹೊಸ ಚೆಂಡಿನಿಂದ ಸಿರಾಜ್ ಮತ್ತು ಆಕಾಶ್ ಮೋಡಿ ಮಾಡಿದ್ದರಿಂದ ಭಾರತ ಎಜ್‌ಬಾಸ್ಟನ್‌ನಲ್ಲಿ ಮರಳಿ ಹಿಡಿತ ಪಡೆಯಿತು. ಇವರಿಬ್ಬರ ಸಾಹಸದಿಂದ ಆತಿಥೇಯ ತಂಡದ ಮೊದಲ ಇನಿಂಗ್ಸ್ 407 ರನ್‌ಗಳಿಗೆ ಕೊನೆಗೊಂಡಿತು. ಭಾರತ 180 ರನ್‌ಗಳ ಮುನ್ನಡೆ ಪಡೆಯಿತು.

ಮೂರನೇ ದಿನದಾಟ ಕೊನೆಗೊಂಡಾಗ ಭಾರತ ಎರಡನೇ ಸರದಿಯಲ್ಲಿ 1 ವಿಕೆಟ್‌ಗೆ 64 ರನ್ ಗಳಿಸಿದೆ. ಒಟ್ಟಾರೆ ಮುನ್ನಡೆ 244 ರನ್‌ಗಳಿಗೆ ಉಬ್ಬಿದೆ.

ದಿನದ ಆರಂಭದ ಸ್ಪೆಲ್‌ನಲ್ಲಿ ಸಿರಾಜ್ ಅವರು ಸತತ ಎರಡು ಎಸೆತಗಳಲ್ಲಿ ಜೋ ರೂಟ್ ಮತ್ತು ಬೆನ್‌ಸ್ಟೋಕ್ಸ್ ಅವರ ವಿಕೆಟ್‌ಗಳನ್ನು ಪಡೆದಿದ್ದರು. ಈ ಎರಡು ಕ್ಷಣಗಳನ್ನು ಬಿಟ್ಟರೆ, ನಿರ್ಜೀವ ಪಿಚ್‌ನಲ್ಲಿ ಬೌಲರ್‌ಗಳು ಹೆಚ್ಚಿನ ಅವಧಿಯಲ್ಲಿ ಬಸವಳಿದರು.



ಆರು ವಿಕೆಟ್ ಪಡೆದ ಮೊಹಮ್ಮದ್ ಸಿರಾಜ್ ಎಪಿ/ಪಿಟಿಐ: ಎಎಫ್‌ಪಿ ಚಿತ್ರಗಳು

26 ವರ್ಷ ವಯಸ್ಸಿನ ಬ್ರೂಕ್ ಮತ್ತು 24 ವರ್ಷ ವಯಸ್ಸಿನ ಸ್ಮಿತ್ ಅವರು ಪ್ರತ್ಯಾಕ್ರಮಣ ನಡೆಸಿ ವೇಗವಾಗಿ ಶತಕ ಗಳಿಸಿದರು. ಉತ್ಸಾಹದಲ್ಲಿದ್ದ ಭಾರತ ಬೌಲರ್‌ಗಳನ್ನು ಇವರಿಬ್ಬರು ಲಂಚ್‌ಗೆ ಮೊದಲು ತೀವ್ರವಾಗಿ ದಂಡಿಸಿದರು. ಸ್ಮಿತ್ ಮತ್ತು ಬ್ರೂಕ್ಸ್ ಆಟದ ರೀತಿಗೆ ಬೌಲರ್‌ಗಳು ಬೆಚ್ಚಿದರು. ಸ್ಮಿತ್ ಅವರಂತೂ ಪ್ರಸಿದ್ಧ ಕೃಷ್ಣ ಅವರ ಒಂದೇ ಓವರಿನಲ್ಲಿ 23 ರನ್ ಬಾಚಿ ವಿಶ್ವಾಸ ಹೆಚ್ಚಿಸಿಕೊಂಡರು. ಬ್ರೂಕ್ಸ್ ಕೂಡ ಹಿಂದೆಬೀಳಲಿಲ್ಲ. ರನ್ ಹೊಳೆ ಹರಿಯತೊಡಗಿತು. ಲಂಚ್‌ಗೆ ಮೊದಲು 27 ಓವರುಗಳಲ್ಲಿ 172 ರನ್‌ಗಳು (6.37 ರನ್‌ರೇಟ್) ಹರಿದುಬಂದವು.



ಹ್ಯಾರಿ ಬ್ರೂಕ್ ಶತಕ ಸಂಭ್ರಮ

ಭಾರತ ವಿವಿಧ ತಂತ್ರಗಳನ್ನು ಬಳಸಿತು. ಆರಂಭದಲ್ಲಿ ಶಾರ್ಟ್ ಬಾಲ್‌ಗಳ ಮೂಲಕ ಸವಾಲೆಸೆಯಿತು. ನಂತರ ಆಫ್ ಸ್ಟಂಪ್ ಆಚೆ ಬೌಲ್ ಮಾಡಿ ಸಹನೆ ಪರೀಕ್ಷಿಸಿತು. ಆದರೆ ಈ ಇಬ್ಬರು ಆಕರ್ಷಕ ಬ್ಯಾಟರ್‌ಗಳು ಈ ತಂತ್ರಗಳನ್ನು ಸಮರ್ಥವಾಗಿ ನಿಭಾಯಿಸಿದರು. ಈ ಜೊತೆಯಾಟ ಟೀ ನಂತರವೂ ಅಪಾಯಕಾರಿಯಾಗಿ ಬೆಳೆಯುವಂತೆ ಕಂಡಿತು.

ಇತರ ಬೌಲರ್‌ಗಳಿಗೆ ಹೋಲಿಸಿದರೆ, ಸ್ವಲ್ಪ ಪರಿಣಾಮಕಾರಿಯಾಗಿದ್ದ ಸಿರಾಜ್ ಮತ್ತು ಆಕಾಶ್ ಅವರು ಎರಡನೇ ಹೊಸ ಚೆಂಡಿನಲ್ಲಿ ಇಂಗ್ಲೆಂಡ್‌ನ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿದರು. ಮೊದಲಿಗೆ ಆಕಾಶ್ ಎರಡು ವಿಕೆಟ್‌ಗಳ ಮೂಲಕ ಪೆಟ್ಟು ನೀಡಿದರು. ಸ್ವಿಂಗ್ ಆದ ಚೆಂಡು, ಬ್ರೂಕ್ ರಕ್ಷಣೆಯನ್ನು ಭೇದಿಸಿ ಬೇಲ್ಸ್ ಉರುಳಿಸಿತು. ಆ ಮೂಲಕ ಭಾರಿ ಜೊತೆಯಾಟ ಮುರಿಯಿತು. ಆಕಾಶ್ ನಂತರ ಸ್ಥಳೀಯ ಆಟಗಾರ ಕ್ರಿಸ್ ವೋಕ್ಸ್ ಅವರ ವಿಕೆಟ್ ಪಡೆದರು.

ಆಕ್ರಮಣಕಾರಿಯಾಗಿದ್ದ ಸಿರಾಜ್ ನಂತರ ಇಂಗ್ಲೆಂಡ್‌ನ ಬಾಲ ಬೆಳೆಯದಂತೆ ನೋಡಿಕೊಂಡರು. 38 ಟೆಸ್ಟ್‌ಗಳಲ್ಲಿ ನಾಲ್ಕನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದರು.



ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 587 (151 ಓವರ್)
ಇಂಗ್ಲೆಂಡ್: 407 (89.3 ಓವರ್‌ಗಳಲ್ಲಿ) (ಗುರುವಾರ 3ಕ್ಕೆ 77)

ರೂಟ್ ಸಿ ಪಂತ್ ಬಿ ಸಿರಾಜ್ 22 (46ಎ, 4x2)
ಬ್ರೂಕ್ ಬಿ ಆಕಾಶ್ ದೀಪ್ 158 (234ಎ, 4x17, 6x1)
ಸ್ಟೋಕ್ಸ್ ಸಿ ಪಂತ್ ಬಿ ಸಿರಾಜ್ 0 (1ಎ)
ಜೇಮಿ ಸ್ಮಿತ್ ಔಟಾಗದೇ 184 (207ಎ, 4x21, 6x4)
ವೋಕ್ಸ್ ಸಿ ನಾಯರ್ ಬಿ ಆಕಾಶ್ 5 (17ಎ, 4x1)
ಕಾರ್ಸ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 0 (4ಎ)
ಟಂಗ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 0 (2)
ಬಶೀರ್ ಬಿ ಸಿರಾಜ್ 0 (2ಎ)
ಇತರೆ: 19 (ಲೆಗ್‌ಬೈ 5, ನೋಬಾಲ್ 12, ವೈಡ್ 2)
ವಿಕೆಟ್ ಪತನ: 4-84 (ಜೋ ರೂಟ್, 21.3), 5-84 (ಬೆನ್ ಸ್ಟೋಕ್ಸ್, 21.4), 6-387 (ಹ್ಯಾರಿ ಬ್ರೂಕ್, 87.5), 7-395 (ಕ್ರಿಸ್ ವೋಕ್ಸ್, 86.5), 8-396 (ಬ್ರೈಡನ್ ಕಾರ್ಸ್, 87.5), 9-407 (ಜೋಶ್ ಟಂಗ್, 89.3), 10-407 (ಶೋಯೆಬ್ ಬಶೀರ್, 89.3)
ಬೌಲಿಂಗ್: ಆಕಾಶ್ ದೀಪ್ 20-2-1-88-4; ಮೊಹಮ್ಮದ್ ಸಿರಾಜ್ 19.3-3-70-6, ಪ್ರಸಿದ್ಧ ಕೃಷ್ಣ 13-1-72-0, ನಿತೀಶ್ ಕುಮಾರ್ ರೆಡ್ಡಿ 6-0-29-0, ರವೀಂದ್ರ ಜಡೇಜ 17-2-70-0, ವಾಷಿಂಗ್ಟನ್ ಸುಂದರ್ 14-0-73-0

ಎರಡನೇ ಇನಿಂಗ್ಸ್:
ಭಾರತ: 1 ವಿಕೆಟ್‌ಗೆ 64 (13 ಓವರುಗಳಲ್ಲಿ)

ಜೈಸ್ವಾಲ್ ಎಲ್‌ಬಿಡಬ್ಲ್ಯು ಬಿ ಟಂಗ್ 28 (22ಎ, 4x6)
ರಾಹುಲ್ ಬ್ಯಾಟಿಂಗ್ 28 (38ಎ, 4x6)
ಕರುಣ್ ನಾಯರ್ ಬ್ಯಾಟಿಂಗ್ 7 (18ಎ, 4x1)
ಇತರೆ: 1 (ಲೆಗ್‌ಬೈ 1)
ವಿಕೆಟ್ ಪತನ: 1-51 (ಯಶಸ್ವಿ ಜೈಸ್ವಾಲ್, 7.4)
ಬೌಲಿಂಗ್: ಕ್ರಿಸ್ ವೋಕ್ಸ್ 5-0-28-0; ಬ್ರೈಡನ್ ಕಾರ್ಸ್ 5-1-23-0; ಜೋಶ್ ಟಂಗ್ 3-1-12-1

ನಾಲ್ಕನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್‌ಗೆ ಆಘಾತ


ಪ್ರಿ ಕ್ವಾರ್ಟರ್‌ಗೆ ಅಲ್ಕರಾಜ್

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಶುಕ್ರವಾರ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿಗೆ ಲಗ್ಗೆ ಹಾಕಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ ಟೂರ್ನಿಯಿಂದ ಹೊರಬಿದ್ದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿಯ ಛಲದಲ್ಲಿರುವ ಸ್ಪೇನ್‌ನ ಅಲ್ಕರಾಜ್ 6-1, 3-6, 6-3, 6-4ರಿಂದ ಜರ್ಮನಿಯ ಜಾನ್-ಲೆನ್ನಾರ್ಡ್ ಸ್ಟ್ರಫ್ ವಿರುದ್ಧ ಗೆಲುವು ಸಾಧಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಇಲ್ಲಿ 2022ರಲ್ಲಿ ನಾಲ್ಕನೇ ಸುತ್ತಿನಲ್ಲಿ ಯಾನಿಕ್ ಸಿನ್ನರ್ ವಿರುದ್ಧ ಕೊನೆಯ ಬಾರಿ ಸೋತಿದ್ದರು. ಕಳೆದ ಎರಡು ವಿಂಬಲ್ಡನ್ ಫೈನಲ್‌ಗಳಲ್ಲಿ ನೊವಾಕ್ ಜೊಕೊವಿಕ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದಿದ್ದರು.

ಕೀಸ್‌ಗೆ ಆಘಾತ: ಜರ್ಮನಿಯ ಲಾರಾ ಸಿಗ್ಮಂಡ್ 6-3, 6-3ರ ಸೆಟ್‌ಗಳಿಂದ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಕೀಸ್ (ಅಮೆರಿಕ) ಅವರಿಗೆ ಆಘಾತ ನೀಡಿದರು. ಡಬಲ್ಸ್‌ನಲ್ಲಿ ಮೂರು ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದಿರುವ ಲಾರಾ, ಇಲ್ಲಿ ಇದೇ ಮೊದಲ ಬಾರಿ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತು ತಲುಪಿದ್ದಾರೆ.



ಲಾರಾ ಸಿಗ್ಮಂಡ್ ಗೆಲುವಿನ ಸಂಭ್ರಮ ಎಪಿ ಚಿತ್ರ

ಒಸಾಕಾ ನಿರ್ಗಮನ: ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತೆ ನವೋಮಿ ಒಸಾಕಾ ಮೂರನೇ ಸುತ್ತಿನಲ್ಲಿ ನಿರ್ಗಮಿಸಿದರು. ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ರಷ್ಯಾದ ಅನಸ್ತಾಸಿಯಾ ಪಾವ್ಲ್ಯು ಚೆಂಕೋವಾ 3-6, 6-4, 6-4ರಿಂದ ಜಪಾನ್ ಆಟಗಾರ್ತಿಯನ್ನು ಮಣಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಪ್ರಸ್ತುತ 51ನೇ ರ‍್ಯಾಂಕ್‌ನಲ್ಲಿರುವ ಒಸಾಕಾ 2021ರಲ್ಲಿ ಆಸ್ಟ್ರೇಲಿಯನ್ ಓಪನ್ ಗೆದ್ದ ನಂತರ ಯಾವುದೇ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಸಾಕಾ ನಾಲ್ಕನೇ ಸುತ್ತನ್ನು ತಲುಪಿಲ್ಲ.

ಸಿನ್ನರ್‌ಗೆ ಗೆಲುವು: ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಮೂರನೇ ಸುತ್ತು ಪ್ರವೇಶಿಸಿದರು. ಇಟಲಿಯ 23 ವರ್ಷ ವಯಸ್ಸಿನ ಸಿನ್ನರ್ 6-1, 6-1, 6-3ರ ನೇರ ಸೆಟ್‌ಗಳಿಂದ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಕ್ ಅವರನ್ನು ಹಿಮ್ಮೆಟ್ಟಿಸಿದರು.

ಸೊನ್ಮೆಜ್ ದಾಖಲೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಝೆಯ್ನೆಪ್ ಸೊನ್ಮೆಜ್ ಅವರು 7-5, 7-5ರ ಸೆಟ್‌ಗಳಿಂದ ಕ್ಸಿನ್ಯು ವಾಂಗ್ (ಚೀನಾ) ಅವರನ್ನು ಸೋಲಿಸಿದರು. ಈ ಮೂಲಕ ಟೆನಿಸ್‌ನ ಓಪನ್ ಯುಗದಲ್ಲಿ ಯಾವುದೇ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೂರನೇ ಸುತ್ತು ತಲುಪಿದ ಟರ್ಕಿಯ ಮೊದಲ ಸ್ಪರ್ಧಿ ಎಂಬ ಹಿರಿಮೆಗೆ ಪಾತ್ರವಾದರು.



ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಆಟದ ವೈಖರಿ ಎಎಫ್‌ಪಿ ಚಿತ್ರ

ಸ್ನೂಕರ್: ಕ್ವಾರ್ಟರ್ ಫೈನಲ್‌ಗೆ ಪಂಕಜ್ ಅಡ್ವಾಣಿ

ಮಾರಿಷಸ್ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಶುಕ್ರವಾರ ಇಲ್ಲಿ ನಡೆದ ಕಾಮನ್‌ವೆಲ್ತ್ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನ 6-ರೆಡ್ ಸ್ನೂಕರ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು.

ಹಲವು ಬಾರಿಯ ವಿಶ್ವ ಚಾಂಪಿಯನ್ ಅಡ್ವಾಣಿ ಪುರುಷರ ವಿಭಾಗದ ಸ್ಪರ್ಧೆಯಲ್ಲಿ 3-1ರಿಂದ ಆಸ್ಟ್ರೇಲಿಯಾದ ಕ್ಸೇವಿಯರ್ ಡಾವ್ ಅವರನ್ನು ಸೋಲಿಸಿದರು. ಭಾರತದ ಮತ್ತೊಬ್ಬ ಸ್ಪರ್ಧಿ ಬ್ರಿಜೇಶ್ ದಮಾನಿ 1-3ರಿಂದ ಸೈಪ್ರಸ್‌ನ ಮೈಕೆಲ್ ಜಾರ್ಜಿಯೊ ವಿರುದ್ಧ ಸೋತರು.

ಮಹಿಳಾ ವಿಭಾಗದಲ್ಲಿ ಕೀರ್ತನಾ ಪಾಂಡಿಯನ್ ಮತ್ತು ಏಷ್ಯನ್ ಚಾಂಪಿಯನ್ ಅನುಪಮಾ ರಾಮಚಂದ್ರನ್ ಕ್ವಾರ್ಟರ್ ಫೈನಲ್ ತಲುಪಿದರು. ಕೀರ್ತನಾ 2-1ರಿಂದ ಸ್ವಾಜಿಲ್ಯಾಂಡ್‌ನ ಸಿಂಫಿವೆ ಡ್ಲಾಮಿನಿ ವಿರುದ್ಧ; ಅನುಪಮಾ 2-1ರಿಂದ ಆಸ್ಟ್ರೇಲಿಯಾದ ಲಿಲ್ಲಿ ಮೆಲ್ಡ್ರಮ್ ವಿರುದ್ಧ ಗೆಲುವು ಸಾಧಿಸಿದರು.

ಡುರಾಂಡ್ ಕಪ್‌ಗೆ 24 ತಂಡಗಳು

ನವದೆಹಲಿ (ಪಿಟಿಐ): ಇದೇ 23ರಂದು ಆರಂಭವಾಗಲಿರುವ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ 134ನೇ ಆವೃತ್ತಿಯಲ್ಲಿ 24 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಟ್ರೋಫಿ ಅನಾವರಣ ಮಾಡಿದರು. ಭಾರತೀಯ ಸೇನೆಯು ಈ ಟೂರ್ನಿಯನ್ನು ಆಯೋಜಿಸುತ್ತಿದೆ.

24 ತಂಡಗಳನ್ನು 6 ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪಶ್ಚಿಮ ಬಂಗಾಳ, ಜಾರ್ಖಂಡ್, ಮಣಿಪುರ, ಮೇಘಾಲಯ ಹಾಗೂ ಅಸ್ಸಾಂನಲ್ಲಿ ಪಂದ್ಯಗಳು ನಡೆಯಲಿವೆ.

ಕೆನಡಾ ಓಪನ್: ಶ್ರೀಯಾಂಶಿ ಯಶಸ್ಸಿನ ಓಟ ಅಂತ್ಯ

ಕ್ಯಾಲ್ಗರಿ (ಪಿಟಿಐ): ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶ್ರೀಯಾಂಶಿ ವಲಿಶೆಟ್ಟಿ ಅವರ ಸ್ಫೂರ್ತಿಯುತ ಓಟ ಅಂತ್ಯಗೊಂಡಿತು. ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಅಮೇಲಿ ಶುಲ್ಝ್ ಅವರಿಗೆ ಮಣಿದರು.

ವಿಶ್ವ ಕ್ರಮಾಂಕದಲ್ಲಿ 75ನೇ ಸ್ಥಾನದಲ್ಲಿರುವ ವಲಿಶೆಟ್ಟಿ 21-12, 19-21, 19-21ರಲ್ಲಿ 69ನೇ ಕ್ರಮಾಂಕದ ಅಮೇಲಿ ಅವರಿಗೆ ಮಣಿದರು.

ವಲಿಶೆಟ್ಟಿ ಅವರು ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ 45ನೇ ಕ್ರಮಾಂಕದ ಲೆಟ್ಶಾನಾ ಕರುಪಥೆವನ್ ಅವರನ್ನು ಬರೇ 35 ನಿಮಿಷಗಳಲ್ಲಿ 21-15, 21-14 ರಿಂದ ಸೋಲಿಸಿ ಎಂಟರ ಘಟ್ಟ ತಲುಪಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಎಸ್.ಶಂಕರ್ ಮುತ್ತುಸ್ವಾಮಿ 21-19, 21-14 ರಿಂದ ತೈಪೆಯ ಹುವಾಂಗ್ ಯು ಕೈ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ಮಳೆಗಾಲದಲ್ಲಿ ಮಧುಮೇಹ ನಿರ್ವಹಣೆ ಹೇಗೆ? 2




ಆಷಾಢ
ಸೂಪರ್
ಸೇಲ್
UPTO 30 % OFF
ರೇಷ್ಮೆ ಸೀರೆಗಳು, ಫ್ಯಾನ್ಸಿ ಸೀರೆಗಳು, ರೆಡಿಮೇಡ್ಸ್ ಮತ್ತು ಡ್ರೆಸ್ ಮೆಟೀರಿಯಲ್ಸ್‌ನ ಮೇಲೆ
UPTO 20 % OFF
ಮೆನ್ಸ್‌ವೇರ್ ಮತ್ತು ಕಿಡ್ಸ್‌ವೇರ್‌ಗಳ ಮೇಲೆ
T&C Apply
SCAN AND VISIT OUR WEBSITE FOR STORE LOCATIONS.
ಕಮ್ಮನಹಳ್ಳಿ : 091089 36060, ಮಾರತ್‌ಹಳ್ಳಿ : 091489 46060
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್ಸ್‌ನಲ್ಲಿ ಮಾತ್ರ
kalamandir Kalamandirfashions
ಕಳಾಮಂದಿರ್®
Symbol Of South


ಕಾಂಚೀಪುರಂ
ವರಮಹಾಲಕ್ಷ್ಮೀ® ಸಿಲ್ಕ್ಸ್
ವಿಸ್ತಾರ
ಶ್ರೇಣಿಯ ರೇಷ್ಮೆ ಸೀರೆಗಳು
ಒಂದೇ ಸೂರಿನಡಿ
ಮಾರ್ಕೆಟ್‌ನಲ್ಲಿಯೇ
ಅತಿ ಕಡಿಮೆ ಬೆಲೆಯ
ಗ್ಯಾರಂಟಿ
KANCHEEPURAM ORIGINAL BRAND
WE PROMISE PQR PRICE • QUALITY • RANGE
ಕಾಂಚೀಪುರಂ ರೇಷ್ಮೆ ಸೀರೆ । ಆರಣಿ । ಬನಾರಸ್ । ಪೈಥಾನಿ । ಪಟೋಲ । ಇಕ್ಕತ್ । ಬಾಂದನಿ । ಸಾಫ್ಟ್ ಸಿಲ್ಕ್ । ಡಿಸೈನರ್ ಫ್ಯಾನ್ಸಿ ಸೀರೆಗಳು । ಕಾಟನ್
ಕುಪ್ಪಡಂ । ಗದ್ವಾಲ್ । ಖಾದಿ । ಕಲಂಕಾರಿ । ಟಸ್ಸಾರ್ । ಕೋರ । ಚಂದೇರಿ । ಲೆನಿನ್ । ಪಾವಾಡಗಳು । ಡಿಸೈನರ್ ಧೋತಿಗಳು
ಜಯನಗರ
ಬಸ್ ಸ್ಟಾಪ್ ಎದುರು, 46ನೇ ಕ್ರಾಸ್ 5ನೇ ಬ್ಲಾಕ್
ಫೋನ್: 91089 16060
ಮಲ್ಲೇಶ್ವರಂ
8ನೇ ಕ್ರಾಸ್, ಎಸ್.ಬಿ.ಐ. ಬ್ಯಾಂಕ್ ಬಿಲ್ಡಿಂಗ್, ಮಾರ್ಗೋಸ ರೋಡ್
ಫೋನ್: 080 41481117
ಹೊಸೂರು
'ಆಹಾ' ರೆಸ್ಟೋರೆಂಟ್ ಹತ್ತಿರ, ಬೆಂಗಳೂರು ಹೈವೇ
ಫೋನ್: 043 44612226
ತುಮಕೂರು
ಫೀಲ್ಡ್ ಮಾರ್ಷಲ್ ಕಾರಿಯಪ್ಪ ರಸ್ತೆ (ಕೆ.ಆರ್. ಎಕ್ಸ್ಟೆನ್ಷನ್)
ಫೋನ್: 0816 4055 810
ದಾವಣಗೆರೆ
ಡೆಂಟಲ್ ಕಾಲೇಜ್ ರಸ್ತೆಯಲ್ಲಿ ಬಾಪೂಜಿ ಆಸ್ಪತ್ರೆ ಹತ್ತಿರ
ಫೋನ್: 08192 455255
Scan Qr Code and Visit Website www.kanchivml.com
Follow Us on: /kanchivmlsilks
ಪ್ರಮುಖ ಮಳಿಗೆ: #16 ಗಾಂಧಿ ರೋಡ್, ಕಾಂಚೀಪುರಂ | ಕರ್ನಾಟಕ । ಆಂಧ್ರ ಪ್ರದೇಶ । ತೆಲಂಗಾಣ । ತಮಿಳುನಾಡು

‘ಕೂಲಿ’ಯಲ್ಲಿ ಹೀಗಿದ್ದಾರೆ ಅಮೀರ್ ಖಾನ್
ರಜನಿಕಾಂತ್ ನಟನೆಯ, ಲೋಕೇಶ್ ಕನಗರಾಜ್ ನಿರ್ದೇಶನದ ‘ಕೂಲಿ’ ಸಿನಿಮಾದಲ್ಲಿ ಬಾಲಿವುಡ್ ನಟ ಅಮೀರ್ ಖಾನ್ ನಟಿಸುತ್ತಿದ್ದು, ಅವರ ಪಾತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಆಗಸ್ಟ್ 14ಕ್ಕೆ ಸಿನಿಮಾ ತೆರೆಕಾಣುತ್ತಿದೆ.



ರಾವಣ ಯಶ್‌ಗೆ ಮೆಚ್ಚುಗೆ

ನಿತೀಶ್ ತಿವಾರಿ ನಿರ್ದೇಶನದ ‘ರಾಮಾಯಣ’ ಬಹುಭಾಷಾ ಚಿತ್ರದ ಸಣ್ಣ ಟೀಸರ್ ಸದ್ದು ಮಾಡುತ್ತಿದೆ. ಅದರಲ್ಲಿ ಕನ್ನಡದ ನಟ ಯಶ್ ಅವರು ರಾವಣನ ಪಾತ್ರದಲ್ಲಿ ಅಭಿನಯಿಸುತ್ತಿದ್ದು, ಅವರ ಗೆಟಪ್ ಕುರಿತು ಮೆಚ್ಚುಗೆ ಹರಿದಾಡತೊಡಗಿದೆ.


ರಣಬೀರ್ ಕಪೂರ್ ರಾಮನ ಪಾತ್ರಧಾರಿಯಾಗಿದ್ದು, ಸೀತಾ ಪಾತ್ರದಲ್ಲಿ ಸಾಯಿ ಪಲ್ಲವಿ ಅಭಿನಯಿಸುತ್ತಿದ್ದಾರೆ. ಹನುಮನಾಗಿ ಸನ್ನಿ ಡಿಯೋಲ್ ಬಣ್ಣ ಹಚ್ಚಿದ್ದಾರೆ. ಅದ್ದೂರಿ ವಿಎಫ್‌ಎಕ್ಸ್ ಬಳಸಿ ತಯಾರಾಗುತ್ತಿರುವ ದೊಡ್ಡ ಬಜೆಟ್‌ನ ಈ ಸಿನಿಮಾ, ರಾಮಾಯಣದ ಕಥನವನ್ನು ಹೊಸ ತಲೆಮಾರಿಗೆ ದೃಶ್ಯ ವೈಭವದ ಮೂಲಕ ಕಟ್ಟಿಕೊಡಲು ಸಜ್ಜಾಗಿದೆ.

ನಿರ್ಮಾಪಕ ನಮಿತ್ ಮಲ್ಹೋತ್ರಾ ಈ ಯೋಜನೆಯನ್ನು ಮಹತ್ವಾಕಾಂಕ್ಷಿಯನ್ನಾಗಿಸಿಕೊಂಡಿದ್ದಾರೆ. ಒಂಬತ್ತು ನಗರಗಳಲ್ಲಿ ಅಭಿಮಾನಿಗಳಿಗೆ ಮೊದಲ ಟೀಸರ್ ತೋರಿಸಲು ದೊಡ್ಡ ಪರದೆಗಳನ್ನು ಅವರು ಹಾಕಿಸಿದ್ದರು. ನ್ಯೂಯಾರ್ಕ್ ನಗರದ ಟೈಮ್ಸ್ ಸ್ಕ್ವೇರ್‌ನಲ್ಲೂ ಅಂತಹ ಪರದೆ ಇದ್ದುದು ಈ ಸಿನಿಮಾ ಜಾಗತಿಕ ಮಾರುಕಟ್ಟೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿದೆ ಎನ್ನುವುದಕ್ಕೆ ನಿದರ್ಶನ.

ಚಿತ್ರದ ಸಹನಿರ್ಮಾಪಕರಲ್ಲೂ ಒಬ್ಬರಾಗಿರುವ ಯಶ್ ‘ಟಾಕ್ಸಿಕ್’ ಜೊತೆಜೊತೆಗೇ ಈ ಯೋಜನೆಯ ಕುರಿತು ಕನಸುಗಳನ್ನು ಇಟ್ಟುಕೊಂಡಿದ್ದಾರೆ.

ಮೊದಲ ಟೀಸರ್ ನೋಡಿದ ಅನೇಕರು ಸಿನಿಮಾದ ವಿಎಫ್‌ಎಕ್ಸ್ ಗುಣಮಟ್ಟವನ್ನು ಶ್ಲಾಘಿಸಿದ್ದಾರೆ. ಡಿಎನ್‌ಇಜಿ ಹಾಗೂ ರೆಡಿಫೈನ್ ಸಂಸ್ಥೆಯು ಚಿತ್ರಕ್ಕೆ ವಿಎಫ್‌ಎಕ್ಸ್ ಪರಿಣಾಮ ದಕ್ಕಿಸಿಕೊಡುವ ಕೆಲಸ ಮಾಡುತ್ತಿವೆ. 2026ರ ದೀಪಾವಳಿಗೆ ಸಿನಿಮಾದ ಮೊದಲ ಭಾಗ ಹಾಗೂ 2027ರ ದೀಪಾವಳಿಯಂದು ಎರಡನೇ ಭಾಗ ವಿಶ್ವದಾದ್ಯಂತ ತೆರೆ ಕಾಣಲಿದೆ.

ತಾರಾಗಣ: ಭಾರತದ ಅತಿದೊಡ್ಡ ತಾರಾಗಣವನ್ನು ಒಟ್ಟುಗೂಡಿಸಿರುವ ಅದ್ಭುತ ಪಾತ್ರವರ್ಗವನ್ನು ಒಳಗೊಂಡಿದೆ ಈ ಸಿನಿಮಾ. ರಾಮನ ಸಹೋದರ ಲಕ್ಷ್ಮಣನಾಗಿ ರವಿ ದುಬೆ ನಟಿಸಲಿದ್ದಾರೆ. ಪ್ರಭಾವಿ ತಾರಾಗಣದ ಜತೆ ಆಸ್ಕರ್ ಪ್ರಶಸ್ತಿ ವಿಜೇತ ಹ್ಯಾನ್ಸ್ ಜಿಮ್ಮರ್ ಮತ್ತು ಎ.ಆರ್. ರೆಹಮಾನ್ ಸಂಗೀತ ನೀಡಿರುವುದು ಇನ್ನೊಂದು ವಿಶೇಷ. ಹಾಲಿವುಡ್‌ನ ‘ಮ್ಯಾಡ್ ಮ್ಯಾಕ್ಸ್’, ‘ದಿ ಸೂಸೈಡ್ ಸ್ಕ್ವಾಡ್’ ಸಿನಿಮಾಗಳಿಗೆ ಸ್ಟಂಟ್ ಡೈರೆಕ್ಷನ್ ಮಾಡಿರುವ ಗೈ ನೋರಿಸ್ ಹಾಗೂ ‘ಅವೆಂಜರ್ಸ್’, ‘ಪ್ಲ್ಯಾನೆಟ್ ಆಫ್ ದಿ ಏಪ್ಸ್’ ಸಾಹಸ ನಿರ್ದೇಶಕ ಟೆರ್ರಿ ನೋಟರಿ ‘ರಾಮಾಯಣ’ದ ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡುತ್ತಿದ್ದಾರೆ.


ರಾವಣ ಸಿನಿಮಾದ ಪೋಸ್ಟರ್



ರೆಟ್ರೋ ಲುಕ್‌ನಲಿ ‘ಡಾಲಿ’ ಮಿಂಚು

‘ಹೆಡ್‌ಬುಷ್’ ಸಿನಿಮಾದಲ್ಲಿ ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಂಡಿದ್ದ ನಟ ಡಾಲಿ ಧನಂಜಯ ಮತ್ತೊಮ್ಮೆ ಅದೇ ಮಾದರಿಯ ಲುಕ್‌ನಲ್ಲಿ ಪ್ರೇಕ್ಷಕರೆದುರಿಗೆ ಬರಲು ಸಜ್ಜಾಗಿದ್ದಾರೆ.


‘ಕವಲುದಾರಿ’, ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಸಿನಿಮಾದಲ್ಲಿ ಧನಂಜಯ ಮತ್ತೆ ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬೆಲ್‌ಬಾಟಂ ಪ್ಯಾಂಟ್ ಹಾಕಿಕೊಂಡು ರೆಟ್ರೋ ಶೈಲಿಯ ದಿರಿಸಿನಲ್ಲಿ ಅವರು ಮಿಂಚಿದ್ದಾರೆ. ಚಿತ್ರದಲ್ಲಿ ನಟ ಶಿವರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿರಲಿದ್ದಾರೆ. ಸಿನಿಮಾವನ್ನು ವೈಶಾಖ್ ಜೆ. ಗೌಡ ಅವರ ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

ಚಿತ್ರದಲ್ಲಿನ ಧನಂಜಯ ಅವರ ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಹಿಂದೆಂದೂ ಕಾಣಿಸಿಕೊಳ್ಳದ ಪಾತ್ರವೊಂದನ್ನು ಅವರು ನಿಭಾಯಿಸಲಿದ್ದಾರೆ. ಎರಡು ಲುಕ್‌ಗಳನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು ಎರಡರಲ್ಲೂ ಭಿನ್ನ ಶೈಲಿ ಹಾಗೂ ನೋಟವನ್ನು ಧನಂಜಯ ಬೀರಿದ್ದಾರೆ. ಟಾಮಿ ಗನ್ ಹಿಡಿದು ಅವರು ನೀಡಿರುವ ಲುಕ್ ರಹಸ್ಯ ಏಜೆಂಟ್ ಮಾದರಿಯಲ್ಲಿದೆ. ಫಸ್ಟ್‌ಲುಕ್‌ನಲ್ಲಿ ಖ್ಯಾತ 999 ಸರಣಿಯ ಸಿನಿಮಾಗಳಲ್ಲಿನ ರಾಜ್‌ಕುಮಾರ್ ಅವರ ಚಿತ್ರವು ಹಿನ್ನೆಲೆಯಲ್ಲಿದೆ. ‘666 ಆಪರೇಷನ್ ಡ್ರೀಮ್ ಥಿಯೇಟರ್’ ಸಿನಿಮಾವು 70ರ ದಶಕದ ಶೈಲಿಯಲ್ಲಿರುವುದು ವಿಶಿಷ್ಟವಾಗಿದ್ದು ಶಿವರಾಜ್‌ಕುಮಾರ್ ಅವರ ಪಾತ್ರವೂ ಭಿನ್ನವಾಗಿದೆ ಎಂದು ಚಿತ್ರತಂಡ ತಿಳಿಸಿದೆ.

‘ನಿರ್ದೇಶಕನ ಉತ್ಸಾಹ ಮತ್ತು ಸೂಕ್ಷ್ಮವಾದ ದೃಷ್ಟಿಕೋನವನ್ನು ಓರ್ವ ನಟ ಕಂಡುಕೊಂಡಾಗ, ಆ ನಟ ಒಂದು ಮಗುವಿನಂತೆ ನಟನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಹೇಮಂತ್ ಹಾಗೂ ವೈಶಾಖ್ ಸಿನಿಮಾವನ್ನು ಉಸಿರಾಡುವ ಉತ್ಸಾಹಿಗಳು. ಚರಣ್ ರಾಜ್ ಮತ್ತು ಅದ್ವೈತ ಗುರುಮೂರ್ತಿ ಇರುವ ಒಂದು ತಂಡದೊಂದಿಗೆ ಕೆಲಸ ಮಾಡುತ್ತಿರುವುದಕ್ಕೆ ಸಂತೋಷವಿದೆ. ‘666 ಆಪರೇಷನ್ ಡ್ರೀಮ್ ಥಿಯೇಟರ್’ ಪ್ರೇಕ್ಷಕರನ್ನು ಆರಂಭದಿಂದಲೇ ಹಿಡಿದಿಟ್ಟುಕೊಳ್ಳುವ ಚಿತ್ರ. ಈ ಚಿತ್ರವು ವಿಭಿನ್ನ ಜಗತ್ತಿನಲ್ಲಿ ನಡೆಯುತ್ತದೆ ಮತ್ತು ನಾವು ಹಲವಾರು ಅಚ್ಚರಿಗಳನ್ನು ಸಿನಿಮಾದೊಳಗೆ ಜೋಡಿಸಿದ್ದೇವೆ’ ಎನ್ನುತ್ತಾರೆ ಧನಂಜಯ.

> ಜುಲೈನಲ್ಲಿ ಚಿತ್ರದ ಚಿತ್ರೀಕರಣ ಪ್ರಾರಂಭವಾಗುವ ನಿರೀಕ್ಷೆ

> ಕನ್ನಡ ಮತ್ತು ತೆಲುಗಿನಲ್ಲಿ ಏಕಕಾಲದಲ್ಲಿ ಬಿಡುಗಡೆ


ಧನಂಜಯ

ಆಗಸ್ಟ್ 1ಕ್ಕೆ ಪೃಥ್ವಿ ನಟನೆಯ ‘ಕೊತ್ತಲವಾಡಿ’ ರಿಲೀಸ್


ಪೃಥ್ವಿ, ಕಾವ್ಯಾ

ನಟ ಯಶ್ ತಾಯಿ ಪುಷ್ಪ ಅರುಣ್‌ಕುಮಾರ್ ಅವರು ತಮ್ಮದೇ ಪಿಎ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣ ಮಾಡಿರುವ ‘ಕೊತ್ತಲವಾಡಿ’ ಸಿನಿಮಾ ಆಗಸ್ಟ್ 1ರಂದು ರಿಲೀಸ್ ಆಗಲಿದೆ. ನಟ ರಾಜ್‌ಕುಮಾರ್ ಅವರ ಸಮಾಧಿಗೆ ಪೂಜೆ ಸಲ್ಲಿಸುವ ಮೂಲಕ ಚಿತ್ರತಂಡ ಪ್ರಚಾರಕ್ಕೆ ಚಾಲನೆ ನೀಡಿದೆ.

ಶ್ರೀರಾಜ್ ನಿರ್ದೇಶನ ಚೊಚ್ಚಲ ಚಿತ್ರದಲ್ಲಿ ಪೃಥ್ವಿ ಅಂಬಾರ್ ನಾಯಕನಾಗಿ ಹಾಗೂ ಕಿರುತೆರೆ ನಟಿ ಕಾವ್ಯಾ ಶೈವ ನಾಯಕಿಯಾಗಿ ನಟಿಸಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ತಾರಾಬಳಗದಲ್ಲಿದ್ದಾರೆ. ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ ‘ಕೊತ್ತಲವಾಡಿ’ಯಲ್ಲಿ ಕಂಪ್ಲೀಟ್ ಮಾಸ್ ಪಾತ್ರದಲ್ಲಿದ್ದಾರೆ. ಚಿತ್ರದ ಮೊದಲ ಹಾಡು ‘ಮುಂಗಾರು ಮಳೆಯೆಂಬ’ ಬಿಡುಗಡೆಯಾಗಿದೆ. ಈ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದು, ನಿಶಾನ್ ರೈ, ಸುನಿಧಿ ಗಣೇಶ್ ದನಿಯಾಗಿದ್ದಾರೆ. ವಿಕಾಸ್ ವಸಿಷ್ಠ ಸಂಗೀತ ನೀಡಿದ್ದಾರೆ.

ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ, ರಾಮಿಸೆಟ್ಟಿ ಪವನ್ ಸಂಕಲನ, ರಘು ನಿಡುವಳ್ಳಿ ಸಂಭಾಷಣೆ, ವಿ. ನಾಗೇಂದ್ರ ಪ್ರಸಾದ್, ಕಿನ್ನಾಳ್ ರಾಜ್, ಪ್ರಮೋದ್ ಮರವಂತೆ, ಗೌಸ್‌ಪೀರ್ ಸಾಹಿತ್ಯ ಚಿತ್ರದ ಹಾಡುಗಳಿಗಿವೆ.


ಮಿತ್ರ

‘ಮಹಾನ್’ನಲ್ಲಿ ಮಿತ್ರ

ಭಿನ್ನವಾದ ಪಾತ್ರಗಳ ಮೂಲಕ ಇತ್ತೀಚೆಗೆ ಸದ್ದು ಮಾಡುತ್ತಿರುವ ನಟ ಮಿತ್ರ, ವಿಜಯ ರಾಘವೇಂದ್ರ ನಟನೆಯ ‘ಮಹಾನ್’ ಚಿತ್ರದಲ್ಲೂ ಬಣ್ಣ ಹಚ್ಚಿದ್ದಾರೆ.

ಪಿ.ಸಿ.ಶೇಖರ್ ನಿರ್ದೇಶನದ, ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ನಾಯಕನ ಪಾತ್ರದಲ್ಲಿದ್ದಾರೆ.

‘ಪಿ.ಸಿ.ಶೇಖರ್ ಅವರ ಜೊತೆ ‘ರಾಗ’ ಸಿನಿಮಾ ಬಳಿಕ ನಾನು ಮಾಡುತ್ತಿರುವ ಎರಡನೇ ಪ್ರಾಜೆಕ್ಟ್ ಇದಾಗಿದೆ. ‘ರಾಗ’ ಚಿತ್ರದ ನನ್ನ ಪಾತ್ರಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿತ್ತು. ‘ಮಹಾನ್’ ಚಿತ್ರದಲ್ಲೂ ಪ್ರಮುಖ ಪಾತ್ರದಲ್ಲಿದ್ದೇನೆ. ಸಾಮಾಜಿಕ ಕಳಕಳಿಯುಳ್ಳ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ಅವರಿಗೆ ಹೇಳಿ ಮಾಡಿಸಿದ ಪಾತ್ರವಿದೆ. ನನ್ನ ಪಾತ್ರ ಕೂಡ ನಾಯಕನ ಪಾತ್ರದ ಜೊತೆಗೆ ಸಾಗುತ್ತದೆ. ನಮ್ಮಿಬ್ಬರ ಕಾಂಬಿನೇಶನ್ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ’ ಎನ್ನುತ್ತಾರೆ ಮಿತ್ರ.

‘ರಾಗ ಬಳಿಕ ನನ್ನ ನಿರ್ದೇಶನದ ಚಿತ್ರಗಳಲ್ಲಿ ಮಿತ್ರ ಅವರು ನಟಿಸಿಲ್ಲ. ಏಕೆಂದರೆ, ಮಿತ್ರ ಸಣ್ಣಪುಟ್ಟ ಪಾತ್ರದಲ್ಲಿ ನನ್ನ ನಿರ್ದೇಶನದ ಚಿತ್ರದಲ್ಲಿ ಅಭಿನಯಿಸುವುದು ನನಗೆ ಇಷ್ಟವಿಲ್ಲ. ‘ರಾಗ’ ಚಿತ್ರದ ಅಭಿನಯಕ್ಕಾಗಿ ಅವರಿಗೆ ರಾಜ್ಯ ಪ್ರಶಸ್ತಿ ಬಂದಿತ್ತು. ‘ಮಹಾನ್’ ಚಿತ್ರದಲ್ಲೂ ಎಲ್ಲರ ನೆನಪಿನಲ್ಲುಳಿಯುವಂಥ ಪಾತ್ರ ಅವರಿಗಿದೆ. ಚಿತ್ರಕಥೆ ಬರೆಯುವಾಗಲೇ ಈ ಪಾತ್ರಕ್ಕೆ ಮಿತ್ರ ಅವರೇ ಸೂಕ್ತ ಎನಿಸಿತ್ತು. ಕುರುಕ್ಷೇತ್ರದಲ್ಲಿ ಅರ್ಜುನನ ಜೊತೆಗೆ ಶ್ರೀಕೃಷ್ಣ ಸದಾ ಇರುತ್ತಾನೆ. ಆ ಸ್ಫೂರ್ತಿಯಿಂದಲೇ ಈ ಎರಡು ಪಾತ್ರಗಳನ್ನು ಹೆಣೆಯಲಾಗಿದೆ’ ಎಂದಿದ್ದಾರೆ ಪಿ.ಸಿ. ಶೇಖರ್.

ಕೊನೆಯ ಹಂತದಲ್ಲಿ ‘ದಿಲ್‌ದಾರ್’

ಶ್ರೇಯಸ್ ಮಂಜು ನಾಯಕನಾಗಿ ನಟಿಸುತ್ತಿರುವ ‘ದಿಲ್‌ದಾರ್’ ಚಿತ್ರದ ಕೊನೆಯ ಹಂತದ ಚಿತ್ರೀಕರಣ ನಡೆಯುತ್ತಿದೆ. ಮಧು ಗೌಡ ನಿರ್ದೇಶನದ ಚಿತ್ರವಿದು.

‘ತಂದೆ ಕೆ.ಮಂಜು ನಿರ್ಮಾಣದಲ್ಲಿ, ಎಸ್.ನಾರಾಯಣ್ ನಿರ್ದೇಶಿಸಿರುವ ‘ಮಾರುತ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಇದರಲ್ಲಿ ದುನಿಯಾ ವಿಜಯ್ ಜತೆ ನಟಿಸಿದ್ದೇನೆ. ‘ದಿಲ್‌ದಾರ್’ ಹಾಡಿನ ಚಿತ್ರೀಕರಣ ನಡೆಯುತ್ತಿದೆ. ಇದಾದ ಮೇಲೆ ನನ್ನ ಡ್ರೀಮ್ ಪ್ರಾಜೆಕ್ಟ್ ಪ್ರಾರಂಭಿಸಬೇಕಿದೆ’ ಎಂದರು ಶ್ರೇಯಸ್.

ಕಾಲೇಜಿನಲ್ಲಿ ನಡೆಯುವ ಪ್ರೀತಿ, ಪ್ರೇಮದ ಕಥೆ ಹೊಂದಿರುವ ಈ ಚಿತ್ರದಲ್ಲಿ ಸೌರವ್ ಲೋಕೇಶ್ ಖಳನಾಯಕನಾಗಿ ನಟಿಸುತ್ತಿದ್ದಾರೆ. ಇತ್ತೀಚೆಗಷ್ಟೇ ಅವರ ಪಾತ್ರವನ್ನು ಪರಿಚಯಿಸುವ ಟೀಸರ್ ಅನ್ನು ಚಿತ್ರತಂಡ ಬಿಡುಗಡೆಗೊಳಿಸಿತ್ತು. ಪ್ರಿಯಾಂಕಾ ಕುಮಾರ್ ಚಿತ್ರದ ನಾಯಕಿ. ಅರ್ಜುನ್ ಜನ್ಯ ಸಂಗೀತ, ಗಗನ್ ಗೌಡ ಛಾಯಾಚಿತ್ರಗ್ರಹಣವಿದೆ.

‘ಈ ಚಿತ್ರ ಹಳೆಯ ಕಮಿಟ್‌ಮೆಂಟ್. ಚಿತ್ರ ತಡವಾಗಿದೆ. ಸದ್ಯ ನಾನು ಹಾಗೂ ನಮ್ಮ ತಂಡ ಮತ್ತೊಂದು ಆ್ಯಕ್ಷನ್, ಲವ್ ಸ್ಟೋರಿ ಮೇಲೆ ಕೆಲಸ ಮಾಡುತ್ತಿದ್ದೇವೆ. ಆ ಚಿತ್ರವನ್ನು ವಿದೇಶಗಳಲ್ಲಿ ಚಿತ್ರೀಕರಿಸಲು ಆಲೋಚಿಸಿದ್ದೇವೆ. ಎರಡು ಭಾಷೆಗಳಲ್ಲಿ ನಿರ್ಮಾಣಗೊಳ್ಳಲಿದೆ’ ಎಂದು ಶ್ರೇಯಸ್ ತಿಳಿಸಿದ್ದಾರೆ.


ಶ್ರೇಯಸ್ ಮಂಜು

ದೀಪಿಕಾಗೆ ಹಾಲಿವುಡ್ ‘ಸ್ಟಾರ್’ ಗೌರವ



‘ಹಾಲಿವುಡ್ ವಾಕ್ ಆಫ್ ಫೇಮ್’ನಲ್ಲಿ ದೀಪಿಕಾ ಪಡುಕೋಣೆ ಅವರಿಗೆ ‘ಸ್ಟಾರ್’ ಗೌರವ ದಕ್ಕಲಿದೆ. ವಿಶ್ವದಲ್ಲಿ ಛಾಪು ಮೂಡಿಸಿರುವ 35 ಜನಪ್ರಿಯ ತಾರೆಗಳಿಗೆ ಇಂತಹ ಗೌರವ ಸಲ್ಲಲಿದೆ. ‘ಹಾಲಿವುಡ್ ವಾಕ್ ಆಫ್ ಫೇಮ್ ಕ್ಲ್ಯಾಸ್ ಆಫ್ 2026’ ಮೋಷನ್ ಪಿಕ್ಚರ್ಸ್ ವಿಭಾಗಕ್ಕೆ ದೀಪಿಕಾ ಅವರ ಹೆಸರು ಕೂಡ ಆಯ್ಕೆಯಾಗಿದೆ. ಡೆಮಿ ಮೋರ್, ರಚೆಲ್ ಮೆಕ್‌ಆ್ಯಡಮ್ಸ್, ಎಮಿಲಿ ಬ್ಲಂಟ್ ಅವರಂತಹ ಘಟಾನುಘಟಿಗಳ ಜೊತೆಯಲ್ಲಿ ದೀಪಿಕಾ ಲಾಸ್‌ಏಂಜಲೀಸ್‌ನಲ್ಲಿ ಹೆಜ್ಜೆ ಹಾಕಲಿದ್ದಾರೆ.

ಇಂತಹ ಗೌರವ ಸಂದಿರುವ ಬಾಲಿವುಡ್‌ನ ಮೊದಲ ನಟಿ ದೀಪಿಕಾ. ಒಂದೂವರೆ ದಶಕದಿಂದ ಚಲನಚಿತ್ರಗಳಲ್ಲಿ ನಟಿಸುತ್ತಾ ಬಂದಿರುವ ಬೆಂಗಳೂರಿನ ಈ ನಟಿ, ಜನಪ್ರಿಯರಾದ ನಂತರವೂ ಪ್ರಯೋಗಶೀಲತೆಯನ್ನು ಉಳಿಸಿಕೊಂಡವರು. ಮಗುವಿಗೆ ತಾಯಿಯಾದ ನಂತರ ಅವರು ದಿನಕ್ಕೆ ಆರು ಗಂಟೆಯಷ್ಟೇ ಕೆಲಸ ಮಾಡುವಂತಹ ಯೋಜನೆಗಳನ್ನು ಒಪ್ಪಿಕೊಳ್ಳತೊಡಗಿದ್ದೂ ಸುದ್ದಿಯಾಗಿತ್ತು.

ಪ್ರಿಯಾಂಕಾ ‘ಬಾಂಬೆ’ ಪ್ರೀತಿ

ಬದುಕಿನಲ್ಲಿ ಸಿನಿಮಾ ಎಂದೊಡನೆ ಮೊದಲು ನೆನಪಾಗುವುದು ಯಾವುದು ಎನ್ನುವ ಪ್ರಶ್ನೆ ಅನೇಕರಿಗೆ ಎದುರಾಗುತ್ತಾ ಇರುತ್ತದೆ. ನಟಿ ಪ್ರಿಯಾಂಕಾ ಚೋಪ್ರಾ ಅವರಿಗೂ ಇಂಥದ್ದೊಂದು ಪ್ರಶ್ನೆ ಇತ್ತೀಚೆಗೆ ಎದುರಾಯಿತು. ಅದಕ್ಕೆ ಅವರು ಕೊಟ್ಟ ಉತ್ತರ ವಿವರವಾಗಿತ್ತು.

2000ನೇ ಇಸವಿಯಲ್ಲಿ ಮಿಸ್ ವರ್ಲ್ಡ್ ಕಿರೀಟ ಧರಿಸಿದ ಪ್ರಿಯಾಂಕಾ ಚೋಪ್ರಾ ನಟಿಯಾಗಿಯೂ ಚಿತ್ರರಂಗದಲ್ಲಿ ಛಾಪು ಮೂಡಿಸಿದವರು. ಈಗ ‘ಹೆಡ್ಸ್ ಆಫ್ ಸ್ಟೇಟ್’ ಸಿನಿಮಾ ಪ್ರಚಾರದಲ್ಲಿ ಅವರು ತೊಡಗಿದ್ದಾರೆ. ಸಂಗೀತವನ್ನೇ ಹೆಚ್ಚಾಗಿ ಕೇಳುತ್ತಿದ್ದ ಕುಟುಂಬ ಅವರದ್ದು. ಹೀಗಾಗಿ, ಬಾಲಿವುಡ್ ಸಿನಿಮಾ ಹಾಡುಗಳನ್ನು ಕೇಳಿ ಕೇಳಿ ಅವರು ಗುನುಗುತ್ತಿದ್ದರಾದರೂ, ಸಿನಿಮಾ ನೋಡಿದ್ದು ಕಡಿಮೆಯೇ. ಅವರನ್ನು ಈಗಲೂ ಕಾಡುವ ಚಿತ್ರವೆಂದರೆ ಮಣಿರತ್ನಂ ನಿರ್ದೇಶನದ ‘ಬಾಂಬೆ’.

‘ನನಗೆ ಆಗಿನ್ನೂ ಹನ್ನೆರಡು ವರ್ಷ ವಯಸ್ಸಿರಬಹುದು, ಚಿತ್ರಮಂದಿರದಲ್ಲಿ ಬಾಂಬೆ ಸಿನಿಮಾ ನೋಡಿದೆ. ನಾನು ಊಹಿಸಲೂ ಸಾಧ್ಯವಿಲ್ಲದ ಸೂಕ್ಷ್ಮ ಜಗತ್ತಿನ ಅನಾವರಣ ಆ ಸಿನಿಮಾ ನೋಡಿದಾಗ ಆಗಿತ್ತು. ಸಿನಿಮಾ ಎಂಥ ಮ್ಯಾಜಿಕ್ ಎಂಬುದು ಗೊತ್ತಾದದ್ದೇ ಆಗ. ಆ ಚಿತ್ರವನ್ನು ಆನಂತರವೂ ಅನೇಕ ಸಲ ನೋಡಿದ್ದೇನೆ. ಹಾಗೆ ನೋಡಿದಾಗಲೆಲ್ಲ ನಾನು ಮೊದಲ ಬಾರಿಗೆ ನೋಡಿದಾಗ ಉಂಟಾಗಿದ್ದ ರೋಮಾಂಚನ ನೆನಪಿಗೆ ಬರುತ್ತದೆ’ ಎಂದು ಪ್ರಿಯಾಂಕಾ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.


ಪ್ರಿಯಾಂಕ

‘ತಾಯವ್ವ’ನಿಗೆ ಗಣ್ಯರ ಮೆಚ್ಚುಗೆ


ಚಿತ್ರತಂಡದೊಂದಿಗೆ ಲಹರಿ ವೇಲು, ಕೆ.ಕಲ್ಯಾಣ್

ಸೂಲಗಿತ್ತಿಯೊಬ್ಬಳ ಬದುಕಿನ ಕಥೆಯನ್ನು ಹೊಂದಿರುವ ‘ತಾಯವ್ವ’ ಕೆಲ ದಿನಗಳ ಹಿಂದೆ ತೆರೆಕಂಡಿತ್ತು. ಇದರ ಬೆನ್ನಲೇ ಚಿತ್ರತಂಡ ಚಿತ್ರದ ಕುರಿತು ಗಣ್ಯರೊಂದಿಗೆ ಮಾತುಕತೆ ಹಮ್ಮಿಕೊಂಡಿತ್ತು. ನಟ ಸುರೇಶ್ ಹೆಬ್ಳೀಕರ್, ಸಂಗೀತ ನಿರ್ದೇಶಕ ಕೆ. ಕಲ್ಯಾಣ್, ಲಹರಿ ವೇಲು, ನಿರ್ದೇಶಕರಾದ ಯೋಗರಾಜ್ ಭಟ್, ಹರಿಪ್ರಸಾದ್ ಜಯಣ್ಣ, ನಿರ್ಮಾಪಕ ಸಿಲ್ಕ್ ಮಂಜು ಮುಂತಾದವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಚಿತ್ರದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಮರ ಫಿಲಂಸ್’ ಬ್ಯಾನರಿನಲ್ಲಿ ಗೀತಪ್ರಿಯಾ ನಿರ್ಮಿಸಿ, ಮುಖ್ಯಭೂಮಿಕೆಯಲ್ಲಿ ಅಭಿನಯಿಸಿರುವ ‘ತಾಯವ್ವ’ ಮಹಿಳಾ ಪ್ರಧಾನ ಕಥಾ ಹಂದರವನ್ನು ಹೊಂದಿದೆ. ‘ಸೂಲಗಿತ್ತಿಯೊಬ್ಬಳ ಬದುಕಿನ ಅನಾವರಣವನ್ನು ‘ತಾಯವ್ವ’ ಸಿನಿಮಾದ ಮೂಲಕ ಮಾಡಿದ್ದೇವೆ. ಸೂಲಗಿತ್ತಿ ನರಸಮ್ಮ ಅವರಂಥ ನಮ್ಮ ಗ್ರಾಮೀಣ ಭಾಗದ ಅನೇಕ ಸೂಲಗಿತ್ತಿಯರನ್ನು ಪ್ರೇರಣೆಯಾಗಿ ತೆಗೆದುಕೊಂಡು ಈ ಸಿನಿಮಾ ಮಾಡಿದ್ದೇವೆ. ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಸಂದೇಶ ಸಿನಿಮಾ ನೋಡಿದ ಪ್ರತಿಯೊಬ್ಬರ ಮನಮುಟ್ಟಿದೆ’ ಎಂದರು ಗೀತಪ್ರಿಯಾ.

ಸಾತ್ವಿಕ್ ಪವನ್ ಕುಮಾರ್ ನಿರ್ದೇಶನದ ಚಿತ್ರವಿದು. ಅನಂತ ಆರ್ಯನ್ ಸಂಗೀತ ನೀಡಿದ್ದಾರೆ.





ಎಲೆಗಳು ಕೋಸಾಗುವ ಕಾಲಕ್ಕೆ...

ವೈಮಾನಿಕ ಮತ್ತು ರಕ್ಷಣಾ ಪಾರ್ಕ್ ನಿರ್ಮಾಣಕ್ಕಾಗಿ ಚನ್ನರಾಯಪಟ್ಟಣ ಹೋಬಳಿಯಲ್ಲಿ 13 ಹಳ್ಳಿಗಳ ರೈತರು ಭೂಸ್ವಾಧೀನದ ಆತಂಕ ಎದುರಿಸುತ್ತಿದ್ದಾರೆ. ಆದರೆ ಪ್ರಕೃತಿಗೆ ಅದ್ಯಾವುದರ ಪರಿವೆ? ಹೋಬಳಿ ವ್ಯಾಪ್ತಿಯ ಪೋಲನಹಳ್ಳಿಯಲ್ಲಿ ಉದ್ದೇಶಿತ ಭೂಸ್ವಾಧೀನದ ವ್ಯಾಪ್ತಿಯಲ್ಲಿ ರೈತರು ಬೆಳೆದಿರುವ ಬೆಳೆ ನಳನಳಿಸುತ್ತಿದ್ದರೆ, ರೇಷ್ಮೆ ಹುಳುಗಳು ಗೂಡು ಕಟ್ಟಲು ಸಜ್ಜಾಗಿವೆ

ಚಿತ್ರಗಳು: ರಂಜು ಪಿ.







ನಾದದ ಅಲೆ ಆನಂದದ ಸೆಲೆ

ಮೃದಂಗ ಮಹಾಗುರು ಆನಂದ್ ಅವರ ಜೀವನವೇ ಸಂಗೀತದಂತೆ. ಲಯವಾದ್ಯ ನಿಪುಣರಾದ ಅವರು, ತಮ್ಮ ಬಾಳಿನುದ್ದಕ್ಕೂ ಸಂಗೀತ ಸಾಮರಸ್ಯ ಹರಡುತ್ತಾ, ನಾದದ ಅಲೆಯನ್ನು ಪಸರಿಸುತ್ತಾ ಬಂದಿದ್ದಾರೆ. ಅವನದ್ಧ ವಾದ್ಯದಲ್ಲಿ ಎಂಟು ದಶಕಗಳ ಕಾಲ ನಿರಂತರವಾಗಿ ತೊಡಗಿಸಿಕೊಂಡ ಮಹಾಗುರು ಅವರು.

• ಉಮಾ ಅನಂತ್

ಮೃದಂಗ ವಿದ್ವಾನ್ ಎ.ವಿ. ಆನಂದ್ ಅವರು 90ನೇ ವರ್ಷಕ್ಕೆ ಕಾಲಿಡುವ ಹೊಸ್ತಿಲಲ್ಲಿ ಹಾಗೂ ಅವರ 80 ವರ್ಷಗಳ ನಾದ ಪಯಣವನ್ನು ಗೌರವಿಸುವ ದಿಸೆಯಲ್ಲಿ ಬೆಂಗಳೂರಿನ ಲಯನಾದ ಸಂಸ್ಥೆಯು ರಾಜಧಾನಿಯಲ್ಲಿ ಈಚೆಗೆ ಸನ್ಮಾನ ಸಮಾರಂಭ ಏರ್ಪಡಿಸಿತ್ತು. ಈ ಮೂಲಕ ಒಬ್ಬ ನಾದತಪಸ್ವಿಗೆ ನಿಜವಾದ ಗೌರವ ಸಿಕ್ಕಿದಂತಾಯಿತು. ಅವನದ್ಧ ವಾದ್ಯದಲ್ಲಿ ಇಷ್ಟು ಸುದೀರ್ಘ ಸಂಗೀತ ಪಯಣ ನಡೆಸಿದ ಮೃದಂಗ ವಿದ್ವಾಂಸರು ಕರ್ನಾಟಕದಲ್ಲಿ ಬಹುಶಃ ಇವರೊಬ್ಬರೇ.

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಗಳಿಗೆ ಮೃದಂಗ ಪಕ್ಕವಾದ್ಯ ಇಲ್ಲದೇ ಹೋದರೆ ಆ ಕಛೇರಿಯೇ ಅಪೂರ್ಣ. ಮೃದಂಗದ ನಾದ ಕೇಳಲು ಬಹು ಸೊಗಸು. ಹೀಗಾಗಿಯೇ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ಸಂತ ತ್ಯಾಗರಾಜರು 'ಸೊಗಸುಗಾ ಮೃದಂಗ ತಾಳಮು...' ಎಂದು ಕೀರ್ತನೆಯೊಂದರಲ್ಲಿ ಸ್ಮರಿಸಿದ್ದಾರೆ. ಈ ಸಾಲನ್ನು ನಾವು ಕೊಂಚ ಮಾರ್ಪಾಡು ಮಾಡಿ, 'ಸಂಗೀತವು ಸೊಗಸಾದ ಅನುಭವ ನೀಡಬೇಕೆಂದರೆ ವಿದ್ವಾನ್ ಎ.ವಿ. ಆನಂದ್ ಅವರ ಮೃದಂಗ ಇರಬೇಕು' ಎನ್ನಬಹುದು. ಏಕೆಂದರೆ, ಮಹಾಗುರು ಆನಂದ್ ಅವರು ಮೃದಂಗ ವಾದನಕ್ಕೆ ಅನ್ವರ್ಥನಾಮವಾಗಿ ಸಂಗೀತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಇದೇ ಕಾರಣಕ್ಕೆ, ಸಂಗೀತ ದಿಗ್ಗಜರಾದ ಚೆಂಬೈ ವೈದ್ಯನಾಥ ಭಾಗವತರ್, ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂ, ಪಿಟೀಲು ಚೌಡಯ್ಯ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ವಿದುಷಿ ಡಿ.ಕೆ. ಪಟ್ಟಮ್ಮಾಳ್, ಬಾಲಮುರಳಿಕೃಷ್ಣ ಅವರಂತಹವರು ಆನಂದ್ ಅವರ ಮೃದಂಗ ಸಹಕಾರವನ್ನೇ ಬಯಸುತ್ತಿದ್ದುದು.


ಒಬ್ಬ ಕಲಾವಿದ ಎಂಟು ದಶಕಗಳ ಕಾಲ ಈ ವಾದನದಲ್ಲಿ ತೊಡಗಿಕೊಂಡು ಮೃದಂಗ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದು ಸಣ್ಣ ವಿಚಾರವೇನಲ್ಲ. ವಿದ್ವಾಂಸರೆಲ್ಲರ ಗಾಯನ, ವಾದನಕ್ಕೆ ಮೃದಂಗ ತನಿ ನೀಡುತ್ತಾ, ಕೇಳುಗರ ಚಪ್ಪಾಳೆಯ ಸುರಿಮಳೆಯನ್ನೇ ಗಳಿಸುತ್ತಿದ್ದುದು ಇವರ ಕೈಚಳಕಕ್ಕೆ ಸಾಕ್ಷಿ. ಇವರ ನುಡಿಸಾಣಿಕೆ ಬೆರಗು ಹುಟ್ಟಿಸುವಷ್ಟು ಅದ್ಭುತ. ತಾಳದ ಹಿಡಿತ, ಮನೋಧರ್ಮದ ಸೊಬಗು ಮೃದಂಗ ಕೇಳುಗರಿಗೆ ಎಂದಿಗೂ ಆಪ್ಯಾಯಮಾನ. ಹೀಗಾಗಿಯೇ ಆನಂದ್ 'ಲಯವಾದ್ಯ ನಿಪುಣ' ಎನಿಸಿಕೊಂಡು 'ಕರ್ನಾಟಕ ಕಲಾಶ್ರೀ' ಆಗಿರುವುದು.

1950ರ ದಶಕದಲ್ಲಿ ನಡೆಯುತ್ತಿದ್ದ ಬಹುತೇಕ ಎಲ್ಲ ದಿಗ್ಗಜರ ಕಛೇರಿಗಳಿಗೆ ಆನಂದ್ ಅವರೇ ಮೃದಂಗದ ಕೇಂದ್ರಬಿಂದು. ಪಿಟೀಲು ಚೌಡಯ್ಯನವರಿಗೆ ತಮ್ಮ ಹನ್ನೊಂದನೇ ವಯಸ್ಸಿನಲ್ಲೇ ಮೃದಂಗ ಸಾಥಿ ನೀಡಿದವರು ಆನಂದ್. ಮೃದಂಗ ನುಡಿಸಾಣಿಕೆಯಲ್ಲಿನ ಪ್ರಬುದ್ಧತೆ ಇವರಿಗೆ ಹಲವು ಅವಕಾಶಗಳನ್ನೂ ಒದಗಿಸಿಕೊಟ್ಟಿತು. ಈ ಮಾತಿಗೆ ಪುಷ್ಟಿ ನೀಡುವಂತೆ ಆನಂದ್ ಅವರೇ ಒಂದು ಉದಾಹರಣೆಯನ್ನು ಮೆಲುಕು ಹಾಕುತ್ತಾರೆ. ಒಮ್ಮೆ ಹಬ್ಬದ ಸಂದರ್ಭದಲ್ಲಿ ಪಿಟೀಲು ಚೌಡಯ್ಯನವರು ಆಕಸ್ಮಿಕವಾಗಿ ಇವರ ಮನೆಗೆ ಬಂದರಂತೆ. ಪೂಜೆಯ ನಂತರ ಸಂಗೀತ ಸೇವೆ ಮಾಡುವೆ ಎಂದು ಚೌಡಯ್ಯನವರು ಪಿಟೀಲು ಕೈಗೆತ್ತಿಕೊಂಡರಂತೆ. ಚೌಡಯ್ಯನವರಿಗೆ ಮೃದಂಗ ಸಹಕಾರ ನೀಡಲು ಯಾರೂ ಇರದೇ ಇದ್ದಾಗ ಆನಂದ್ ಅವರನ್ನೇ ಮೃದಂಗ ನುಡಿಸಲು ಕೇಳಿಕೊಂಡರಂತೆ. ಸುಮಾರು ಒಂದು ಗಂಟೆ ಕಾಲ ಪಿಟೀಲು ನುಡಿಸಿದಾಗ ಆನಂದ್ ನುಡಿಸಿದ ಮೃದಂಗ ಪಕ್ಕವಾದ್ಯ ಕೇಳಿ ಚೌಡಯ್ಯನವರು ತುಂಬಾ ಖುಷಿಪಟ್ಟು ಬೆನ್ನು ತಟ್ಟಿದರಂತೆ.


ಇದಾದ ಮೇಲೆ ಆನಂದ್ ಅವರ ಸಂಗೀತದ ಬದುಕು ಮಹತ್ವದ ತಿರುವು ಪಡೆಯಿತು. ದಿಗ್ಗಜರ ಸಂಗೀತ ಕಛೇರಿಗಳಿಗೆಲ್ಲ ತನ್ನಿಂದ ತಾನೇ ಅವಕಾಶ ಒದಗಿಬಂದಿತು. ಆನಂದ್ ಬಹುಬೇಗ ಖ್ಯಾತಿಯ ಉತ್ತುಂಗಕ್ಕೇರಿದರು. ಎಂಬತ್ತರ ದಶಕದಲ್ಲಿ ವಿದೇಶಗಳಿಗೂ ಹೋಗಿ ಮೃದಂಗ ಕಛೇರಿ, ಉಪನ್ಯಾಸ, ಪ್ರಾತ್ಯಕ್ಷಿಕೆ ನೀಡುವ ಅವಕಾಶವನ್ನು ಪಡೆದುಕೊಂಡರು.

'ಗಾಯಕರ ಭಾವಕ್ಕೆ ಅನುಗುಣವಾಗಿ ಲಯವಾದ್ಯವನ್ನು ನುಡಿಸಬೇಕಾಗುತ್ತದೆ. ಹಾಡುಗಾರರು 'ತನಿ' ಬಿಟ್ಟಾಗ ಅವರ ಮನೋಧರ್ಮಕ್ಕೆ ಅನುಗುಣವಾಗಿ ಮೃದಂಗ ನುಡಿಸಿದರೆ ವಾದಕ ಗೆದ್ದ ಹಾಗೇ. ಒಬ್ಬ ಪಕ್ಕವಾದ್ಯಗಾರನ ನೈಪುಣ್ಯ ತಿಳಿಯುವುದು ಕೂಡ ಇದೇ ಸಂದರ್ಭದಲ್ಲಿ. ಹೀಗಾಗಿ, ವಾದಕ ರಂಜನೀಯವಾಗಿ ನುಡಿಸುವ ಕಲೆಗಾರಿಕೆಯನ್ನು ಸಿದ್ಧಿಸಿಕೊಳ್ಳಬೇಕು' ಎನ್ನುತ್ತಾರೆ ವಿದ್ವಾನ್ ಆನಂದ್.

ಮುಂದಿನ ಪೀಳಿಗೆಗೆ ಸಂಗೀತದ ಸವಿಯನ್ನು ಹಂಚುವ, ಮಕ್ಕಳಲ್ಲಿ ಸದ್ಭಾವನೆ ಮೂಡಿಸುವ ಕೆಲಸವನ್ನು ಆನಂದ್ ಮಾಡುತ್ತಲೇ ಬಂದಿದ್ದಾರೆ. ಇವರ ಸಾಧನೆ, ಶ್ರಮಕ್ಕೆ ತಕ್ಕ ಪ್ರತಿಫಲವೂ ಸಿಕ್ಕಿದ್ದು, ಸಂಗೀತ ಕಲಾರತ್ನ, ಗಾನಕಲಾಭೂಷಣ, ಮೈಸೂರು ಅರಮನೆಯಿಂದ 'ಆಸ್ಥಾನ ವಿದ್ವಾನ್' ಪುರಸ್ಕಾರ, ಕರ್ನಾಟಕ ಕಲಾಶ್ರೀ, ಲಯಕಲಾ ನಿಪುಣ ಮುಂತಾದ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಇದು, ಈ ಮಾಗಿದ ಕಲಾವಿದನ 'ಲಯ ಸಾಮರ್ಥ್ಯ'ಕ್ಕೆ ಸಾಕ್ಷಿಯಾಗಿದೆ. ❖



ಎ.ವಿ. ಆನಂದ್



ಸಂಜಯ್ ದಿವೇಚಾ ಗಿಟಾರ್ ವಾದನದ 'ಲೀಲೆ'

geetarist sanjay Divecha

ಭಾರತದ ಪ್ರಮುಖ ಗಿಟಾರ್ ವಾದಕರಲ್ಲಿ ಒಬ್ಬರಾದ ಸಂಜಯ್ ದಿವೇಚಾ ಅವರು ನಡೆಸಿಕೊಡುವ ಕಾರ್ಯಕ್ರಮ ಇದಾಗಿದೆ.

'ಲೀಲಾ' ಎಂಬ ಶೀರ್ಷಿಕೆಯಡಿ ಆಯೋಜನೆಗೊಂಡಿರುವ ಕಾರ್ಯಕ್ರಮದಲ್ಲಿ ಸಂಗೀತದ ಅನಂತ ಸಾಧ್ಯತೆಗಳ ಸಂಗ್ರಹವನ್ನು ಕಲಾರಸಿಕರಿಗೆ ಉಣಬಡಿಸಲಿದ್ದಾರೆ. ಕಲಾತ್ಮಕ ಹಾಗೂ ಆಧ್ಯಾತ್ಮಿಕ ಪ್ರಯಾಣದ ಅನುಭವ ಇದಾಗಿದೆ.

ಜುಲೈ 8, ಮಂಗಳವಾರ
ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು
ಸಂಜೆ 7ರಿಂದ 8.15.

ಸಂಭ್ರಮದ 'ವೆಡಿಂಗ್ ಆಲ್ಬಂ'

ಮದುವೆ ಎಂದರೆ ಸಂಭ್ರಮ. ಆ ಸಂಭ್ರಮದ ಹಿಂದೆ ಅಡಗಿರುವ ಹಲವು ಪ್ರಶ್ನೆಗಳನ್ನು ಮುನ್ನೆಲೆಗೆ ತಂದರೆ ಏನಾಗುತ್ತದೆ?. ಗಿರೀಶ ಕಾರ್ನಾಡ ಅವರು ರಚಿಸಿರುವ ನಾಟಕ 'ವೆಡಿಂಗ್ ಆಲ್ಬಂ' ಈ ಅನುಭವವನ್ನು ನೀಡುತ್ತದೆ.

ಆಧುನಿಕ ಭಾರತೀಯ ಮನಃಸ್ಥಿತಿಗೆ ಕನ್ನಡಿಯಂತಿದೆ ಈ ನಾಟಕ. ಒಟ್ಟಾರೆಯಾಗಿ ಹಾಸ್ಯಮಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ಮದುವೆ ತಯಾರಿ ನಡೆಸುತ್ತಿರುವ ಮೇಲ್ಮಧ್ಯಮ ವರ್ಗದ ಮನೆಯ ಆಗುಹೋಗುಗಳ ಸುತ್ತ ನಾಟಕ ನಡೆಯುತ್ತದೆ. ಸಂಪ್ರದಾಯ, ಬದಲಾವಣೆ, ಪ್ರೀತಿ, ನಂಬುಗೆ, ಜವಾಬ್ದಾರಿ ಎಲ್ಲವನ್ನೂ ಏಕಕಾಲಕ್ಕೆ ತೆರೆದಿಡುತ್ತದೆ.



ನಟನೆ: ರೇಷ್ಮಾ ನಾಯರ್, ಕೆ.ಟಿ.ಥಾಮಸ್, ಚೈತ್ರಾ ಬಲ್ಲಾಳ್, ಲಕ್ಷ್ಮಿ ಕಾರಂತ, ಹರೀಶ್ ಶೇಷಾದ್ರಿ, ಭಾರತಿ ಗೋವಿಂದಸ್ವಾಮಿ, ಪಿ.ವೈ. ಗೋಪಿಕೃಷ್ಣ, ಮಿಲಿ ಸುಧಾಕರ್, ವಿಕ್ರಮ್ ಬಾಲಕೃಷ್ಣ, ಶ್ರೀನಿಧಿ ಆಚಾರ್, ನಿಖಿಲ್ ಭಾರದ್ವಾಜ್.
ನಿರ್ದೇಶನ: ಕಿಶೋರ್ ಆಚಾರ್ಯ
ನಿರ್ಮಾಣ: ಕೋರ್ಟ್‌ಯಾರ್ಡ್ ಕೂಟ
ಭಾಷೆ: ಇಂಗ್ಲಿಷ್
ಜುಲೈ 9, ಬುಧವಾರ
ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು 2ನೇ ಹಂತ.
ಸಂಜೆ 6.30ರಿಂದ 8.45.

ರಂಗ ಭಾಗವತನಿಗೆ ಬಾಗಿನ



ಸಾಂಸ್ಕೃತಿಕ ಪರಿಚಾರಕ ಕೆ.ರೇವಣ್ಣ ಅಭಿನಂದನಾ ಸಮಿತಿಯಿಂದ 'ರೇವಣ್ಣ 60–ರಂಗ ಭಾಗವತನಿಗೆ ಬಾಗಿನ' ಕಾರ್ಯಕ್ರಮವನ್ನು ಜುಲೈ 13ರಂದು ಭಾನುವಾರ ಮಧ್ಯಾಹ್ನ 3 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಧ್ಯಾಹ್ನ 3ರಿಂದ ಸಮೂಹ ಗಾಯನ. ರೇವಣ್ಣನಾ ಕಂಡಂತೆ: ಮಾತು ಮತ್ತು ಗಾಯನ. ಸಂಜೆ 5ಕ್ಕೆ 'ಸಂಸ್ಕೃತಿ ಸಿಂಧು' ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ: ಡಾ. ಎಲ್.ಹನುಮಂತಯ್ಯ, ಜಿ.ಎನ್. ಮೋಹನ್. ಡಾ. ವಿಜಯಾ. ನಂತರ ರೇವಣ್ಣ ಅವರಿಗೆ ಸನ್ಮಾನ: ಡಾ. ಕೆ.ಮರುಳಸಿದ್ಧಪ್ಪ ಅವರಿಂದ.

ಕೆ. ರೇವಣ್ಣ ಕುರಿತು: ನಟ ಮಾನು ಅವರಿಂದ ಪ್ರೇರಿತರಾಗಿ, ನಟನಾಗುವ ಹಂಬಲದಿಂದ ರಂಗಭೂಮಿಗೆ ಅಡಿಯಿಟ್ಟ ರೇವಣ್ಣ ಬಹುಪಾತ್ರಗಳಿಗೆ ಬಣ್ಣ ಹಚ್ಚಿದ್ದರೂ ನಟನೆಗಿಂತಲೂ ನೇಪಥ್ಯ–ರಂಗಸಜ್ಜಿಕೆಯೆಡೆಗೆ ಹೊರಳಿದವರು. ಕರ್ನಾಟಕ ನಾಟಕ ಅಕಾಡೆಮಿಯ ಗುತ್ತಿಗೆ ನೌಕರಿಯಲ್ಲಿ ಬದುಕು ಕಟ್ಟಿಕೊಳ್ಳುತ್ತಲೇ ರಂಗಭೂಮಿಯ ಬಹುಆಯಾಮಗಳಿಗೆ ಕಣ್ಣು–ಕಿವಿಯಾದವರು.

ಮಳೆಗಾಲದಲ್ಲಿ ಮಧುಮೇಹ ನಿರ್ವಹಣೆ ಹೇಗೆ?

• ಡಾ. ವರುಣ್ ಸೂರ್ಯದೇವರ



ಕಾಳಜಿ

ಹೊರಗೆ ಹಿತವಾಗಿ ಮಳೆ ಬೀಳುವಾಗ, ಸಂಜೆ ಹೊತ್ತು ಕಾಫಿಯನ್ನೋ ಟೀಯನ್ನೋ ಹೀರುತ್ತಾ ಮಳೆಯ ಸೊಗಸು ಸವಿಯುವುದರ ಮುಂದೆ ಬೇರೆ ಯಾವ ಖುಷಿ ಇದೆ? ಆದರೆ, ಇಷ್ಟೆಲ್ಲಾ ಸಂತೋಷ ತಂದುಕೊಡುವ ಮಳೆಗಾಲವು ಮಧುಮೇಹಿಗಳಿಗೆ ಕೆಲವು ಸವಾಲುಗಳನ್ನೂ ಒಡ್ಡುತ್ತದೆ. ಹೀಗಾಗಿ, ಮಧುಮೇಹಿಗಳು ಈ ಸಂದರ್ಭದಲ್ಲಿ ಜಾಗ್ರತೆಯಿಂದ ಇರಬೇಕಾಗುತ್ತದೆ.

ಮಧುಮೇಹ ನಿರ್ವಹಣೆಗೆ ಕೆಲವು ಕ್ರಮಗಳನ್ನು ಅನುಸರಿಸಬೇಕಾದುದು ಅತ್ಯಗತ್ಯ. ಹೊರಗೆ ವ್ಯಾಯಾಮ ಮಾಡಲು ಮಳೆ, ಗಾಳಿಯಿಂದ ತೊಂದರೆಯಾದಾಗ ಒಳಾಂಗಣದಲ್ಲಿಯೇ ಕೆಲವು ದೈಹಿಕ ಚಟುವಟಿಕೆಗಳನ್ನು ನಡೆಸಬಹುದು. ಗ್ಲೂಕೋಸ್ ರೀಡಿಂಗ್ ತಪಾಸಣೆ ಅಗತ್ಯವಾಗಿ ಆಗಬೇಕು. ಕಂಟಿನ್ಯೂಯಸ್ ಗ್ಲೂಕೋಸ್ ಮಾನಿಟರಿಂಗ್ (ಸಿಜಿಎಂ) ಸಾಧನಗಳು ಯಾವುದೇ ರೀತಿಯ ಹವಾಮಾನದಲ್ಲಿಯೂ ಗ್ಲೂಕೋಸ್ ಮಟ್ಟದ ಮೇಲೆ ನಿಗಾ ಇಡಲು ನೆರವಾಗುತ್ತವೆ.

ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ: ನೀರಿನಿಂದ ಹರಡುವ ರೋಗಗಳ ಕಡೆಗೆ ಮಧುಮೇಹಿಗಳು ಹೆಚ್ಚು ಗಮನ ಕೊಡಬೇಕು. ಬೀದಿ ಬದಿ ಆಹಾರವು ಮಳೆಗಾಲದಲ್ಲಿ ಹೆಚ್ಚು ಕಲುಷಿತಗೊಂಡಿರುವ ಅಪಾಯ ಇರುತ್ತದೆ. ಹಾಗಾಗಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ, ಆ್ಯಂಟಿ ಆಕ್ಸಿಡೆಂಟ್‌ಗಳು ಸಮೃದ್ಧವಾಗಿರುವ ಆಹಾರವನ್ನು ಹೆಚ್ಚು ಸೇವಿಸಿ. ತರಕಾರಿಗಳನ್ನು ಸಂಪೂರ್ಣವಾಗಿ ತೊಳೆದು, ಸರಿಯಾಗಿ ಬೇಯಿಸಿ ತಿನ್ನಿ. ಬೇಯಿಸಿದ ಆಹಾರವನ್ನು ನಿಗದಿತ ಸಮಯಕ್ಕೆ ಸೇವಿಸಿ.

ಪಾದಗಳ ಕುರಿತು ಕಾಳಜಿ ಇರಲಿ: ಮಧುಮೇಹಿಗಳು ಮಳೆಗಾಲದಲ್ಲಿ ಪಾದಗಳ ಬಗ್ಗೆ ವಿಶೇಷವಾದ ಕಾಳಜಿ ವಹಿಸಬೇಕಾಗುತ್ತದೆ. ತೇವವಿದ್ದರೆ ಶಿಲೀಂಧ್ರ ಸೋಂಕು ತಗಲುವ ಸಾಧ್ಯತೆ ಇರುತ್ತದೆ. ಇದರಿಂದ ಪಾದದಲ್ಲಿ ಗಾಯಗಳು ಉಂಟಾಗಬಹುದು. ಪಾದಗಳನ್ನು ಒರೆಸಿ, ಕಾಲುಚೀಲ ಧರಿಸಿ. ಬರಿಗಾಲಿನಲ್ಲಿ ಕಲ್ಲು, ಗುಂಡಿಗಳಲ್ಲಿ ನಡೆಯುವುದನ್ನು ತಪ್ಪಿಸಿ. ಆರಾಮದಾಯಕ ಎನಿಸುವ ಪಾದರಕ್ಷೆಗಳನ್ನು ಆಯ್ಕೆ ಮಾಡಿಕೊಳ್ಳಿ.

ವರ್ಕ್‌ಔಟ್, ನಡಿಗೆ ಅಗತ್ಯ: ದಿನಚರಿಯಲ್ಲಿ ಆಗುವ ಬದಲಾವಣೆಗಳಿಂದ ವ್ಯಾಯಾಮ, ಆಹಾರ ಸೇವನೆ ಹಾಗೂ ಒತ್ತಡದ ಮಟ್ಟದಲ್ಲಿ ಏರುಪೇರಾಗಬಹುದು. ಹಾಗಾಗಿ, ರಕ್ತದಲ್ಲಿನ ಸಕ್ಕರೆಯ ಮಟ್ಟ ಸರಿಯಾಗಿರುವಂತೆ ನೋಡಿಕೊಳ್ಳಿ. 30 ನಿಮಿಷಗಳ ಸಣ್ಣ ಪ್ರಮಾಣದ ವರ್ಕ್‌ಔಟ್ ಮಾಡಿ. ನಡಿಗೆಯೂ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ದ್ರವಾಹಾರವೂ ಬೇಕು: ವಾತಾವರಣದಲ್ಲಿ ತೇವಾಂಶ ಇದ್ದಾಗ, ನಿರ್ಜಲೀಕರಣದ ಲಕ್ಷಣಗಳು ಗೊತ್ತಾಗದೇ ಇರಬಹುದು. ಇದು ಕೂಡ ಗ್ಲೂಕೋಸ್ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಬಾಯಾರಿಕೆ ಆಗದೇ ಇದ್ದರೂ ಸಾಕಷ್ಟು ನೀರು ಕುಡಿಯಿರಿ. ಜತೆಗೆ ಹರ್ಬಲ್ ಟೀ, ಆರೋಗ್ಯಕರವಾದ ಪೇಯಗಳನ್ನು ಸೇವಿಸಿ. ಇದು ನಿರ್ಜಲೀಕರಣ ಆಗದಂತೆ ತಡೆಯಬಲ್ಲದು.

ಎಂಡೋಕ್ರೈನಾಲಜಿಸ್ಟ್, ಅಪೋಲೊ ಕ್ಲಿನಿಕ್